PREFACE

Vachanas (Sayings) of saints (Sharanas) of the 12th century India are a treasure of spiritual thoughts tinged with the contemporary social context. Vachanas are crafted based on real life experiences of Sharanas. Their ‘experience and observation (Anubhava)’ of the contemporary society and its behavior took the form of Vachanas. Thus, each Vachana is synthesis of their understanding of the real world and real life experience and serves as a guide for righteous living.

Vachanas in native Kannada language are readily intelligible prose texts. They were written to be read and understood with ease. We have translated them to English. In general, translating such works does not always convey the context and meaning, since literal translation loses the context and depth of meaning captured in source language. We hope that the commentaries we have provided in this book highlight the messages of these Vachanas. They are our understanding and interpretations. Reading these commentaries would help you gain insight into Sharana’s rich experience and some of this experience can be directly applied to your life to succeed professionally, to gain emotional intelligence about society around you, gain the equanimity to progress spiritually and to help understand how the Sharanas saw the Divine (God).

The first Volume included fifty Vachanas. We have selected the fifty more Vachanas in this Volume from various Sharanas based on their popularity and the direct pertinence of their messages to our lives now. We felt that a bouquet of selected flowers from our blog http://VachanaAweek.blogspot.com in the form of this E-book would reach the reader easily and would be convenient to read. Please visit the blog at the link above to explore more Vachanas and commentaries in Kannada and English. If you were wondering whether Vachanas of the 12th century are applicable to our lives today, in our experience the answer is yes. We would like readers to share their experiences.

For each Vachana, this book provides:

1. Transliteration of Kannada Vachana
2. Vachana in English (Translation)
3. Link to one or more recitations of the Vachana (Some of these links may not be active)
4. Vachana in English (Translation)
5. English Commentary
6. Kannada Commentary
7. Comments from the readers of our blog (for some Vachanas).

Happy Reading!

SAJJAN SHIVA and LEELA GARADY

Vachana 51: kaḍegīlillada baṁḍi - Swollen with Pride

ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಂಬುದೆ?

ಕಡೆಗೀಲು ಬಂಡಿಗಾಧಾರ-

ಕಡುದರ್ಪವೇರಿದ ಒಡಲೆಂಬ ಬಂಡಿಗೆ

ಮೃಡ ಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ.

TRANSLITERATION

kaḍegīlillada baṁḍi hoḍegeḍuvudu māṁbude?

kaḍegīlu baṁḍigādhāra-

kaḍudarpavērida oḍaleṁba baṁḍige

mrḍa śaraṇara nuḍigaḍaṇavē kaḍegīlu kāṇā rāmanātha.

TRANSLATION

kaḍegīlillada (without the cotter – a wedge which is at the end of the axel to keep the wheel in its place) baṁḍi (the cart) hoḍegeḍuvudu (over turn) māṁbude (will it not)?

kaḍegīlu(cotter) baṁḍigādhāra(is the support for the cart)-

kaḍudarpavērida (swollen with pride) oḍaleṁba (known as body) baṁḍige(the cart)

mrḍa śaraṇara(Devotees of Shiva) nuḍigaḍaṇavē (sayings) kaḍegīlu(cotter) kāṇā(you see) rāmanātha (Lord rāmanātha).

Wouldn't a cart without the cotter (holding its wheels in place) turn over?

Cotter is the support for the cart!

For this cart known as body (life) swollen with pride, Shiva's devotees' saying is the cotter!

You see! Lord Ramanatha.

COMMENTARY

This is a vachana from Sharana Daasimayya, probably the earliest (Tenth century) of the Vachana writers. A weaver by profession (Jedara Daasimayya - weaver Daasimayya) through his intense devotion and practice of kaayaka came to be known as Devara Daasimayya (God's Daasimayya). Legend has it that he comes from a town with a temple dedicated to Shiva worshipped by Rama (Raamanaatha). Hence his signature 'Ramanatha' in all the vachanas he wrote.

This probably should have been the first vachana in our blog highlighting the importance and purpose of vachanas. Daasimayya stresses the role vachanas are intended to play in one's life. He equates vachanas to the cotter that holds the wheels of a cart in place. The cart would overturn if the cotter is broken or lost. A body (or life) swollen with pride and ego is like a cart which has its cotter missing. Daasimayya says that vachanas serve as the cotter to bring the life back in balance. Sharanas depicted their experiences and observations on the contemporary society and its behavior in their vachanas. The purpose of vachanas was to bring the ultimate knowledge needed to make one successful in the spiritual path of realizing the Self, in a language and the mode accessible to commoners.

It is said that we become successful in our career and wealth building, our ego swells unless tempered appropriately. So is our pride as we find ourselves successful in building our families. Vachanas can be instrumental in tempering of ego-pride clash in one's life.

Let us make vachanas cotter our cart of life!

KANNADA COMMENTARY

ಇದು ದಾಸಿಮಯ್ಯನವರ ವಚನ. ಇಲ್ಲಿ ಅವರು ಶರಣರ ನುಡಿಯ ಮಹತ್ವವನ್ನು ಉದಾಹರಣೆ ಸಹಿತ ಹೇಳುತ್ತಿದ್ದಾರೆ. ಬಂಡಿಗೆ ಕಡೆಗೀಲು (ಬಂಡಿಯ ಚಕ್ರಗಳನ್ನು ಸಿಕ್ಕಿಸಿರುವ ಮರದ ಭಾಗದ ಕೊನೆಗೆ ಸಿಕ್ಕಿಸುವ ಮೊಳೆ.) ಆಧಾರ. ಕಡೆಗೀಲಿಲ್ಲದಿದ್ದರೆ ಬಂಡಿಯ ಚಕ್ರಗಳು ಉರುಳಿ ಹೋಗಿ ಬಂಡಿ ಮಗುಚಿ ಬೀಳುತ್ತದೆ. ಅದೇ ರೀತಿ ಕಡು ದರ್ಪವೇರಿದ ಒಡಲು, ಎಂದರೆ ಗರ್ವದಿಂದ ಬೀಗುವ ಈ ಜೀವ, ದೇಹವೆಂಬ ಬಂಡಿಗೆ ಶಿವಶರಣರ ನುಡಿಗಳೇ ಕಡೆಗೀಲು ಎನ್ನುತ್ತಾರೆ.

ಚಕ್ರಗಳಿಂದಲೇ ಬಂಡಿ ಓಡುತ್ತದೆ. ಈ ಚಕ್ರಗಳು ಕಡೆಗೀಲಿನಿಂದ ತಮ್ಮ ನಿರ್ದಿಷ್ಟ ಸ್ಥಾನದಲ್ಲಿ ನಿಂದು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಕಡೆಗೀಲು ಇಲ್ಲದೆ ಹೋದರೆ ಚಕ್ರಗಳು ಕಳಚಿಕೊಂಡು ಬಂಡಿಯು ಬಿದ್ದು ಹೋಗುತ್ತದೆ. ಅದೇ ರೀತಿ ನಮ್ಮ ದೇಹ, ಜೀವನವೆಂಬ ಬಂಡಿಗೆ ಶರಣರ ನುಡಿಗಳು ಕಡೆಗೀಲಿನಂತೆ ಇವೆ. ಅವರ ಅನುಭವದ, ಅನುಭಾವದ ನುಡಿಗಳು ಕಡೆಗೀಲಿನಂತಿದ್ದು, ಬಂಡಿ ಸರಾಗವಾಗಿ ಹೋಗುವಂತೆ ಮಾಡುತ್ತವೆ, ತಮ್ಮ ಗುರಿಯನ್ನು ಮುಟ್ಟುವಂತೆ ಮಾಡುತ್ತವೆ. ಇಲ್ಲದಿದ್ದರೆ ಆಸೆ ಆಕಾಂಕ್ಷೆಗಳ ಮದವೇರಿದ ನಮ್ಮ ಬದುಕು, ಅಡ್ಡಾದಿಡ್ಡಿಯಾಗಿ ಓಡಿ ಬಿದ್ದು ನಾಶಹೊಂದುತ್ತದೆ. ನಮ್ಮನ್ನು ಸರಿದಾರಿಗೆ ಹಚ್ಚಲು ಶರಣರ ನುಡಿಗಳ ಭಂಡಾರವೇ ಇದೆ. ಹೆಜ್ಜೆಹೆಜ್ಜೆಗೂ ಎಚ್ಚರಿಸುವಂತಹ, ಬದುಕಿನ ಪ್ರತಿಯೊಂದು ಆಯಾಮದಲ್ಲಿಯೂ ಶಿಸ್ತನ್ನು ಅಳವಡಿಸಲು ಬರುವಂತಹ ವಚನಗಳನ್ನು ಹೇಳಿದ್ದಾರೆ ಶರಣರು. ಭೌತಿಕತೆಯ ದರ್ಪವೇರಿ ದೇವರನ್ನು, ಅನುಭಾವದ ಸೌಂದರ್ಯವನ್ನು ಸಂಪೂರ್ಣವಾಗಿ ಕಡೆಗಣಿಸಿರುವ ನಮಗೆ ತಮ್ಮ ವಚನಗಳ ಮೂಲಕ ಶರಣರು ನಮ್ಮನ್ನು ಎಚ್ಚರಿಸಿದ್ದಾರೆ.

"ಕಡುದರ್ಪವೇರಿದ ಒಡಲೆಂಬ ಬಂಡಿ" ಹೇಗಿರುತ್ತದೆ ಎಂಬುದನ್ನು ನೋಡೋಣ. ಪ್ರತಿಯೊಬ್ಬ ಸಾಮಾನ್ಯನ ಬದುಕಿನಲ್ಲಿ ಒಂದು ವಿಚಿತ್ರವಾದ ಘಟ್ಟವಿರುತ್ತದೆ. ಅದು: ತನಗೆ ಎಲ್ಲ ತಿಳಿದಿದೆ, ತಾನು ತಿಳಿದುದೇ ಸರಿ, ಬೇರೆಯವರೆಲ್ಲ ಮೂರ್ಖರು, ಅವರು ಮಾಡುತ್ತಿರುವುದೆಲ್ಲ ತಪ್ಪು, ತಾನು ಮಾಡುತ್ತಿರುವುದು ಮಾತ್ರ ಉತ್ತಮವಾದದ್ದು, ಎಲ್ಲರೂ ತನ್ನನ್ನೇ ಅನುಸರಿಸಬೇಕು, ತನ್ನ ಆಸೆ ಆಕಾಂಕ್ಷೆಗಳು, ಬಯಕೆಗಳು, ಕೋಪ, ಅಹಂಕಾರಗಳು ನ್ಯಾಯಸಂಗತವಾದವುಗಳು. ತನ್ನ ಆಚರಣೆಯೇ ಶ್ರೇಷ್ಠ, ತನ್ನ ಮಾತುಗಳೇ ಯೋಗ್ಯವಾದವುಗಳು, ಇತರರ ಮಾತುಗಳು ನಿರರ್ಥಕವಾದವುಗಳು, ತಾನು ಯಾರಿಗೂ, ಯಾವುದಕ್ಕೂ ತಲೆಬಗ್ಗಿಸಲೇಬೇಕಾಗಿಲ್ಲ, ಎಂದೆಲ್ಲ ಯೋಚಿಸಿ ಒಣ ಹಮ್ಮಿನಿಂದ ತಲೆಯೆತ್ತಿ ನಡೆಯುವ ಪ್ರ

ವೃತ್ತಿ. ಇಂತಹ ಘಟ್ಟದಲ್ಲಿರುವ ವ್ಯಕ್ತಿ ಯಾರ ಮಾತೂ ಕೇಳ. ಸಾಮಾನ್ಯವಾಗಿ ಈತನು ಕೊನೆಯವರೆಗೂ ಹಾಗೇ ಇದ್ದುಬಿಡುತ್ತಾನೆ. ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ ಬದುಕಿನ ಸೋಲುಗಳು ಅವನನ್ನು ಘಾಸಿಮಾಡಿದರೂ ಅವನ ಕಡುದರ್ಪ ಅವನು ಅದನ್ನು ಗುರುತಿಸದೆ ತನ್ನದೇ ರೀತಿಯಲ್ಲಿ ಮುಂದುವರಿಯುವಂತೆ ಮಾಡುತ್ತದೆ. ಅವನ ನಾಶ ಕಟ್ಟಿಟ್ಟದ್ದು. ಅವನ ಬದುಕು ಕಡೆಗೀಲಲಿಲ್ಲದ ಬಂಡಿಯಂತಾಗುತ್ತದೆ.

ಆದರೆ ಕೆಲವರು ತಮ್ಮ ಈ ದರ್ಪವನ್ನು ಗುರುತಿಸುತ್ತಾರೆ. ತಾವು ತುಳಿಯುತ್ತಿರುವ ಮಾರ್ಗ ಸರಿಯಿರಲಿಕ್ಕಿಲ್ಲವೆಂಬ ಭಾವ ಎಲ್ಲೋ ಮನದ ಮೂಲೆಯಲ್ಲಿ ಮನೆ ಮಾಡಿರುತ್ತದೆ. ಅವರಿಗೆ ಶರಣರ ನುಡಿಗಳು ಬೆಳಕಿನಂತೆ ತೋರುತ್ತವೆ. ಆ ನುಡಿಗಳು ಕಿವಿಗೆ ಬೀಳದೆ ಹೋಗಿದ್ದರೆ ಅವರ ಬದುಕು ಸಹ ನಿರರ್ಥಕವಾಗುತ್ತಿತ್ತು. ಆದರೆ ಆ ಸೂಳ್ನುಡಿಗಳು ಅವರ ಬಾಳನ್ನೇ ಪರಿವರ್ತಿಸಿ ಮೇಲೆ ಹೇಳಿದ ಘಟ್ಟದಿಂದ ಅವರು ಹೊರಬರುವಂತೆ ಮಾಡುತ್ತವೆ. ಅವರ ಬದುಕೇ ಬದಲಾಗುತ್ತದೆ. ಅವರಿಗೆ ಶರಣರ ನುಡಿಗಳು ಬಂಡಿಯ ಕಡೆಗೀಲಿನಂತೆ ರಕ್ಷಣೆಯನ್ನೊದಗಿಸುತ್ತವೆ. ಗುರಿಯಿಲ್ಲದೆ ಓಡುತ್ತಿರುವ ಅವರ ಬದುಕಿಗೆ ಬೆಳಕಿನೆಡೆಗೆ ಹೋಗುವ ತವಕ ಉಂಟಾಗುತ್ತದೆ.

ಆದ್ದರಿಂದ ಶರಣರ ನುಡಿಗಳಿಗೆ ಅಪಾರ ಮಹತ್ವವಿದೆ.

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು!

ತೇಲಲೀಯದು ಗುಂಡು, ಮುಳುಗಲೀಯದು ಬೆಂಡು!

ಇಂತಪ್ಪ ಸಂಸಾರಶರಧಿಯ ದಾಂಟಿಸಿ

ಕಾಲಾಂತಕನೇ ಕಾಯೋ, ಕೂಡಲಸಂಗಯ್ಯ!

TRANSLITERATION

kAlali kaTTida guMDu, koraLali kaTTida beMDu!

tElalIyadu guMDu, muLugalIyadu beMDu!

iMtappa saMsAraSaradhiya dAMTisi

kAlAMtakanE kAyO, kUDalasaMgayya!

TRANSLATION

kAlali (to the leg) kaTTida (tied) guMDu (round rock), koraLali (to the neck) kaTTida(tied) beMDu!(pith - the central spongy tissue of the stem of a plant; material that floats)
tElalIyadu (doesn't allow to float) guMDu(round rock),muLugalIyadu(doesn't allow to drown) beMDu!(pith)

iMtappa (this kind of, such) saMsAraSaradhiya(ocean of life) dAMTisi (help me to cross)

kAlA(time, death) aMtakanE (one who ends) kAyO(protect me),kUDalasaMgayya!(lord of the meeting rivers)

With the rock tied to the leg and the pith tied to the neck,

the rock doesn't allow floating and the pith doesn't allow drowning !

help me cross this ocean of life and protect me, Oh! ender of time (death), Lord kUDalasaMgayya!

COMMENTARY

Basavanna paints a beautiful picture of the duality of life in this Vachana. We have been set free to traverse the ocean of life with a rock tied to the leg and a pith tied to the neck. The rock does not allow us to float and the pith does not allow us to drown. Basavanna prays the Lord to give us the strength to withstand the floating and drowning and to successfully cross the ocean of life. Simply put, Basavanna is praying the Lord to give him strength to be equanimous under the ups and downs of life.

It is interesting to probe the meanings of the rock and the pith a bit further. We strive to be famous and wealthy. We desire to be praised by everyone. We are angry that things are not moving according to our wishes. Our ego says that we can do anything and whatever we say is right. We develop a great attachment to all these worldly affairs and start believing this is the real life. We believe that all this is real and permanent and are thus drowned in this ocean

of life. If we can closely examine the desires, wealth, fame, ego, etc. and realize that everything we have is temporary and could vanish before we know, we gain the knowledge and confidence to stay undisturbed with the ups and downs. That is the equanimity, we should strive for.

Let us not sink in the worldly affairs!

KANNADA COMMENTARY

ಇದು ಬಹು ಸುಂದರವಾದ ವಚನ. ಸಂಸಾರದಲ್ಲಿರುವ ವ್ಯಕ್ತಿಯ ಕರುಣಾಜನಕವಾದ ಸ್ಥಿತಿಯನ್ನು ಅತ್ಯಂತ ಪ್ರಭಾವಪೂರ್ಣವಾಗಿ ವರ್ಣಿಸುತ್ತದೆ. ಒಬ್ಬ ವ್ಯಕ್ತಿಯ ಕಾಲಲ್ಲಿ ಗುಂಡು ಹಾಗೂ ಕೊರಳಲ್ಲಿ ಬೆಂಡು ಕಟ್ಟಿದೆ. ಗುಂಡಿನ ಭಾರ ಆತನನ್ನು ಶರಧಿಯ ತಳಕ್ಕೆ ಕೊಂಡೊಯ್ಯುತ್ತದೆ, ಆದರೆ ಬೆಂಡು ಮೇಲಕ್ಕೆ ಕೊಂಡೊಯ್ಯುತ್ತದೆ. ಗುಂಡು ತೇಲಲು ಬಿಡುವುದಿಲ್ಲ ಮತ್ತು ಬೆಂಡು ಮುಳುಗಲು ಬಿಡುವುದಿಲ್ಲ. ಸಂಸಾರ ಶರಧಿಯಲ್ಲಿ ಈ ರೀತಿಯಾಗಿಸಿಕ್ಕಿಕೊಂಡಿರುವ ತನ್ನನ್ನು ಕಾಪಾಡು ಎಂದು ಬಸವಣ್ಣನವರು ಕೂಡಲಸಂಗಮನನ್ನು ಕೇಳಿಕೊಳ್ಳುತ್ತಾರೆ.

ಇಲ್ಲಿ ಗುಂಡು ಮತ್ತು ಬೆಂಡು ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ನಾನು ಕೀರ್ತಿವಂತನಾಗಬೇಕು, ಧನಿಕನಾಗಬೇಕು, ಎಲ್ಲರೂ ತನ್ನನ್ನು ಹೊಗಳುವಂತಾಗಬೇಕು ಎನ್ನುವಂತಹ ಆಸೆ ಆಕಾಂಕ್ಷೆಗಳು, ನನ್ನಿಷ್ಟದಂತೆ ನಡೆಯಲಿಲ್ಲವೆಂಬ ಕೋಪ ತಾಪಗಳು, ಎಲ್ಲವೂ ನನ್ನಿಷ್ಟದಂತೆ ನಡೆಯುತ್ತದೆ, ನಾನು ಏನೂ ಬೇಕಾದರೂ ಮಾಡಬಲ್ಲೆ, ನನ್ನ ಮಾತೇ ಸರಿ ಎಂಬಂತಹ ಹಮ್ಮು ಬಿಮ್ಮುಗಳು, ಧನ ಸಂಪತ್ತು, ಮಡದಿ ಮಕ್ಕಳು, ನೆಂಟರು ಇಷ್ಟರು, ಮನೆ ಮಾರುಗಳ ಸುಖದಲ್ಲಿ ಮುಳುಗಿ ಅದೇ ನಿಜವಾದದ್ದು ಎಂದು ನಂಬುವಂತೆ ಮಾಡುವ ಮಾಯಾಮೋಹಗಳು, ಅಥವಾ ಇವುಗಳಿಂದ ಉಂಟಾಗುವ ದುಃಖಗಳಿಂದ ತೊಳಲುವಂತೆ ಮಾಡುವ ಜಂಜಾಟಗಳು, ಗೋಳಾಟಗಳು____ಇವೆಲ್ಲವು ವ್ಯಕ್ತಿಯನ್ನು ಸಂಸಾರದಲ್ಲಿ ಮುಳುಗುವಂತೆ ಮಾಡುವುದರಿಂದ ಅವು ಭಾರವಾದ ಗುಂಡು.

ಕೋಪ ತಾಪ, ಹಮ್ಮು ಬಿಮ್ಮು, ಧನ ಸಂಪತ್ತು, ಮಡದಿ ಮಕ್ಕಳು, ನೆಂಟರು ಇಷ್ಟರು, ಮನೆ ಮಾರುಗಳ ಮಾಯಾ ಮೋಹ, ಬದುಕಿನ ಜಂಜಾಟಗಳು, ಗೋಳಾಟಗಳು ಯಾವುವೂ ಶಾಶ್ವತವಲ್ಲ, ಅವುಗಳು ಆಗಾಗ ಬಂದು ಹೋಗುವಂತಹವು, ಅವುಗಳಿಗೆ ಯಾವುದೇ ಗಟ್ಟಿಯಾದ ನೆಲೆ ಇಲ್ಲ, ಅವುಗಳನ್ನು ನಿಜವೆಂದು ನಂಬುವುದು ಮೂರ್ಖತನ, ಅವುಗಳನ್ನು ಮೀರಿದ ಸತ್ಯ ಏನೋ ಇರಲೇಬೇಕು, ಅದು ಯಾವುದು ಎನ್ನುವ ತವಕ ಮತ್ತು ಅರಿವು ಇವುಗಳನ್ನು ಮೀರಿ ನಿಲ್ಲುವಂತೆ ಮಾಡುವುದೇ ಬೆಂಡು. ಆದರೆ ಈ ತಿಳುವಳಿಕೆ ಇನ್ನೂ ಪೂರ್ತಿಯಾಗಿ ನೆಲೆನಿಂತಿಲ್ಲವಾದ್ದರಿಂದ ಆಗಾಗ ಮಾತ್ರ ಹೊಳೆದು ಹೋಗುತ್ತದೆ. ಅದು ಆಗಾಗ ಮಾತ್ರ ಬಂದು ತಾತ್ಕಾಲಿಕವಾಗಿ ತೇಲುವಂತೆ ಮಾಡುತ್ತದೆ. ಅದು ಬೆಂಡು. ಒಮ್ಮೆ ಸಂಸಾರದಲ್ಲಿ ಮುಳುಗುವ ಇನ್ನೊಮ್ಮೆ ಅದರಿಂದ ಮುಕ್ತವಾಗಿ ತೇಲುವ ಸ್ಥಿತಿಯು ಅತ್ಯಂತ ನೋವಿನಿಂದ ಕೂಡಿರುತ್ತದೆ. ಏಕೆಂದರೆ ಸಂಸಾರದಲ್ಲಿ ಮುಳುಗಿದಾಗ ಮನದ ಯಾವುದೋ ಮೂಲೆಯಲ್ಲಿ ಸೂಕ್ಷ್ಮವಾಗಿ "ಇದು ಶಾಶ್ವತವಾದ ಸುಖವಲ್ಲ" ಎಂಬ ಭಾವನೆ ಇದ್ದು ಸಂಸಾರದ ಸುಖವನ್ನು ಪೂರ್ತಿಯಾಗಿ ಅನುಭವಿಸಲು ಬಿಡುವುದಿಲ್ಲ. ಅದೇ ರೀತಿಯಾಗಿ, ಸಂಸಾರದಿಂದ ದೂರವಾದಾಗ ಮನದ ಮೂಲೆಯಲ್ಲಿ ಅದರ ವ್ಯಾಮೋಹ ಮನೆಮಾಡಿರುತ್ತದೆ. ಅದು ಪೂರ್ತಿಯಾಗಿ ತೇಲಲು ಬಿಡುವುದಿಲ್ಲ. ಈ ರೀತಿಯಾದ ಇಬ್ಬಂದಿಯಲ್ಲಿ ಸಿಕ್ಕಿಕೊಂಡಿರುವುದರಿಂದ ವ್ಯಕ್ತಿಯ ಜೀವ, ದೇಹವನ್ನು, ರುಂಡ ಮುಂಡಗಳನ್ನು, ಎರಡು ವಿರುದ್ಧ ದಿಕ್ಕಿಗೆ ಎಳೆದಾಗ ಅನುಭವಿಸುವ ನೋವನ್ನು ಅನುಭವಿಸುತ್ತದೆ. ಅದಕ್ಕಾಗಿಯೇ

ಬಸವಣ್ಣನವರು "ಈ ರೀತಿಯ ಸಂಸಾರ ಶರಧಿಯನ್ನು ದಾಟಿಸಿ ಕಾಯೋ ಕಾಲಾಂತಕನೆ" ಎಂದು ಕೂಡಲಸಂಗಮನಲ್ಲಿ ಕೇಳಿಕೊಳ್ಳುತ್ತಾರೆ.

ಇಲ್ಲಿ ಅವರು ಬಳಸಿದ "ಕಾಲಾಂತಕ" ಎಂಬ ಪದ ಬಹಳ ವಿಶಿಷ್ಟವಾದದ್ದು. ಇದರಲ್ಲಿ ಎಲ್ಲರಿಗೂ ಗೊತ್ತಿರುವಂತೆ ಎರಡು ಪದಗಳಿವೆ ಕಾಲ + ಅಂತಕ, ಎಂದರೆ ಕಾಲವನ್ನು ಅಂತ್ಯಗೊಳಿಸುವವನು ಅಥವಾ ಅಂತಗೊಳಿಸುವಂತಹದು ಎಂದು. ಕಾಲ ಎಂಬ ಪದಕ್ಕೆ ಸಮಯ ಮತ್ತು ಮೃತ್ಯು ಎಂಬ ಅರ್ಥಗಳೂ ಇವೆ. ಇಲ್ಲಿ ನನಗೆ ಸಮಯ ಮತ್ತು ಮೃತ್ಯು ಒಂದೇ ಎಂದು ಹೆಳುವ ಜಿಡ್ಡು ಕೃಷ್ಣಮೂರ್ತಿಯವರ ಮಾತುಗಳು ನೆನಪಾಗುತ್ತವೆ. ಅವರುಹೇಳುತ್ತಾರೆ ಸಮಯ ಮತ್ತು ಮೃತ್ಯು ಮಾನವನ ವಿಚಾರದಿಂದ ಹುಟ್ಟಿದೆ ಎಂದು. ಏಕೆಂದರೆ ವಿಚಾರ ಹೇಳುತ್ತದೆ- ನಾನು ಇಂದು ಹೀಗೆ ಇದ್ದೇನೆ ಆದರೆ ಬೇರೆ ಏನೋ ಆಗಬೇಕು ಎಂದು. ಈ ವಿಚಾರ ಬದುಕಿನಲ್ಲಿ ಒಡಕನ್ನುಂಟುಮಾಡುತ್ತದೆ. ಈ ವಚನದಲ್ಲಿ ಬಸವಣ್ಣನವರು ಇದನ್ನೇ ಹೇಳುತ್ತಿರುವರು. ಬಾಳನ್ನು ತೇಲುವುದು ಮತ್ತು ಮುಳುಗುವುದರಲ್ಲಿ ವಿಭಜನೆಗೊಂಡಿದೆ. ಇದು ಸಮಯದ ಪ್ರಭಾವ. ವರ್ತಮಾನ ಮತ್ತು ಭವಿಷ್ಯದ ಒಡಕು. ನಾನು ಮುಳುಗುತ್ತಿದ್ದೇನೆ,ತೇಲಬೇಕು ಎನ್ನುವ ಹಾರೈಕೆ. ಹಾರೈಕೆ ವಿಚಾರದ ಪರಿಣಾಮ. ವಿಚಾರವು ಸದಾ ಒಡಕನ್ನುಂಟುಮಾಡುವುದು. ವಿಚಾರವೆಂದರೆ ಸಮಯ, ಕಾಲ. ಇದರ ಅರಿವುಳ್ಳ ಬಸವಣ್ಣನವರು ಕಾಲಾಂತಕನನ್ನು ನೆನೆಯುತ್ತಾರೆ. ಎಂದರೆ ಬಯಲು. ಮುಳುಗುವುದು ಮತ್ತು ತೇಲುವುದರ ನಡುವಿನ ಸಂದನ್ನು ಮುಚ್ಚುವಿಕೆ, ಎಲ್ಲವನ್ನೂ ಒಂದುಗೂಡಿಸಿ ಬಯಲಾಗುವಿಕೆಯೆ ಕಾಲದ ಅಂತ್ಯ.

Vachana 53: saganiya benakana maadi - Inner Development

ಸಗಣಿಯ ಬೆನಕನ ಮಾಡಿ ಸಂಪಿಗೆಯರಳಲ್ಲಿ ಪೂಜಿಸಿದರೆ

ರಂಜನೆಯಹುದಲ್ಲದೆ, ಅದರ ಗಂಜಳ ಬಿಡದಣ್ಣ!

ಮಣ್ಣ ಪ್ರತಿಮೆಯ ಮಾಡಿ ಮಜ್ಜನಕ್ಕೆರೆದರೆ
ನಿಚ್ಚ ಕೆಸರಹುದಲ್ಲದೆ ಅದರಚ್ಚಿಗ ಬಿಡದಣ್ಣ!!
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ

ಆ ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ ?

TRANSLITERATION

sagaNiya benakana mADi saMpigeyaraLalli pUjisidare

raMjaneyahudallade, adara gaMjaLa biDadaNNa!

maNNa pratimeya mADi majjanakkeredare

nicca kesarahudallade adaracciga biDadaNNa!!
lOkada mAnavaMge SivadIkSheya koTTare

A keTTavanEke sadBaktanahanu kUDalasaMgamadEvA ?

TRANSLATION

sagaNiya (of cow dung) benakana (Ganesha) mADi (made) saMpigeyaraLalli (with Champaka flower – a fragrant flower)

pUjisidare (if worshipped) raMjaneyahudallade,(it is nothing other than entertainment) adara (its) gaMjaLa(stink of cattle urine) biDadaNNa!(will not cease to exist)

manna(of mud) pratimeya(idol) mADi (made) majjanakkeredare (if washed)

nicca (forever) kesarahudallade (it is nothing other than mud puddle) adaracciga (its original trait) biDadaNNa!!(will not disappear)
lOkada (of the world) mAnavaMge(to the man) SivadIkSheya (Shiva's devotion) koTTre(initiated)

A(that) keTTavanEke(why would that corrupt man) sadBaktanahanu(will become a virtuos devotee) kUDalasaMgamadEvA ?(Lord of meeting rivers)

The Ganesha statue made of cow dung, when worshipped with Champaka flowers, provides nothing other than entertainment, let alone loses its stink of cattle urine!

The statue made of mud, when washed, provides nothing other than a mud puddle, let alone the mud losing its original trait!

Why would a common man initiated into becoming a devotee of Shiva, give up his corrupt ways and become a virtuous devotee? Oh Lord of meeting rivers!

COMMENTARY

In this Vachana, Basavanna highlights the difference between a common man (immersed in worldly ways) and a virtuous devotee. The commoner makes a statue of Lord Ganesha out

of cow dung and worships it with the most fragrant flowers. The flower clad statue brings joy to him. But, even the staunch fragrance of the flowers cannot hide the stench of the cow dung. Similarly, an earthen statue becomes a mud puddle when it is washed with water as part of the worship. It does not give up its original trait of being the mud. Along the same lines, if a corrupt commoner is initiated to be a devotee of Shiva, he will not become a virtuous devotee.

Basavanna uses three important aspects in this Vachana - commoner, corrupt and virtuous devotee. The commoner tries to see the God in the statues made out of materials readily available (mud, dung, etc.). Although these materials took the form of the God, their basic trait remains the same. So is the trait of an ordinary man corrupted by his worldly ways. A virtuous devotee on the other hand, would have realized the Lord within and will have the courage to ignore the ritualistic, worldly ways.

It is said that the teacher appears when the student is ready for receiving the knowledge. The teacher also has to determine the intensity of the quest for knowledge before taking one as a student. As such, Basavanna is implying that initiating an individual who is still immersed in mundane materialistic ways into spiritual path is not worthwhile.

Let us strive to realize the Lord within and not depend on the materialistic images to do so!

KANNADA COMMENTARY

ಈ ವಚನದಲ್ಲಿ ಬಸವಣ್ಣನವರು ಲೋಕದ ಸಾಮಾನ್ಯ ಮನುಷ್ಯ ಮತ್ತು ಸದ್ಭಕ್ತನಿಗು ಇರುವ ವ್ಯತ್ಯಾಸವನ್ನು ತಿಳಿಸುತ್ತಾರೆ. ಸಾಮಾನ್ಯನು, ಸಗಣಿಯ ಬೆನಕನನ್ನು ಮಾಡಿ ಸಂಪಿಗೆಯ ಹೂವಿನಿಂದ ಪೂಜಿಸುತ್ತಾನೆ. ಹಾಗೆ ಮಾಡಿದಾಗ ಅದು ಕಣ್ಣಿಗೆ ಸೊಗಸಾಗಿ ಕಂಡು ಮನೋರಂಜನೆಯಾಗುತ್ತದೆ ಅಷ್ಟೆ. ಆದರೆ ಸಂಪಿಗೆಯ ತೀಕ್ಷ್ಣವಾದ ಗಂಧವೂ ಸಗಣಿಯ ವಾಸನೆಯನ್ನು ದೂರಮಾಡಲಾಗುವುದಿಲ್ಲ. ಅದೇ ರೀತಿಯಾಗಿ ಮಣ್ಣಿನ ಪ್ರತಿಮೆಯನ್ನು ಮಾಡಿ ಅದನ್ನು ಪೂಜಿಸುತ್ತಾನೆ. ಅದನ್ನು ನೀರಿನಿಂದ ತೊಳೆದರೆ ಅದು ಕೇವಲ ಕೆಸರನ್ನೇ ಕೊಡುತ್ತದೆ. ಅದು ತನ್ನ ಮೂಲ ಸ್ವಭಾವವನ್ನು ಬಿಡುವುದಿಲ್ಲ. ಅದೇ ರೀತಿಯಾಗಿ ಸಾಮಾನ್ಯನನಿಗೆ ಶಿವದೀಕ್ಷೆಯನ್ನು ಕೊಟ್ಟರೆ ಅವನು ಸದ್ಭಕ್ತನಾಗಲಾರ ಎನ್ನುತ್ತಾರೆ.

ಇಲ್ಲಿ "ಲೋಕದ ಮಾನವ" "ಕೆಟ್ಟವನು" "ಸದ್ಭಕ್ತನು" ಎಂಬ ಪದಗಳನ್ನು ಯಾರಿಗಾಗಿ ಬಳಸಿದ್ದಾರೆ ಎನ್ನುವುದನ್ನು ನೋಡೋಣ. "ಲೋಕದ ಮಾನವ" ಎಂದರೆ, ಸಾಮಾನ್ಯ ವ್ಯಕ್ತಿಯು ದೇವರನ್ನು ಬಾಹ್ಯ ವಸ್ತುಗಳಲ್ಲಿ ನೋಡಲು ಪ್ರಯತ್ನಿಸುತ್ತಾನೆ. ಅದಕ್ಕಾಗಿಯೇ ಸಗಣಿ, ಮಣ್ಣು ಅಥವಾ ಇತರ ವಸ್ತುಗಳಿಂದ ಪ್ರತಿಮೆಗಳನ್ನು ಮಾಡುತ್ತಾನೆ. ದೇವರ ಪ್ರತಿಮೆಯ ರೂಪ ಪಡೆದರೂ ಸಹ ಸಗಣಿ ಮತ್ತು ಮಣ್ಣು ಅಥವಾ ಇತರ ವಸ್ತುಗಳು ತಮ್ಮ ಮೂಲಗುಣವನ್ನು ಹೇಗೆ ಬಿಡುವುದಿಲ್ಲವೋ ಹಾಗೆಯೇ ಆ ಸಾಮಾನ್ಯ ವ್ಯಕ್ತಿಯು ಪೂಜೆ ಮಾಡಿದರೂ ತನ್ನ ಮೂಲಸ್ವಭಾವವಾದ ಮಾಯಾ ಮೋಹಗಳನ್ನು ಬಿಡುವುದಿಲ್ಲ. ಅವನ ಮನಃ ಪರಿವರ್ತನೆಯಾಗುವುದಿಲ್ಲ. ಆದರೆ ಸದ್ಭಕ್ತನು ಜಿಜ್ಞಾಸುವಾಗಿರುತ್ತಾನೆ. ಜಿಜ್ಞಾಸೆಯು ಅವನೆದುರು ವಾಸ್ತವಿಕತೆಯನ್ನು ತೆರೆದಿಡುತ್ತದೆ. ಮತ್ತು ಆತನು ಅದನ್ನು ಸ್ವೀಕರಿಸುತ್ತಾನೆ. ಆತನಲ್ಲಿ, ವಾಸ್ತವ ಅಲ್ಲದ್ದನ್ನು ಧಿಕ್ಕರಿಸುವ ಎದೆಗಾರಿಕೆಯಿರುತ್ತದೆ. ಅದು ಸದ್ಭಕ್ತನ ಲಕ್ಷಣ. ಅವಾಸ್ತವವಾದದ್ದನ್ನು ಧಿಕ್ಕರಿಸುವ ಧೈರ್ಯವಿಲ್ಲದವನನ್ನು ಬಸವಣ್ಣನವರು ಕೆಟ್ಟವನು ಎನ್ನುತ್ತಾರೆ. ಆತನ ಬುದ್ಧಿ ನಿಂತ ನೀರಿನಂತೆ ಕೆಟ್ಟುಹೋಗಿರುತ್ತದೆ. ಸ್ಥಾವರ ಪೂಜೆಯು ಕೇವಲ ಕಣ್ಣಿಗೆ ಹಬ್ಬ. ಅದಕ್ಕಿಂತ ಹೆಚ್ಚಿನ ಲಾಭವೇನೂ ಅದರಿಂದುಂಟಾಗುವುದಿಲ್ಲ.

ಇಂದು ನಾವು ನೋಡುತ್ತೇವೆ, ಹಬ್ಬ ಹರಿದಿನಗಳ ನೆಪದಲ್ಲಿ ಮೂರ್ತಿಪೂಜೆ ವೈಭವೀಕೃತಗೊಳ್ಳುತ್ತಿದೆ. ಮಣಗಟ್ಟಲೆ ಹೂವು ಹಣ್ಣುಗಳನ್ನಿಡುವುದು, ಅನೇಕಾನೇಕ ದೀಪಗಳನ್ನುರಿಸುವುದು, ಅನೇಕಸಲ ಪ್ಲಾಸ್ಟಿಕ್ಕಿನ ತೋರಣಗಳ ಬಳಕೆ, ಉಸಿರುಕಟ್ಟಿಸುವಂತಹ ರಾಸಾಯನಿಕಗಳಿಂದ ಮಾಡಿದ ಊದುಬತ್ತಿಗಳ ಮತ್ತು ವೈಭವೋಪೇತ ಪೂಜಾಸಾಮಗ್ರಿಗಳ ಬಳಕೆ, ತಾಂಬೂಲದ ನೆಪದಲ್ಲಿ ಬಳಕೆಗೆ ಬಾರದ ವಸ್ತುಗಳ ವಿತರಣೆ ಇತ್ಯಾದಿ. ಅರ್ಥವಿಲ್ಲದ ಇದನ್ನೆಲ್ಲ ಮಾಡಿ ಆಧ್ಯಾತ್ಮಿಕಲಾಭವಾಯಿತು ಎಂದು ಬೀಗುವ ಮನಸ್ಸು ಬೇರೆ. ಇದು ಭಕ್ತಿಯ ಆಡಂಬರ. ಇದೆಲ್ಲ ಆತ್ಮವಂಚನೆಯಲ್ಲದೆ ಮತ್ತೇನು? ಇಂತಹ ಆಡಂಬರದ ಪೂಜೆಯ ಮೂಲಕ ನಡೆಯುತ್ತಿರುವ ಪರಿಸರದ ಹಾನಿಯ ಬಗ್ಗೆ ನಾವು ಎಂದಾದರು ಯೋಚಿಸುತ್ತೇವೆಯೆ? ತಾವು ಮಾಡುತ್ತಿರುವುದು ಆತ್ಮವಂಚನೆ ಎಂಬ ಅರಿವು ಸಹ ಮೂಡುವುದಿಲ್ಲ. ಈ ರೀತಿಯಾಗಿ ತನ್ನ ನಡತೆಯನ್ನು ವಿಮರ್ಶಿಸದೆ ಅರ್ಥವಿಲ್ಲದ್ದರಲ್ಲಿ ತನ್ನನ್ನು ತೊಡಗಿಸಿಕೊಳ್ಳುವವನು ಕೆಟ್ಟವನು. ಏಕೆಂದರೆ ಅವನಿಂದ ಸ್ವತಃ ತನಗೇ ಆಗಲಿ ಅಥವಾ ಸಮಾಜಕ್ಕೇ ಆಗಲಿ ಯಾವ ಮಂಗಳವೂ ಆಗುವುದಿಲ್ಲ. ಅದಕ್ಕೆ ವಿರುದ್ಧವಾಗಿ ಪರಿಸರದ ಹಾನಿಯಾಗುತ್ತದೆ. "ತನಗೆ ಅವಶ್ಯಕತೆಯಿದ್ದಷ್ಟು ಮಾತ್ರ ತಾನು ತೆಗೆದುಕೊಳ್ಳಬೇಕು ಉಳಿದದ್ದನ್ನು ಸಮಾಜಕ್ಕೆ ಅರ್ಪಿಸಬೇಕೆ"ನ್ನುವ ಶರಣರ ನುಡಿಗೆ ಇಲ್ಲಿ ಸ್ಥಾನವೇ ಇರುವುದಿಲ್ಲ. ಮಣ್ಣ ಪ್ರತಿಮೆಯೇ ದೇವರೆಂದು ಪೂಜಿಸುವ ಅಜ್ಞಾನದಿಂದ, ಮೊಟ್ಟ ಮೊದಲಿಗೆ ಆಗುವ ಹಾನಿ ಎಂದರೆ ಅಹಂಕಾರದ ವಿಜೃಂಭಣೆ. ಅದು ಎಲ್ಲ ರೀತಿಯ ನಾಶಕ್ಕೂ ಮೂಲ. ಈ ರೀತಿಯ ಅಹಂಕಾರ ಉಳ್ಳವನು ಅದನ್ನು ತ್ಯಜಿಸಿ ಸದ್ಭಕ್ತನಾಗುವುದು ವಿರಳವೇ. ಅದಕ್ಕೇ ಬಸವಣ್ಣನವರು ಆ ಕೆಟ್ಟವನೇಕೆ ಸದ್ಭಕ್ತನಹನು ಎಂದು ಪ್ರಶ್ನಿಸುತ್ತಾರೆ.

Vachana 54: garvadinda maadida bhakti - True Devotion

ಗರ್ವದಿಂದ ಮಾಡಿದ ಭಕ್ತಿ ದ್ರವ್ಯದ ಕೇಡು
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯಪ್ರಿಯ ಅಮರೇಶ್ವರ ಲಿಂಗ ಮುಟ್ಟದ ಭಕ್ತಿ.

TRANSLITERATION

garvadiMda mADida Bakti dravyada kEDu
naDeyillada nuDi ariviMge hAni
koDade tyAgi enisikoMbudu muDiyillada SRuMgAra
dRuDhavillada Bakti aDi oDeda kuMBadalli sujalava tuMbidaMte
mArayyapriya amarESvara liMga muTTada Bakti.

TRANSLATION

garvadiMda(with pride, egotistic) mADida(conducted) Bakti(devotion) dravyada (wealth) kEDu(loss)
naDeyillada(not in practice) nuDi(speech, words) ariviMge(to wisdom) hAni(loss)
koDade(without giving) tyAgi(philanthropist) enisikoMbudu(calling oneself) muDiyillada(without hair) SRuMgAra(ornamentation)
dRuDhavillada(without firmness) Bakti(devotion) aDi(bottom) oDeda(broken) kuMBadalli(in the pot) sujalava(sacred water) tuMbidaMte(like filling)
mArayyapriya(mArayya's favorite) amarESvara liMga(Lord amarESvara) muTTada(that does not touch) Bakti(devotion)

Devotion (worship) conducted while full of pride (ego) is loss of wealth
Speech without (corresponding) practice is loss of wisdom
Calling oneself a philanthropist without giving is ornamentation of hairless head
Unfirm devotion is like filling a broken pot with sacred water
The devotion that does not touch Lord amarESvara liMga is in vain

COMMENTARY

In this Vachana, Sharane Aaydakki Lakkamma highlights the characteristics of true devotion. Devotion without humility and with full of pride and ego is not a true devotion, but simply a waste of money and other resources spent on showing off that one is a devotee. Indeed, we create golden statues, decorate them with exotic flowers, bathe them with gallons of milk and honey, and invite the whole town to witness our worshipping act. All this is in vain and simply a loss of wealth, unless we are humble enough with true understanding of the self.

Shiva Sharanas attached great importance to practicing what they preached. Lakkamma says that when the practice (behavior) does not match the speech the wisdom is lost.

It is said that the left hand should not know what the right hand has given out. Calling oneself a philanthropist without corresponding giving is like adoring a bald head with ornaments (Bald head was considered inauspicious in general, although it is fashionable now a days).
A broken pot will not retain water poured into it, no matter how sacred the water is. The devotion without the firmness and sincerity (faith, belief) is like the water poured into a broken pot.

Finally, Lakkamma says that the devotion that does not touch the Lord is in vain.

We must believe in what we call devotion. We should have the complete knowledge of why we do what we do. Worshipping to show off to others that we are full of devotion is not true devotion. We should have found the Lord within and our devotion must truly touch Him.

Let us try to practice what we preach. Our speech and behavior must match. Our giving must be true daasoha from the heart, not for just showing others. Our devotion (worship) must touch the Lord within.

KANNADA COMMENTARY

ಇದು ಶರಣೆ ಆಯ್ದಕ್ಕಿ ಲಕ್ಕಮ್ಮನ ವಚನ. ಇಲ್ಲಿ ಆಕೆ ಯಾವುದು ಭಕ್ತಿಯಲ್ಲ ಮತ್ತು ಯಾವುದು ಹೌದು ಎಂಬುದನ್ನು ಹೇಳುತ್ತಿದ್ದಾಳೆ. ಬಾಹ್ಯ ಪೂಜೆಯನ್ನು ವೈಭವದಿಂದ ಮಾಡಿದರೆ, ಆಡಂಬರದಿಂದ ಭಕ್ತಿ ಮಾಡಿದರೆ ಅದರಿಂದ ದ್ರವ್ಯದ ಕೇಡಾಗುತ್ತದೆ, ವ್ಯರ್ಥವಾಗಿ ಹಣ ವ್ಯಯವಾಗುತ್ತದೆ. ನುಡಿಯಲ್ಲಿ ಶುದ್ಧವಾಗಿದ್ದು ನಡೆಯಲ್ಲಿ ಅದನ್ನು ಅಳವಡಿಸದಿದ್ದರೆ ಅದರಿಂದ ಅರಿವಿಗೇ ಹಾನಿಯಾಗುತ್ತದೆ. ಕೊಡದೆ ತ್ಯಾಗಿ ಎನಿಸಿಕೊಳ್ಳುವುದು ಮುಡಿಯಿಲ್ಲದ ವ್ಯಕ್ತಿ ಅನೇಕ ಶೃಂಗಾರಗಳನ್ನು ಮಾಡಿಕೊಂಡಂತೆ ಮತ್ತು ದೃಢವಿಲ್ಲದ ಭಕ್ತಿ, ತಳ ಒಡೆದ ಕೊಡದಲ್ಲಿ ಪವಿತ್ರವಾದ ನೀರನ್ನು ತುಂಬಿದಂತೆ ವ್ಯರ್ಥವಾಗುತ್ತದೆ, ಇದೇ ರೀತಿ ಲಿಂಗವನ್ನು ಮುಟ್ಟದ ಭಕ್ತಿ ಕೂಡ ನಿರರ್ಥಕವಾಗುತ್ತದೆ ಎನ್ನುತ್ತಾಳೆ ಲಕ್ಕಮ್ಮ.

ಅಂತರಂಗದಲ್ಲಿ ಭಕ್ತಿಯಿಲ್ಲದೆ ತೋರಿಕೆಯ ಭಕ್ತಿಯಿಂದ ಏನೂ ಪ್ರಯೋಜನವಿಲ್ಲ. ಅಂತರಂಗದಲ್ಲಿ ಭಕ್ತಿಯಿಲ್ಲದವರು ಅದನ್ನು ಇದೆ ಎಂದು ತೋರಿಸಲು ಆಡಂಬರದ ಅಶ್ರಯ ಪಡೆಯುತ್ತಾರೆ. ಹೆಚ್ಚಿನ ಬೆಲೆಯ ಮೂರ್ತಿಗಳನ್ನು ಪೂಜಿಸುವುದು, ವಿರಳ ಜಾತಿಯ ಹೂಗಳಿಂದ ಅಲಂಕರಿಸುವುದು, ವಿಭಿನ್ನ ರೀತಿಯ ದೀಪಗಳನ್ನಿಡುವದು, ನಾನಾ ಪ್ರಕಾರದ ಭಕ್ಷ್ಯಗಳನ್ನು ನೈವೇದ್ಯದಲ್ಲಿ ಅರ್ಪಿಸುವುದು, ದೊಡ್ಡ ದೊಡ್ಡ ದಾನ ದಕ್ಷಿಣೆಗಳನ್ನು ಕೊಡುವುದು ಇತ್ಯಾದಿಯಾಗಿ ವೈಭವದಿಂದ ಪೂಜೆ ಮಾಡುತ್ತಾರೆ. ಆದರೆ ಅದರಿಂದ ಕೇವಲ ದ್ರವ್ಯ ವ್ಯಯವಾಗುತ್ತದೆಯೇ ಹೊರತು ಇನ್ನಾವ ಪ್ರಯೋಜನವು ಆಗದು. ನಿಜವಾದ ಭಕ್ತಿಗೂ ಇದಕ್ಕೂ ಯಾವ ಸಂಬಂಧವೂ ವಿರುವುದಿಲ್ಲ. ಮುತ್ತಿನಂತಹ ಮಾತುಗಳನ್ನು ಬಾಯಲ್ಲಿ ಹೇಳುತ್ತಿದ್ದು ಅವನ್ನು ನಡೆಯಲ್ಲಿ ಅಳವಡಿಸಿಕೊಳ್ಳದಿದ್ದರೆ ಅದನ್ನು ಅರಿವಿನ ಹಾನಿಯೆನ್ನಬಹುದು. ಆಡಂಬರದ ಭಕ್ತಿಯಲ್ಲಿ ಮುಳುಗಿದಾಗ ಬಾಯಿಯಲ್ಲಿ ಭಕ್ತಿಯ ವಿಷಯ ಮಾತನಾಡುತ್ತಿದ್ದರೂ ಸಹ ವ್ಯಕ್ತಿಗೆ ತಾನು ಮಾಡುತ್ತಿರುವುದು ತಪ್ಪು, ಅದು ಭಕ್ತಿಯಲ್ಲ ಎನ್ನುವುದು ಅರಿವಿಗೆ ಬರುವುದಿಲ್ಲ. ಆತನ ಅರಿವು ನಶ್ವರವಾಗಿರುತ್ತದೆ. ಅರಿವು ನಶ್ವರವಾದ ವ್ಯಕ್ತಿಗೆ ತಾನು ಹೇಳುವುದು ಒಂದು ಮಾಡುತ್ತಿರುವುದು ಇನ್ನೊಂದು ಎಂದೂ ತಿಳಿಯುವುದಿಲ್ಲ. ಅರಿವಿನ ನಾಶವು ಸರ್ವನಾಶವೇ ಸರಿ.

ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರವೆನ್ನುತ್ತಾಳೆ ಲಕ್ಕಮ್ಮ. ಕೊಡದೆ ತ್ಯಾಗಿ ಹೇಗೆ ಎನಿಸಿಕೊಳ್ಳುತ್ತಾರೆ? ಆಡಂಬರದ ಭಕ್ತಿ ಮಾಡುವವರು ಅನೇಕ ವಸ್ತುಗಳನ್ನು ದಾನ ಮಾಡುತ್ತಾರೆ. ಅವರು, ದಾನ ಮಾಡಬೇಕು ಅದರಿಂದ ತನಗೆ ಒಳ್ಳೆಯ ಹೆಸರು ಬರುತ್ತದೆ, ಪುಣ್ಯಪ್ರಾಪ್ತವಾಗುತ್ತದೆ ಎಂಬಂತಹ ಕಾರಣಗಳಿಗಾಗಿ ದಾನ ಮಾಡುತ್ತಾರೆ. ಬಸವಣ್ಣನವರು “ ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ” ಎನ್ನುತ್ತಾರೆ. ಮನದಲ್ಲಿ ಯವುದೋ ಉದ್ದೇಶ ಹೊಂದಿ ಮಾಡುವ ದಾನವು ಮನದಲ್ಲಿ ನಿಜವಿಲ್ಲದ ದಾನ. ಲಕ್ಕಮ್ಮ ಸತ್ಯ ಶುದ್ಧ ಕಾಯಕ ನಿಷ್ಠಳು. ತನಗೆ ಅವಶ್ಯವಲ್ಲದ್ದನ್ನು ಅವಳು

ಕನಸಿನಲ್ಲಿಯೂ ಬಯಸುವುದಿಲ್ಲ. ತನಗೆ ಬೇಕಾದದ್ದಕ್ಕಿಂತಲೂ ಹೆಚ್ಚಿಗಿರುವುದನ್ನು ಅವಳು ದಾಸೋಹದಲ್ಲಿ ಗುರು ಲಿಂಗ ಜಂಗಮಕ್ಕೆ ನಿಸ್ವಾರ್ಥ ಭಾವದಿಂದ ಅರ್ಪಿಸುವವಳು. ದಾಸೋಹವಲ್ಲದ್ದು ಆಡಂಬರದ ದಾನ, ಮುಡಿಯಿಲ್ಲದ ಶೃಂಗಾರವೆನ್ನುತ್ತಾಳೆ ಅವಳು. " ಮುಡಿಯಿಲ್ಲದ ಶೃಂಗಾರ" ಎಂಬುದನ್ನು ನಾವು ಅಂದಿನ ಸಾಮಾಜಿಕ ನೆಲೆಯಲ್ಲಿ ಅರ್ಥೈಸಬೇಕು. ಅಂದಿನ ಕಾಲದಲ್ಲಿ ಎಲ್ಲವನ್ನು ತೊರೆದ ಸಂನ್ಯಾಸಿಗಳಿಗಲ್ಲದೆ ಇತರರಿಗೆ ಮುಡಿಯು ಸೌಂದರ್ಯದ ಪ್ರತೀಕವಾಗಿತ್ತು. ಹೆಂಗಸರಿಗಂತೂ ಮುಡಿಯಿಲ್ಲದಿರುವುದು ಅಮಂಗಳವೆಂದೇ ಎನಿಸುತ್ತಿತ್ತು. ಅಂತಹ ಕಾಲದಲ್ಲಿ ಮುಡಿಯಿಲ್ಲದೆ ಎಷ್ಟೇ ಶೃಂಗಾರ ಮಾಡಿಕೊಂಡರೆ ಏನೂ ಪ್ರಯೋಜನವಿರಲಿಲ್ಲ ಏಕೆಂದರೆ ಅದು ಸೌಂದರ್ಯವೆಂದೆನಿಸುತ್ತಿರಲಿಲ್ಲ. (ಇಂದು ಕಾಲ ಬದಲಾಗಿದೆ) ಅದೇ ರೀತಿ ಮನದಲ್ಲಿ ನಿಜವಾದ ಭಕ್ತಿಯಿಲ್ಲದೆ ಎಷ್ಟೇ ದಾನಮಾಡಿದರೂ ಅದು ಮುಡಿಯಿಲ್ಲದ ಶೃಂಗಾರದಂತೆ ಎನ್ನುತ್ತಾಳೆ ಲಕ್ಕಮ್ಮ. ದೃಢವಿಲ್ಲದ ಭಕ್ತಿ, ತಳ ಒಡೆದ ಕೊಡದಲ್ಲಿ ಪವಿತ್ರವಾದ ನೀರು ತುಂಬಿದಂತೆ. ಅದೇ ರೀತಿ ದೃಢವಾದ ಭಕ್ತಿಯಿಲ್ಲದವನ ಸ್ಥಿತಿ. ಅವನ ಹೃದಯವೆಲ್ಲ ಬರಿದಾಗಿರುತ್ತದೆ. ದೃಢಭಕ್ತಿಯಿಲ್ಲದೆ ಆಡಂಬರದಲ್ಲಿ ಮುಳುಗಿದವನು ಜನ ಹೊಗಳಿದಾಗ ಸಂತಸದಿಂದ ಇನ್ನೂ ಹೆಚ್ಚು ಆಡಂಬರದಿಂದ ಭಕ್ತಿ ತೋರ್ಪಡಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಕುಗ್ಗಿಹೋಗುತ್ತಾನೆ. ಆದ್ದರಿಂದ ಆತನು ಮಾಡುವ ಒಳ್ಳೆಯ ಕಾರ್ಯಗಳ ಫಲವೆಲ್ಲವೂ ಒಡೆದ ಕೊಡದಲ್ಲಿ ತುಂಬಿದಂತೆ ವ್ಯರ್ಥವಾಗಿ ಸೋರಿ ಹೋಗುತ್ತದೆ. ಆತನಿಗೆ ತನ್ನ ಬಗ್ಗೆಯೇ ವಿಶ್ವಾಸವಿರುವುದಿಲ್ಲ. ಲಿಂಗವನ್ನು ಮುಟ್ಟದ ಅಂದರೆ ತನ್ನ ತಾನರಿಯದ ಭಕ್ತಿಯು ವ್ಯರ್ಥವೆನ್ನುತ್ತಾಳೆ ಲಕ್ಕಮ್ಮ.

Vachana 55: Shiva Bhaktiyembudu – Types of Devotion

ಶಿವ ಭಕ್ತಿಯೆಂಬುದು ಯುಕ್ತಿಯ ಪರಿಯಂತಲ್ಲ
ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೆ
ಹೇಳೀ ಕೇಳಿ ಮಾಡುವುದು ಯುಕ್ತಿ ಭಕ್ತಿ
ಸಾಧಕಾಂಗದಿಂದ ಮಾಡುವುದು ಅಭ್ಯಾಸ ಭಕ್ತಿ
ಮನ ಕೂರ್ತು ಮಾಡುವುದು ಮುಕ್ತಿ ಭಕ್ತಿ
ಕೇಡಿಲ್ಲದೆ ಮಾಡುವುದು ನಿತ್ಯ ಭಕ್ತಿ
ಇದ್ದಂತಿದ್ದು ನಿಜವಪ್ಪುದು ನಿಜ ಭಕ್ತಿ
ಈ ನಿಜದಲ್ಲಿ ಭರಿತರು ಸೌರಾಷ್ಟ್ರ ಸೋಮೆಶ್ವರಾ ನಿಮ್ಮ ಶರಣರು

TRANSLITERATION

Siva BaktiyeMbudu yuktiya pariyaMtalla
mUgaru kaMDa kanasinaMtippudu kANire
hELI kELi mADuvudu yukti Bakti
sAdhakAMgadiMda mADuvudu aByAsa Bakti
mana kUrtu mADuvudu mukti Bakti
kEDillade mADuvudu nitya Bakti
iddaMtiddu nijavappudu nija Bakti
I nijadalli Baritaru saurAShTra sOmeSvarA nimma SaraNaru

TRANSLATION

Siva BaktiyeMbudu (devotion towards God is) yuktiya(a strategy) pariyaMtalla (not like)
mUgaru(dumb) kaMDa(seen, dreamt) kanasinaMtippudu(like a dream) kANire(you see)
hELI kELi(notifying and inquiring) mADuvudu(performing) yukti(strategic, planned) Bakti(devotion),
sAdhakAMgadiMda(with bodily diligence) mADuvudu(performing) aByAsa(habitual, routine) Bakti,(devotion)
mana(mind) kUrtu(with love) mADuvudu(performing) mukti(freedom) Bakti(devotion),
kEDillade(without fail) mADuvudu(performing) nitya(scheduled) Bakti(devotion),
iddaMtiddu(being as is, being oneself) nijavappudu(becoming reality) nija(true) Bakti(devotion),
I(this) nijadalli(in the truth) Baritaru(filled) saurAShTra sOmeSvarA(Lord saurAShTra sOmeSvarA) nimma(Your) SaraNaru (devotees)

Devotion to God is not like a strategy, it is like the dream of the dumb, you see
Devotion attached with notifications and inquiries is strategic devotion
Devotion performed with bodily diligence is habitual or routine devotion
Devotion performed with love is freedom (eternity) seeking devotion
Devotion performed without fail (routinely) is scheduled devotion
Being as is (oneself), with the self becoming the truth (reality) is the true devotion
Lord saurAShTra sOmeSvarA, your devotees are filled with this truth!

COMMENTARY

Vachana 53 addressed the qualifications for one to be initiated into devotional path and Vachana 54 stressed the characteristics of the true devotion. In this Vachana, Sharana Aadayya looks at various types of devotions we cultivate, and addresses true devotion.

We tend to deploy various strategies in worshipping God. We promise to offer 1001 flowers, gold necklace to the Lord, offer chanting His names all day long, offer various types of sweets and savories, etc. In return, we ask Him to give us wealth, health, success, etc. It is always a give and take. We advertise our worshipping mode to show to others; we inquire to get other modes of worship from others. Aadayya says that these strategies do not result in true devotion to the Lord. The devotion is like the dream of a dumb. The

dumb experiences his dreams himself, but will not be able to convey them to others. He is silent and completely 'within himself'. Similarly, the true devotion is experienced by oneself. It cannot be explained to others or explained by others.

We torture our bodies in the name of devotion through fasting, circling the shrine innumerable times, dancing while chanting God's names, worshipping without fail on a regular (routine) basis, and even with full of love towards God. Such bodily diligence is simply a routine or habitual devotion.

In all these forms of devotion we exhibit our wants and don't wants and selfish motives. We build the mountains of wants and don't wants with a deep valley between them. The true devotion fills the valley and erases the distinction between the wants and don't wants and unifies our lives. It is the state 'being as is' or 'finding the self' and 'the self becoming the truth or reality'. Aadayya says that the true devotees of the God are filled with such self-realization and they are one with the Lord. They have achieved the 'linga-anga saamarasya' (one with the Lord) or 'bayalu' (the completeness).

Let us strive to downplay the strategic, routine, ritualistic worship and achieve 'being as is'.

KANNADA COMMENTARY

ಇದು ಆದಯ್ಯನವರ ವಚನ. ಇಲ್ಲಿ ಅವರು, ಸಾಮಾನ್ಯರು ಯಾವುದನ್ನು ಭಕ್ತಿ ಎಂದು ಪರಿಗಣಿಸುತ್ತಾರೆಯೋ ಅದನ್ನು ವಿಶ್ಲೇಷಿಸುತ್ತ ನಿಜವಾದ ಭಕ್ತಿ ಯಾವುದು ಎಂಬುದನ್ನು ಹೇಳುತ್ತಾರೆ. ಯುಕ್ತಿಯಿಂದ ಮಾಡುವುದು ಶಿವಭಕ್ತಿಯಲ್ಲ. ಶಿವ ಭಕ್ತಿಯು, ಮೂಗರು ಕಂಡ ಕನಸಿನಂತೆ ಇರುತ್ತದೆ. ಅದರ ಬಗ್ಗೆ ಹೇಳಿಕೊಳ್ಳುವುದು ಸಾಧ್ಯವಿಲ್ಲ. ಭಕ್ತಿಯ ಬಗ್ಗೆ ಹೇಳಿಕೊಂಡು ಮಾಡುವುದು ಯುಕ್ತಿಯ ಭಕ್ತಿಯಾಗುತ್ತದೆ, ಸಾಧನೆಯ ಮೂಲಕ ಮಾಡುವುದು ಅಭ್ಯಾಸದ ಭಕ್ತಿಯಾಗುತ್ತದೆ, ದೇವರ ಬಗ್ಗೆ ಪ್ರೀತಿಯಿಂದ ಮಾಡುವುದು ಮುಕ್ತಿ ಪಡೆಯಬೇಕೆಂಬ ಆಸೆಯಿಂದ ಮಾಡುವಂತಹ ಭಕ್ತಿಯಾಗುತ್ತದೆ. ಯಾವ ಕೆಡುಕೂ ಆಗಬಾರದು ಎಂದು ಮಾಡುವುದು ನಿತ್ಯ ಭಕ್ತಿ. ಆದರೆ ತಾನು ಇದ್ದಂತೆ ಇದ್ದು ತಾನು ತಾನೇ ತಾನಾಗಿರುವುದು ನಿಜಭಕ್ತಿ. ಅಂತಹ ನಿಜ ಭಕ್ತಿಯಿಂದ ತುಂಬಿ ತುಳುಕುತ್ತಿದ್ದಾರೆ ಶರಣರು, ಎನ್ನುತ್ತಾರೆ ಆದಯ್ಯನವರು.

ಸಾಮಾನ್ಯವಾಗಿ ಜನರು, ತಮ್ಮ ಮನಸ್ಸಿನಲ್ಲಿ ಯಾವುದೋ ಹರಕೆಯನ್ನು ಹೊತ್ತು ಅದನ್ನು ತೀರಿಸಲು ನಾನಾ ಪೂಜೆಗಳನ್ನು ಸಲ್ಲಿಸುತ್ತಾರೆ, ಅಥವಾ, ನಾನು ಇಂತಿಂತಹ ಪೂಜೆಗೈಯುತ್ತೇನೆ ನೀನು ನನಗೆ ಇಂತಿಂತಹದನ್ನು ನೀಡು ಎನ್ನುತ್ತಾರೆ. ಇಂತಹ ಭಕ್ತಿ ಯುಕ್ತಿ ಭಕ್ತಿಯಾಗುತ್ತದೆ. ಆದರೆ ನಿಜವಾದ ಭಕ್ತಿಯು ಅಂತಹದುಲ್ಲ. ಅದು ಮೂಗರು ಕಂಡ ಕನಸಿನಂತಿರುತ್ತದೆ ಎನ್ನುತ್ತಾರೆ ಆದಯ್ಯನವರು. ಮೂಗರಿಗೆ ಮಾತು ಬರುವುದಿಲ್ಲ. ತಾವು ನೋಡಿದುದನ್ನು, ಅನುಭವಿಸಿದುದನ್ನು ಇತರರಿಗೆ ಹೇಳುವುದು ಅವರಿಗೆ ಕಷ್ಟವಾಗುತ್ತದೆ. ಅವರುಗಳು ಸಂಕೇತದ ಭಾಷೆಯ ಮೂಲಕ ಅಲ್ಪ ಸ್ವಲ್ಪ ಹೇಳಬಹುದು, ಆದರೆ ಪೂರ್ಣವಾಗಿ ಎಲ್ಲವನ್ನು ವ್ಯಕ್ತಗೊಳಿಸಲಾಗುವುದಿಲ್ಲ. ನಿಜ ಜೀವನದ ಘಟನೆಗಳನ್ನು ಹೇಗೋ ಕಷ್ಟಪಟ್ಟು ವಿವರಿಸಬಹುದು. ಏಕೆಂದರೆ ಎಲ್ಲರ ಬದುಕಿನ ಅನುಭವಗಳು ಹೆಚ್ಚು ಕಡಿಮೆ ಒಂದೇ ಆಗಿರುತ್ತವೆ. ಹೇಳುವವರು ಸ್ವಲ್ಪ ವ್ಯಕ್ತಪಡಿಸಿದರೂ ಸಾಕು ಕೇಳುಗರು ತಮ್ಮ ಅನುಭವದ ಅಧಾರದ ಮೇಲೆ ಅದನ್ನು ಅರ್ಥೈಸಿಕೊಳ್ಳಬಹುದು. ಆದರೆ

ಮೂಗರು ತಾವು ಕಂಡ ಕನಸನ್ನು ವಿವರಿಸುವುದಂತು ಸಾಧ್ಯವೇ ಇಲ್ಲ ಎನ್ನುತ್ತಾರೆ ಆದಯ್ಯನವರು. ಏಕೆಂದರೆ, ಕನಸು ಸಾಮಾನ್ಯ ಬದುಕಿಗಿಂತ ಭಿನ್ನ ವಾಗಿರುತ್ತದೆ. ಮತ್ತು ಪ್ರತಿಯೊಬ್ಬನ ಕನಸುಗಳು ವಿಭಿನ್ನ ವಾಗಿರುತ್ತವೆ. ಇತರರು ಅವುಗಳನ್ನು ಊಹಿಸುವುದು ಸಾಧ್ಯವಿಲ್ಲ. ಕನಸಿನಲ್ಲಿ ನಡೆಯುವುದೆಲ್ಲವೂ ತರ್ಕಬದ್ಧವಾಗಿರುವುದಿಲ್ಲ. ತರ್ಕಬದ್ಧವಾಗಿಲ್ಲದೇ ಇರುವುದನ್ನು ಮೂಗರು ಸಂಕೇತಗಳಿಂದ ವಿವರಿಸುವುದು ಅಸಾಧ್ಯವಾದದ್ದು. ನಿಜವಾದ ಭಕ್ತಿಯೂ ಕೂಡ ಅದೇ ರೀತಿಯಾಗಿರುತ್ತದೆ ಎನ್ನುತ್ತಾರೆ ಆದಯ್ಯನವರು. ಆ ಅನುಭಾವವನ್ನು ಪದಗಳಲ್ಲಿ ವ್ಯಕ್ತಪಡಿಸುವುದು ಅಶಕ್ಯವಾದದ್ದು. ಇನ್ನು, ಹೇಳಿ ಕೇಳಿ ಮಾಡುವುದು ಯುಕ್ತಿ ಭಕ್ತಿ ಎನ್ನುತ್ತಾರೆ ಅವರು. ಈ ಮೊದಲೇ ಹೇಳಿದಂತೆ, ನಾನು ಇಂತಿಂತಹ ಪೂಜೆ ಮಾಡುತ್ತೇನೆ ನೀನು ನನಗೆ ಇಂತಿಂತಹ ಫಲಗಳನ್ನು ಕರುಣಿಸು, ಅಥವಾ, ಇಂತಿಂತಹ ದಿನದಂದು ಇಂತಿಂತಹ ದೇವರ ಪೂಜೆ ಮಾಡುವುದು ಶುಭ. ಆದ್ದರಿಂದ ನಾನು ಅದನ್ನು ಮಾಡುತ್ತೇನೆ ಎಂದುಕೊಂಡು ಮಾಡುವುದೆಲ್ಲವೂ ಯುಕ್ತಿ ಭಕ್ತಿಯಾಗುತ್ತದೆ. ಸಾಧಕಾಂಗದಿಂದ ಮಾಡುವುದು ಎಂದರೆ ಪ್ರತಿನಿತ್ಯ ನಾನಿದನ್ನು ಮಾಡುತ್ತೇನೆ ಅಂದುಕೊಂಡು ಸಾಧನೆ ಮಾಡುವುದು ಅಭ್ಯಾಸದ ಭಕ್ತಿ ಎನ್ನುತ್ತಾರೆ. ಹಾಗಾದರೆ ಪ್ರತಿ ನಿತ್ಯ ಭಕ್ತಿ ಮಾಡಬಾರದೆ ಎನ್ನುವ ಪ್ರಶ್ನೆ ಹುಟ್ಟುತ್ತದೆ. ಪ್ರತಿನಿತ್ಯ ಮಾಡಬಾರದು ಎಂದಲ್ಲ. ಆದರೆ ಹಾಗೆ ಮಾಡುವಾಗ ಅದು ಕೇವಲ ಅಭ್ಯಾಸಮಾತ್ರವಾಗಿ ಉಳಿಯಬಾರದು. ಉದಾಹರಣೆಗೆ, ಅಭ್ಯಾಸ ಬಲದಿಂದ ಬಾಯಿಯಿಂದ ಮಂತ್ರಗಳು ಬರುತ್ತಲೇ ಇರುತ್ತವೆ ಆದರೆ ಮನಸ್ಸು ಮಾತ್ರ ಎಲ್ಲೋ ಇರುತ್ತದೆ. ಹೀಗೆ ಅದು ಅಭ್ಯಾಸಮಾತ್ರವಾದಾಗ ತನ್ನ ಹೊಸತನವನ್ನು ಕಳೆದುಕೊಂಡು ಯಾಂತ್ರಿಕವಾಗುತ್ತದೆ. ಮತ್ತು ಯಾಂತ್ರಿಕ ಭಕ್ತಿ ನಿಜವಾದ ಭಕ್ತಿಯಲ್ಲ ಎಂಬುದು ಇಲ್ಲಿಯ ಭಾವ. ದೇವರ ಮೇಲೆ ಪ್ರೀತಿ ಹುಟ್ಟಿ ಭಕ್ತಿ ಮಾಡುವುದು ಮುಕ್ತಿ ಭಕ್ತಿ ಎನ್ನುತ್ತಾರೆ. ಏನು ಹಾಗೆಂದರೆ? ದೇವರ ಮೇಲೆ ಪ್ರೀತಿಯಿಡುವುದು ತಪ್ಪೇ? ಇದರ ಉತ್ತರಕ್ಕಾಗಿ ನಾವು ಮೊದಲು ಪ್ರೀತಿ ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಇಂದು ನಾವು ಪ್ರೀತಿಯನ್ನು ಅತ್ಯಂತ ಸೀಮಿತವಾದ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದೇವೆ. ಯಾರು ನಮ್ಮೊಂದಿಗೆ ನಮ್ಮ ಇಷ್ಟಬಂದಂತೆ ನಡೆದುಕೊಳ್ಳುತ್ತಾರೆಯೋ, ನಮ್ಮೊಂದಿಗೆ ನಮಗಿಷ್ಟವಾಗುವಂತೆ ಮಾತನಾಡುತ್ತರೆಯೋ ಅವರನ್ನು ನಾವು ಪ್ರೀತಿಸುತ್ತೇವೆ. ಇಲ್ಲವೆ ಯಾರನ್ನು ಕಂಡರೆ ನಮಗೆ ಭಯವಾಗುತ್ತದೆಯೋ ಅವರನ್ನು ನಾವು ಒಲಿಸಲು ಪ್ರಯತ್ನಿಸುತ್ತ ಆ ಭಾವವನ್ನು ಪ್ರೀತಿ ಎನ್ನುತ್ತೇವೆ. ಯಾರ ಬಗ್ಗೆ ನಮಗೆ ಮೋಹವಿರತ್ತದೆಯೋ ಅವರ ಬಗೆಗಿನ ಆ ಮೋಹವನ್ನೇ ಪ್ರೀತಿ ಎನ್ನುತ್ತೇವೆ. ಹೀಗಾಗಿ ಮೋಹ, ಭಯ, ನಮ್ಮ ಹಾರೈಕೆ ಇತ್ಯಾದಿಗಳನ್ನು ಪ್ರೀತಿಯೆನ್ನುತ್ತೇವೆ. ಆದರೆ ಇವು ಯಾವುವೂ ಪ್ರೀತಿಯಲ್ಲ. ನಿಜವಾದ ಪ್ರೀತಿ ಈ ಎಲ್ಲವನ್ನೂ ಮೀರಿರುವಂತಹದು. ಇಲ್ಲಿ ವ್ಯಕ್ತಿಗೆ ಸಂಸಾರದ ಭಯವಿದೆ. ಆತನು ಅದರಿಂದ ಮುಕ್ತಿ ಪಡೆಯಲು ಇಷ್ಟಪಡುತ್ತಾನೆ. ಅದಕ್ಕಾಗಿ ಆತನು ದೇವರ ಬಗ್ಗೆ "ಪ್ರೀತಿ"ಹೊಂದಿ ಭಕ್ತಿ ಮಾಡುತ್ತಾನೆ. ಆದ್ದರಿಂದ ಅದು ಮುಕ್ತಿಗಾಗಿ ಮಾಡುವ ಭಕ್ತಿಯಾಗುತ್ತದೆ.

ತನಗೆ ಕೇಡಾಗದಿರಲಿ ಎಂಬ ಭಾವದಿಂದ ಮಾಡುವುದು ಪ್ರತಿದಿನ ಮಾಡುವ ನೇಮದ ಭಕ್ತಿಯಾಗುತ್ತದೆ. ಅದನ್ನು ತಪ್ಪಿಸಿದರೆ ಕೇಡಾಗುತ್ತದೆ ಎನ್ನುವ ಭಾವ, ಭಯ, ಅದನ್ನು ತಪ್ಪಿಸದೆ ಪ್ರತಿನಿತ್ಯ ನಿಯಮದಿಂದ ಮಾಡಿಸುತ್ತದೆ. ಅದು ನಿಜವಾದ ಭಕ್ತಿಯಲ್ಲ.

ಈ ಎಲ್ಲ ರೀತಿಯ ಭಕ್ತಿಯಲ್ಲಿ, "ಹೀಗಿರಬೇಕು, ಹೀಗಿರಬಾರದು, ಇದು ಬೇಕು ಇದು ಬೇಡ, ಇದು ಕಳೆದು ಹೋಗಬಾರದು, ಇದು ಕೆಡಬಾರದು" ಎಂಬಂತಹ ಭಾವ ಅಥವಾ ಒಂದಿಲ್ಲ ಒಂದು ಸ್ವಾರ್ಥವಿರುತ್ತದೆ. ಈ ರೀತಿಯ ಬೇಕು ಬೇಡಗಳ ವಲಯದಲ್ಲಿ ಇರುವಂತಹುವುದು ನಿಜಭಕ್ತಿ ಹೇಗಾಗುತ್ತದೆ? ನಿಜವಾದ ಭಕ್ತಿಯಲ್ಲಿ ಯಾವ ಸ್ವಾರ್ಥವೂ ಇರುವುದಿಲ್ಲ. ಇದ್ದಂತಿದ್ದು ನಿಜವಪ್ಪುದು ನಿಜ ಭಕ್ತಿ, ಈ ನಿಜದಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ಈ

ಬೇಕು ಬೇಡಗಳ ಸುಳಿಗೆ ಸಿಲುಕದೆ, ಇದ್ದುದನ್ನು ಇದ್ದಂತೆ ಸ್ವೀಕರಿಸುವುದು, ತನ್ನ ಸ್ವರೂಪವನ್ನು ಕಂಡುಕೊಳ್ಳುವುದು ನಿಜವಾದ ಭಕ್ತಿ. "ಇರುವುದ"ನ್ನು ತಮ್ಮ ಇಚ್ಛೆಗನುಸಾರವಾಗಿ ಪರಿವರ್ತಿಸುವುದು ಎಂದರೆ, ಭಯ, ಚಿಂತೆ,ಪಲಾಯನ, ಸ್ವಾರ್ಥ ಇತ್ಯಾದಿಗಳಿಗೆ ಒಳಪಟ್ಟಂತೆ. ಇಡಿಯಾದುದನ್ನು ತನ್ನ ದೃಷ್ಟಿಗೆ ಸರಿಹೊಂದುವಂತೆ ಮಾರ್ಪಡಿಸುವುದು, ಎಂದರೆ ಅದನ್ನು ವಿಭಜಿಸುವುದಾಗುತ್ತದೆ. ಭಕ್ತಿ ವಿಭಜನೆ ಅಲ್ಲ. ಅದು ಎಲ್ಲವನ್ನೂ ಒಂದುಗೂಡಿಸುವುದಾಗಿದೆ. ಎಲ್ಲ ಬೇಕು ಬೇಡಗಳ ನಡುವಿನ ಅಂತರವನ್ನು ಮುಚ್ಚಿಹಾಕುವುದು, ಬಯಲು ಮಾಡುವುದು ಭಕ್ತಿ. ಬದುಕನ್ನು ಅಂತಹ ನಿರ್ಮಲವಾದ ಭಕ್ತಿಯಿಂದ ತುಂಬಿದ್ದಾರೆ ಶರಣರು ಎನ್ನುತ್ತಾರೆ ಆದಯ್ಯನವರು.

Vachana 56: Kaayakke nelalaagi kaadittu maaye - Illusion

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ!
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ!
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ!
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ!
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ!
ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರೂ ಗೆಲಬಾರದು

TRANSLITERATION

kAyakke neLalAgi kADittu mAye!
prANakke manavAgi kADittu mAye!
manakke nenahAgi kADittu mAye!
nenahiMge arivAgi kADittu mAye!
jagada jaMguLige beMgOlanetti kADittu mAye!
cennamallikArjuna, nInoDDida mAyeyanArU gelabAradu

TRANSLATION

kAyakke (to body) neLalAgi(as shadow) kADittu(has troubled) mAye!(illusion)
prANakke(to life) manavAgi(as mind) kADittu(has troubled) mAye!(illusion)
manakke(to mind) nenahAgi(as memory) kADittu(has troubled) mAye!(illusion)
nenahiMge(to memory) arivAgi(as intellect) kADittu(has troubled) mAye!(illusion)
jagada(of the Universe) jaMguLige(to herd of people) beMgOlanetti(raising a whip) kADittu(has troubled) mAye!(illusion)
cennamallikArjuna,(Lord cennamallikArjuna) nInoDDida(cast by you) mAyeyan (illusion)ArU(no one) gelabAradu(can conquer)

Maye (illusion) has troubled the body as shadow!
Maye has troubled the life (breath) as mind!
Maye has troubled the mind as memory!
Maye has troubled the memory as intellect!
Maye has troubled the people of the Universe with raising whip!
Oh Lord, cennamallikArjuna, no one can conquer the Maye cast by you!

COMMENTARY

The word maya is derived from the Sanskrit roots ma ("not") and ya ("that"). Maya is generally translated as 'illusion'. 'Maye' signifies the feminine personification of 'Maya'. Maye (Illusion) is a result of ignorance. It makes one perceive something that 'is' as 'is not' and something that 'is not' as 'is'.

In this Vachana, Sharane Akkamahadevi describes how Maye has taken over all aspects of our being. She acknowledges that Maye is cast by the Lord and no one can escape from it. Akka says, just as the Maye troubles the body as shadow, Maye troubles (manifests) as mind to life (breath), as memory to mind, and as intellect to memory. The body-mind-intellect complex constitutes our existence. The shadow always follows the 'body'. It appears in various shapes and sizes depending on the position of the body and the light over and around it. We use our body to create shadows and enjoy the various shapes we can deploy. Sometimes we are scared of it, when we are not aware that it is our own shadow. We also know that we cannot get rid of the shadow. Our breath brings 'life' to the body and activates our 'mind'. It is well known that the mind is a monkey and is always active, creating hundreds of pleasant and unpleasant thoughts. Thoughts lead to actions. Actions bring us joy or sorrow. Unless we are disciplined enough to cultivate our mind, we are always subject to the ups and downs the mind creates. We are blessed with 'memory' that allows us to create the bank of our experiences. Recalling pleasant experiences make us happy, while the unpleasant ones contribute to anger, sorrow and other negative traits. We cannot get rid of memories most of the time even if we try. Along with mind and memory, we are blessed with the 'intellect' that allows us to discriminate between the good and the bad and generally drives us towards what we want to justify. If we consider the body-mind-intellect complex is the pure bliss in its inherent state, Maye disturbs that state. Thus, Maye brandishes her whip on the whole Universe commanding everyone in all aspects of their lives, and conceals the God within us. Consider an illusion of a rope being mistaken for a snake in the darkness. Just as this illusion gets destroyed when true

knowledge of the rope is perceived, Maya gets destroyed when one perceives the knowledge of the Lord within. The only solution for us is to remove the ignorance leading to this illusion and follow the path for self-realization. We will address this path in subsequent postings of vachanas by Akka and other Sharanas.

Let us strive to realize the self and remove the ignorance to overcome Maya.

KANNADA COMMENTARY

ಮಾಯೆ ಎನ್ನುವುದಕ್ಕೆ ನಿಘಂಟುವಿನಲ್ಲಿ ಮುಖ್ಯವಾಗಿ ಅಜ್ಞಾನ, ಅತಿಯಾದ ಪ್ರೀತಿ, ವ್ಯಾಮೋಹ, ಭ್ರಮೆ, ಭ್ರಾಂತಿ, ಮೋಸ, ಕಪಟ, ಎಂಬ ಅರ್ಥಗಳನ್ನು ಕೊಟ್ಟಿದೆ. ಈ ಎಲ್ಲವುಗಳಿಗೆ ಅಜ್ಞಾನವೇ ಕಾರಣ. ಅಜ್ಞಾನವು, ಇಲ್ಲದಿರುವುದನ್ನು ಇದೆ ಎಂಬ ಭ್ರಾಂತಿಯನ್ನುಂಟುಮಾಡುತ್ತದೆ. ಈ ಭ್ರಾಂತಿಯಿಂದ ಜೀವ ಮೋಸಹೋಗಿ ಬಾಧೆಪಡುತ್ತದೆ.

ಯುಕ್ತಿ ಭಕ್ತಿ, ಅಭ್ಯಾಸ ಭಕ್ತಿ, ಮುಕ್ತಿ ಭಕ್ತಿ, ನಿತ್ಯ ಭಕ್ತಿ ಇತ್ಯಾದಿ ಭಕ್ತಿಗಳಲ್ಲಿ ತೊಡಗುವುದು ಒಂದು ರೀತಿಯಿಂದ ಸುಲಭ. ಆದರೆ ನಿಜ ಭಕ್ತಿ ಅಳವಡುವುದು ಸುಲಭ ಸಾಧ್ಯವಲ್ಲ. ಅದರ ಕಾರಣ ಮಾಯೆ. ಪ್ರಪಂಚದ ಜನರು ಮಾಯೆಯಿಂದ ಯಾವ ಯಾವ ರೀತಿಯಲ್ಲಿ ಕೋಟಲೆಗೊಳಗಾಗುತ್ತಾರೆ ಎಂಬುದನ್ನು ಇಲ್ಲಿ ಅಕ್ಕಮಹಾದೇವಿ ವಿಷದವಾಗಿ ವರ್ಣಿಸಿದ್ದಾಳೆ. ದೇಹಕ್ಕೆ ನೆರಳು ಸದಾ ಅಂಟಿಕೊಂಡಿರುವಂತೆ ಪ್ರಾಣಕ್ಕೆ ಮನಸ್ಸು, ಮನಕ್ಕೆ ನೆನಪು, ನೆನಪಿಗೆ ಬುದ್ಧಿಯಾಗಿ ಮಾಯೆ ಕಾಡುತ್ತದೆ. ಈ ರೀತಿಯಾಗಿ ಮಾಯೆಯು ಮಾನವನ ಪ್ರತಿಯೊಂದು ಆಯಾಮದಲ್ಲಿ ತೋರುತ್ತದೆ. ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಎತ್ತುಗಳನ್ನು ತನಗೆ ಒಪ್ಪುಗೆಯಾಗುವಂತೆ ಓಡಿಸುವ ಯಜಮಾನನಂತೆ ಇಡೀ ಪ್ರಪಂಚದ ಜನರನ್ನು ತನ್ನ ವಶದಲ್ಲಿಟ್ಟುಕೊಂಡಿರುವ ಈ ಮಾಯೆಯನ್ನು ಯಾರೂ ಗೆಲ್ಲಲು ಸಾಧ್ಯವಿಲ್ಲ ಎನ್ನುತ್ತಾಳೆ.

ದೇಹವಿದ್ದಲ್ಲಿ ನೆರಳು ಇದ್ದೇ ಇರುತ್ತದೆ. ಚಿಕ್ಕದಾಗಿ, ದೊಡ್ಡದಾಗಿ, ಉದ್ದವಾಗಿ, ಗಿಡ್ಡವಾಗಿ, ಬೃಹತ್ತಾಗಿ, ಇದ್ದೂ ಇಲ್ಲದಂತಾಗಿ, ಹಿಂದೆ, ಮುಂದೆ, ಅಕ್ಕಪಕ್ಕಕ್ಕೆ ಹೋಗಿ, ಬಂದು, ನಾನಾ ರೀತಿಯಲ್ಲಿ ಅದು ಇದ್ದೇ ಇರುತ್ತದೆ. ನೋಡಲು ಹೇಗೇ ಕಂಡರೂ ಅದು ನಮ್ಮ ನೆರಳೇ. ಅದರಿಂದ ಭಯ ಪಡುವ ಅಥವಾ ಅದರ ಬಗೆ ಬಗೆಯ ಆಕಾರಗಳನ್ನು ನಿಜವೆಂದೇ ನಂಬುವ ಅವಶ್ಯಕತೆಯಿಲ್ಲ. ಈ ತಿಳುವಳಿಕೆಯಿಂದ ನೆರಳಿನ ಕಾಟದಿಂದ ಬಿಡುಗಡೆ ಪಡೆಯಬಹುದು. ಆದರೆ ಅದರ ಜ್ಞಾನವಿಲ್ಲದವರು ಅದರ ಪ್ರಭಾವದಿಂದ ಕಷ್ಟಪಡುತ್ತಾರೆ. ಅದೇ ತರಹ ಮಾಯೆ ಕೂಡ ನಮ್ಮೊಟ್ಟಿಗೆ ಇದ್ದೇ ಇರುತ್ತದೆ. ಅದನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ ಅಕ್ಕ ಅದು ನಮ್ಮನ್ನು ಆವರಿಸಿರುವ ವಿಧವನ್ನು ಹೇಳುತ್ತಾಳೆ. ಪ್ರಾಣವಿರುವವರೆಗೆ ಮನಸ್ಸು ಇದ್ದೇ ಇರುತ್ತದೆ. ಅದು ತನ್ನ ಸುತ್ತಮುತ್ತವಿರುವುದೆಲ್ಲವನ್ನು, ತನಗೆ ಬೇಕಾದದ್ದು ಮತ್ತು ಬೇಡವಾದದ್ದು, ಎಲ್ಲವನ್ನು, ಪಂಚೇಂದ್ರಿಯಗಳ ಅನುಭವದ ಮೂಲಕ ತನ್ನಲ್ಲಿ ತುಂಬಿಕೊಳ್ಳುತ್ತದೆ. ಮತ್ತು ಆ ಎಲ್ಲದರ ಭಾರದಿಂದ ಕುಗ್ಗುತ್ತದೆ, ಗೊಂದಲಗೊಳ್ಳುತ್ತದೆ, ಕಿರಿಕಿರಿಗೊಳ್ಳುತ್ತದೆ, ಕೆಲವೊಮ್ಮೆ ಉಬ್ಬಿಯೂ ಹೋಗುತ್ತದೆ. ಇಂತಹ ಮನಸ್ಸು ವ್ಯಕ್ತಿಯನ್ನು ಆಳುತ್ತದೆ. ಅದರ ಈ ಎಲ್ಲ ಆಯಾಮಗಳು ವಾಸ್ತವವಾದವಲ್ಲ. ಆದರೆ, ಅದರ ಪರಿಣಾಮವು ಕಾಡುವಿಕೆಯಾಗುತ್ತದೆ. ಮನಸ್ಸು ಇಲ್ಲವಾದಾಗ ಮಾತ್ರ ಅಥವಾ ಮನಸ್ಸಿನ ವ್ಯಾಪಾರ ಸ್ಥಗಿತಗೊಂಡಾಗ ಮಾತ್ರ ಅದರ ಕಾಟ ಇಲ್ಲವಾಗುತ್ತದೆ. ಆದರೆ ಮನಸ್ಸು ಸ್ಥಗಿತಗೊಳ್ಳುವದು ಸಾಧ್ಯವೆ? ಉಸಿರಾಟವನ್ನು ನಿಲ್ಲಿಸಿದಾಗ ಮನಸ್ಸು ತನ್ನ ವ್ಯಾಪರವನ್ನು ನಿಲ್ಲಿಸುತ್ತದೆ. ಇದನ್ನು ನಾವು ಎಲ್ಲರೂ ಪ್ರಯೋಗ ಮಾಡಿ ನೋಡಬಹುದು. ಕೆಲವು ಕ್ಷಣಗಳವರೆಗೆ ಉಸಿರಾಟವನ್ನು ನಿಲ್ಲಿಸಿದಾಗ ಮನಸ್ಸು ತನ್ನ ಅಲೆದಾಟವನ್ನು ನಿಲ್ಲಿಸುತ್ತದೆ. ಆದರೆ ಉಸಿರಾಟವನ್ನು ಕೆಲ ಕ್ಷಣಗಳಿಗಿಂತ ಹೆಚ್ಚಿಗೆ ನಿಲ್ಲಿಸುವುದು ಸಾಧ್ಯವಿಲ್ಲ. (ಯೋಗಿಗಳಿಗೆ ಇದು ಕೆಲಮಟ್ಟಿಗೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ.) ಆದ್ದರಿಂದ

ಮನಸ್ಸಿನಿಂದ ಬಿಡುಗಡೆಯಿಲ್ಲ. ಅದು ನಮ್ಮನ್ನು ಮಾಯೆಯಾಗಿ ಕಾಡುತ್ತದೆ ಎನ್ನುತ್ತಾಳೆ ಅಕ್ಕ. ಆದರೆ ಈ ಮಾಯೆ ಅಷ್ಟಕ್ಕೆ ನಿಲ್ಲುವಿದಿಲ್ಲ. ಅದು ಮನಸ್ಸಿಗೆ ನೆನಪಾಗಿ ಕಾಡುತ್ತದೆ. ನಮ್ಮ ಅನುಭವಗಳೆಲ್ಲ ನೆನಪಾಗಿ ಮಾರ್ಪಾಟುಗೊಂಡು ಮನದಲ್ಲಿ ಮನೆಮಾಡುತ್ತವೆ. ಮನಸ್ಸು ನೆನಪುಗಳ ಆಗರವಾಗುತ್ತದೆ. ಅದು, ಬೇಕಾದ ಮತ್ತು ಬೇಡವಾದ ನೆನಪುಗಳಿಂದ ತುಂಬಿಹೋಗುತ್ತದೆ, ತುಂಬಿಕೊಳ್ಳುತ್ತಲೇ ಇರುತ್ತದೆ. ಮನಸ್ಸು ತೆರವಾಗಿದ್ದಾಗ ಮಾತ್ರ ಅಲ್ಲಿ ಶಿವತತ್ವ ಅಳವಡಲು ಸಾಧ್ಯವಾಗುತ್ತದೆ. ಆದರೆ, ಮನಸ್ಸು ತೆರವಾಗಿರಲು ಅವಕಾಶಕೊಡದೆ ನೆನಪುಗಳು ಮಾಯೆಯಾಗಿ ಕಾಡುತ್ತವೆ. ಮತ್ತು ಈ ನೆನಪುಗಳಿಗೆ ಬುದ್ಧಿ ಮಾಯೆಯಾಗಿ ಕಾಡುತ್ತದೆ. ಬುದ್ಧಿ, ನೆನಪುಗಳನ್ನು "ಮಧುರ, ರಮ್ಯ, ಆಹ್ಲಾದಕರ, ಕಹಿ, ಭಯಂಕರ, ಅಸಹ್ಯ, ಜುಗುಪ್ಸಾತ್ಮಕ" ಇತ್ಯಾದಿಯಾಗಿ ವಿಂಗಡಿಸಿ ಕೆಲವು ನೆನಪುಗಳು ಬೇಕು ಕೆಲವು ನೆನಪುಗಳು ಬೇಡ ಎಂದುಕೊಳ್ಳುತ್ತದೆ. ನೆನಪುಗಳಿಗೆ ಒಳ್ಳೆಯ ಮತ್ತು ಕೆಟ್ಟ ಎಂಬ ಹಣೆಪಟ್ಟಿಯನ್ನು ಕಟ್ಟಿ ಬೇಕು ಬೇಡವೆಂದು ಹೇಳುತ್ತಲೇ ಇರುತ್ತದೆ. ಅನುಭವಗಳನ್ನು ನೆನಪುಗಳಾಗಿ ಸಂಚಯಿಸಿ ಅವುಗಳಲ್ಲಿ ಕೆಲವನ್ನು ಪುನಃ ಪುನಃ ಅನುಭವಿಸಬೇಕು ಎನ್ನುವ ಆಸೆಗೆ ತುತ್ತಾಗುತ್ತದೆ. ಇನ್ನು ಕೆಲವನ್ನು ಬೇಡವೆಂದು ತಿರಸ್ಕರಿಸಿ ಅವುಗಳಿಂದ ದೂರ ಓಡುವುದರಲ್ಲಿ ತೊಡಗುತ್ತದೆ. ಒಮ್ಮೆ ಕಹಿ ಅನುಭವ ಕೊಟ್ಟ ಪ್ರಸಂಗ ಇನ್ನೊಮ್ಮೆ ಸಿಹಿ ಅನುಭವ ಕೊಡಲೂ ಬಹುದು. ಹೀಗಾಗಿ ನೆನಪುಗಳು ಎಲ್ಲವೂ ನಿಜವೆಂದು ನಂಬಲು ಸಾಧುವಲ್ಲ. ಅವುಗಳು ವಾಸ್ತವವಾದ ಚಿತ್ರವನ್ನು ಕೊಡುವುದಿಲ್ಲ. ಆದರೆ, ನೆನಪುಗಳು ಯಾರ ಮಾತುಗಳನ್ನೂ ಕೇಳುವುದಿಲ್ಲ. ಎಲ್ಲ ರೀತಿಯ ನೆನಪುಗಳು ಆಗಾಗ ಮೇಲೆದ್ದು ಕಾಡುತ್ತಲೇ ಇರುತ್ತವೆ. ಈ ನೆನಪುಗಳಿಂದ ಜೀವ ಘಾಸಿಗೊಳ್ಳುತ್ತದೆ. ಈ ರೀತಿಯಾಗಿ ಮನಸ್ಸು, ನೆನಪು ಮತ್ತು ಬುದ್ಧಿಗಳು ಜೀವಕ್ಕೆ ಮಾಯೆಯಾಗಿ ಕಾಡುತ್ತವೆ. ಬೆನ್ನಿನ ಮೇಲೆ ಬಾರುಕೋಲನ್ನು ಎತ್ತಿ ಓಡಿಸುವ ಯಜಮಾನನಂತಿರುತ್ತದೆ ಮಾಯೆ. ಈ ಮಾಯೆಯನ್ನು ಒಡ್ಡಿರುವವನು ಚೆನ್ನಮಲ್ಲಿಕಾರ್ಜುನನೆ. ಅವನು ಒಡ್ಡಿದ ಈ ಮಾಯೆಯ ಲೀಲೆಗೆ ಎಲ್ಲರೂ ಒಳಗಾಗುತ್ತಾರೆ. ಅದರ ವಶವಾಗದೆ ಇರುವುದು ಈ ಪ್ರಪಂಚದ ಮಾನವರಿಗೆ ಅಸಾಧ್ಯವಾದದ್ದು ಎಂದು ಅಕ್ಕಮಹಾದೇವಿ ಒಂದು ಹಂತದಲ್ಲಿ ಹೇಳುತ್ತಾಳೆ. ಆದರೆ,ಮುಂದೆ ಆ ಮಾಯೆಗೆ ತಾನು ಅಂಜುವವಳಲ್ಲವೆಂದೂ ಹೇಳುತ್ತಾಳೆ. ಅದನ್ನು ಮುಂದೆ ನೋಡೋಣ.

VACHANA 57: Bittenendaru Bidadee Maye - Overcoming Illusion

ಬಿಟ್ಟೆನೆಂದರೂ ಬಿಡದೀ ಮಾಯೆ!

ಬಿಡದಿದ್ದರೆ ಬೆಂಬತ್ತಿತ್ತು ಮಾಯೆ!

ಯೋಗಿಗೆ ಯೋಗಿಣಿಯಾಯಿತ್ತು ಮಾಯೆ!

ಸವಣಂಗೆ ಸವಣಿಯಾಯಿತ್ತು ಮಾಯೆ!

ಯತಿಗೆ ಪರಾಕಿಯಾಯಿತ್ತು ಮಾಯೆ!

ನಿನ್ನ ಮಾಯೆಗೆ ನಾನಂಜುವವಳಲ್ಲ

ಚೆನ್ನಮಲ್ಲಿಕಾರ್ಜುನದೇವ, ನಿಮ್ಮಾಣೆ

TRANSLITERATION

**biTTeneMdarU biDadI mAye!
biDadiddare beMbattittu mAye!
yOgige yOgiNiyAyittu mAye!
savaNaMge savaNiyAyittu mAye!
yatige parAkiyAyittu mAye!
ninna mAyege nAnaMjuvavaLalla
cennamallikArjunadEva, nimmANe**

TRANSLATION

biTTeneMdarU(even if I abandon) biDadu (does not leave me) I(this) mAye!(illusion)

biDadiddare(if I don't abandon) beMbattittu(follows, sticks to me) mAye!
yOgige(to an ascetic) yOgiNiyAyittu(becomes a female ascetic) mAye!
savaNaMge(to a Jain monk) savaNiyAyittu(becomes Jain nun) mAye!
Yatige(to a monk) parAkiyAyittu(sincerity of practices becomes) mAye!
Ninna(your) mAyege(illusion) nAnaMjuvavaLalla(I will not be frightened)
cennamallikArjunadEva,(Lord cennamallikArjunadEva) nimmANe (I swear upon you)

Even if I abandon, Maye (illusion) does not leave me!
If I don't abandon, Maye follows (sticks to) me!
To an ascetic, Maye becomes a female ascetic!
To a Jain monk, Maye becomes a Jain nun!
To a monk, his sincerity of practices (rituals) becomes Maye!
Lord chennamallikarjuna, I will not be frightened by the Maye you have cast, I swear upon you!

COMMENTARY

In previous Vachana, Akkamahadevi addressed how Maye (illusion) envelops our body-mind-intellect complex, and said that no one can escape from Maye, cast by the Lord. Here, Akka expands on the traits of Maye in the context of individuals and their surroundings.

One school of thought urges us to treat this mortal world as an illusion and hence abandon it. Akka says that we cannot really abandon Maye. Even if we abandon Maye, she would still follow us. If we did not abandon, Maye exerts her influence on us for sure. Even an ascetic who has conquered his senses and achieved the control of his mind, gets attracted to a female ascetic who has also accomplished the same. Such is the power of Maye. In general, Maye envelops a man as a woman, and woman as a man. A monk who has given up his worldly possessions, who has achieved the control of his mind, and spends all his time in spiritual journey, runs the risk of becoming full of himself (i.e. Attacked by Maye), when his ego elevates to make him feel that "I have accomplished, I have conquered my mind, etc."!

As a very simplified scenario, consider the case of a habitual smoker. Maye has enveloped him as his smoking habit. Once he realizes that smoking is bad for his health, he tries to quit the habit. Someone suggests to him that chewing gum at the urge for a smoke will help him stay away from smoking. Now he is habituated to chewing gum, another form of Maye. This is how Maye manifests in an alternate form when you want to abandon her. If the smoker does not want to abandon smoking, Maye continues to envelop him as his smoking habit.

The illusion of the rope lying in a dark alley, presenting itself as a serpent cannot be abandoned. When the light of awareness (that it is indeed a rope) shines on it, the illusion does not have the frightening effect any more.
While Akka says that no one can escape from Maye, she concludes this Vachana saying that she is not frightened by her. Akka is implying that she acknowledges the existence of Maye, and she is aware of the forms and modalities in which Maye persists and hence Maye cannot disturb her balance. The key then is 'awareness'. Awareness fills the valley

between the peaks of abandonment and non-abandonment, making both the aspects immaterial, thereby erasing the fear of illusion.

The concept of Maya was first introduced by the great ninth-century Hindu philosopher Adi Shankara. In Advaita Vedanta philosophy, Maya is the limited, purely physical and mental reality in which our everyday consciousness has become entangled. Maya is held to be an illusion, a veiling of the true, unitary Self — the Cosmic Spirit also known as Brahman. Please visit http://en.wikipedia.org/wiki/Maya_(illusion) for a review of the concept of Maya in various religions and beliefs.

Let us strive to develop the Awareness to overcome Maye and realize the Lord within!

KANNADA COMMENTARY

ಇಲ್ಲಿ ಅಕ್ಕಮಹಾದೇವಿ ಮಾಯೆಯ ವೈಚಿತ್ರ್ಯವನ್ನು ಅರಹುತ್ತಿದ್ದಾಳೆ. ಅದು ಬಿಟ್ಟೆನೆಂದರೂ ಬಿಡದು, ಬಿಡದಿದ್ದರಂತೂ ಬೆನ್ನಹಿಂದೆಯೇ ಬರುತ್ತದೆ. ಇಂತಹ ಮಾಯೆಯಿಂದ ಬಿಡಿಸಿಕೊಳ್ಳುವುದು ಹೇಗೆ? ಚಿತ್ತವೃತ್ತಿ ನಿರೋಧವನ್ನು ಸಾಧಿಸಿರುವಂತಹ ಯೋಗಿಯೂ ಯೋಗಿಣಿಯ ಮಾಯೆಗೆ ಒಳಗಾಗುತ್ತಾನೆ, ದೇಹವನ್ನು ಕಠಿಣವಾಗಿ ದಂಡಿಸಿ ಆಸೆ ಆಕಾಂಕ್ಷೆಗಳಿಗೆಲ್ಲ ತಿಲಾಂಜಲಿಯಿತ್ತ ಜೈನ ಸಂನ್ಯಾಸಿಯೂ ಸಹ ಜೈನ ಸಂನ್ಯಾಸಿನಿಯ ಮಾಯೆಗೆ ಒಳಗಾಗುತ್ತಾನೆ, ಮತ್ತು ಇಂದ್ರಿಯ ನಿಗ್ರಹ ಮಾಡಿರುವಂತಹ ಯತಿಯೂ ಸಹ ವ್ರತನಿಷ್ಠೆಯ ಮಾಯೆಗೆ ಒಳಗಾಗುತ್ತಾನೆ. ಇನ್ನು ಸಾಮಾನ್ಯರ ಪಾಡೇನು?

ಆದರೆ, ಹಿಂದಿನ ವಚನದಲ್ಲಿ ಮಾಯೆಯನ್ನು ಯಾರೂ ಗೆಲ್ಲಲಾರರು ಎಂದ ಅಕ್ಕ ಈ ವಚನದಲ್ಲಿ ತನ್ನ ಮಟ್ಟಿಗೆ ಅದರ ವಿರುದ್ಧವಾಗಿ ನುಡಿಯುತ್ತಾಳೆ. ಚೆನ್ನಮಲ್ಲಿಕಾರ್ಜುನನ ಮೇಲೆ ಆಣೆ ಮಾಡಿ ಮಹಾ ಮಹಾ ಯೋಗಿ, ಸಂನ್ಯಾಸಿ ಮತ್ತು ಯತಿಗಳನ್ನೂ ಬಿಡದೆ ಕಾಡುವಂತಹ ಮಾಯೆಗೆ ತಾನು ಅಂಜುವವಳಲ್ಲ ಎಂದು ಹೇಳುತ್ತಾಳೆ. ನಾವು ಬಿಟ್ಟೆವೆಂದರೂ ಮಾಯೆ ನಮ್ಮನ್ನು ಬಿಡದು. ಉದಾಹರಣೆಗೆ ನಾವು ಯಾವುದಕ್ಕೋ ಅಂಟಿಕೊಂಡಿರುತ್ತೇವೆ: ಅದು ಚಹ ಕುಡಿಯುವ ಚಟವೇ ಆಗಿರಬಹುದು, ಅಥವಾ ಯಾವುದೋ ಸುಂದರವಾದ ವಸ್ತುವನ್ನು (ವಸ್ತ್ರ, ಮನೆಗೆ ಬೇಕಾಗುವ ವಸ್ತು ಅಥವಾ ಇನ್ನಾವುದೋವಸ್ತುವನ್ನು) ಕಂಡಾಗ ಅದು ತನ್ನದಾಗಿಸಿಕೊಳ್ಳುವ ಆಸೆಯಿರಬಹುದು, ಅದನ್ನು ಗುರುತಿಸಿ ಇನ್ನು ಮೇಲೆ ನಾನು ಹಾಗೆ ಮಾಡುವುದಿಲ್ಲ ಎಂದುಕೊಳ್ಳುತ್ತೇವೆ. ಆದರೆ ಆ ಆಸೆ ಇನ್ನಾವುದೋ ರೂಪತಾಳಿ ನಮ್ಮ ಬೆನ್ನಟ್ಟುತ್ತದೆ. ಚಹದ ಬದಲಿಗೆ ಇನ್ನೇನೋ ಕುಡಿಯುತ್ತೇವೆ, ಸುಂದರವಾದ ವಸ್ತ್ರದ ಬದಲಿಗೆ ಇನ್ನೇನೋ ನಮ್ಮದಾಗಿಸಿಕೊಳ್ಳುತ್ತೇವೆ. ಹೀಗೆ ಮಾಯೆ ತನ್ನ ರೂಪ ಬದಲಿಸಿ ನಮ್ಮನ್ನು ಬೆನ್ನಟ್ಟುತ್ತದೆ. ಚಿತ್ತವೃತ್ತಿ ನಿರೋಧದಿಂದ ಯೋಗಿಯಾಗುತ್ತಾನೆ ವ್ಯಕ್ತಿ. ಚಿತ್ತದ ವೃತ್ತಿಗಳಾದ ಆಸೆ ಆಕಾಂಕ್ಷೆಗಳನ್ನು ಮೀರಿದ್ದೇನೆ ಎಂದುಕೊಳ್ಳುತ್ತಾನೆ. ಆದರೆ ತನಗೇ ಗೊತ್ತಿಲ್ಲದೆ ತನ್ನಂತೆ ಚಿತ್ತವೃತ್ತಿಯನ್ನು ನಿರೋಧಿಸಿದ ಯೋಗಿಣಿಯ ಆಕರ್ಷಣೆಗೆ ಒಳಗಾಗುತ್ತಾನೆ. ಹೀಗೆ ಆತನು ಬಿಟ್ಟಿದ್ದೇನೆ ಎಂದುಕೊಂಡರೂ ಆ ಮಾಯೆ ಬೇರೆಯ ರೂಪದಲ್ಲಿ ಸೂಕ್ಷ್ಮವಾಗಿ ಆತನನ್ನು ಕಾಡುತ್ತದೆ. ಜೈನ ಸಂನ್ಯಾಸಿ ಸಂಸಾರವನ್ನು ತ್ಯಜಿಸಿರುತ್ತಾನೆ,ದೇಹವನ್ನು ದಂಡಿಸಿರುತ್ತಾನೆ, ಕಠಿಣವಾದ ಜೀವನ ಶೈಲಿಯನ್ನು ಅಳವಡಿಸಿಕೊಂಡಿರುತ್ತಾನೆ, ಆದರೆ ಆತನಿಗೆ ಮಾಯೆ, ಜೈನ ಸಂನ್ಯಾಸಿನಿಯ ರೂಪದಲ್ಲಿ ಬಂದು ಮುತ್ತಿಕೊಳ್ಳುತ್ತದೆ. ತಾನು ಎಲ್ಲರಂತೆ ಲೌಕಿಕನಲ್ಲ, ಅಲೌಕಿಕದಲ್ಲಿ ಮಾತ್ರ ನನ್ನ ಆಸಕ್ತಿ, ಎಂದುಕೊಂಡವನು ತನ್ನಂತೆಯೇ ಲೌಕಿಕವನ್ನು ಬಿಟ್ಟ ಸಂನ್ಯಾಸಿನಿಯ ಆಕರ್ಷಣೆಗೆ

ಒಳಗಾಗುತ್ತಾನೆ. ಯತಿಗೆ, ಇಂದ್ರಿಯ ನಿಗ್ರಹಮಾಡಿದವನಿಗೆ ವ್ರತನಿಷ್ಠೆಯೇ ಮಾಯೆಯಂತೆ ಕಾಡುತ್ತದೆ. ಇಂದ್ರಿಯ ನಿಗ್ರಹಕ್ಕಾಗಿ ಅನೇಕ ವ್ರತಗಳನ್ನು ಕೈಗೊಳ್ಳುತ್ತಾನೆ. ವ್ರತಗಳನ್ನು ಮಾಡುವಾಗ ಇಂದ್ರಿಯಗಳು ತನ್ನ ವಶದಲ್ಲಿವೆ ಎನ್ನಿಸುತ್ತದೆ. ಆದರೆ ಆ ವ್ರತನಿಷ್ಠೆಯೇ ಮಾಯೆಯಾಗುತ್ತದೆ. ತನ್ನ ವ್ರತನಿಷ್ಠೆಯನ್ನೇ ತಾನು ಪ್ರೀತಿಸಲು ತೊಡಗುತ್ತಾನೆ. ಅದೇ ಆತನಿಗೆ ಅಹಂ ಆಗಿ ಕಾಡುತ್ತದೆ. ಹೀಗೆ ಎಲ್ಲವನ್ನೂ ತ್ಯಜಿಸಿದ್ದೇವೆ ಎಂದುಕೊಳ್ಳುವಂತಹ ಯೋಗಿ, ಸವಣ ಮತ್ತು ಯತಿಗಳು ತಾವು ಬಿಟ್ಟಿದ್ದೇವೆ ಎಂದುಕೊಂಡರೂ ಮಾಯೆ ಅವರನ್ನು ಬಿಡದೆ ಅವರ ಇತರ ಮನೋಭೀಷ್ಟೆಗಳ ರೂಪದಲ್ಲಿ ಕಾಡುತ್ತದೆ. ವ್ಯಕ್ತಿಗೆ ಅದರ ಸುಳಿವನ್ನೂ ಕೊಡದೆ ತನ್ನ ಮಾಯೆಯಲ್ಲಿ ಅದು ಬಂಧಿಸುತ್ತದೆ. ಯಾವುದೋ ಒಂದು ಗಳಿಗೆಯಲ್ಲಿ ಎಲ್ಲವನ್ನು ತ್ಯಜಿಸಿ ಬಂದ ನಂತರ ತ್ಯಜಿಸಿದ ಬದುಕು ದಿನಗಳೆದಂತೆ ಯಾಂತ್ರಿಕವಾಗುತ್ತದೆ. ಮತ್ತು ತಾನು ಎಲ್ಲವನ್ನು ಬಿಟ್ಟುಬಂದಿದ್ದೇನೆ ಎನ್ನುವ ಅಹಂಕಾರ ಹುಟ್ಟಿಕೊಳ್ಳುತ್ತದೆ. ಅದನ್ನು ಬಿಟ್ಟುಬಂದಿದ್ದೇನೆ ಎನ್ನುವ ಅಹಂಕಾರವೇ ಮಾಯೆಯ ರೂಪದಲ್ಲಿ ಕಾಡತೊಡಗುತ್ತದೆ. ತಾನು ತನಗರಿವಿಲ್ಲದೆ ಯೋಗಿಣಿ, ಸವಣಿ ಮತ್ತು ವ್ರತನಿಷ್ಠೆಯ ಮಾಯೆಗೆ ಬಲಿಯಾಗುತ್ತಿದ್ದೇನೆ ಎಂಬುದರ ಅರಿವೂ ಆಗುವುದಿಲ್ಲ. ಬಿಟ್ಟವರ ಸ್ಥಿತಿಯೇ ಹೀಗಿರುವಾಗ ಬಿಡದಿದ್ದವರ ಪಾಡಂತೂ ಹೇಳತೀರದು. ಇದನೆಲ್ಲ ಬಹಳ ಹತ್ತಿರದಿಂದ, ಆಳವಾಗಿ ಗಮನಿಸಿದ ಅಕ್ಕ ಅದನ್ನು ಇಲ್ಲವಾಗಿಸುವ ಕಲೆಯನ್ನು ಅಳವಡಿಸಿಕೊಂಡಿದ್ದಳು. ಅದನ್ನು ಬಿಡುವುದೂ ಸರಿಯಲ್ಲ, ಮತ್ತು ಬಿಡದೆ ಇರುವುದೂ ಸರಿಯಲ್ಲ, ಏಕೆಂದರೆ ಎರಡೂ ಸಂದರ್ಭಗಳಲ್ಲಿ ಮಾಯೆ ವ್ಯಕ್ತಿಯನ್ನುಕಾಡುತ್ತದೆ, ಎಂಬುದನ್ನು ಅವಳು ಕಂಡುಕೊಂಡಿದ್ದಳು. ಬಿಡುವುದು ಮತ್ತು ಬಿಡದೆ ಇರುವುದು, ಎರಡೂ ವಿಭಜನೆಯನ್ನು ಸೂಚಿಸುತ್ತವೆ . ಅಂದರೆ ಆಕೆ, ಮಾಯೆ, ಯಾವ ಯಾವ ವಿಧದಲ್ಲಿ, ಎಲ್ಲೆಲ್ಲಿ, ಯಾವಾಗ ಯಾವಾಗ ಕಾಣಿಸಿಕೊಳ್ಳುತ್ತದೆ ಎಂಬುದನ್ನು, ಮಾಯೆಯ ಸಮಸ್ತ ಆಯಾಮಗಳನ್ನು ನಿರಂತರವಾಗಿ ಗಮನಿಸಿದ್ದಳೆಂದು ತೋರುತ್ತದೆ. ಅದಕ್ಕೆ ಬೇಕಾದ ನಿರಂತರವಾಗಿ ಜಾಗೃತವಾದ ಅರಿವು ಅವಳದಾಗಿತ್ತು. ತನ್ನ ಈ ಜಾಗೃತವಾದ ಅರಿವಿನಿಂದ "ಬಿಡಬೇಕು, ಬಿಡಬಾರದು" ಎನ್ನುವ ಭೇದವನ್ನು, ಅಂತರವನ್ನು ಬಯಲು ಮಾಡಿದಳು. ಅದರಲ್ಲಿ ಅಂತರವೇ ಇಲ್ಲದಿದ್ದ ಮೇಲೆ ಯಾವದನ್ನು ಬಿಡುವುದು ಯಾವುದನ್ನು ಹಿಡಿಯುವುದು? ಆಗ ಮಾಯೆ ತಾನಾಗಿಯೇ ಅಳಿಸಿಹೋಗುತ್ತದೆ. ಆಗ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ಮೇಲೆ ಆಣೆಮಾಡಿ ತಾನು ಅಂತಹ ಮಾಯೆಗೆ ಅಂಜುವವಳಲ್ಲವೆಂದು ಸಾರುತ್ತಾಳೆ.

Vachana 58: Honnu Maye Embaru - Desire is Illusion

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ

ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ

ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ

ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ

TRANSLITERATION

honnu mAyeyeMbaru honnu mAyeyalla
heNNu mAyeyeMbaru heNNu mAyeyalla
maNNu mAyeyeMbaru maNNu mAyeyalla
manada muMdaNa ASeyE mAye kANA guhESvara

TRANSLATION

honnu (Gold) mAye (illusion) yeMbaru (they say) honnu (Gold) mAyeyalla (is not illusion)
heNNu (woman) mAye (illusion) yeMbaru (they say) heNNu (woman) mAyeyalla (is not illusion)
maNNu (Earth, land) mAye (illusion) yeMbaru (they say) maNNu (Earth, land) mAyeyalla (is not illusion)
manada (of the mind) muMdaNa (before, arising) ASeyE (the desire is) mAye (illusion) kANA (you see) guhESvara (the Lord of Caves)

They say Gold (wealth) is Maye (Illusion), it is not!
They say woman is Maye, she is not!
They say land is Maye, it is not!
Desire arising in the mind is Maye, Oh Lord of Caves!

COMMENTARY

Gold, woman (man) and land symbolize everything we strive to possess in our lives. Gold represents the wealth. Woman (to man, and man to woman) represents the relationships and conquest of desirable individuals. Land represents the properties and territorial acquisitions. Our state of happiness and sorrow depends on how much of these we possess. We blame these as illusion, especially when things do not go our way in terms of possessing these. In this popular Vachana, Allama Prabhu says that gold, woman(man), and land are not the illusion, but the desire in us to possess them is the illusion.

Consider the case of a gold bar lying on the road. A passerby desirous of wealth would immediately pick it up. He might even try to make sure that no one else saw him picking it up, with the fear that they may claim it back. He will be immediately high with joy of this sudden increment in wealth. Another passerby who is not enamored by Gold will either simply walk away from it or try to find the owner to return it. Either way, he is not disturbed by the Gold bar. So, it is not the Gold that created the ebb and tide in individuals, but the desire for possessing it!

Let us rightsize our desires!

KANNADA COMMENTARY

ಶೂನ್ಯಸಿಂಹಾಸನಾಧೀಶ್ವರರಾದ ಅಲ್ಲಮ ಪ್ರಭುಗಳು ಇಲ್ಲಿ ಮಾಯೆಯನ್ನು ಅದರ ನಾನಾ ರೂಪಗಳಿಂದ ನಗ್ನ ಗೊಳಿಸಿ ಅದನ್ನು ತನ್ನ ನಿಜರೂಪದಲ್ಲಿ ನಮ್ಮೆದುರಿಗೆ ಬಿಂಬಿಸುತ್ತಾರೆ. ಥಳಥಳನೆ ಹೊಳೆದು ಎಲ್ಲರ ಕಣ್ಣು ಕೋರೈಸುವ ಚಿನ್ನವನ್ನು ಜನರು ಮಾಯೆ ಯೆನ್ನುವರು. ತನ್ನ ಲಾವಣ್ಯ, ಸೌಂದರ್ಯ ಮತ್ತು ಹಾವಭಾವಗಳಿಂದ ಆಕರ್ಷಿಸುವ ಹೆಣ್ಣನ್ನು ಮಾಯೆಯೆನ್ನುವರು (ಇಲ್ಲಿ ಲೋಕದಲ್ಲಿ ಬಳಕೆಯಲ್ಲಿರುವ ಮಾತನ್ನು ಮಾತ್ರ ಹೇಳುತ್ತಿರುವರು, ಅದನ್ನು ಅಕ್ಷರಶಃ ತೆಗೆದುಕೊಳ್ಳದೆ, ಅಂದರೆ, ಗಂಡಿಗೆ ಹೆಣ್ಣು ಮಾಯೆಯಾಗುವಂತೆ ಹೆಣ್ಣಿಗೆ ಗಂಡು ಮಾಯೆಯಾಗುತ್ತಾನೆ ಎಂದು ತೆಗೆದುಕೊಳ್ಳದೆ ಹೋದರೆ ಅದು ನಮ್ಮ ಮೂರ್ಖತನವಾಗತ್ತದೆ.) ಸಮೃದ್ಧಿಯನ್ನು ಕೊಡುವ ಮಣ್ಣು ಮಾಯೆಯೆಂಬುವರು. ಆದರೆ ಅಲ್ಲಮಪ್ರಭುಗಳು ಇವಾವೂ ಮಾಯೆಯಲ್ಲ, ಇವುಗಳ ಬಗ್ಗೆ ನಾವು ಬೆಳೆಸಿಕೊಂಡ ಆಸೆಯೇ ಮಾಯೆಯೆನ್ನುವರು.

ಚಿನ್ನ ಎಂತೆಂತಹವರನ್ನೂ ಮರುಳುಗೊಳಿಸುತ್ತದೆ, ಅದರ ಆಕರ್ಷಣೆಗೆ ಒಳಗಾಗದವರೇ ಇಲ್ಲ, ಅದಕ್ಕಾಗಿ ಜನರು ಏನನ್ನೂ ಮಾಡಲು ಸಿದ್ಧರಾಗುತ್ತಾರೆ ಎಂಬಂತಹ ಮಾತುಗಳನ್ನು ನಾವು ಕೇಳುತ್ತೇವೆ. ಚಿನ್ನಕ್ಕೆ ಸುಂದರವಾದ ಬಣ್ಣವಿದೆ, ಅದು ತುಕ್ಕು ಹಿಡಿಯುವುದಿಲ್ಲ, ಅದಕ್ಕೆ ಕೆಲ ಔಷಧೀಯ ಗುಣಗಳೂ ಇವೆ, ಅದು ಅತ್ಯಂತ ಬೆಲೆಬಾಳುವ ವಸ್ತು, ಅದರಿಂದ ನಾನಾ ಆಭರಣಗಳನ್ನು ಮಾಡಬಹುದು, ಅದು ಇತರ ಲೋಹಗಳಿಗೆ ಹೋಲಿಸಿದರೆ ಬಹು ಮೃದುವಾದದ್ದು ಎಂಬುದರಿಂದ ಅದರ ಈ ಗುಣಗಳ ಅರಿವಿರುವ ಜನರು ಅದಕ್ಕಾಗಿ ಮರುಳುಗೊಳ್ಳುತ್ತಾರೆ. ಅದನ್ನು ಧರಿಸಿ ತಾನೇ ಚಿನ್ನವಾದೆನೆಂಬ, ತನ್ನ ಸಮಾನರಿಲ್ಲೆಂಬ ಭ್ರಮೆಯಲ್ಲಿರುತ್ತಾರೆ. ಅದೇ ರೀತಿ, ಹೆಣ್ಣು ಗಂಡುಗಳು ಕೂಡ. ಗುಣ, ಸೌಂದರ್ಯ, ಯೌವನ, ಅವರಿಂದ ತನಗಾಗುವ ಉಪಯೋಗ ಮತ್ತು ಸುಖಗಳಿಗಾಗಿ ಹೆಣ್ಣು ಗಂಡುಗಳು ಪರಸ್ಪರ ಆಕರ್ಷಣೆಗೊಳಗಾಗುತ್ತಾರೆ. ಇನ್ನು ಭೂಮಿ. ಅದು ಕೊಡುವ ಸಮೃದ್ಧಿ ಅಪಾರವಾದದ್ದು. ಅದನ್ನು ತನ್ನದಾಗಿಸಿಕೊಳ್ಳಬೇಕು, ತಾನು ಅದರ ಒಡೆಯನೆನಿಸಿಕೊಳ್ಳಬೇಕು, ಅದರ ಸಮೃದ್ಧಿಯನ್ನು ತನ್ನ ಪೀಳಿಗೆಯವರಿಗಾಗಿ

ಕಾದಿಡಬೇಕು ಎಂದು ಬಯಸುತ್ತಾನೆ. ಹಾಗೆ ಮಾಡಿದಾಗ ಅವರು ನಿರುಮ್ಮಳವಾಗಿ ಬದುಕುತ್ತಾರೆ ಎನ್ನುವ ಭ್ರಮೆಗೆ ಒಳಗಾಗುತ್ತಾನೆ. ಇದನ್ನೆಲ್ಲ ನೋಡಿ ಜನರು ಹೊನ್ನು, ಹೆಣ್ಣು (ಗಂಡು) ಮತ್ತು ಮಣ್ಣುಗಳನ್ನು ಮಾಯೆಯೆಂದರು. ಆದರೆ ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದಾಗ ಇನ್ನೊಂದೇ ಸತ್ಯ ಗೋಚರವಾಗುತ್ತದೆ. ಹೊನ್ನು, ಹೆಣ್ಣು, ಮಣ್ಣುಗಳು ನಿಸರ್ಗದಲ್ಲಿಯ ಅನೇಕ ವಸ್ತು ಮತ್ತು ಜೀವಿಗಳಂತೆ ಸಾಮಾನ್ಯವಾದವುಗಳು. ಅವುಗಳ ಬಗ್ಗೆ ನಾವು ತಳೆದ ಭಾವನೆಗಳಿಂದ, ಅವು ನಮಗೆ ಅತಿ ಆಕರ್ಷಕವಾಗಿ ಕಾಣುತ್ತವೆ. ಆದ್ದರಿಂದ ಅವುಗಳ ಸ್ವಾಮ್ಯ ನಮಗೆ ಅಪಾರ ಸುಖಕೊಡುತ್ತವೆ, ಆ ಸುಖ ಶಾಶ್ವತವಾದದ್ದು ಎನ್ನುವ ಭ್ರಮೆ ಹುಟ್ಟಿಸುತ್ತವೆ. ಅದು ಸತ್ಯವಾಗಿರದೆ ಕೇವಲ ಭ್ರಮೆಯಾಗಿರುವುದರಿಂದ ಅದರಿಂದ ನಾವು ಆಶಿಸಿದ ಸುಖ ಸಿಗದೆ ಭ್ರಮನಿರಸನವಾಗುತ್ತದೆ. ಎಷ್ಟೋಸಲ ಭ್ರಮನಿರಸನವಾದರೂ ಅದನ್ನು ಅರಿತುಕೊಳ್ಳದೆ, ಮತ್ತೆ ಮತ್ತೇ ಅದರ ಆಸೆಗೆ ಒಳಗಾಗುತ್ತೇವೆ. ವಾಸ್ತವವಾಗಿ ಆ ವಸ್ತುಗಳು ಕೇವಲ ವಸ್ತುಗಳಾಗಿವೆ. ನಾವು ನಮ್ಮ ಆಸೆಗಳ ಕಾರಣದಿಂದ ಅವುಗಳಿಗೆ ಅತಿ ಹೆಚ್ಚಿನ ಬೆಲೆ ಕೊಡುತ್ತೇವೆ. ಮತ್ತು ಅವುಗಳನ್ನು ಮಾಯೆ ಎಂದು ಕರೆಯುತ್ತೇವೆ. ಒಂದು ವೇಳೆ ಆ ವಸ್ತುಗಳೇ ಮಾಯೆಯಾಗಿದ್ದಿದ್ದರೆ ಎಲ್ಲರೂ, ಯಾರೇ ಆದರೂ, ಅವುಗಳನ್ನು ನೋಡಿದ ಕೂಡಲೆ ಅವುಗಳ ಮಾಯೆಯೆಗೆ ತುತ್ತಾಗಬೇಕು. ಆದರೆ ಹಾಗಾಗುವುದಿಲ್ಲ. ಒಬ್ಬನಿಗೆ ಅತಿ ಆಕರ್ಷಕವಾಗಿ ಕಂಡ ಆಭರಣ, ಹೆಣ್ಣು, ಗಂಡು, ಭೂಮಿ ಇನ್ನೊಬ್ಬನಿಗೆ ಹಾಗೆ ಕಂಡು ಬರುವುದಿಲ್ಲ.ಅಷ್ಟೇ ಅಲ್ಲದೆ ಅನೇಕರು ಹೊನ್ನು, ಹೆಣ್ಣು, ಮಣ್ಣುಗಳ ಮೋಹಕ್ಕೆ ಒಳಗಾಗುವುದಿಲ್ಲ. ಇದಕ್ಕೆ ಕಾರಣವೇನು? ಅವುಗಳಿಗೆ ತುತ್ತಾಗುವ ವ್ಯಕ್ತಿಯ ಮನಸ್ಸನ್ನು ಸೂಕ್ಷ್ಮವಾಗಿ ಗಮನಿಸಿದಾಗ ವ್ಯಕ್ತಿಯ ಆಸೆಯೇ ನಿಜವಾದ ಮಾಯೆ ಎಂಬುದು ಅರಿವಾಗುತ್ತದೆ. ವ್ಯಕ್ತಿಯ ಮನದಲ್ಲಿ ಆಸೆಯಿರದಾಗ ಈ ಯಾವ ವಸ್ತುಗಳೂ ಆತನ ಮೇಲೆ ಯಾವ ಪರಿಣಾಮವೂ ಬೀರಲಾರವು. ಆಸೆಯಿಂದ ತುಂಬಿದ ವ್ಯಕ್ತಿಯು ತನ್ನ ಆಸೆಗಳನ್ನು ಪೂರೈಸುವ ಅದೇ ಗುಣಗಳನ್ನು ಹೊಂದಿದ ಇತರ ವಸ್ತುಗಳ ಮೋಹಕ್ಕೂ ಒಳಗಾಗುತ್ತಾನೆ. ಈ ಎಲ್ಲವನ್ನೂ ಗಮನಿಸಿದಾಗ ಮೂಲತಃ ಯಾವ ವಸ್ತುವೂ ಸ್ವತಃ ಮಾಯೆಯಲ್ಲ. ಆಯಾ ವಸ್ತುಗಳ ಬಗ್ಗೆ ನಮ್ಮ ಮನದಲ್ಲಿರುವ ಆಸೆಯೇ ಮಾಯೆ ಎಂಬುದು ತಿಳಿದುಬರುತ್ತದೆ. ಈ ರೀತಿಯಾಗಿ ಅಲ್ಲಮಪ್ರಭುಗಳು “ಮಾಯೆ”ಯ ಬಗ್ಗೆ ನಮ್ಮ ಮನದಲ್ಲಿದ್ದ ಭ್ರಮೆಯನ್ನು ಬಾಳೆಯ ಹಣ್ಣಿನ ಸಿಪ್ಪೆ ಸುಲಿವಂತೆ ಸುಲಿದು ಸ್ಪಷ್ಟಪಡಿಸಿದ್ದಾರೆ.

Vachana 59: Ghranendriya Vishayadinde - Sense Organs

ಘ್ರಾಣೇಂದ್ರಿಯ ವಿಷಯದಿಂದೆ ಭ್ರಮರ ಕೆಡುವುದು, ಸಂಪಿಗೆಯ ಪುಷ್ಪದಲ್ಲಿ!
ರಸನೇಂದ್ರಿಯ ವಿಷಯದಿಂದೆ ಮತ್ಸ್ಯ ಕೆಡುವುದು, ಜಾಲಗಾರನ ಬಲೆಯಲ್ಲಿ!
ನಯನೇಂದ್ರಿಯ ವಿಷಯದಿಂದೆ ಪತಂಗ ಕೆಡುವುದು, ದೀಪದ ಜ್ವಾಲೆಯಲ್ಲಿ!
ತ್ವಗಿಂದ್ರಿಯ ವಿಷಯದಿಂದೆ ಗಜವು ಕೆಡುವುದು, ರಾಜನ ಕೃತಕದಲ್ಲಿ!
ಶ್ರವಣೇಂದ್ರಿಯ ವಿಷಯದಿಂದೆ ಎರಳೆ ಕೆಡುವುದು, ಬೇಟೆಗಾರನ ಸರಳಿನಲ್ಲಿ!
ಇಂತೀ ಪ್ರಾಣಿಗಳು ಒಂದೊಂದು ವಿಷಯದಿಂದೆ ಬಂಧನಕ್ಕೊಳಗಾದವು!
ಪಂಚೇಂದ್ರಿಯ ವಿಷಯ ವ್ಯಾಪಾರದಲ್ಲಿ ಲಂಪಟರಾದ ಮನುಜರು ಕೆಟ್ಟ ಕೇಡನೇನೆಂಬೆನಯ್ಯಾ ಅಖಂಡೇಶ್ವರಾ?

TRANSLITERATION

GrANEMdriya viShayadiMde Bramara keDuvudu, saMpigeya puShpadalli!
rasanEMdriya viShayadiMde matsya keDuvudu, jAlagArana baleyalli!
nayanEMdriya viShayadiMde pataMga keDuvudu, dIpada jvAleyalli!
tvagiMdriya viShayadiMde gajavu keDuvudu, rAjana kRutakadalli!
SravaNEMdriya viShayadiMde eraLe keDuvudu, bETegArana saraLinalli!
iMtI prANigaLu oMdoMdu viShayadiMde baMdhanakkoLagAdavu!
paMcEMdriya viShaya vyApAradalli laMpaTarAda manujaru keTTa kEDanEneMbenayyA aKaMDESvarA?

TRANSLATION

GrANEMdriya (sense organ of smell) viShayadiMde (through the object of, becoming a victim of, because of) Bramara (Bee) keDuvudu (will be destroyed), saMpigeya (Champaka) puShpadalli (in the flower)!
rasanEMdriya (sense organ of taste) viShayadiMde (because of) matsya (fish) keDuvudu (will be destroyed), jAlagArana (fisherman's) baleyalli (in the net)!
nayanEMdriya (sense organ of sight) viShayadiMde (because of) pataMga (moth) keDuvudu (will be destroyed), dIpada (of the lamp) jvAleyalli (in the flame)!

tvagiMdriya (sense organ of touch) viShayadiMde (because of) gajavu (Elephant) keDuvudu (will be destroyed), rAjana (of King's) kRutakadalli (in the trick)!
SravaNEMdriya (sense organ of hearing) viShayadiMde (because of) eraLe (Deer) keDuvudu (will be destroyed), bETegArana (Hunter's) saraLinalli (in the arrows)!
iMtI (Thus) prANigaLu (animals) oMdoMdu (just one) viShayadiMde (because of) baMdhanakkoLagAdavu (imprisoned, fell in the trap)!
paMcEMdriya (five organs) viShaya (influence, effect) vyApAradalli(in dealing with) laMpaTarAda (self-indulgent) manujaru (men) keTTa kEDanEneMbenayyA (what can I say about the way they are destroyed) aKaMDESvarA (Lord Master of the Universe)?

A victim of the sense organ of smell, the Bee dies in Champaka flower!
A victim of the sense organ of taste, the fish gets trapped in Fisherman's net!
A victim of the sense organ of sight, the Moth dies in the flame of a lamp!
A victim of the sense organ of touch, the Elephant gets trapped in King's trickery!
A victim of the sense organ of hearing, the Deer dies by hunter's arrows!
Thus, animals get destroyed as victims of a single sense organ!
What can I say about the way of destruction of self-indulgent men with five sense organs, Oh! Lord Master of the Universe!

COMMENTARY

In this Vachana, Sharana Shanumuka Swamy comments on how complex a web we weave and gets trapped in to it, through our five sense organs. He illustrates the destructive power of each sense organ through examples of animals with one dominant sense organ in them. The Bee endowed with an intense sense of smell (Nose), gets attracted by the fragrance of the Champaka flowers, gets intoxicated and dies. The fish tries to grab the tasty bait (Tongue) and gets trapped in fisherman's net. It takes only the organ of sight (Eye) for the Moth to get attracted to the flame of the lamp, to get burnt in it. Elephants are known to enjoy rubbing (Touch) their bodies against each other. It is said that Kings used this sense of touch to attract male elephants to female elephants, to trap them. Deer are known to follow the music (Ear). Hunters use the sense of their hearing to attract them and kill them. If a single sense organ can bring destruction to each of these animals, Shanmuka Swamy wonders what would be the fate of the man with five sense organs.

Man has five times the risk of becoming a victim of his sense organs compared to animals. The obvious message then is that we should train ourselves in utilizing our sense organs to the appropriate level and not become victims of the temptations brought about by them.

It is interesting to note that the animals destroy themselves as victims of their dominant sense organs. The man on the other hand not only creates the web around himself, but also contributes to the destruction of his environment. For example, to satisfy his taste (hunger) he kills other animals and destroys plants more than necessary and causes their extinction. To make himself comfortable (touch), he has created various devices that in turn have contributed to enlarged carbon foot prints, global warming, etc.

We will look at other Sharanas' views on this topic in subsequent postings.

Let us be aware of the consequences of our senses running amuck, to prevent destruction of ourselves and to protect the balance of the nature!

KANNADA COMMENTARY

ಷಣ್ಮುಖಸ್ವಾಮಿಗಳು ಇಲ್ಲಿ ಮಾನವನ ಬಂಧನಗಳ ಸಂಕೀರ್ಣತೆಯನ್ನು (complexity) ಮನದಟ್ಟಾಗುವಂತೆ ಉದಾಹರಣೆಸಹಿತ ತಿಳಿಸುತ್ತಿದ್ದಾರೆ. ಘ್ರಾಣೇಂದ್ರಿಯ(ಮೂಗು)ಕ್ಕೆ ವಶವಾಗಿ ಭ್ರಮರವು (ದುಂಬಿ) ಸಂಪಿಗೆ ಹೂವಿನ ಪರಿಮಳಕ್ಕೆ ಮನಸೋತು ಅಳಿಯುತ್ತದೆ, ರಸನೇಂದ್ರಿಯ(ನಾಲಗೆ)ಕ್ಕೆ ವಶವಾಗಿ ಮೀನು ಮೀನುಗಾರನು ಹಾಕಿದ ಆಹಾರವನ್ನು ತಿನ್ನಲು ಹೋಗಿ ಬಲೆಯಲ್ಲಿ ಸಿಕ್ಕಿಕೊಳ್ಳುತ್ತದೆ, ನಯನೇಂದ್ರಿಯ(ಕಣ್ಣು)ಕ್ಕೆ ವಶವಾಗಿ ಪತಂಗವು ದೀಪದ ಜ್ವಾಲೆಗೆ ಬಲಿಯಾಗುತ್ತದೆ, ತ್ವಗಿಂದ್ರಿಯ(ಚರ್ಮ)ಕ್ಕೆ ವಶವಾಗಿ ಆನೆಯು ರಾಜನ ಮೋಸ ತಿಳಿಯದೆ ಹೆಣ್ಣಾನೆಯ ಸ್ಪರ್ಶಸುಖ ಬಯಸಿ ಬಂಧನಕ್ಕೆ ಒಳಗಾಗುತ್ತದೆ, ಶ್ರವಣೇಂದ್ರಿಯ(ಕಿವಿ)ಕ್ಕೆ ವಶವಾಗಿ ಎರಳೆಯು ಬೇಟೆಗಾರನು ಬೀಸಿದ ಬಲೆಗೆ ತುತ್ತಾಗುತ್ತದೆ, ಹೀಗೆ ಈ ಪ್ರಾಣಿಗಳೆಲ್ಲ ತಮ್ಮ ಒಂದೊಂದು ಇಂದ್ರಿಯಗಳಿಗೆ ವಶವಾಗಿ ಬಂಧನಕ್ಕೆ ಒಳಗಾಗಿ ನಾಶವಾಗುತ್ತವೆ. ಮಾನವನು ಐದೂ ಇಂದ್ರಿಯಗಳಿಗೆ ವಶನಾಗಿ ಕೆಟ್ಟ ಕೇಡನ್ನು ಹೇಗೆ ವರ್ಣಿಸುವುದು ಎಂದು ಕೇಳುತ್ತಾರೆ ಷಣ್ಮುಖಸ್ವಾಮಿಗಳು.

ಭ್ರಮರವು ದೂರದಿಂದ ಸಂಪಿಗೆಯ ಗಂಧಕ್ಕೆ ಮರುಳಾಗಿ ಅದರ ಹತ್ತಿರ ಹೋಗುತ್ತದೆ. ಆದರೆ ಸಂಪಿಗೆಯ ಕಟು ಗಂಧದಿಂದ ನಾಶ ಹೊಂದುತ್ತದೆ. ಮೀನು ತಾನು ಬಲೆಯಲ್ಲಿ ಬಿದ್ದುಬಿಡುತ್ತೇನೆ ಎಂಬುದರ ಅರಿವಿಲ್ಲದೆ ನಾಲಗೆಯ ಚಪಲಕ್ಕೆ ಮೀನುಗಾರನು ಎಸೆದ ಆಹಾರವನ್ನು ತಿನ್ನಲು ಹೋಗಿ ನಾಶವಾಗುತ್ತದೆ. ಪತಂಗವು ದೀಪದ ಜ್ವಾಲೆಯ ಬಣ್ಣಕ್ಕೆ ಸೋತು ಅದರ ಹತ್ತಿರ ಹೋಗಿ ತನ್ನ ರೆಕ್ಕೆಗಳನ್ನು ಸುಟ್ಟುಕೊಂಡು ನಾಶಹೊಂದುತ್ತದೆ. ಆನೆಯು ದೂರದಲ್ಲಿ ನಿಂತ ಹೆಣ್ಣಾನೆಯ ಸ್ಪರ್ಶ ಸುಖವನ್ನು ಅನುಭವಿಸುವ ಆಸೆಯಿಂದ ಅದರ ಹತ್ತಿರಕ್ಕೆ ಹೋಗಿ ರಾಜನ ಮೋಸಕ್ಕೆ ತುತ್ತಾಗಿ ಬಂಧನಕ್ಕೊಳಗಾಗುತ್ತದೆ. ಜಿಂಕೆಯು ಸಂಗೀತದಿಂದ ಆಕರ್ಷಣೆಗೊಂಡು ಬೇಟೆಗಾರನ ಬಲೆಗೆ ಬೀಳುತ್ತದೆ. ಈ ಉದಾಹರಣೆಗಳಲ್ಲಿ ನಾವು, ಒಂದೊಂದು ಪ್ರಾಣಿಯು ಒಂದೊಂದೇ ಇಂದ್ರಿಯಕ್ಕೆ ವಶವಾಗಿ ನಾಶಹೊಂದುವುದನ್ನು ನೋಡುತ್ತೇವೆ. ಆದರೆ ಮಾನವನೆಡೆಗೆ ನೋಡಿದಾಗ ವಸ್ತು ಸ್ಥಿತಿ ಬೇರೆಯಾಗಿದೆ. ಮಾನವನು ತನ್ನ ಐದೂ ಇಂದ್ರಿಯಗಳಿಗೆ ವಶನಾಗಿದ್ದಾನೆ. ಶಬ್ದ, ರಸ, ರೂಪ, ಗಂಧ ಮತ್ತು ಸ್ಪರ್ಶ ಗಳ ಸುಖಕ್ಕೆ ಆಕರ್ಷಿತನಾಗಿ ಅವುಗಳನ್ನು ಪಡೆಯಲು ಆತನು ಏನೇನು ಮಾಡುವುದಿಲ್ಲ? ಒಂದೊಂದು ಇಂದ್ರಿಯಗಳಿಗೆ ವಶವಾದ ಪ್ರಾಣಿಯೇ ನಾಶವಾಗುತ್ತದೆ. ಇನ್ನು ಐದೂ ಇಂದ್ರಿಯಗಳಿಗೆ ವಶವಾದವನ ಸ್ಥಿತಿಯನ್ನು ವರ್ಣಿಸಲು ಸಾಧ್ಯವೆ? ಆತನು ಕೇವಲ ಅವುಗಳ ವಶವಾಗಿಲ್ಲ. ಅವುಗಳ ವಶವಾಗುವ ಚಟಕ್ಕೆ ಸಿಕ್ಕಿದ್ದಾನೆ. ಆತನು ಪದೇ ಪದೇ ಅವುಗಳ ವಶವಾಗುತ್ತಾನೆ. ಆತನ ನಾಶ ಯವ್ಯಾವ ರೀತಿಯಲ್ಲಿ ನಡೆಯಬಹುದು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ಹೇಳುತ್ತಾರೆ ಷಣ್ಮುಖಸ್ವಾಮಿಗಳು.

ನಾವೆಲ್ಲರೂ “ನಾವೇನೂ ಮೇಲೆ ಹೇಳಿದ ಪ್ರಾಣಿಗಳಂತೆ ಇಂದ್ರಿಯಗಳಿಗೆ ವಶವಾಗಿ ನಾಶ ಹೊಂದುತ್ತಿಲ್ಲ. ಆದ್ದರಿಂದ ಈ ಮಾತು ನಮಗೆ ಅನ್ವಯವಾಗುವುದಿಲ್ಲ” ಎಂದುಕೊಳ್ಳಬಹುದು. ಆದರೆ ಕೇವಲ ದೈಹಿಕವಾಗಿ ಬಂಧನಕ್ಕೆ ಒಳಗಾಗುವುದು ಮತ್ತು ದೈಹಿಕವಾಗಿ ಸಾಯುವುದು ಮಾತ್ರ ಸಾವಲ್ಲ. ಚೆನ್ನಾಗಿ ಗಮನಿಸಿದಾಗ ನಮಗೆ ತಿಳಿದು ಬರುವುದೇನೆಂದರೆ

ಇಂದ್ರಿಯಗಳಿಗೆ ವಶನಾಗಿ ಮೇಲೆ ಹೇಳಿದ ಪ್ರಾಣಿಗಳಂತೆ ಮಾನವನು ತಾನು ಮಾತ್ರ ನಾಶ ಹೊಂದುತ್ತಿಲ್ಲ, ಅವುಗಳ ದಾಸನಾಗಿ ತನ್ನೊಂದಿಗೆ ಸಮಸ್ತ ಜೀವರಾಶಿಯನ್ನು ವಿನಾಶದ ಅಂಚಿಗೆ ತಳ್ಳುತ್ತಿದ್ದಾನೆ. ಅವನು ತನ್ನ ನಾನಾ ಆಸೆಗಳಿಗೆ ವಶನಾಗಿ ಪರಿಸರವನ್ನು ನಾಶಮಾಡತ್ತಿರುವುದನ್ನು ನೋಡಿದರೆ ಇದು ತಿಳಿದುಬರುತ್ತದೆ. ಆತನ ಪ್ರತಿಯೊಂದು ಚಟುವಟಿಕೆಯು ದೊಡ್ಡ "ಹೆಜ್ಜೆ ಗುರುತು" (carbon footprint) ಮೂಡಿಸುತ್ತಿದೆ. ಆತನ ನಾಲಗೆ ರುಚಿಗಾಗಿ ಅನೇಕ ಪ್ರಾಣಿಗಳು ಜೀವತೆರುತ್ತಿವೆ, ನಿರ್ವಂಶವಾಗುತ್ತಿವೆ. ಆತನ ಸ್ವಾರ್ಥಕ್ಕಾಗಿ ಆತನು ಬಳಸುತ್ತಿರುವ ಅನೇಕ ವಸ್ತುಗಳು ಜಗತ್ತಿನಲ್ಲಿ ಕಸದ ಬೆಟ್ಟವನ್ನೇ ನಿರ್ಮಿಸುತ್ತಿವೆ, ತನ್ನ ಕಣ್ಣುಗಳನ್ನು ತಣಿಸಲು ಆತನು ಬಳಸುತ್ತಿರುವ ದೀಪಗಳು ಮಾಡತ್ತಿರುವ ನಾಶವನ್ನು ವರ್ಣಿಸಲಾಗದು. ರಾತ್ರಿಯನ್ನು ಕೃತಕ ದೀಪಗಳಿಂದ ಹಗಲಾಗಿ ಪರಿವರ್ತಿಸಿ ತನ್ನ ಬುದ್ಧಿಮತ್ತೆಗೆ ತಾನೆ ಗರ್ವಪಡುವ ಆತನು ಆ ದೀಪಗಳಿಂದ ಕತ್ತಲೆಯಲ್ಲಿ ಬದುಕುವ ವಿವಿಧ ಜೀವಿಗಳು ಹೇಳ ಹೆಸರಿಲ್ಲದೆ ನಾಶ ಹೊಂದಿರುವುದರಬಗ್ಗೆ ಆಲೋಚಿಸುವುದಿಲ್ಲ. ಆತನು ಬಳಸುವ ವಸ್ತುಗಳು ಭೂಮಿಯ ನೀರನ್ನು, ಗಾಳಿಯನ್ನು, ಸಮಸ್ತ ವಾತಾವರಣವನ್ನು ಕಲುಷಿತಗೊಳಿಸಿ ಕೇವಲ ಆತನಿಗೆ ಮಾತ್ರ ಹಾನಿಯುಂಟು ಮಾಡುತ್ತಿಲ್ಲ, ಮುಂಬರುವ ಮಾನವನ ಎಲ್ಲ ಪೀಳಿಗೆಯವರನ್ನು ಅನಂತ ಕಷ್ಟಕ್ಕೆ ಈಡು(target) ಮಾಡುತ್ತಿವೆ, ಸಮಸ್ತ ಜೀವಜಾಲಕ್ಕೆ(web of life) ಆಪತ್ತಾಗಿ ಪರಿಸರದ ಸಂತುಲನ (balance)ವನ್ನು ಕೆಡಿಸುತ್ತಿವೆ. ಇದೆಲ್ಲ ಇಂದ್ರಿಯಗಳಿಗೆ ವಶವಾಗಿ ತಾನು ಮಾತ್ರ ನಾಶಹೊಂದುವ ಪ್ರಾಣಿಗಳ ನಡತೆಗಿಂತಲೂ ಬಲು ವಿನಾಶಕಾರಿ. ಆದ್ದರಿಂದಲೇ ಷಣ್ಮುಖಸ್ವಾಮಿಗಳು "ಪಂಚೇಂದ್ರಿಯ ವಿಷಯ ವ್ಯಾಪಾರದಲ್ಲಿ ಲಂಪಟರಾದ ಮನುಜರು ಕೆಟ್ಟ ಕೇಡನೇನೆಂಬೆನಯ್ಯಾ ಅಖಂಡೇಶ್ವರಾ?" ಎನ್ನುವ ಉದ್ಗಾರದಲ್ಲಿಯೇ ಎಲ್ಲವನ್ನೂ ಹೇಳಿದ್ದಾರೆ.

ಹಾಗಾದರೆ ಇಂದ್ರಿಯ ಸುಖವನ್ನು ಅನುಭವಿಸುವುದೇ ಮಹಾ ಅಪರಾಧವೇ? ಇಂದ್ರಿಯಗಳನ್ನು ಸಂಪೂರ್ಣವಾಗಿ ತುಳಿದಿಡಬೇಕೆ? ಆ ಬಗ್ಗೆ ವಚನಕಾರರು ಏನು ಹೇಳಿದ್ದಾರೆ ಎಂಬುದನ್ನು ಮುಂದಿನ ವಚನದಲ್ಲಿ ನೋಡೋಣ.

Vachana 60: Indriya Nigrahava Maadidade - Sense Control

ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು, ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು

ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು?

ಸತಿಪತಿ ರತಿ ಭೋಗೋಪವಿಳಾಸವ ಬಿಟ್ಟನೆ ಸಿಂಧುಬಲ್ಲಾಳನು?

ನಿಮ್ಮ ಮುಟ್ಟಿ ಪರಧನ-ಪರಸತಿಯರಿಗೆಳೆಸಿದಡೆ,

ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವ

TRANSLITERATION

iMdriya nigrahava mADidaDe hoMduvavu dOShaMgaLu,
muMde baMdu kADuvuvu paMcEMdriyaMgaLu
satipati ratisuKava biTTare siriyALa caMgaLeyaru?
satipati rati BOgOpaviLAsava biTTane siMdhuballALanu?
nimma muTTi paradhana-parasatiyarigeLesidaDe,
nimma caraNakke dUra kUDalasaMgamadEva

TRANSLATION

iMdriya(sense organ) nigrahava (control) mADidaDe(if done) hoMduvavu(will become) dOShaMgaLu (faultier, defective),
muMde baMdu(come forth) kADuvuvu(trouble) paMcEMdriyaMgaLu(five senses)
satipati(husband and wife) ratisuKava(sensual pleasure) biTTare(give up) siriyALa caMgaLeyaru (siriyala and chengale)?
Satipati(husband and wife) rati BOgOpaviLAsava(sensual pleasure) biTTane(give up) siMdhuballALanu(Sinduballala)?
Nimma(with You) muTTi(in touch, in contact) paradhana (other's wealth) –parasatiyarige (other's wife) eLesidaDe(if longed for),
Nimma(Your) caraNakke(feet) dUra(far away) kUDalasaMgamadEva(Lord KudalaSangamaDeva)

Sense organs if controlled become faultier (defective),
And come forth to trouble the five senses.
Did Siriyala and Changale give up the sensual pleasure of husband and wife?
Did Sinduballala give up the sensual pleasure of husband and wife?

After touching You, if I long for other’s wealth and wife,
I will get far away from your feet, Oh! Lord Kudalasangamadeva!

COMMENTARY

In Vachana 59, Sharana Shanmuka Swamy wondered as to what would be the fate of the man with five sense organs, if an animal with one organ can get destroyed by it. The implication is that the way to avoid destruction is to control sense organs. In this Vachana, Basavanna says that controlling the sense organs is not the way, because if they are controlled, all the five senses become faultier. He uses two couples as examples to say that they continued to enjoy the normal lives of husband and wife yet became ardent devotees of the Lord and self-realized individuals. Basavanna ends this Vachana with the statement that if we aspire for what does not belong to us, we get away from the Lord we already have realized.

When we examine the concept of controlling the sense organs further, we see that we have created a separation between the organs which are to be controlled and the individual who is controlling them. The controller is full of ‘desire’ to control the organs. This desire leads to the illusion (maye) making the sense organs faultier. A better approach would be to utilize the sense organs for the activity they are designed for in an appropriate way (i.e. ‘sublimate’ rather than ‘control’). This is illustrated by the example of two couples in this Vachana. They were well within the realm of daily living utilizing the sense organs appropriately while concentrating on the spiritual path. The last sentence of the Vachana illustrates the ‘appropriateness’. Other’s wealth and other’s wife are symbolic of materials that are beyond one’s needs. Anything above what is absolutely needed belongs to others. Aspiring for the material belonging to others is pushing the sense organs to the undesired limits, which leads us away from the godliness we might have already achieved. The message then is, neither ‘control’ the sense organs, nor become their ‘slave’, but sublimate them with the right (appropriate) usage.

Let us develop the awareness of the appropriate sense!

KANNADA COMMENTARY

ಇಂದ್ರಿಯ ನಿಗ್ರಹಮಾಡುವುದು ಅಪಾಯಕಾರಿ ಎನ್ನುತ್ತಾರೆ ಬಸವಣ್ಣನವರು. ನಿಗ್ರಹಿಸಿದರೆ ಇಂದ್ರಿಯಗಳು ದೋಷಯುಕ್ತವಾಗುತ್ತವೆ. ಅಂದರೆ ಅವುಗಳನ್ನು ತುಳಿದಿಟ್ಟರೆ ಅವು ಹೆಚ್ಚು ಪ್ರಬಲಗೊಂಡು ಹೆಡೆ ಎತ್ತುತ್ತವೆ. ಅವು ತಮ್ಮ ಸಹಜತೆಯನ್ನು ಕಳೆದುಕೊಂಡು ಹೆಚ್ಚು ಆವೇಶಗೊಳ್ಳುತ್ತವೆ. ಅವುಗಳನ್ನು ಶಮನಗೊಳಿಸುವುದು ಇನ್ನೂ ಕಷ್ಟವಾಗುತ್ತದೆ. ಮನದಲ್ಲಿ ಇಂದ್ರಿಯಗಳ ಆಸೆಗಳನ್ನು ಮುಚ್ಚಿಟ್ಟು ಮೇಲೆ ಏನೂ ಇಲ್ಲವೆಂಬಂತೆ ಆಚರಿಸುವುದು ವ್ಯಕ್ತಿಯನ್ನು ಅಡ್ಡದಾರಿಗೆ ಹಚ್ಚುತ್ತದೆ. ಆ ಆಸೆಗಳು ಭೂತಾಕಾರವಾಗಿ ಕಾಡುತ್ತವೆ. ಅಲ್ಲಿ ಮೋಸ ಕಪಟಗಳು ಮನೆಮಾಡುತ್ತವೆ. ವ್ಯಕ್ತಿಯು ಮಾನಸಿಕವಾಗಿ ಬಳಲುತ್ತಾನೆ.

ಇಲ್ಲಿ ನಾವು "ನಿಗ್ರಹ"ಎಂದರೇನು ಮತ್ತು ಏಕೆ ನಿಗ್ರಹಿಸಬಾರದು ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಹಿಂದೆ ನಾವು "ಮನದ ಮುಂದಣ ಆಸೆಯೇ ಮಾಯೆ" ಎಂಬುದನ್ನು ಅರ್ಥಮಾಡಿಕೊಂಡಿದ್ದೇವೆ. ಈಗ ನಿಗ್ರಹಕ್ಕೆ ಬರೋಣ. "ಇಂದ್ರಿಯ ನಿಗ್ರಹ ಮಾಡುವುದು" ಎಂಬಲ್ಲಿ ಇಂದ್ರಿಯಗಳು ಬೇರೆ ಮತ್ತು ನಿಗ್ರಹ ಮಾಡುವವನು ಬೇರೆ ಎಂದು ತಿಳಿಯುತ್ತದೆ. ಎಂದರೆ ಅಲ್ಲಿ ವಿಭಜನೆಯಿದೆ, ಐಕ್ಯತೆ ಇಲ್ಲ, ಎಂದು ಅರ್ಥವಾಗುತ್ತದೆ. ನಿಗ್ರಹ ಮಾಡುವವರು ಯಾರು? ಎಂದು ಕೇಳುತ್ತಾರೆ ಜಿಡ್ಡು ಕೃಷ್ಣಮೂರ್ತಿಯವರು. ನಿಗ್ರಹ ಮಾಡುವವ ನಿಗ್ರಹ ಮಾಡಬೇಕೆಂದು "ಆಸೆ" ಪಡುತ್ತಾನೆ ಎಂದಾಯಿತು. ಅಂದರೆ ನಿಗ್ರಹ ಕೂಡ ಆಸೆಯ ಮತ್ತೊಂದು ರೂಪವೇ. ಅಂದರೆ " ನಾನು ನನ್ನ ಇಂದ್ರಿಯಗಳನ್ನು ನಿಗ್ರಹಿಸಬೇಕು" ಎನ್ನುವ ಮೂಲಕ ನಾವು ಮತ್ತೆ ಆಸೆಗೆ ಅಂದರೆ ಮಾಯೆಗೆ ಒಳಗಾಗುತ್ತಿದ್ದೇವೆ ಎಂದಾಯಿತು ಅಲ್ಲವೆ? ಇದೇ ಮಹಾ ದೋಷ. ಇದನ್ನೇ ಬಸವಣ್ಣನವರು ಹೇಳುತ್ತಿದ್ದಾರೆ. ಆಸೆಗೆ ಪಕ್ಕಾದ ಇಂದ್ರಿಯಗಳು ದೋಷಕ್ಕೆ ಒಳಗಾಗುತ್ತವೆ.

ಆದ್ದರಿಂದ ಅವುಗಳನ್ನು ತುಳಿದಿಕ್ಕದೆ ಅವುಗಳಿಗೆ ಸಲ್ಲಬೇಕಾದ ಸ್ಥಾನವನ್ನು ಕೊಡುವುದೇ ಮೇಲು. ಯಾವುದನ್ನೂ ಅತಿಮಾಡುವುದು ಒಳ್ಳೆಯದಲ್ಲ. ಇಂದ್ರಿಯಗಳನ್ನು ತುಳಿದಿಡದೆ ಅವುಗಳನ್ನು ಅರ್ಥಮಾಡಿಕೊಂಡು ಉದಾತ್ತೀಕರಿಸುವುದು **(sublimate)** ಸರಿ. ಈ ಸಂದರ್ಭದಲ್ಲಿ ಬಸವಣ್ಣನವರು ಇಬ್ಬರು ಶಿವಭಕ್ತರ ಉದಾಹರಣೆಗಳನ್ನು ಕೊಡುತ್ತಾರೆ. ಸಿರಿಯಾಳ ಚಂಗಳೆಯರು ಮತ್ತು ಸಿಂಧುಬಲ್ಲಾಳ ದಂಪತಿಗಳು ಸತಿಪತಿಯರು ಭೋಗಿಸುವ ರತಿಸುಖವನ್ನು ಬಿಡಲಿಲ್ಲ. ಸತಿಪತಿಗಳಾಗಿ ಪುತ್ರರನ್ನು ಪಡೆದು ಶಿವ ಭಕ್ತಿಯನ್ನೂ ಸಾಧಿಸಿದರು. ಈ ಉದಾಹರಣೆಯ ಮೂಲಕ ಬಸವಣ್ಣನವರು ಇಂದ್ರಿಯಗಳ ಆಸೆಗಳಿಗೆ ಸಲ್ಲಬೇಕಾದ ಸ್ಥಾನವನ್ನು ನೀಡಿ ಅವುಗಳನ್ನು ಉದಾತ್ತೀಕರಿಸುವುದು**(sublimate)** ಉತ್ತಮವೆಂದು ಹೇಳುತ್ತಿದ್ದಾರೆ.

ನಿಮ್ಮ ಮುಟ್ಟಿ ಪರಧನ-ಪರಸತಿಯರಿಗೆಳೆಸಿದಡೆ ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವ" ಎಂದು ಹೇಳುತ್ತಾರೆ ಬಸವಣ್ಣನವರು. ಅಂದರೆ ವ್ಯಕ್ತಿಯು ಪ್ರಾಮಾಣಿಕವಾಗಿ ಕೂಡಲಸಂಗಮನನ್ನು ಹಂಬಲಿಸಿ, ಆತನ ಹೊಳಹನ್ನು**(flash)**ಕಂಡ ಮೇಲೆಯೂ, ಆತನ ಸಂಪರ್ಕದಲ್ಲಿ ಬಂದಮೇಲೆಯೂ ಇಂದ್ರಿಯಗಳಿಗೆ ವಶನಾಗಿ ನೀತಿಗೆಟ್ಟ ಬದುಕನ್ನು ಬದುಕಿದರೆ, ಆತನು ಆ ದೇವನ ಚರಣಗಳಿಂದ ದೂರಾಗುತ್ತಾನೆ ಎನ್ನುತ್ತಾರೆ. ಇಂದ್ರಿಯಗಳನ್ನು ತುಳಿದಿಡದೆ ಹಾಗೂ ಅವುಗಳಿಗೆ ವಶವಾಗದೆ ಇರುವುದು ಹೇಗೆಂಬುದನ್ನು ಮುಂದಿನ ವಚನದಲ್ಲಿ ನೋಡೋಣ.

Vachana 61: Bekenalaagadu Sharanange - Neither Want, Nor Reject

ಬೇಕೆನಲಾಗದು ಶರಣಂಗೆ, ಬೇಡೆನಲಾಗದು ಶರಣಂಗೆ

ಬಂದ ಸುಖವನತಿಗಳೆಯಲಾಗದು ಶರಣಂಗೆ

ಇದು ಕಾರಣ, ಕೂಡಲ ಚೆನ್ನ ಸಂಗಯ್ಯಾ ನಿಮ್ಮ ಶರಣರು

ಉಂಡುಪವಾಸಿಗಳು ಬಳಸಿ ಬ್ರಹ್ಮಚಾರಿಗಳು

TRANSLITERATION

bEkenalAgadu SaraNaMge, bEDenalAgadu SaraNaMge
baMda suKavanatigaLeyalAgadu SaraNaMge
idu kAraNa, kUDala cenna saMgayyA nimma SaraNaru
uMDupavAsigaLu baLasi brahmacArigaLu

TRANSLATION

bEkenalAgadu (can't say I want, can't wish to have) SaraNaMge (a Sharana, devotee), bEDenalAgadu (can't refuse, reject) SaraNaMge (a Sharana)
baMda (that which is coming your way) suKa (the pleasure) vanatigaLeyalAgadu (can't deny) SaraNaMge (a Sharana)
idu kAraNa (for this reason), kUDala cenna saMgayyA (Lord of meeting rivers) nimma (your) SaraNaru(Sharanas)
uMDu (after eating) upavAsigaLu (remain fasting/ hungry) baLasi (enjoying sensual pleasures) brahmacArigaLu (remain untouched/ remain celibates)

A devotee can't say I want, A devotee can't refuse!
A devotee can't deny the pleasure coming his way!
For this reason, Oh! Lord of Meeting Rivers, your devotees
remain fasting (hungry) even after eating, remain untouched even after enjoying worldly pleasures!

COMMENTARY

In Vachana 60, Basavanna advocated 'sublimating' senses rather than 'indulging' or 'controlling'. Sharana Chenna Basavanna (Nephew of Basavanna) extends that thought further in this Vachana to characterize a 'true devotee'. A devotee should not want something, neither should he reject something. He cannot deny the pleasure (or sorrow) coming his way. But, he remains undisturbed by the ups and downs the life brings his way. He does not over indulge in eating although he eats. Neither he over indulges in worldly pleasures although he participates in them. Since the devotee puts his sense organs in a sublimating mode, they do not bind him to the ups and downs of the daily life.

The sense organs provide us the opportunity to enjoy the beauty of the objects around us. Controlling these organs and denying ourselves of the sensation they bring is the same as death according to philosopher J. Krishnamurthy (JK). Please scroll down to the Kannada Commentary below, for additional excerpts (in English) from JK's work.

Let us accept the things coming our way with equal ease!

KANNADA COMMENTARY

ಇದು ಚೆನ್ನಬಸವಣ್ಣನವರ ವಚನ. ಇಲ್ಲಿ ಶರಣನಾದವನು ಹೇಗಿರಬೇಕು ಎಂಬುದನ್ನು ಹೇಳುತ್ತಾರೆ. ಶರಣನು ತನಗೆ "ಇದು ಬೇಕು ಇದು ಬೇಡ" ಎನ್ನುವುದಿಲ್ಲ. ತನ್ನ ಪಾಲಿಗೆ ಬಂದ ಕಷ್ಟ ಸುಖಗಳನ್ನು ತಿರಸ್ಕರಿಸುವುದಿಲ್ಲ. ಅವುಗಳನ್ನು ನಿರ್ಲಿಪ್ತನಾಗಿ ಸ್ವೀಕರಿಸುತ್ತಾನೆ. ಕಷ್ಟಗಳನ್ನು ಮನದಲ್ಲಿ ಯಾವುದೇ ಕಹಿ ಭಾವನೆ ತಾಳದೆ, ಸುಖವನ್ನು ಅತಿಯಾಗಿ ಹರ್ಷತಾಳದೆ ಸಮಾನ ಭಾವದಿಂದ ಅಂಗೀಕರಿಸುತ್ತಾನೆ. ಆತನು ಇಂದ್ರಿಯಗಳನ್ನು ಉದಾತ್ತೀಕರಿಸಿರುತ್ತಾನೆ. ಆದ್ದರಿಂದ ಆತನಿಗೆ ಇಂದ್ರಿಯಗಳು ಬಂಧನವಾಗುವುದಿಲ್ಲ. ಅಂತಹ ಸ್ಥಿತಿಯಲ್ಲಿ ಶರಣರು ಉಂಡು ಉಪವಾಸಿಗಳಾಗಿರುತ್ತಾರೆ. ಬಳಸಿ ಬ್ರಹ್ಮಚಾರಿಗಳಾಗಿರುತ್ತಾರೆ. ಎಂದರೆ, ಅವರು ಇಂದ್ರಿಯಗಳಿಗೆ ಸಲ್ಲಬೇಕಾದ ಸ್ಥಾನವನ್ನು ಕೊಡುವ ಕಾರಣದಿಂದ ಅವು ಅವರನ್ನು ಬಾಧಿಸುವುದಿಲ್ಲ.

ಜೆ. ಕೃಷ್ಣಮೂರ್ತಿಯವರು ಈ ವಿಷಯದ ಬಗ್ಗೆ ವಿಷದವಾಗಿ ಹೇಳಿದ್ದಾರೆ:

ನಿಗ್ರಹವು ಆಸೆಯ ರೂಪವೇ ಅಲ್ಲವೆ? "ನಾನು ನಿಗ್ರಹಿಸಬೇಕು" ಎನ್ನುವುದು ಆಸೆಯೇ ಅಲ್ಲವೆ? ನಿಗ್ರಹಿಸುವವನು ಇಂತಹುದನ್ನು ಮಾಡಬೇಕು ಇಂತಹುದನ್ನು ಮಾಡಬಾರದು ಎಂದೆಲ್ಲ ಆಸೆ ಪಡುತ್ತಾನೆ. ಅವನ ಆಸೆಗಳು ಆತನ ವಿಚಾರಗಳಿಂದ ಹುಟ್ಟಿರುತ್ತವೆ. ಆ ವಿಚಾರಗಳು ಮೊದಲೇ ರೂಪಿಸಿದ ಯಾವುದೋ ಒಂದು ವಿನ್ಯಾಸಕ್ಕೆ ಒಳಗೊಂಡಿರುತ್ತವೆ. ಅವರ ಮಾತಿನಲ್ಲಿಯೇ ಹೇಳುವುದಾದರೆ-**The mind then is never free, always subjugating itself to a pattern, whether that pattern is established by another or by oneself.** ಅಂದಮೇಲೆ ಅಲ್ಲಿ ಬಂಧನವಿದೆಯೇ ಹೊರತು ಮುಕ್ತಿಯಿಲ್ಲ.

ಆದ್ದರಿಂದ ನಿಗ್ರಹಿಸುವುದನ್ನು ಪೂರ್ತಿಯಾಗಿ ಬಿಡಬೇಕು. ಹಾಗಾದರೆ ಇಂದ್ರಿಯಗಳನ್ನು ಮನಬಂದೆಡೆಗೆ ಹೋಗಲು ಬಿಡಬೇಕೆ? ಅವು ಬಯಸಿದ್ದನ್ನೆಲ್ಲ ಒದಗಿಸಬೇಕೆ? ಇಲ್ಲ. "ಬೇಕೆನಲಾಗದು ಬೇಡೆನಲಾಗದು" ಎಂದು ಮೊದಲೇ ಹೇಳಿದ್ದಾರೆ ಶರಣರು. ಇದನ್ನು ಅರ್ಥಮಾಡಿಕೊಳ್ಳಲು ಜೆಕೆಯವರ (ಜಿಡ್ಡು ಕೃಷ್ಣಮೂರ್ತಿಯವರ) ಮಾತುಗಳನ್ನು ಗಮನಿಸುವುದು ಒಳ್ಳೆಯದು.

ಜೆಕೆ ಅವರು ಹೇಳುತ್ತಾರೆ: ಇಂದ್ರಿಯಗಳಿರುವುದರಿಂದಲೇ ಸೌಂದರ್ಯವನ್ನು ಸವಿಯುವ ಅವಕಾಶ ಉಂಟಾಗುತ್ತದೆ. ನಾವು ಇಂದ್ರಿಯಗಳಿಂದ ಉಂಟಾಗುವ ಜ್ಞಾನದಿಂದಲೇ ಜೀವಿಸುತ್ತೇವೆ. ಇಂದ್ರಿಯ ಜ್ಞಾನವು ಸಹಜವಾದದ್ದು. ಇಂದ್ರಿಯಗಳನ್ನು ತುಳಿಯುವುದು ಎಂದರೆ ನಾವು ಸತ್ತಂತೆಯೇ ಸರಿ. ಆದ್ದರಿಂದ ಅವುಗಳನ್ನು ತುಳಿಯದೆ ಅವುಗಳನ್ನು ಎಚ್ಚರಿಕೆಯಿಂದ ಗಮನಿಸುವುದು ಸರಿ. ಇಂದ್ರಿಯಗಳು ಸೌಂದರ್ಯ ಸವಿಯುವ ಪ್ರಕ್ರಿಯೆ, ಮತ್ತು ಆನಂತರ, ಅವು ಸ್ವಾರ್ಥದಲ್ಲಿ ಮುಳುಗುವ ಪ್ರಕ್ರಿಯೆಯ ನಡುವಿನ ಅಂತರವನ್ನು ತಿಳಿಯುವುದು ಮುಖ್ಯ ಎನ್ನುತ್ತಾರೆ ಜೆಕೆ ಯವರು.

ಇದನ್ನು ಅರ್ಥಮಾಡಿಕೊಳ್ಳಲು ಅವರು ಅನೇಕ ಒಳ್ಳೆಯ ಉದಾಹರಣೆಗಳನ್ನು ಕೊಡುತ್ತಾ ವಿವರಿಸುತ್ತಾರೆ:

What is the origin, the source, of desire? Go into it very, very deeply to capture the whole movement of desire, the implication of it, the depth of it, the reality of it. If you had no senses, there will be no sensation. Sensation arises when you see something in the window of a shop, a shirt, a radio, or what you will. You see it - visual perception. Then you go inside that shop, touch the material, and from the touching of it, there is a sensation......... Then, if you observe very closely, thought says, `How nice it would be if I had that shirt on me.... So, at that moment when thought creates the image out of the sensation, is the origin of desire...... The fact is, it is natural to be sensitive, to have sensations. Otherwise you are paralyzed. You must have sensation, you must have sensitivity in your fingers, in your eyes, in your hearing and looking, and you are sensitive to watch, to look - out of that looking, watching, observing, sensation inevitably arises. It must arise; otherwise you are blind, deaf. When there is sensation, then thought creates an image, and at that moment desire is born..... Find out whether thought can be in abeyance, not immediately create a picture, an image of you in that shirt, or in that car, and so on. Can there be a gap between sensation and thought impinging upon that sensation? Find out. It will make your mind, brain, alert, watchful. (Mind Without Measure By J. Krishnamurti)

ಇಂದ್ರಿಯಗಳು ಸೌಂದರ್ಯ ಸವಿಯುವ ಪ್ರಕ್ರಿಯೆ, ಮತ್ತು ಆನಂತರ ಅವು, ಸ್ವಾರ್ಥದಲ್ಲಿ ಮುಳುಗುವ ಪ್ರಕ್ರಿಯೆಯ ನಡುವಿನ ಅಂತರದಲ್ಲಿ ಇಂದ್ರಿಯಗಳ ಉದಾತ್ತೀಕರಣದ ಸಂಭವವಿರುತ್ತದೆ.

ಶರಣರು ಇಂದ್ರಿಯಗಳ ಸುಖವನ್ನು ಸವಿಯುತ್ತಾರೆ ಆದರೆ ಅದರಲ್ಲಿ ಸ್ವಾರ್ಥದ ಲವಲೇಶವೂ ಇರುವುದಿಲ್ಲ. ಅವರು ಏನೇ ಮಾಡಿದರೂ ಅದು “ತನ”ಗಾಗಿಯಲ್ಲ. ಆದ್ದರಿಂದ ಅವರು ಉಂಡೂ ಉಪವಾಸಿಗಳಾಗಿರುತ್ತಾರೆ. ಬಳಸಿದರೂ ಕೂಡ ಎಲ್ಲವನ್ನೂ ಬಿಟ್ಟ ಬ್ರಹ್ಮಚಾರಿಗಳೇ ಆಗಿರುತ್ತಾರೆ. ಯಾವ ಸುಖವಾಗಲಿ ದುಃಖವಾಗಲಿ ಅವರಿಗೆ ಅಂಟುವುದಿಲ್ಲ, ಎನ್ನುತ್ತಾರೆ ಚೆನ್ನಬಸವಣ್ಣನವರು.

Vachana 62: Otti Hanna Maadidade - True Realization

ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೋ?

ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದೇ ಭಂಗ

ಭಾವಿಸಿದ ಭಾವನೆಗಿಂತ ಸಾವುದೇ ಲೇಸು ಕಾಣಾ ಗುಹೇಶ್ವರಾ

TRANSLITERATION

otti haNNa mADidaDe adettaNa ruciyappudO?
kAmisi kalpisi BAvisidaDe adE BaMga
BAvisida BAvanegiMta sAvudE lEsu kANA guhESvarA

TRANSLATION

otti (by pressing) haNNa mADidaDe (if ripened) adettaNa(how can it be) ruciyappudO (delicious)?
kAmisi (wanting, longing) kalpisi (imagining) BAvisidaDe (assuming) adE(that is) BaMga (incorrect)
BAvisida(to have an assumed) BAvanegiMta(instead of the assumption) sAvudE(dying) lEsu(is better) kANA(you see) guhESvarA(the Lord of caves)

Can a raw fruit be ripened and made delicious by pressing it?
It is wrong to long (want), imagine and assume!
Dying is better than being full with assumptions, you see, the Lord of Caves!

COMMENTARY

A fruit should take its natural course and ripe. Only then it is delicious to consume. If we did not let it ripe, but press it and squeeze it in an effort to ripen it faster, we succeed in making it softer, but not delicious. It is better not to eat such squeezed raw fruit, since we will never experience its true taste. Longing for the taste of the fruit, imagining its taste, and assuming that we can get it through our efforts of pressing it, do not yield the proper result. The fruit must be ripe to be delicious.

Along the same lines, in achieving the spiritual maturity, imagining, longing and assuming that we have achieved it is not the way. In this Vachana, Allama Prabhu says that dying is better than just imagining, longing and assuming spiritual maturity. Imagination, longing and assumption are due to our thoughts and purturbances of the mind. They are not natural. When these disturbances are relieved, one attains the natural calmness of the mind. Just as the fruit requires an environment favorable for it to ripe and become delicious, the devotee needs an environment attain the calmness. This state of a true devotee on attaining spiritual maturity is like a ripened fruit. He becomes one with the Lord who is beyond imagination, beyond assumptions and beyond longings.

Let us 'let it happen'!

KANNADA COMMENTARY

ಇಲ್ಲಿ ಅಲ್ಲಮಪ್ರಭುಗಳು ಮಾನವನ ಮನಸ್ಸು ವಿಚಾರಕ್ಕೆ ಒಳಗಾಗಿ ಏನೇನು ಮಾಡಿ ಮೋಸಹೋಗುತ್ತದೆ ಎನ್ನುವುದನ್ನು ಸುಂದರವಾದ ಉದಾಹರಣೆಸಹಿತ ತಿಳಿಸುತ್ತಾರೆ. ಕಾಯಿಯನ್ನು ಒತ್ತಿ ಒತ್ತಿ ಹಣ್ಣು ಮಾಡಿದರೆ ಅದಕ್ಕೆ ಸಹಜವಾಗಿ ಪಕ್ವವಾದ ಹಣ್ಣಿನ ರುಚಿ ಬರಲು ಸಾಧ್ಯವೆ? ಒತ್ತಿದ್ದರ ಪರಿಣಾಮವಾಗಿ ಗಟ್ಟಿಯಾದ ಕಾಯಿ ಮೃದುವಾಗುತ್ತದೆಯೆ ಹೊರತು ಅದರಲ್ಲಿನ ತಿರುಳಿಗೆ ಪಕ್ವವಾದ ಹಣ್ಣಿನ ರುಚಿ ಬರಲು ಸಾಧ್ಯವಿಲ್ಲ. “ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದೇ ಭಂಗ” ಎಂದರೆ, ಪಕ್ವವಾದ ಹಣ್ಣಿನ ರುಚಿಯನ್ನು ಆಶಿಸಿ, ಅದರ ರುಚಿಯ ಕಲ್ಪನೆ ಮಾಡಿಕೊಂಡು, ಅದನ್ನು ನಾನು ನನ್ನ ಪ್ರಯತ್ನದಿಂದ ಹೇಗಾದರೂ ಪಡೆಯುತ್ತೇನೆ ಎಂದು ಭಾವಿಸುವುದೇ ತಪ್ಪು. ಏಕೆಂದರೆ ಇಲ್ಲಿ ನಡೆಯುವುದೆಲ್ಲವೂ ಮನದಲ್ಲಿ, ವಿಚಾರಗಳಲ್ಲಿ. ಬಯಸುವುದು, ಕಲ್ಪಿಸಿಕೊಳ್ಳುವುದು ಮತ್ತು ಭಾವಿಸುವುದು ಎಲ್ಲವೂ ವಿಚಾರದಲ್ಲಿ ನಡೆಯುತ್ತದೆ. ವಾಸ್ತವವು ವಿಚಾರಗಳಿಂದ ಭಿನ್ನವಾಗಿರುತ್ತದೆ. ವಿಚಾರವು ಸಹಜವಾದುದಲ್ಲ. ಅಂದರೆ ಅದು ಅನೇಕ ನೆನಪುಗಳ ಮತ್ತು ಹಿಂದೆ ಆದ ಅನುಭವಗಳ ಪರಿಣಾಮವಾಗಿರುತ್ತದೆ. ಎಲ್ಲರ ಅನುಭವಗಳು ಮತ್ತು ನೆನೆಪುಗಳು ಒಂದೇ ರೀತಿಯಾಗಿರುವುದಿಲ್ಲ. ಅವು ಆಯಾ ವ್ಯಕ್ತಿಯ ಹಿನ್ನೆಲೆಯನ್ನು ಅವಲಂಬಿಸಿರುತ್ತವೆ. ಅವು ದೇಶ ಮಾತು ಕಾಲದ ಮಿತಿಗೆ ಒಳಗಾಗಿರುತ್ತವೆ. ಆದ್ದರಿಂದ ವಿಚಾರವನ್ನು ನಂಬುವುದು ಎಂದರೆ ಮೋಸಹೋಗುವುದೆಂದೇ ಅರ್ಥ. ಹಣ್ಣಿಗಾಗಿ ಆಸೆ ಪಡುವುದು, ಅದರ ರುಚಿಯ ಕಲ್ಪನೆ ಮಾಡಿಕೊಳ್ಳುವುದು ಮತ್ತು ಕಾಯಿಯಿಂದ ಹಣ್ಣು ಪಡೆಯುತ್ತೇನೆ ಎಂದು ಭಾವಿಸುವುದು ಎಲ್ಲವೂ ವಿಚಾರದ ಪರಿಣಾಮ. ಇದರಿಂದ ದೋಷವುಂಟಾಗುತ್ತದೆ. ಹಣ್ಣು ಪಡೆಯಲಾಗುವುದಿಲ್ಲ. ನಿಜವಾದ ಹಣ್ಣಿನ ರುಚಿ ಆಸ್ವಾದಿಸಲು ಸಾಧ್ಯವಿಲ್ಲ. ಆದ್ದರಿಂದ ಅಲ್ಲಮಪ್ರಭುಗಳು “ ಭಾವಿಸಿದ ಭಾವನೆಗಿಂತ ಸಾವುದೇ ಲೇಸು “ ಎಂದು ಹೇಳುತ್ತಾರೆ.

ಈ ಉದಾಹರಣೆ ಬದುಕಿನ ಎಲ್ಲ ವಿಷಯಗಳಿಗೂ ಅನ್ವಯವಾಗುತ್ತದೆ. ಇಂದ್ರಿಯಗಳನ್ನು ತುಳಿದಿಟ್ಟು ಅವುಗಳನ್ನು ಗೆದ್ದಿದ್ದೇನೆ ಎಂದುಕೊಳ್ಳುವುದು, ಭಕ್ತಿಯ ಆಡಂಬರ ಮಾಡಿ ಮಹಾ ಭಕ್ತನಾಗಿದ್ದೇನೆ ಎಂದುಕೊಳ್ಳುವುದು, ದೊಡ್ಡ ದೊಡ್ಡ ಗ್ರಂಥಗಳನ್ನು ಓದಿ ಜ್ಞಾನಿಯಾಗಿದ್ದೇನೆ ಎಂದುಕೊಳ್ಳುವುದು ಇತ್ಯಾದಿ ಎಲ್ಲವೂ “ಕಾಮಿಸಿ, ಕಲ್ಪಿಸಿ, ಭಾವಿಸಿ ಭಂಗ” ತಂದುಕೊಳ್ಳುವುದೇ ಆಗಿದೆ.

ಈ ರೀತಿಯಾಗಿ ಅವಾಸ್ತವಾದ ಭಾವನೆಗಳಲ್ಲಿ ಮುಳುಗುವುದು, ಎಂದರೆ , ಆಶಿಸುವುದು, ಕಲ್ಪಿಸಿಕೊಳ್ಳುವುದು ಮತ್ತು ಪಡೆಯುತ್ತೇನೆ ಅಥವಾ ಪಡೆದಿದ್ದೇನೆ ಎಂದುಕೊಳ್ಳುವುದು ಎಲ್ಲವೂ ಭಾವನೆಗಳೇ ಹೊರತು ವಾಸ್ತವವಲ್ಲ. ನಾವೇ ಏನೋ ಭಾವಿಸಿಕೊಂಡು ಆ ಭಾವನೆಗಳ ಅವಾಸ್ತವತೆಯಲ್ಲಿ ಬದುಕುವುದಕ್ಕಿಂತ ಸಾವೇ ಲೇಸು ಎನ್ನುತ್ತಾರೆ ಅಲ್ಲಮರು.

ಹಾಗಾದರೆ ಬದುಕಿನಲ್ಲಿ ಏನನ್ನೂ ಆಶಿಸಬಾರದೆ? ಎನ್ನುವ ಪ್ರಶ್ನೆ ಹುಟ್ಟುತ್ತದೆ. ನಮ್ಮ ದಿನ ನಿತ್ಯದ ಬದುಕಿನಲ್ಲಿ ನಾವು ಕೆಲವು ಗುರಿಗಳನ್ನು ಹೊಂದಿ ಅವುಗಳನ್ನು ಸಫಲಗೊಳಿಸಲು ಪ್ರಯತ್ನಿಸುವುದು ಸಹಜ. ಅವು ಲೌಕಿಕ ದೃಷ್ಟಿಯಲ್ಲಿ ಮುಖ್ಯವಾಗಿರುವಂತಹವು. ಉದಾಹರಣೆಗೆ- ನಾನು ಡ್ರೈವಿಂಗ್ ಕಲಿಯಬೇಕು, ನಾನು ಇಂತಿಂತಹ ಪದವಿಯನ್ನು ಪಡೆಯಬೇಕು ಇತ್ಯಾದಿ. ಇಲ್ಲಿ ಆಶಿಸುವುದು, ಕಲ್ಪಿಸುವುದು, ಭಾವಿಸುವುದು ಎಲ್ಲವೂ ನಡೆಯುತ್ತದೆ. ಆದರೆ ಅದೇ

ಬದುಕಲ್ಲ. ಇಂದಿನ ಬದುಕಿನಲ್ಲಿ ಅವುಗಳ ಅವಶ್ಯಕತೆಯನ್ನು ಅರಿಯಬೇಕು. ಆದರೆ ಅವುಗಳ ಮಿತಿಯನ್ನೂ ಅರಿತಿರಬೇಕು. ತನ್ನ ತಾ ಅರಿಯುವುದರಿಂದ ಉಂಟಾಗುವ ಜ್ಞಾನದ ಮುಂದೆ ಅದರ ಕ್ಷುಲ್ಲಕತೆಯನ್ನು ತಿಳಿದು ವಿಚಾರಗಳ ಬದುಕಿನಿಂದ ತನ್ನನ್ನು ತಾ ಬಿಡಿಸಿಕೊಂಡು ಸಹಜವಾಗಿರಬೇಕು, ಎಂಬುದು ಈ ವಚನದ ಆಶಯ. ಮುಂದಿನ ವಚನದಲ್ಲಿ ವಿಚಾರದ ಬಗ್ಗೆ ವಿಷದವಾಗಿ ತಿಳಿಯೋಣ.

Vachana 63: Vichaaravembudu - Thought

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ!
ವಿಚಾರಿಸುವನ್ನಕ್ಕರ ನೀನಾನೆಂಬುದನೆತ್ತ ಬಲ್ಲೆ?
ಮರುಳೆ, ವಾಙ್ಮನೋತೀತವಾದ ಘನವು ವಿಚಾರಕ್ಕೆ ನಿಲುಕುವುದೇ?
ಗುಹೇಶ್ವರಲಿಂಗವು ತನ್ನ ತಿಳಿದು ನೋಡಿಹೆನೆಂಬವರ ವಿಚಾರದ ಬಲೆಯಲ್ಲಿ ಕೆಡಹಿದನು!

TRANSLITERATION

vicAraveMbudu saMdEhakkoLagu nODA !
vicArisuvannakkara nInAneMbudanetta balle?
maruLe, vA~gmanOtItavAda Ganavu vicArakke nilukuvudE?
guhESvaraliMgavu tanna tiLidu nODiheneMbavara vicArada baleyalli keDahidanu!

TRANSLATION (BY WORDS)

vicAravu (thought) eMbudu (so called) saMdEhakke (doubt) oLagu (part of, arises) nODA (you see) !
vicArisuvannakkara (by thinking) nInu (you) Anu (I) eMbudanu (so called) etta (how) balle (will you know)?
maruLe (oh fool), vA~g (speech) manO (mind) atItavAda (beyond) Ganavu (profound, self) vicArakke (for thought) nilukuvudE (grasped by)?
guhESvaraliMgavu (Lord of caves) tanna (self) tiLidu (understood) nODihenu (have seen) eMbavara (those who say) vicArada (of thought) baleyalli (in the net) keDahidanu (tripped them over)!

TRANSLATION

Thought arises when there is doubt, you see!
By thinking, how will you realize that you and I are one?
Oh fool! Can the profound (self), which is beyond speech and mind be grasped by thought?
The Lord of Caves has put those that claim to have seen and understood self, in to the net of thought!

COMMENTARY

In this Vachana, Allama Prabhu says that ‘thought’ cannot bring about realization of the Self (i.e. the Lord within). Thoughts occur when there are doubts or when there is no clarity. In fact, we are always immersed in thoughts, implying that we are always in doubt or lack of clarity. Further, our thoughts are not independent, but are results of our experiences and memories. They get modified by time, place, culture, experiences, memories, etc. Thoughts bring in the duality of you and me. Allama Prabhu asks, how can these thoughts being bearers of duality, can result in the realization of the unbound, unified

state of 'you and I are one and the same'?

Allama Prabhu says that the profound (Self) is beyond the limits of speech and mind. Speech and mind are within the boundary of thoughts in the sense that the speech expresses thoughts and mind is influenced by thoughts. Both are always in the mode of argument and questioning rather than the state of clarity and calmness required realizing the Lord within. Allama Prabhu says that, those who claim that they have seen the Lord within or have achieved self-realization, are in fact, trapped in the network of thought.

Philosopher J. Krishnamurti has addressed the issue of thoughts extensively. Please scroll down to Kannada commentary for some excerpts (in English) from his addresses.

Let us break the network of thought and move towards self-realization!

KANNADA COMMENTARY

ಶರಣರ ವಚನಗಳನ್ನು ಓದುತ್ತಿರುವಾಗ ನನ್ನ ದೃಷ್ಟಿ ಅಕಸ್ಮಾತ್ತಾಗಿ ವಿಚಾರದ ಬಗ್ಗೆ ಅಲ್ಲಮರು ಬರೆದಿರುವ ಈ ವಚನದ ಮೇಲೆ ಬಿದ್ದಿತು. ಒಮ್ಮಿಲೆ ನನ್ನ ಮೈ ಜುಮ್ಮೆಂದಿತು. ಏಕೆಂದರೆ ಕೆಲವು ದಿನಗಳ ಹಿಂದೆಯಷ್ಟೆ ನಾನು ಜೆಕೆಯವರ **"The Network of Thought"** ಅನ್ನು ಓದುತ್ತಿದ್ದೆ. ಜೆಕೆಯವರು ವಿಚಾರದ ಬಗ್ಗೆ ವಿಶ್ವಾದ್ಯಂತ ವರ್ಷಾನುಗಟ್ಟಲೆ ಮಾತನಾಡಿದ್ದಾರೆ. ಅವರು ಹೇಳಿದ ವಿಷಯದ ಸಾರವನ್ನೇ ಹನ್ನೆರಡನೆ ಶತಮಾನದಲ್ಲಿ ಅಲ್ಲಮರು ಈ ವಚನದಲ್ಲಿದೆ ಹೇಳಿದ್ದಾರೆ. ಅದನ್ನೇ ಎಲ್ಲರೊಂದಿಗೆ ಹಂಚಿಕೊಳ್ಳಬೇಕೆನಿಸಿತು.

"ಘನ"ವನ್ನು (ಲಿಂಗವನ್ನು, ತನ್ನನ್ನು ತಾನು) ವಿಚಾರದಿಂದ ತಿಳಿದುಕೊಳ್ಳುವುದು ಸಾಧ್ಯವಿಲ್ಲ ಎನ್ನುತ್ತಾರೆ ಅಲ್ಲಮಪ್ರಭುಗಳು. ಏಕೆಂದರೆ ವಿಚಾರವು ಸಂದೇಹಕ್ಕೆ ಒಳಗಾಗಿರುತ್ತದೆ. ಅಂದರೆ ಯಾವಾಗ ನಮ್ಮ ಮನದಲ್ಲಿ ಸಂದೇಹ ವಿರುತ್ತದೆಯೋ ಆಗ ನಾವು ವಿಚಾರಿಸಲು ಆರಂಭಿಸುತ್ತೇವೆ. ಸ್ಪಷ್ಟತೆಯಿಲ್ಲದಿದ್ದಾಗ ವಿಚಾರ ತಲೆ ಎತ್ತುತ್ತದೆ. ನಮ್ಮನ್ನೇ ನಾವು ಗಮನಿಸಿ ನೋಡಿದಾಗ ತಿಳಿದುಬರುವುದೇನೆಂದರೆ ನಾವು ಸದಾ ವಿಚಾರದಲ್ಲಿಯೇ ಮುಳುಗಿರುತ್ತೇವೆ. ಅಂದರೆ ಸದಾ ನಮ್ಮ ಮನದಲ್ಲಿ ಸಂದೇಹವಿದೆ ಎಂದಾಯಿತು. ಮತ್ತು ವಿಚಾರವು ಸ್ವತಂತ್ರವೂ ಅಲ್ಲ. ಏನು ಹಾಗೆಂದರೆ? ವಿಚಾರವು ನಮ್ಮ ಅನುಭವ ಮತ್ತು ನೆನಪುಗಳ ಪರಿಣಾಮ. ನಮ್ಮ ಸಂಸ್ಕೃತಿ, ದೇಶ, ಕಾಲ, ಧರ್ಮ, ಜಾತಿ, ಅನುಭವ, ನೆನಪುಗಳಿಗೆ ತಕ್ಕಂತೆ ವಿಚಾರವು ರೂಪುಗೊಳ್ಳುತ್ತದೆ. ಇವುಗಳನ್ನು ಬಿಟ್ಟು ವಿಚಾರವಿಲ್ಲ. ಈ ವಿಚಾರವೇ "ನೀನು" "ನಾನು" ಎಂಬ ಭೇದ ಭಾವವನ್ನು ಸೃಷ್ಟಿಸಿದೆ. ಅದು ಯಾವಾಗಲೂ "ನನ್ನ" "ನಿನ್ನ" ಎಂಬ ನೆಲೆಯಿಂದಲೇ ಕೆಲಸಮಾಡುತ್ತದೆ. ಆದ್ದರಿಂದ ವಿಚಾರವು ಸ್ವತಂತ್ರವಲ್ಲ. ಸ್ವತಂತ್ರವಲ್ಲದ ವಿಚಾರದ ಮೂಲಕ "ಅರಿವು" (ಯಾವ ಬಂಧನವೂ ಇಲ್ಲದ ಸ್ಥಿತಿ) ಪಡೆಯುವುದು ಹೇಗೆ ಸಾಧ್ಯ? ವಿಚಾರದಿಂದ "ನೀನೇ ನಾನು" ಎಂಬುದನ್ನು ಅರಿಯಲು ಬರುವುದಿಲ್ಲ. ಎಲ್ಲಿಯವರೆಗೆ ವಿಚಾರದ ಪ್ರಭಾವ ವಿರುತ್ತದೆಯೊ ಅಲ್ಲಿಯವರೆಗೆ "ನೀನು" " ನಾನು" ಬೇರೆ ಬೇರೆ ಎಂಬ ಭಾವ ಮನೆಮಾಡಿರುತ್ತದೆ. ಐಕ್ಯಭಾವ ವಿಚಾರದಿಂದ ಅಳವಡುವುದಿಲ್ಲ.

ಇದನ್ನು ಜೆಕೆಯವರು ಹೀಗೆ ಹೇಳುತ್ತಾರೆ.

"………. the `you', the ego, the `me', is altogether memory. There is no spot or space in which there is clarity............. the fact is that our whole existence is entirely memory, remembrances. There is no spot or space inwardly which is not memory............"

“......Thought, to the human being, is astonishingly important; and thought itself is limited; its action is to bring about fragmentation - the fragmentation between people - my religion, my country, my god, my belief as opposed to yours, all that is the movement of thought..............”
“ ....Thought is the response of the memory of things past; it also projects itself as hope into the future. Memory is knowledge; knowledge is memory of experience. That is, there is experience, from experience there is knowledge as memory, and from memory you act. From that action you learn, which is further knowledge. So we live in this cycle - experience, memory, knowledge, thought and thence action - always living within the field of knowledge.” (The Network of Thought –J. Krishnamurti)

ಘನವು ಮಾತು ಮತ್ತು ಮನಸ್ಸಿಗೆ ನಿಲುಕದಂತಹದು ಎನ್ನುತ್ತಾರೆ ಅಲ್ಲಮಪ್ರಭುಗಳು. ಮಾತು ಮತ್ತು ಮನಸ್ಸು ಕೂಡ ವಿಚಾರದ ಪರಿಧಿಯಲ್ಲಿಯೇ ಬರುತ್ತದೆ. ವಾಕ್ಕು ಎಂದರೆ ಮಾತು ಮತ್ತು ಮನಸ್ಸು ಕೂಡ ಮೇಲೆ ಹೇಳಿದ ಅನೇಕ ವಿಷಯಗಳಿಂದ ಪ್ರಭಾವಗೊಂಡಿರುತ್ತವೆ. ಪ್ರಭಾವಕ್ಕೆ ಒಳಗಾದ ಮನಸ್ಸು ತನ್ನ ಪ್ರಭಾವದ ಬಲೆಯಲ್ಲಿಯೇ ಸುತ್ತುತ್ತದೆ. ಅದು ಕೇವಲ ತರ್ಕಮಾಡಲು ತಿಳಿದಿರುತ್ತದೆಯೇ ಹೊರತು ಅದನ್ನು ಮೀರಿ ಹೋಗುವುದಿಲ್ಲ. ಆದರೆ ಘನವು ವಾಕ್ಕು ಮತ್ತು ಮನಸ್ಸನ್ನು ಮೀರಿರುವುದು, ತರ್ಕವನ್ನು ಮೀರಿರುವುದು. ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ?

“ A religious mind is a very factual mind; it deals with facts, with what is actually happening with the world outside and the world inside. The world outside is the expression of the world inside; there is no division between the outer and the inner. A religious life is a life of order, diligence, dealing with that which is actually within oneself, without any illusion, so that one leads an orderly, righteous life.............
“.........There is no system, no practice but the clarity of perception of a mind that is free to observe, a mind which has no direction, no choice..........” (The Network of Thought – J. Krishnamurti)

ಘನವನ್ನು ಅರಿಯುವುದು ಎಂದರೆ ತಥ್ಯವನ್ನು ಹಂಬಲಿಸುವುದು. ವಾಸ್ತವವಾಗಿ ನಡೆಯುತ್ತಿರುವುದರಲ್ಲಿ ಆಸಕ್ತಿ ಹೊಂದಿರುವುದು. ಅದನ್ನು ಕಂಡುಕೊಳ್ಳಲು ಮನದಲ್ಲಿ ಸ್ಪಷ್ಟತೆಯಿರಬೇಕು. ವಿಚಾರವಿದ್ದಲ್ಲಿ ಸ್ಪಷ್ಟತೆಯಿರುವುದಿಲ್ಲ. ಯಾರು ವಿಚಾರದ ಮೂಲಕ ಘನವನ್ನು, ಲಿಂಗವನ್ನು ಅರಿತಿದ್ದೇನೆ ಎಂದು ಹೇಳುವರೋ ಅವರು ವಾಸ್ತವವಾಗಿ ಇನ್ನೂ ಹೆಚ್ಚು ಸಂಕೀರ್ಣವಾದ (complex)ವಿಚಾರಗಳ ಬಲೆಯಲ್ಲಿ ಸಿಲುಕಿರುತ್ತಾರೆ, ಎನ್ನುತ್ತಾರೆ ಅಲ್ಲಮಪ್ರಭುಗಳು. ಏಕೆಂದರೆ ಅಲ್ಲಿ “ಅರಿವು” ಮತ್ತು “ಅರಿತಿರುವವನು” ಎಂಬ ದ್ವೈತ ಭಾವ ವಿರುತ್ತದೆ. ಇದು ವಿಚಾರದ ಪರಿಣಾಮ.

Vachana 64: Naanembudu Ahankaara - I and You

ನಾನೆಂಬುದು ಅಹಂಕಾರ, ನೀನೆಂಬುದು ಮಾಯೆ

ನಾನು ನೀನೆಂಬ ಉಭಯವಳಿದರೆ

ನಾನೆಂಬವನೂ ನೀನೆಂಬವನೂ ನೀನೇ ಅಯ್ಯ

ಇವೆರಡರ ಭೇದವೆಲ್ಲಿಯದೋ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ?

TRANSLITERATION

nAneMbudu ahaMkAra, nIneMbudu mAye
nAnu nIneMba uBayavaLidare
nAneMbavanU nIneMbavanU nInE ayya
iveraDara BEdavelliyadO mahAliMga guru SivasiddhESvarapraBuvE?

TRANSLATION (WORDS)

nAnu (I) eMbudu (so called) ahaMkAra (ego), nInu (you) eMbudu (so called) mAye (illusion)
nAnu(I) nInu (you) eMba(so called) uBayavu (both) aLidare(ended)
nAneMbavanU (the so called I) nIneMbavanU(the so called you) nInE (only you) ayya (my Lord)
iveraDara (between these two) BEdavelliyadO (where is the difference) mahAliMga (Lord superior) guru (teacher) Siva (Shiva) siddhESvara (the realized one) praBuvE (Lord)?

TRANSLATION

The I-ness is ego, the you-ness is illusion!
If both I and you are ended,
The so called I and the so called you are only You, my Lord!
Where is the difference between these two, Oh Lord mahAliMga guru SivasiddhESvarapraBu!

COMMENTARY

In this Vachana, Thontada Sri Siddalingeswara Swami comments on the barrier we create in our lives because of 'I' and 'you'. He says, the I-ness is ego and the you-ness is illusion. When we end the I and you duality and understand that there is no difference between the two, we realize the two are one and the same: the Lord within. The basic reason for ego and illusion is the lack of knowledge and awareness. When the light of knowledge shines the illusion of the rope lying in darkness as a serpent goes away and we realize that it is really the rope. So does the ego.
The 'I' envelops our lives completely. We say that I achieved this, I created this, this land is mine, I built this house, I earned this wealth, my children, etc. We create a partition of our own by being with individuals of our own profession, our own religion or faith, our own status in society, etc. We feel comfortable to be in this partition hoping that everyone within the partition are always supportive of our wellbeing and progress. We feel that the

individuals from other partitions to be more of our competitors rather than supporters. Thus the I and you peaks create a gulf between the partitions. When we open our minds and observe others, we realize that the concepts of happiness and sorrow, big and small, rich and poor, success and failure, etc. are basically same in all the partitions, The I-you gap then begins to narrow. When life's events prove to us that the individuals from other partitions come to our rescue equally well as those in our partitions, and those in our partition may not be as supportive as we thought, the I-you duality starts to vanish. We start feeling that we are all one and the same and realize the one Lord within all of us. Basavanna said "no one is inferior to me, no one is superior to the devotees of the Lord".

Realizing that the soul within each of us (Jeevaatma - Anga) is a spark of the supreme soul (paramaatma - Linga), and the purpose of the individual soul is to eventually merge with the supreme (Linga-Anga Saamarsya), allows us to erase the gap of I and you. Further, recognizing that in this journey towards the supreme, each soul follows its own script, allows us to treat others just like we expect them to treat us. It gives us strength to walk in other's shoes before we judge their actions.

Let us erase the 'I – you' gap!

KANNADA COMMENTARY

ಈ ವಚನ ತೋಂಟದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳದ್ದು. ಇಲ್ಲಿ "ನಾನು" "ನೀನು" ಎಂಬ ಭೇದಭಾವ ಯಾವಾಗ ಇರುತ್ತದೆ ಎಂಬ ವಿಷಯ ಹೇಳುತ್ತಿದ್ದಾರೆ. ನಾನು ಎಂಬುದು ಅಹಂಕಾರ ಮತ್ತು ನೀನು ಎಂಬುದು ಮಾಯೆ ಅಂದರೆ ಅಜ್ಞಾನ. ಅಜ್ಞಾನದಲ್ಲಿ ಮುಳುಗಿರುವದರಿಂದಲೇ ನಮಗೆ ಈ ಭೇದ ಕಾಣುವುದು. ನಾವೆಲ್ಲರೂ ಇರುವ ಸ್ಥಿತಿಯೇ ಇದು. ನಾವು ಯಾವಾಗಲೂ "ನಾನು" "ನನ್ನ" ಎಂಬ ಅಹಂಕಾರದಲ್ಲಿಯೇ ಇರುತ್ತೇವೆ. ಸದಾ ನಾವು, ಅದನ್ನು ಮಾಡಿರುವುದು ನಾನು, ಅದನ್ನು ಕೊಂಡಿರುವುದು ನಾನು, ಅದನ್ನು ಆರಿಸಿರುವುದು ನಾನು, ಅದನ್ನು ಹೇಳಿರುವುದು ನಾನು, ಅದನ್ನು ಕಲಿಸುತಿರುವುದು ನಾನು, ಅದನ್ನು ತಂದಿರುವುದು ನಾನು, ಇದು ನನ್ನ ವಸ್ತು, ನನ್ನ ದೇಶ,ನನ್ನ ಮನೆ, ನನ್ನ ಮಗ, ನನ್ನ ದೇವರು, ನನ್ನ ಧರ್ಮ, ನನ್ನ ವಿಚಾರ, ಇತ್ಯಾದಿಯಾಗಿ ಪ್ರತಿಯೊಂದನ್ನು ನಾನು ನನ್ನದು ಎಂದು ಹೇಳುತ್ತಲೇ ಇರುತ್ತೇವೆ. ಇದು ಅಹಂಕಾರದ ಅಭಿವ್ಯಕ್ತಿ. ಅಲ್ಲಿ "ನಾನು" ಬಿಟ್ಟು ಬೇರೇನೂ ಇಲ್ಲ. ಈ ನಾನು ನನ್ನದು ಎಂಬುದರ ವಿರುದ್ಧವಾಗಿ ನೀನು ನಿನ್ನದು ಎಂಬುದು ಇರಲೇ ಬೇಕಲ್ಲವೆ? ಹೀಗಾಗಿ ಅದು ನಾನು ನೀನು ನನ್ನದು ನಿನ್ನದು ಎಂಬ ಭೇದವನ್ನು ಸಹಜವಾಗಿಯೇ ಸೃಷ್ಟಿಸುತ್ತದೆ. ಒಟ್ಟಿನಲ್ಲಿ "ನಾನು" ಮತ್ತು "ನೀನು" ಎಂಬ ದ್ವೈತ ಭಾವ. ಈ "ನಾನು" "ನೀನು" ಎಂಬ ಭಾವ ಅಳಿದರೆ ಆ "ನೀನೇ ನಾನು" ಎಂಬ ಭಾವ ಅಳವಡುತ್ತದೆ, ಆ ಎರಡರಲ್ಲಿ ಯಾವ ಭೇದವೂ ಇರುವುದಿಲ್ಲ ಎನ್ನುತ್ತಾರೆ ಸಿದ್ಧಲಿಂಗೇಶ್ವರರು.

ನಾನು ನೀನು ಎಂಬ ಭೇದ ಉಂಟಾಗುವುದು ಹೇಗೆ? ಮತ್ತು ಅಳಿಯುವುದು ಹೇಗೆ? ನಾವೆಲ್ಲರೂ ನೋಡಲು ಬೇರೆ ಬೇರೆ ಯಾಗಿದ್ದೇವೆ; ನಮ್ಮ ಜನಾಂಗ, ಬಣ್ಣ, ಎತ್ತರ, ಭಾಷೆ, ಮುಖದ ಲಕ್ಷಣ ಇತ್ಯಾದಿಗಳು ಬೇರೆಯಾಗಿರುವವು. ಇದನ್ನು ಅಲ್ಲಗಳೆಯಲು ಸಾಧ್ಯವೆ? ಇಲ್ಲ. ಆದ್ದರಿಂದ ನಾನು ನೀನು ಎಂಬ ಭಾವ ಹುಟ್ಟುವುದು ಸಹಜ. ಆದರೆ ಎಲ್ಲರ ಮನಸ್ಸುಗಳು ಒಂದೇ. ಎಲ್ಲರ ಅನುಭವಗಳೂ ಒಂದೇಯಾಗಿರುತ್ತವೆ. ವಿಶ್ವಾದ್ಯಂತ ಎಲ್ಲರೂ ಹರ್ಷ, ದುಃಖ, ಚಿಂತೆ, ವ್ಯಾಕುಲತೆ, ಭಯ ಮುಂತಾದವುಗಳನ್ನು ಒಂದೇ ರೀತಿಯಾಗಿ ಅನುಭವಿಸುತ್ತಾರೆ. ಆಂತರಿಕವಾಗಿ ಅಲ್ಲಿ ಯಾವ ಭೇದವೂ ಇಲ್ಲ.

ಭೇದವಿರುವುದೆಲ್ಲ ಮೇಲುನೋಟದಲ್ಲಿ ಮಾತ್ರ. ಆದರೆ ನಾವು ಮಾತ್ರ ಮೇಲೆ ಕಾಣುವುದನ್ನೇ ನಿಜವೆಂದು ನಂಬುತ್ತೇವೆ. ಇತರರಿಂದ ನಾವು ಬೇರೆ ಎಂದುಕೊಳ್ಳುತ್ತೇವೆ. ನಮ್ಮಂತೆ ಇರುವವರೊಂದಿಗೆ, ನಮ್ಮ ಮತಧರ್ಮದವರೊಂದಿಗೆ, ನಮ್ಮಂತೆ ವಿಚಾರಿಸುವರೊಂದಿಗೆ, ನಮ್ಮ ದೇಶದವರೊಂದಿಗೆ ನಮ್ಮನ್ನು ಗುರುತಿಸಿಕೊಂಡು ನಮ್ಮನ್ನು ನಾವು ಇತರರಿಂದ ಬೇರ್ಪಡಿಸಿಕೊಳ್ಳುತ್ತವೆ. ನಾವು ಒಂದು ಗುಂಪಿಗೆ ಸೇರಿರುವುದರಿಂದ ನಮಗೆ ಒಂದು ರೀತಿಯ ಸುರಕ್ಷತೆಯ ಭಾವ ಉಂಟಾಗುತ್ತದೆ. ಈ ಬೇರ್ಪಡಿಕೆಯಲ್ಲಿ ನಾವುಗಳು ಭದ್ರವಾಗಿದ್ದೇವೆ ಎಂದು ಕೊಳ್ಳುತ್ತೇವೆ. ಆದರೆ ಈ ಯಾವುವೂ ನಮಗೆ ಭದ್ರತೆಯನ್ನು ಒದಗಿಸುವುದಿಲ್ಲ. ಏಕೆಂದರೆ ಬೇರೆ ಗುಂಪಿನವರಿಂದ, ಬೇರೆ ಜನಾಂಗದವರಿಂದ, ಬೇರೆ ಧರ್ಮದವರಿಂದ ಮಾತ್ರವಲ್ಲದೆ ನಮ್ಮವರಿಂದಲೂ ಕೂಡ ನಮಗೆ ಹಾನಿಯಾಗುವ, ನೋವಾಗುವ ಸಂಭವವಿರುತ್ತದೆ. ವಾಸ್ತವವಾಗಿ ನಾವು ಎಣಿಸುವಂತಹ ಭದ್ರತೆ ಎಂಬುದು ಇಲ್ಲವೇ ಇಲ್ಲ. ವಿಚಾರವು, ವಾಸ್ತವವಾಗಿ ಇಲ್ಲದ ಭದ್ರತೆಯನ್ನು ಪಡೆಯಬೇಕೆಂದು ಮನಸ್ಸನ್ನು ಪ್ರೇರೇಪಿಸುತ್ತದೆ. ನಾವುಗಳು ನಾನಾ ರೀತಿಯಲ್ಲಿ ಕಟ್ಟಿಕೊಂಡ ಭದ್ರತೆಯ ಗೋಡೆ ಒಂದಿಲ್ಲ ಒಂದು ದಿನ ಕುಸಿದು ಬೀಳುತ್ತದೆ. ಅದನ್ನು ಯಾರೂ ತಡೆಯಲಾರರು. ಯಾವಾಗ ನಾವು ಇದನ್ನು ಆಳವಾಗಿ ಅರಿಯುತ್ತೇವೆಯೋ, ಅಂದರೆ ನಮಗೆ ಏಕೆ ನೋವಾಗುತ್ತದೆ, ಆ ನೋವನ್ನು ತಪ್ಪಿಸಬಹುದೇ? ಎಂಬುದನ್ನು ಆಳವಾಗಿ ಅರಿಯುತ್ತೇವೆಯೋ ಆಗ ನಾವು ಭದ್ರತೆಗಾಗಿ ಆಸೆ ಪಡುವುದು ಕೊನೆಗೊಳ್ಳುತ್ತದೆ. ಆಗ ಎಲ್ಲದರಲ್ಲಿಯೂ ನಮಗೆ ವಿರುದ್ಧವಾದುದು ಏನೂ ಕಂಡು ಬರುವುದಿಲ್ಲ. ಆ ಅರಿವು ಉಭಯ ಭೇದವಳಿಯಲು ಸಹಾಯಕವಾಗುತ್ತದೆ. ಆ ಎರಡರ ಭೇದ ಅಳಿದರೆ ನೀನೇ ನಾನು ಎಂಬುದು ಅಳವಡುತ್ತದೆ.

Vachana 65: Nanninda Aridenembene - I and You together

ನನ್ನಿಂದ ಅರಿದೆನೆಂಬೆನೇ ನನ್ನಿಂದ ಅರಿದವನಲ್ಲ

ನಿನ್ನಿಂದ ಅರಿದೆನೆಂಬೆನೇ ನಿನ್ನಿಂದ ಅರಿದವನಲ್ಲ

ಅದೇನು ಕಾರಣವೆಂದರೆ ಕಣ್ಣ ಬೆಳಗು ಸೂರ್ಯನ ಬೆಳಗು ಕೂಡಿ ಕಾಂಬಂತೆ

ನನ್ನ ನಿನ್ನರಿವಿನ ಸಂಬಂಧ ಬೆಂಬಳಿಯಲಿ ಅರಿದೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

TRANSLITERATION

nanniMda arideneMbenE nanniMda aridavanalla

ninniMda arideneMbenE ninniMda aridavanalla

adEnu kaaraNaveMdare kaNNa beLagu sUryana beLagu kUDi kaaMbaMte

nanna ninnarivina saMbaMdha beMbaLiyali aridenu kaaNaa nijaguru svataMtrasiddhaliMgEshvara

TRANSLATION (WORDS)

nanniMda (through me , by myself) aridenu (learnt, understood, gained knowledge) embenE (shall I say) nanniMda(through me , by myself) aridavanu (one who has understood) alla (not)

ninniMda (through you, by you) aridenu(learnt, understood, gained knowledge) embenE (shall I say) ninniMda(through you, by you) aridavanu (one who has understood) alla (not)

adEnu(what is) kaaraNavu (the reason) eMdare (*if said*) kaNNa beLagu (the light in the eye)sUryana beLagu(Sun light) kUDi (together with) kaaMbaMte (like seeing)

nanna(mine) ninna (your) arivina (knowledge of) saMbaMdha(relationship) beMbaLiya

(together , with the help of) aridenu (I understood) kaaNaa (you see) nijaguru (Perfect teacher) svataMtra (Independent) siddhaliMgEshvara (Lord siddhaliMgEshvara)

TRANSLATION

Shall I say “I understood by myself?” I did not!

Shall I say “I understood through you?”I did not!

The reason is, just as the light in the eye and the Sunlight together aid the sight,

I understood with the help of the relation between my and your knowledge (awareness), you see, Lord siddhaliMgEshvara!

COMMENTARY

In our previous posting, sharana Thontada Siddalingeswara Swami advocated erasing the I (ego) and you (illusion) duality to achieve self-realization. In this Vachana, Sharana

Swatantra Siddalingeswara (a disciple of Thontada Siddalingeswara Swami) says that a good understanding of 'I' and 'you' and the relation between the two are essential to move us towards self-realization. He says, "I did not gain the self-awareness by myself. Neither I gained the awareness through just you. Just as seeing anything requires both Sunlight (or corresponding external illumination) and the light in the eye (internal nerve mechanism between the eye and the brain), I gained the awareness with the help of the relation between (or togetherness of) my awareness and your awareness".

The common interpretation of this Vachana is that the process of self-realization requires both external and internal awareness. Both should develop in tandem and should aid each other to achieve the ultimate. In this context the 'I' is the individual and the 'you'is the Lord within.

In the context of the 'I and you gap'of our daily lives, this Vachana calls for the understanding of the 'relation'between our awareness and that of others'. Our lives are based on 'relations'.We relate ourselves with others in one form or the other. Even an ascetic, who has sacrificed all worldly assets, tends to think of his past and his relations with beings around him. The way we treat others and the way others' actions affect us are all functions of our relations with each other. These relations contribute to love, violence, hatred, jealousy, affection, etc., which in turn determines our happiness, sadness, and mental and physical pleasures and pressures. When we closely examine these, we might infer for instance, that the negative results are due to the way we might have hurt others in the past. This realization would make us be careful in our behavior with others to make sure that we do not hurt them again. While we succeed in our efforts to gain good relation, this change in our mode of operation may or may not bring happiness to us. The key then is to gain a full understanding of both sides of the relation, and develop the attitudes and living styles that bring comfort to both sides.

Let us walk together in each other's shoes and develop fruitful relations!

KANNADA COMMENTARY

ನಾನು ನೀನು ಎಂಬ ದ್ವೈತಭಾವ ಅಳಿದು ಐಕ್ಯ ಭಾವ ಅಳವಡಬೇಕಾದರೆ "ನನ್ನ" ಮತ್ತು "ನಿನ್ನ"ಎರಡರ ಅಗತ್ಯವಿದೆ ಎಂದು ಹೇಳುತ್ತಾರೆ ಶರಣ ಸ್ವತಂತ್ರ ಸಿದ್ಧಲಿಂಗೇಶ್ವರರು. ಇವರು ತೋಂಟದಸಿದ್ಧಲಿಂಗೇಶ್ವರ ಶಿಷ್ಯರು. ಕೇವಲ "ನನ್ನ" ಎಂಬ ಅಹಂಕಾರದಿಂದ ಅರಿವು ಉಂಟಾಗಲಿಲ್ಲ. ಮತ್ತುಕೇವಲ "ನಿನ್ನ" ಎಂಬ ಬೇರ್ಪಡಿಕೆಯ ಭಾವದಿಂದಲೂ ಅರಿವು ಉಂಟಾಗಲಿಲ್ಲ, ಎನ್ನುತ್ತಾರೆ. ಅದಕ್ಕೆಒಂದು ಉದಾಹರಣೆ ಕೊಡುತ್ತಾರೆ - ನಾವು ಏನಾದರು ನೋಡಬೇಕಾದರೆ ದೈಹಿಕವಾದ ಕಣ್ಣಿನಜ್ಯೋತಿಯೂ ಬೇಕು ಮತ್ತು ಸೂರ್ಯನ ಬೆಳಕೂ ಬೇಕು. ಸೂರ್ಯನ ಬೆಳಕು ಇದ್ದು ಕಣ್ಣ ಜ್ಯೋತಿಇಲ್ಲದಿದ್ದಲ್ಲಿ ಏನೂ ಕಾಣುವುದಿಲ್ಲ. ಅದೇ ರೀತಿಯಾಗಿ ಕಣ್ಣಜ್ಯೋತಿ ಇದ್ದು ಸೂರ್ಯನ ಬೆಳಕುಇಲ್ಲದಿದ್ದಲ್ಲಿಯೂ ಏನೂ ಕಾಣುವುದಿಲ್ಲ. ಒಟ್ಟಿನಲ್ಲಿ ಕಣ್ಣಿಗೆ ವಸ್ತುವಿನ ದರ್ಶನವಾಗಬೇಕಾದರೆ ಒಳಗಣಕಣ್ಣ ಜ್ಯೋತಿ ಮತ್ತು ಹೊರಗಣ ಬೆಳಕು ಎರಡರ ಅವಶ್ಯಕತೆಯೂ ಇರುತ್ತದೆ. ಅದೇ ರೀತಿಯಾಗಿತನ್ನ ತಾನರಿಯಲು ಮೊದಲಿಗೆ "ನನ್ನ" ಮತ್ತು "ನಿನ್ನ" ದರ ಅವಶ್ಯಕತೆಯೂ ಇದೆ. ನನ್ನ ಎಂಬಅಹಂಕಾರ ಮತ್ತು ನಿನ್ನ ಎಂಬ ಮಾಯೆ, ಈ ಎರಡರ ಸಂಬಂಧವನ್ನು ಅರಿಯಬೇಕಾಗುತ್ತದೆ,ಎನ್ನುತ್ತಾರೆ ಸ್ವತಂತ್ರ ಸಿದ್ಧಲಿಂಗೇಶ್ವರ ಶರಣರು.

ನನ್ನ ನಿನ್ನ ಅರಿವಿನ ಸಂಬಂಧವೆಂದರೇನು?

ಬದುಕು ಇರುವುದೇ ಸಂಬಂಧದಲ್ಲಿ. ಜಗತ್ತಿನಲ್ಲಿ ಎಲ್ಲವೂ ಒಂದಲ್ಲ ಒಂದರೊಂದಿಗೆ ಸಂಬಂಧಹೊಂದಿರುತ್ತದೆ. ಎಲ್ಲವನ್ನೂ ಬಿಟ್ಟ ಸಂನ್ಯಾಸಿಯೂ ತನ್ನ ಗತದೊಂದಿಗೆ ಮತ್ತು ತನಗೆ ಆಹಾರ, ಬಟ್ಟೆಇತ್ಯಾದಿ ಕೊಡುವ ಮನುಷ್ಯನೊಂದಿಗೆ ಸಂಬಂಧ ಹೊಂದಿರುತ್ತಾನೆ. ಈ ಸಂಬಂಧದಲ್ಲಿ ನಾನುಮತ್ತು ನೀನು ಇರುತ್ತವೆ. ನಾನು ನಿನ್ನೊಂದಿಗೆ ನಡೆದುಕೊಳ್ಳುವ ರೀತಿಯಲ್ಲಿ, ಪ್ರೀತಿ, ದ್ವೇಷ,ಅಸೂಯೆ, ಮೋಹ, ಆತ್ಮೀಯತೆ, ಹಿಂಸೆ ಇತ್ಯಾದಿಗಳಿರುತ್ತವೆ. ಅವುಗಳಿಂದ ನೋವು, ಸಂತೋಷ,ದುಃಖ, ನಲಿವು, ಮಾನಸಿಕ ಮತ್ತು ದೈಹಿಕ ಬಳಲಿಕೆ, ಒತ್ತಡ ಇತ್ಯಾದಿಗಳು ಉಂಟಾಗುತ್ತವೆ. ಈ ಎಲ್ಲಸಂಬಂಧಗಳ ಕನ್ನಡಿಯಲ್ಲಿ ನಾನು ಮತ್ತು ನೀನು ಎಂದರೆ ಏನು ಎಂಬುದನ್ನು ಅರಿಯಬಹುದು.ನಾನು ಏಕೆ ಇನ್ನೊಬ್ಬರಿಗೆ ನೋವುಂಟುಮಾಡುತ್ತೇನೆ? ಅಥವಾ ನನಗೆ ಏಕೆ ನೋವುಂಟಾಗುತ್ತಿದೆ?ಎಂದು ಯೋಚಿಸಿದರೆ ಅಲ್ಲಿ ನಮ್ಮ ಬದುಕಿನಲ್ಲಿ ಹಿಂದೆ ನಮಗಾದ ನೋವುಗಳು ಕಾಣುತ್ತವೆ, ನಾನೇನನ್ನ ಬಗ್ಗೆ ಮಾಡಿಕೊಂಡ ರೂಪ **(image)** ಕಾಣುತ್ತದೆ. ಆ ರೂಪಕ್ಕೆ ಧಕ್ಕೆಯಾದಾಗ ನನಗೆನೋವುಂಟಾಗುತ್ತದೆ. ಇದೇ ರೀತಿ ನಾವು ಅಥವಾ ನೀವು ಇತರರ ನೋವಿಗೆ ಕಾರಣರಾಗುತ್ತೇವೆ. ಈಸಂಬಂಧದ ಕನ್ನಡಿಯಲ್ಲಿ ಸರಿಯಾಗಿ ಗಮನಿಸಿದಾಗ ನಮ್ಮ ದುಃಖ, ಕಾತರತೆ, ನೋವು, ಖಿನ್ನತೆ,ಒಂಟಿತನ, ಅಹಂಕಾರ, ಅಸೂಯೆ ಎಲ್ಲವೂ ಇವುಗಳ ಕಾರಣಗಳೆಂದು ಕಂಡುಬರುತ್ತವೆ. ನಮಗೆಹಿಂದೆ ಯಾವಾಗಲೋ ಆದ ನೋವು ಇನ್ನೊಮ್ಮೆ ಆಗಬಾರದು ಎಂಬ ಎಚ್ಚರಿಕೆವಹಿಸುತ್ತದೆ ನಮ್ಮನಡವಳಿಕೆ. ಈ ಎಚ್ಚರಿಕೆಯ ನಡವಳಿಕೆ ಇನ್ನೊಬ್ಬರಿಗೆ ನೋವುಂಟಾಗುವಂತೆ ಮಾಡಬಹುದು. ಅದುನಮ್ಮನ್ನು ನೋವಿನಿಂದ ಖಂಡಿತವಾಗಿಯೂ ರಕ್ಷಿಸುವುದಿಲ್ಲ, ಅಥವಾ ಅದರಿಂದ ನಮಗೆ ಆನಂದಉಂಟಾಗುವುದಿಲ್ಲ. ಈ ಎಲ್ಲವನ್ನೂ ಆಳವಾಗಿ ಮತ್ತು ಯಾವ ಪೂರ್ವಗ್ರಹ **(prejudice)**ವೂ ಇಲ್ಲದೆಗಮನಿಸಿದಾಗ ನಾವು, ನಾನು ಮತ್ತು ನೀನು ಅನ್ನು ಅರಿಯಬಹುದು. ವಸ್ತುವನ್ನು ನೋಡಲುಕಣ್ಣೊಳಗಿನ ಜ್ಯೋತಿ ಮತ್ತು ಸೂರ್ಯನ ಬೆಳಕಿನ ಅವಶ್ಯಕತೆಯಿರುವಂತೆ, ನನ್ನಲ್ಲಿರುವ ಅಹಂಕಾರಮತ್ತು ನಿನ್ನ ಎಂಬಲ್ಲಿ ಇರುವ ಬೇರ್ಪಡಿಕೆಯ ಭಾವ, ಎರಡನ್ನೂ ಅರ್ಥಮಾಡಿಕೊಳ್ಳಬೇಕಾಗುತ್ತದೆ.ಈಎರಡರಿಂದ ನಾನು ಅರಿವನ್ನು ಪಡೆದೆ ಎನ್ನುತ್ತಾರೆ ಸ್ವತಂತ್ರ ಸಿದ್ಧಲಿಂಗಶ್ವರರು. ನಾವು ಈಎಲ್ಲವನ್ನೂ ಬೌದ್ಧಿಕವಾಗಿ ಮಾತ್ರ ಅರಿಯುತ್ತೇವೆ. ಆದರೆ ಅದನ್ನು ನಿಜವಾಗಿ ಅರಿಯುವಅವಶ್ಯಕತೆಯಿದೆಯಲ್ಲವೇ?

Vachana 66: Tannuva husimaadi - The Lord within

ತನ್ನುವ ಹುಸಿ ಮಾಡಿ ಇನ್ನೊಂದ ದಿಟ ಮಾಡುವ ಅಣ್ಣಂಗೆ ನಂಬುಗೆ ಇನ್ನಾವುದೋ?
ತನ್ನೊಳಗಿದ್ದ ಘನವ ತಾ ತಿಳಿಯಲರಿಯದೆ
ಪರಬ್ರಹ್ಮಕ್ಕೆ ತಲೆಯಿಕ್ಕಿ ತೆಗೆದೆನೆಂಬ ಅಣ್ಣ ಗಾವಿಲನೆಂದಾತ ಅಂಬಿಗರ ಚೌಡಯ್ಯ

TRANSLITERATION

tannuva husimaaDi innoMda diTa maaDuva aNNaMge naMbuge innaavudO?
tannoLagidda ghanava taa tiLiyalariyade
parabrahmakke taleyanikki tegedeneMba aNNa gaavilaneMdaata aMbigara couDayya

TRANSLATION (Words)

tannuva (one's own self) husi maaDi (to consider as false) innoMda (the other) dita maaDi (to consider as true) aNNaMge (for the elder brother) naMbuge (the belief) innaavudO? (which other) (who knows what is the belief ?)
tannoLagidda (which lies within) ghanava (the profound) taa (self) tiLiyalariyade (not knowing how to understand, to be aware of)
parabrahmakke (of the ultimate Brahma) taleyikki (who puts his head at the feet) tegeneneMba (and gets up) aNNa (the elder brother) gaavila (is a fool) eMdaata (says) aMbigara couDayya (Ambigara Choudayya)

TRANSLATION

What other belief prompts the (elder) brother to consider self to be false and the other to be true?
Not being aware of the profound which lies within (self),
the (elder) brother who puts his head on the feet of the ultimate Brahma and gets up is a fool, says Ambigara Choudayya

COMMENTARY

Sharana Ambigara Choudayya says that those who do not recognize the Lord within and tries to find Him elsewhere are indeed fools. He questions as to which belief prompts one to falsify what is within and go after the one outside? According to him, not being aware of the Lord within, if one bows his head at the perceived Brahma (the Ultimate) outside, he is indeed a fool. Note the humility of Sharana Choudayya, when he refers to others as 'elder brother' (aNNa) even when he is pronouncing their act to be foolish.

We visualize God to be in various forms and create statues, worship them with all sorts of offerings, chant hundreds of names we give them, and immerse in Bhajans and discussions. We believe that we are reaching the Lord through all these activities. We never question the belief that led us to these activities. We never find time to think about what we are doing. We just follow these rituals mechanically. These activities come easy to us. Turning our attention inwards is very difficult. It requires tremendous effort to set our mind on the path of finding the profound within us. In our busy lives of making each minute count, we never strive for the solitude and concentration needed to probe within and find that inner

self – the true Lord!

Let us take a U-turn and journey towards the Lord within us!

KANNADA COMMENTARY

ಅಂಬಿಗರ ಚೌಡಯ್ಯನವರು, ತನ್ನ ಒಳಗೆ ಇರುವ ದೇವರನ್ನು ಗುರುತಿಸದೆ ಹೊರಗೆ ಅವನನ್ನು ಕಾಣುವ ವ್ಯಕ್ತಿಯನ್ನು ಹೆಡ್ಡ ಎಂದು ಹೇಳುತ್ತಾರೆ. ತನ್ನ ಒಳಗೆ ಇರುವವನನ್ನು ಇಲ್ಲವೆಂದು ಬಗೆದು, ಬೇರೆಯದನ್ನು ಸತ್ಯವೆಂದು ಬಗೆಯುವುದಕ್ಕೆ ಯಾವ ನಂಬುಗೆ ಆತನಿಗೆ ಎಡೆಮಾಡಿಕೊಟ್ಟಿದೆಯೋ? ಯಾವ ಮಾತನ್ನು ನಂಬಿ ಆತನು ತನ್ನ ಒಳಗನ್ನು ಮರೆಯುತ್ತಾನೆಯೋ? ತನ್ನ ಒಳಗನ್ನೇ ತಿಳಿಯಲು ಅರಿಯದವನು ಹೊರಗೆ ಪರಬ್ರಹ್ಮನಿದ್ದಾನೆ ಎಂದು ಬಲು ಭಕ್ತಿಯಲ್ಲಿ ಆತನಿಗೆ ತಲೆಬಾಗಿಸಿ ಏಳುವವನು ಮಹಾ ಮೂರ್ಖನೇ ಸರಿ ಎನ್ನುತ್ತಾರೆ ಅಂಬಿಗರ ಚೌಡಯ್ಯನವರು.

ನಾವೆಲ್ಲರೂ ಮಾಡುವುದು ಇದನ್ನೇ. ನಮ್ಮ ನಮ್ಮ ಒಳಗನ್ನು ನೋಡಿಕೊಳ್ಳುವ ಇಚ್ಛೆಯಾಗಲಿ, ಪುರಸೊತ್ತಾಗಲಿ ಇಲ್ಲದೆ, ಬಹಳ ಸುಲಭವಾದ ದಾರಿಯನ್ನು ಹುಡುಕಿಕೊಳ್ಳುತ್ತೇವೆ. ಅದೇ ಅವನನ್ನು ಹೊರಗೆ ಕಾಣುವುದು- ಮಹಾ ಮಹಾ ಗ್ರಂಥಗಳಲ್ಲಿ, ದೇವಸ್ಥಾನಗಳಲ್ಲಿ, ಸತ್ಸಂಗಗಳಲ್ಲಿ, ಭಜನೆಗಳಲ್ಲಿ , ಅನುಷ್ಠಾನಗಳಲ್ಲಿ, ವ್ರತಗಳಲ್ಲಿ, ಪೂಜೆಗಳಲ್ಲಿ ಇಂತಹ ಇನ್ನೂ ಹತ್ತಾರು ವಿಧಗಳಲ್ಲಿ ದೇವರನ್ನು ಹುಡುಕಿ ಹೋಗುತ್ತೇವೆ. ಅಲ್ಲಿ ದೊರೆಯುವ ಮೇಲು ನೋಟದ ವಿಚಿತ್ರವಾದ ಸುಖವನ್ನು ಮಹತ್ವದ್ದು ಎಂದುಕೊಳ್ಳುತ್ತೇವೆ. ದೇವರಿಗೆ ಹತ್ತಿರವಾಗಿದ್ದೇವೆ ಎಂದುಕೊಳ್ಳುತ್ತೇವೆ. ಆದರೆ ನಿಜವಾಗಿಯೂ ನಮಗೆ ಇಂತಹದುರಲ್ಲಿ ತೊಡಗಿಸುವುದು ಯಾವುದು? ಯಾವ ನಂಬುಗೆ ನಮ್ಮನ್ನು ಹೀಗೆ ಮಾಡಲು ಹಚ್ಚುತ್ತದೆ? ಆ ನಂಬುಗೆಗೆ ಆಧಾರವಾವುದು? ಆ ನಂಬುಗೆಯನ್ನು ನಾವು ಯಾವಗಲಾದರೂ ಪ್ರಶ್ನಿಸುತ್ತೇವೆಯೆ? ಇಲ್ಲ. ಏಕೆಂದರೆ, ನಾವು ಸೋಮಾರಿಗಳು. ನಮಗೆ ಸುಲಭವಾದ ದಾರಿ ಬೇಕು. ಇನ್ನೊಬ್ಬರು ಹೇಳಿದುದನ್ನು ನಂಬುವುದು ಬಹು ಸುಲಭ. ನಾವಾಗಿಯೇ ಕಂಡುಕೊಳ್ಳುವುದು ಬಲು ಕಷ್ಟ. ಏಕೆಂದರೆ ಅದಕ್ಕೆ ಪುರಸೊತ್ತು, ಆತ್ಮಬಲ ಮತ್ತು ಮನಸ್ಸಿನ ಪ್ರಶಾಂತತೆ ಬೇಕು. ಇದನ್ನು ಸಾಧಿಸುವುದು ಇಂದಿನ ಬಿಡುವಿರದ, ಅನೇಕ ಒತ್ತಡಗಳುಳ್ಳ ಅತ್ಯಂತ ವ್ಯಸ್ತ ಬದುಕಿನಲ್ಲಿ ಅಸಂಭವವೇ ಸರಿ. ಹಾಗಾದರೆ ಕೈ ಚೆಲ್ಲಿ ಕುಳಿತುಬಿಡುವುದೇ? ಅಥವಾ ಅದರಿಂದ ಹೇಗಾದರೂ ಮಾಡಿ ಬಿಡುವು ಮಾಡಿಕೊಳ್ಳುವುದೇ? ಎರಡೂ ನಮಗೆ ಬಿಟ್ಟದ್ದು. ಸದಾ ನಾವು ಸುಲಭದ ಉಪಾಯ ಹುಡುಕುತ್ತೇವೆ. ನಮ್ಮಲ್ಲೇ ಇರುವ ಆ ಘನವನ್ನು ತಿಳಿಯುವ ಬಗೆಯೇ ನಮಗೆ ಗೊತ್ತಿಲ್ಲ. ಅದಕ್ಕಾಗಿ ಪ್ರಯತ್ನವೂ ಮಾಡುವುದಿಲ್ಲ. ಅದನ್ನು ತಿಳಿದುಕೊಳ್ಳುವ ಇಚ್ಛೆಯೂ ಇಲ್ಲ. ಹೊರಗಿರುವ ಯವ್ವಾವುದಕ್ಕೋ ಪರಬ್ರಹ್ಮವೆಂದು ಹೆಸರಿಟ್ಟು ಅತಿ ಭಕ್ತಿಯಿಂದ ಶಿರವಿಟ್ಟು ನಮಿಸುತ್ತೇವೆ, ದೇವರನ್ನು ಪಡೆದೆವೆಂದು ತೃಪ್ತರಾಗುತ್ತೇವೆ. ಇಂತಹವರನ್ನೇ ಚೌಡಯ್ಯನವರು ಗಾವಿಲ, ಎಂದರೆ ಹೆಡ್ಡನೆಂದು ಕರೆದಿರುವರು. ಹೊರಗೆ ಏನೋ ಇರುವುದು, ಎಂದರೆ ಅದಕ್ಕೆ ಪ್ರತಿಯಾಗಿ ಒಳಗೆ ಏನೋ ಇದೆಯೆಂದಾಯಿತಲ್ಲವೇ? ಅಂದರೆ ಹೊರಗೆ ಮತ್ತು ಒಳಗೆ ಎಂಬ ಭೇದ ಭಾವ ಇದೆಯಂತಾಯಿತಲ್ಲವೆ? ಈ ಭೇದವನ್ನು, ಈ ಅಂತರದ ಕಂದಕವನ್ನು ಮುಚ್ಚುವುದೇ ಬಯಲು. ಈ ಕಂದಕವನ್ನು ಮುಚ್ಚುವ ಬಗೆ ಹೇಗೆ ಎಂದು ಅನ್ವೇಷಿಸುವುದು ಉಚಿತವಲ್ಲವೇ?

Vachana 67: Hididaachaarava bidadannakkara - Path of Self-realization

ಹಿಡಿದಾಚಾರವ ಬಿಡದನ್ನಕ್ಕರ,
ಎನ್ನ ಅರಿವ ಮರೆಯದನ್ನಕ್ಕರ

ಎನ್ನ ಮನವ ಸುಡದನ್ನಕ್ಕರ
ಎನ್ನ ಬೆಡಗಿನ ಗುರುವ ತೊರೆಯದನ್ನಕ್ಕರ
ಸುಸುರವೆಂತಪ್ಪುದೊ ಹೇಳಾ?
ಹೋಹ ಬಟ್ಟೆಯನರಿಯದನ್ನಕ್ಕರ ತಾನಾಗಬಾರದು ಕಾಣಾ ಅಜಗಣ್ಣ ತಂದೆ.

TRANSLITERATION

hiDidaacaarava biDadannakkara
enna ariva mareyadannakkara
enna manava suDadannakkara
enna beDagina guruva tereyadannakkara
susuraveMtappoudo hELaa?
hOha baTTeyanariyadannakkara taanaagabaaradu kaaNaa ajagaNNa taMde.

TRANSLATION (WORDS)

hiDida (cultivated, held) acaarava (custom, practice, tradition) biDadannakkara(without relinquishing)
enna (my) ariva(knowledge) mareyadannakkara(without forgetting)
enna (my)manava (mind) suDadannakkara (without burning)
enna (my) beDagina (astonishing, impressive) guruva(teacher) toreyadannakkara(without leaving)
susura(smooth, easy, unhindered) veMtappudO (how is it possible it to be) hELaa (please tell)?
hOha(going) baTTeyan(the path) ariyadannakkara(if you don't know, without knowing) taanaagabaaradu(not possible to know the self, not possible to become one with the self) kaaNaa (you see) ajagaNNa (Ajaganna) taMde (Father)

TRANSLATION

Without relinquishing the practices cultivated,
Without forgetting all I know,
Without burning my mind,
Without leaving my impressive teacher,
How easy it is to be, please tell me?
Without knowing the path to get there,
It is not possible to become one with the self, you see! Father (-like) Ajaganna!

COMMENTARY

This Vachana is from Sharane Muktaayakka, sister of Sharana Ajaganna. Muktaayakka considers her brother as her great teacher and guide and the utmost father-like reverence

for him and calls him taMde (father). At the death of Ajaganna, Muktaayakka was devastated and sorrowful at the loss of her great guide and teacher. Allama prabhu arrives to console her. He urges her realize that the body of Ajaganna is not really Ajaganna and the great teacher in him is now within Muktaayakka. This sets her in the path of thinking of true path for self-realization. This Vachana is a summary of her thoughts.

Muktaayakka introspects as to without giving up the practices cultivated, without forgetting everything one knows, without burning the mind, without leaving the teacher, and without the knowledge of the path, how easy is it to achieve self-realization? These thoughts seem contrary to the widely held beliefs that one should cultivate righteous practices, become knowledgeable, control the mind, and be close to the teacher in order progress in the journey of self-realization.

Our practices are dictated by the norms of the society. They become righteous when we follow the rules of right behavior. Muktaayakka implies that our practices should stretch beyond the limits of the current right practice definitions. The definitions change over time. We should be dynamic in in our practices to accommodate the changing environments we live in. We must internalize our practices and expand the definition of righteous to practices within. Along the same lines, our knowledge cannot be static. We must be knowledgeable beyond the requirements of mundane activities. We must probe within and develop the knowledge of the Lord within. Cultivating the mind to distinguish between the right and wrong and developing a mental attitude of sublimation is a better way than just controlling the mind. A controlled mind goes back to its original form as soon as the control is removed or altered. Guidance of a teacher is essential. It is not enough just to follow the teacher. Going beyond the guidance of the teacher to find and follow the teacher within is more appropriate for the seeker. In summary, finding the right path for self-realization is within us!

Let us be 'out of the box' to realize what is within!

KANNADA COMMENTARY

ಇದು ಗುಪ್ತ ಭಕ್ತ ಶರಣ ಅಜಗಣ್ಣನ ತಂಗಿ ಮುಕ್ತಾಯಕ್ಕನ ವಚನ. ಅಜಗಣ್ಣನು ದೇಹವನ್ನು ಬಿಟ್ಟಾಗ ಮುಕ್ತಾಯಕ್ಕ ಎದೆಯೊಡೆಯುತ್ತಾಳೆ. ತನಗೆ ಇನ್ನಾರು ಗತಿ? ಎಂದು ಅಪಾರವಾಗಿ ದುಃಖಿಸುತ್ತಾಳೆ. ತನ್ನ ಗುರುವೇ ಇಲ್ಲವಾದಾಗ ತನಗಾರು ದಾರಿ ತೋರುವವರು? ಎಂದು ಅಳುತ್ತಾಳೆ. ಆಗ ಅಲ್ಲಮ ಪ್ರಭುಗಳು ಅಲ್ಲಿಗೆ ಬಂದು ಅವಳನ್ನು ಕುರಿತು ಅಜಗಣ್ಣನ ದೇಹವೇ ಅಜಗಣ್ಣನಲ್ಲವೆಂದೂ, ತನ್ನ ಗುರುವು ತನ್ನಲ್ಲಿಯೆ ಇರುವನು, ಭ್ರಾಂತಿಯನ್ನು ತೊರೆಯದೆ ಇದೆಲ್ಲವೂ ತಿಳಿಯುವುದಿಲ್ಲ ಎಂದು ತಿಳಿಸುತ್ತಾನೆ. ಆಗ ಅವಳಿಗೆ ಜ್ಞಾನೋದಯವಾಗುತ್ತದೆ. ಇಲ್ಲಿ ತನ್ನ ತಾ ಅರಿಯಬೇಕಾದರೆ ಏನು ಮಾಡಬೇಕು ಎಂಬುದನ್ನು ಹೇಳುತ್ತಾಳೆ.

ಹಿಡಿದ ಆಚಾರವ ಬಿಡದೆ, ಎನ್ನ ಅರಿವನ್ನು ಮರೆಯದೆ, ನನ್ನ ಮನಸ್ಸನ್ನು ನಾಶಮಾಡದೆ, ನನ್ನ ಗುರುವನ್ನು ತೊರೆಯದೆ, ನಾನು ಎಲ್ಲಿಗೆ ಹೋಗುತ್ತಿದ್ದೇನೆ ಎನ್ನುವ ಅರಿವು ಇಲ್ಲದೆ, ನನ್ನ ನಾನರಿಯುವ ದಾರಿ ಹೇಗೆ ಸುಗಮವಾಗಬಲ್ಲುದು? ಎಂದು ತನ್ನನ್ನು ತಾನೇ ಕೇಳಿಕೊಳ್ಳುವ ಮೂಲಕ ನಮ್ಮ ಗಮನವನ್ನೂ ಆ ಕಡೆಗೆ ಸೆಳೆಯುತ್ತಿದ್ದಾಳೆ.

ಆಚಾರವನ್ನು ಬಿಡುವುದು, ತನ್ನ ಅರಿವು, ಜ್ಞಾನವನ್ನು ಮರೆಯುವುದು, ಮನಸ್ಸನ್ನು ನಾಶ ಮಾಡುವುದು, ಗುರುವನ್ನು ತೊರೆಯುವುದು, ಎಲ್ಲವೂ ನಕಾರಾತ್ಮಕ ವಿಷಯಗಳೇ ಆಗಿವೆ. ಸಾಧಾರಣವಾಗಿ ಬ್ರಹ್ಮಜ್ಞಾನವನ್ನು ಪಡೆಯಲು ಆಚಾರವಂತರಾಗಿ, ಅಧ್ಯಯನದಿಂದ ಜ್ಞಾನವನ್ನು ವೃದ್ಧಿಗೊಳಿಸಿ, ಮನಸ್ಸನ್ನು ಕಟ್ಟಿ ಹಾಕಿ, ಗುರುವಿನ ದಾಸನಾಗಬೇಕು ಎಂದು ಹೇಳುವುದನ್ನು ಎಲ್ಲರೂ ಬಲ್ಲರು. ಆದರೆ ಮುಕ್ತಾಯಕ್ಕ ಅದಕ್ಕೆ ವಿರುದ್ಧವಾದುದನ್ನು ಹೇಳುತ್ತಿದ್ದಾಳೆ. ಅದೇಕೆ ಎಂದು ನೋಡೋಣ.

ಆಚಾರವೆಂದರೆ, ಒಳ್ಳೆಯ ನಡತೆ, ಸಂಪ್ರದಾಯವನ್ನು ಪಾಲಿಸುವುದು ಎಂದರ್ಥ. ಭಕ್ತನು ಕೇವಲ ಒಳ್ಳೆಯ ನಡತೆಯನ್ನು ಆಚರಿಸಿದರೆ, ಸಂಪ್ರದಾಯವನ್ನು ಪಾಲಿಸಿದರೆ ಸಾಲದು. ಆತನು ಅದನ್ನು ಮೀರಿ ಬೆಳೆಯಬೇಕು. ಸಮಾಜದಲ್ಲಿ, ಯಾರೋ ಹಾಕಿಕೊಟ್ಟ ಸಂಪ್ರದಾಯವನ್ನು ಪಾಲಿಸಿಕೊಂಡು, ಒಳ್ಳೆಯ ವ್ಯಕ್ತಿಯಾಗಿ ಬಾಳುವುದು ಒಂದು ರೀತಿಯಿಂದ ಬಹಳ ಸುಲಭ. ಆದರೆ ಸಂಪ್ರದಾಯಗಳು ಕಾಲಾತೀತವಲ್ಲ. ಕಾಲಕ್ಕೆ ತಕ್ಕಂತೆ ಅವುಗಳಲ್ಲಿ ದೋಷಗಳುಂಟಾಗುತ್ತವೆ. ಆದ್ದರಿಂದ ನಿರಂತರವಾದ ಎಚ್ಚರ ಅಗತ್ಯವಾದದ್ದು. ಆಗ ಸಂಪ್ರದಾಯ, ಆಚಾರ, ಅರಿವು ಎಲ್ಲವೂ ಬಿಡಬೇಕಾಗುವುದು. ತನ್ನ ಅರಿವು, ಎಂದರೆ ತಾನು ಇಲ್ಲಿಯವರೆಗೆ ಗಳಿಸಿದ ಜ್ಞಾನ, ಜ್ಞಾನದಲ್ಲಿ ಎಚ್ಚರವಿಲ್ಲದಿದ್ದರೆ ಅದಕ್ಕೆ ಬೆಲೆಯಿಲ್ಲ. ಆ ಜ್ಞಾನವನ್ನು ತನ್ನದೆಂದು ತಿಳಿಯುವ ಅಹಂಕಾರವನ್ನೂ ಮರೆಯ ಬೇಕು. ಜ್ಞಾನವು ಯಾರೊಬ್ಬರ ಸ್ವತ್ತಲ್ಲ, ಅದು ಕೇವಲ ಜ್ಞಾನ.

ಮನಸ್ಸನ್ನು ಸುಡಬೇಕು ಎನ್ನುತ್ತಾಳೆ ಮುಕ್ತಾಯಕ್ಕ. ಮನಸ್ಸನ್ನು ಕಟ್ಟಿಹಾಕಿದರೆ ಸಾಲದೆ? ಎನ್ನುವ ಪ್ರಶ್ನೆ ಹುಟ್ಟುತ್ತದೆ. ಆದರೆ ಕಟ್ಟಿಹಾಕಿದ ಮನಸ್ಸು ಕಟ್ಟುಗಳನ್ನು ಬಿಚ್ಚಿದ ಕೂಡಲೆ ಹುಚ್ಚಾಪಟ್ಟೆ ಓಡುವುದು ಸಹಜ. ಮತ್ತು ಅದನ್ನು ಸದಾ ಕಟ್ಟಿಹಾಕುವುದು ಅಸಾಧ್ಯ ಹಾಗೂ ಅಸಹಜ. ಸುಟ್ಟುಹಾಕುವುದು ಹೇಗೆ? ಮನಸ್ಸಿನ ಬಯಕೆಗಳ ಇಡೀ ಪ್ರಕ್ರಿಯೆಯನ್ನು ಆಳವಾಗಿ ನೋಡಿದಾಗ ಅವುಗಳ ಉದಾತ್ತೀಕರಣವಾಗುವ ಸಾಧ್ಯತೆಯಿರುತ್ತದೆ. ಮನಸ್ಸನ್ನು ಉದಾತ್ತೀಕರಿಸಿದಾಗ ಮತ್ತೆ ಮನದಲ್ಲಿ ಆಸೆಗಳು ಹೊಗೆಯಾಡುವುದಿಲ್ಲ. ಅವು ಬೂದಿಯಾಗುತ್ತವೆ.

ಬೆಡಗಿನ ಗುರುವನ್ನು ತೊರೆಯಬೇಕೆನ್ನುವುದು ಏಕೆ? ಬೆಡಗಿನ ಗುರು ಎಂದರೆ ಯಾರು? ತನ್ನ ಮಾತಿನ ಚಮತ್ಕಾರದಿಂದ ಶಿಷ್ಯರನ್ನು ಮರುಳಾಗಿಸುವವ. ತನ್ನ ದೊಡ್ಡ ದೊಡ್ಡ ಮಾತುಗಳಿಂದ ಶಿಷ್ಯರನ್ನು ಆಕರ್ಷಿಸಿ ಹಿಡಿದಿಟ್ಟುಕೊಳ್ಳುವ ಗುರುವಿನಿಂದ ಯಾವ ಪ್ರಯೋಜನವೂ ಇಲ್ಲ. ಆತನ ಮಾತಿನ ಮೋಡಿಯಲ್ಲಿ ತಾನು ಎಲ್ಲಿಗೆ ಹೋಗುತ್ತಿದ್ದೇನೆ ಎನ್ನುವ ಅರಿವು ಇರುವುದಿಲ್ಲ ಶಿಷ್ಯನಿಗೆ. ಆತನು ಒಯ್ದತ್ತ ಹೋಗುವುದು ಪರಮ ಮೌಢ್ಯ. ಅದರಲ್ಲಿ ಸಮಯವೂ ನಷ್ಟವಾಗುತ್ತದೆ, ಆದ್ದರಿಂದ, ತನ್ನ ಮೌಢ್ಯವನ್ನು ಅರಿತುಕೊಳ್ಳಬೇಕು, ಅವನನ್ನು ತೊರೆದು ತಾನೇ ತನ್ನ ಗುರುವಾಗಬೇಕು. ತಾನೇ ತನ್ನದಾರಿಯನ್ನು ಕಂಡುಕೊಳ್ಳಬೇಕು. ಹಾಗಾಗದಿದ್ದರೆ ತನ್ನ ತಾನರಿಯುವ ದಾರಿಯು ಸುಗಮವಾಗದು. ಎನ್ನುತ್ತಾಳೆ ಮುಕ್ತಾಯಕ್ಕ.

Vachana 68: Harida Goniyalobba - Don’t fret over the small stuff

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕ್ಕಂಜಿ

ಕಳವೆಯೆಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥಾ

TRANSLITERATION

Harida gONiyalobba kaLaveya tuMbida
iruLella naDedanaa suMkakkaMji
kaLaveyella hOgi bariya gONi uLiyittu
aLimanada bhakti iMtaayittu raamaanaathaa

TRANSLATION (WORDS)

harida (torn) gONiyalu (in a sack)obba (a man, fellow)kaLaveya (paddy, rice) tuMbida (filled)
iruLella (whole night) naDedanu (kept walking) aa (that) suMkakkaMji (frightened of unavoidable tax)
kaLaveyella (all the paddy) hOgi (was lost, gone) bariya (only, empty) gONi (sack) uLiyittu (remained)
aLimanadavana (of a weak minded) bhakti (devotion) iMtaayittu (is like this) raamanaathaa (Lord of Rama)

TRANSLATION

A man filled paddy in a torn sack
And walked all night frightened of (unavoidable) tax
The entire paddy was lost and only the empty sack remained
Thus is the devotion of the weak minded, Oh, Lord of Rama!

COMMENTARY

In previous post Muktaayakka mentioned that the only way for self-realization is to go beyond the practices we are used to, forget all we know, burn the mind and go beyond what was taught by the teacher. In this Vachana, Sharana Devara Daasimayya comments on how we get distracted by trivia and fail to concentrate on developing the intense nature required to achieve the ultimate goal, with a beautiful example. The man fills the sack with grains he intends to transport, but gets fixated on avoiding the toll (tax) he is required to pay. He does not observe that the sack is torn and walks all night long (to avoid being seen by the tax collector). He ends up with an empty (torn) sack. The ultimate and proper goal should have been transporting the sack of grains to the destination. Paying tax was a trivial matter. The ultimate goal was lost, because of the attention paid to the trivial.

Daasimayya says that weak-minded devotion does not take us to the ultimate, the self-realization.

One should develop an intense frame of mind to escape from the influences of the mundane life. With such a frame of mind, one can examine the mundane occurings in their true light,

and see the inappropriateness of those, towards achieving a silent and dedicated mind. Such dedication is needed to achieve self-realization.

The Vachana provides a powerful message applicable to our daily lives also – "Don't fret over the small stuff"!

Let us get away from the pursuit of the trivial and focus on the Ultimate!

KANNADA COMMENTARY

ಇದು ಆದ್ಯ ವಚನಕಾರರಾದ ದೇವರ ದಾಸಿಮಯ್ಯನವರ ವಚನ. ಈ ವಚನ ಚಿಕ್ಕದಾದರೂ ಬಹಳ ಮಹತ್ವಪೂರ್ಣವಾದದ್ದು. ಹಿಂದೆ, ಆಚಾರವನ್ನು ಬಿಡದೆ, ತಾನು ಗಳಿಸಿದ ಜ್ಞಾನವನ್ನು ಮರೆಯದೆ, ಮನವನ್ನು ಸುಡದೆ, ಗುರುವನ್ನು ತೊರೆಯದೆ, ತನ್ನ ತಾ ಅರಿಯುವ ದಾರಿಯಿಲ್ಲ ಎಂಬುದನ್ನು ಹೇಳಿದ ಮುಕ್ತಾಯಕ್ಕನ ವಚನವನ್ನು ನೋಡಿದೆವು. ತನ್ನ ತಾನರಿದರೆ ಭಯಕ್ಕೊಳಗಾಗುವುದು, ಗೊಂದಲಗಳಲ್ಲಿ ತೊಳಲುವುದು, ಆಸೆ ಆಕಾಂಕ್ಷೆಗಳಿಂದ ಘಾಸಿಗೊಳ್ಳುವುದು, ರಾಗ ದ್ವೇಷಗಳಿಂದ ನುಜ್ಜುಗುಜ್ಜಾಗುವುದು, ದುಃಖದಲ್ಲಿ ಮುಳುಗುವುದು ಇತ್ಯಾದಿ ತಪ್ಪುತ್ತವೆ. ಆದರೆ ತನ್ನನ್ನು ತಾನು ಅರಿಯಲು ಒಂದು ವಿಶೇಷ ಮನಸ್ಥಿತಿಯ ಅವಶ್ಯಕತೆಯಿರುತ್ತದೆ. ಅದಕ್ಕೆ ಮನಸ್ಸು ಮೌನವಾಗಬೇಕು. ಮನಸ್ಸು ಮೌನವಾಗಲು, ಅದು ಈ ಸಂಸಾರದ ಆಗು ಹೋಗುಗಳನ್ನು, ವಿಚಾರದ ಯಾಂತ್ರಿಕವಾದ ರಚನಾಕ್ರಮವನ್ನು ಆಳವಾಗಿ ಗಮನಿಸಬೇಕಾಗುತ್ತದೆ. ಈ ಆಳವಾದ ಗಮನಿಸುವಿಕೆ ಅವುಗಳ ನಿಸ್ಸಾರತೆಯನ್ನು ಮನಗಾಣಿಸುತ್ತದೆ ಮತ್ತು ತನ್ನ ನಿಜವಾದ ಸ್ವರೂಪದೆಡೆಗೆ ಕರೆದೊಯ್ಯುತ್ತದೆ. ಆದರೆ ಮನಸ್ಸು ಮೌನವಾಗಲು ಬೇಕಾಗುವ ಗಮನಿಸುವಿಕೆಗೆ ನಿರಂತರವಾದ ದೃಢತೆ ಬೇಕಾಗುತ್ತದೆ. ದೃಢವಾದ ಮನಸ್ಸಿಲ್ಲದ ಕಾರಣ ನಾವು ತೊಳಲುವ ರೀತಿಯನ್ನು ಉದಾಹರಣೆಯ ಮೂಲಕ ಇಲ್ಲಿ ಹೇಳುತ್ತಿದ್ದಾರೆ ದಾಸಿಮಯ್ಯನವರು.

ಒಬ್ಬ ವ್ಯಕ್ತಿಯು ಒಂದು ಹರಿದ ಗೋಣಿಚೀಲದಲ್ಲಿ ಭತ್ತವನ್ನು ತುಂಬಿ, ಕೊಡಬೇಕಾದ ಸುಂಕ(tax)ವನ್ನು ತಪ್ಪಿಸಲು ರಾತ್ರಿಯಿಡೀ ನಡೆದು ಹೋಗುತ್ತಾನೆ. ಆದರೆ ಬೆಳಗಾಗುವುದರಲ್ಲಿ ಭತ್ತವೆಲ್ಲ ಸುರಿದುಹೋಗಿ ಕೇವಲ ಗೋಣಿ ಚೀಲ ಉಳಿಯುತ್ತದೆ. ಅನಿವಾರ್ಯವಾದ ಸುಂಕದಿಂದ ತಪ್ಪಿಸಿಕೊಳ್ಳುವುದಕ್ಕೆ ಹೋಗಿ ಮೂಲ ಸರಕನ್ನೇ ಕಳೆದುಕೊಳ್ಳುತ್ತಾನೆ. ಇದು ಮೂರ್ಖತನದ ಪರಮಾವಧಿ. ಆದರೆ ನಾವೆಲ್ಲ ಮಾಡುವುದು ಇದನ್ನೇ ಎಂದು ಪರೋಕ್ಷವಾಗಿ ಹೇಳುತ್ತಾರೆ ದಾಸಿಮಯ್ಯನವರು.

ನಿರಂತರವಾಗಿ ಮನಸ್ಸಿನ ದೃಢತೆಯನ್ನು ಹೊಂದುವುದು ಕಷ್ಟದ ಕೆಲಸವೇ. ಮನಸ್ಸು ಚಂಚಲವಾದದ್ದು. ಅದು ಬಹು ಬೇಗ ಅತ್ತಿತ್ತ ಹರಿದಾಡುತ್ತದೆ. ಅದನ್ನು ಅದು ಹೋದತ್ತ ಹರಿಯ ಬಿಡುವುದು ಬಹು ಸುಲಭ. ಆದರೆ ಅದು ಅತ್ತಿತ್ತ ಏಕೆ ಹರಿಯುತ್ತದೆ, ಅದರ ಹಿಂದೆ ಓಡುವುದರಿಂದ ಏನಾಗುವುದು? ಅದರಿಂದ ಸುಖ ದೊರಕುವುದೇ? ನಿಜವಾದ ಸುಖಯಾವುದು? ಎಂದೆಲ್ಲ ಆಳವಾಗಿ ಗಮನಿಸುವುದು, ಕಷ್ಟದ ಕೆಲಸ. ಆದರೆ ತನ್ನ ತಾನರಿಯುವ ಸಲುವಾಗಿ ಹಾಗೆ ಮಾಡಬೇಕಾದದ್ದು ಅನಿವಾರ್ಯ. ಆ ಪ್ರಯತ್ನಕ್ಕೆ ಅಂಜಿ ಅದರಿಂದ ದೂರ ಸರಿಯುವುದು ಸುಂಕಕ್ಕೆ ಅಂಜಿ ರಾತ್ರಿಯಲ್ಲಿ ನಡೆದು ಹೋಗುವವಂತೆ. ಅರಿವನ್ನು ಪಡೆಯುವ ಕಷ್ಟಕ್ಕಿಂತ ಅಜ್ಞಾನದಲ್ಲಿದ್ದು, ಕತ್ತಲೆಯಲ್ಲಿದ್ದು ನಾವು ಇದ್ದುದ್ದನ್ನು ಕಳೆದುಕೊಳ್ಳುತ್ತೇವೆ. ಇದು ಅಳಿಮನ ಅಂದರೆ ಚಂಚಲಮನದವನ ಲಕ್ಷಣ ಎನ್ನುತ್ತಾರೆ ದೇವರ ದಾಸಿಮಯ್ಯನವರು.

Vachana 69: Nishteyulla Bhakta - Commitment

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು?
ಅದು ಪಟ್ಟಣವೆಂದೆನಿಸುವುದು
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ
ಅದು ನಟ್ಟಡವಿ ಕಾಣಾ ರಾಮನಾಥ

TRANSLITERATION

niShTheyuLLa bhakta naTTaDaviyallirdaDEnu

Adu paTTaNaveMd enisuvudu

niShTheyillada bhakta paTTaNadalliddarU

adu naTTaDavi kaaNaa raamanaathaa

TRANSLATION (WORDS)

niShTheyuLLa (with devotion, commitment) bhakta (devotee) naTTaDaviyallirdaDEnu

(even if he lives in the forest, wilderness)

Adu (that) paTTaNaveMdu (like a town) enisuvudu (appears)

niShTheyillada (without devotion, without commitment) bhakta (devotee) paTTaNadalliddarU (even if he lives in the town) adu (that will be) naTTaDavi (a forest) kaaNaa raamanaathaa (you see Ramanatha)

TRANSLATION

A committed devotee, even when he is in the midst of wilderness, feels he is in a town!

An uncommitted devotee, even when he is in the midst of town, feels he is in a forest!

you see, Lord Ramanatha!

COMMENTARY

In previous Vachana Sharana Devara Dasimayya stressed the importance of keeping the ultimate goal of self-realization in mind and not swayed by trivial pursuits. In this Vachana he stresses the commitment needed to become a true devotee. He uses the forest to represent fear and the town to represent security. A forest is the home of wild animals looking for food. It does not provide shelter from rain and Sun. It makes one always be on the lookout for some undesirable threat. The town on the other hand provides the shelter and safety of being around civilized fellow beings. It provides a more conducive environment to concentrate on one's goals. Dasimayya says that a committed devotee overcomes the fear of forest and feels at ease and as though he is in the security of being in a town. An uncommitted devotee on the other hand is always afraid of something even when he is in the midst of a town. He is implying that the fear and the secure feeling originate from within the individual. They are not the effects of the surroundings and the environment one is in. When we look into ourselves with complete truthfulness, honesty and sincerity a number of subtle issues open up. When we commit ourselves with the complete knowledge to handle these issues in a positive manner the fear vanishes. Dasimayya is not saying that we should ignore the wild animals trying to attack us – we certainly have to take action to protect ourselves. But, when the goal is clear and we are committed to the goal, the obstacles go away.

The Vachana is addressing the devotional aspects of the individuals. Devotion is usually interpreted narrowly as 'bhakti' or devotion to God. The real interpretation should be devotion to any aspect of our lives. The Vachana is calling for giving our one hundred percent to each endeavor we take on.

Let us be 100% committed in what all we do!

KANNADA COMMENTARY

ಹಿಂದಿನ ವಚನದಲ್ಲಿ ವ್ಯಕ್ತಿ ಸುಂಕಕ್ಕೆ ಅಂಜುವುದನ್ನು ಹೇಳಿದರು ದಾಸಿಮಯ್ಯನವರು. ಇಲ್ಲಿಯೂ ಅದೇ ಭಾವವನ್ನು ಮುಂದುವರಿಸುತ್ತಿದ್ದಾರೆ. ಅಂಜಿಕೆಯು ಮನಷ್ಯನನ್ನು ನುಜ್ಜುಗುಜ್ಜಾಗಿಸುತ್ತದೆ. ಅದು ಅವನನ್ನು ದಿಕ್ಕುಗೆಡಿಸುತ್ತದೆ ಆದರೆ ನಿಷ್ಠೆಯುಳ್ಳವನಿಗೆ ಅದು ಕಾಡುವುದಿಲ್ಲ.

ಈ ವಚನದಲ್ಲಿ ಅಡವಿಯು ಭಯವನ್ನು ಪ್ರತಿನಿಧಿಸುತ್ತದೆ, ಮತ್ತು ಪಟ್ಟಣವು ಭದ್ರತೆಯನ್ನು ಪ್ರತಿನಿಧಿಸುತ್ತದೆ. ಅಡವಿಯಲ್ಲಿ ಕ್ರೂರ ಮೃಗಗಳು ಇರುತ್ತವೆ, ಆಹಾರಕ್ಕಾಗಿ ಹೊಂಚುಹಾಕುತ್ತಿರುತ್ತವೆ, ನೆಲೆಸಲು ಮನೆಯಿರುವುದಿಲ್ಲ, ಗಾಳಿ ಮಳೆ ಮತ್ತು ಬಿಸಿಲುಗಳಿಂದ ರಕ್ಷಣೆಯಿರುವುದಿಲ್ಲ. ಹೀಗಾಗಿ ಅರಣ್ಯದಲ್ಲಿ ವಾಸಿಸುವವನು ಸದಾ ಭಯಕ್ಕೆ ತುತ್ತಾಗುತ್ತಾನೆ. ಇದಕ್ಕೆ ವಿರುದ್ಧವಾಗಿ ಪಟ್ಟಣದಲ್ಲಿ ವಾಸಿಸುವವನಿಗೆ ಮನೆಯ ಆಶ್ರಯವಿರುತ್ತದೆ, ಕಾಡು ಪ್ರಾಣಿಗಳ ಕಾಟವಿರುವುದಿಲ್ಲ, ಅಕ್ಕಪಕ್ಕದವರ, ಬಂಧು ಬಾಂಧವರ ಬೆಂಬಲವಿರುತ್ತದೆ, ಹೀಗಾಗಿ ಅದು ಭದ್ರತೆಯನ್ನು ಕೊಡುತ್ತದೆ. ಆದರೆ ಭದ್ರತೆಯಾಗಲಿ ಅಥವಾ ಭಯವಾಗಲಿ ಬಾಹ್ಯ ಪರಿಸರದ ಮೇಲೆ ಅವಲಂಬಿಸುವುದಿಲ್ಲ. ಅವು ಮಾನವನ ಅಂತರಂಗದಲ್ಲಿರುತ್ತವೆ. ನಿಷ್ಠೆ ಮತ್ತು ದೃಢತೆಯಿದ್ದಾಗ ವ್ಯಕ್ತಿ ಯಾವುದೇ ಪರಿಸರದಲ್ಲಿರಲಿ ಆತನ ನೆಮ್ಮದಿಗೆ ಧಕ್ಕೆ ಬರುವುದಿಲ್ಲ. ನಟ್ಟಡವಿಯಲ್ಲಿದ್ದರೂ ಆತ ಭಯಪಡುವುದಿಲ್ಲ. ಅದು ಆತನ ಮಟ್ಟಿಗೆ ಪಟ್ಟಣದಲ್ಲಿರುವಂತೆಯೇ ಇರುತ್ತದೆ. ಮತ್ತು ನಿಷ್ಠೆ ಇಲ್ಲದ ವ್ಯಕ್ತಿ ಪಟ್ಟಣದಲ್ಲಿದ್ದರೂ ನಟ್ಟಡವಿಯಲ್ಲಿರುವವನಂತೆ ಭಯದಲ್ಲಿಮುಳುಗಿರು ತ್ತಾನೆ ಎನ್ನುತ್ತಾರೆ ದೇವರ ದಾಸಿಮಯ್ಯರು.

ಇಲ್ಲಿ ನಿಷ್ಠೆ ಎಂದರೇನು ಮತ್ತು ಯಾವುದರ ಬಗ್ಗೆ ನಿಷ್ಠೆ ಎಂಬ ಪ್ರಶ್ನೆ ಹುಟ್ಟುತ್ತದೆ. ನಿಷ್ಠೆ ಎಂದರೆ ದೃಢತೆ, ಸ್ಥಿರತೆ. ಅದಕ್ಕೆ ಭಕ್ತಿ ಎಂಬ ಅರ್ಥವೂ ಇದೆ. ಆದರೆ ನಾವು ಭಕ್ತಿಯನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತೇವೆ. ಭಕ್ತಿ ಎಂದರೆ ಧಾರ್ಮಿಕ ಆಚರಣೆಯಲ್ಲಿ ತೊಡಗಿಸಿಕೊಂಡಿರುವುದು ಎಂದುಕೊಳ್ಳುತ್ತೇವೆ. ಆದರೆ ಅದು ನಿಜವಾದ ಭಕ್ತಿಯಲ್ಲ. ಭಕ್ತಿ ಎಂದರೆ ಸತ್ಯಕ್ಕಾಗಿ ನಮ್ಮನ್ನೇ ನಾವು ದೃಢವಾಗಿ ಮುಡಿಪಾಗಿಡುವುದು. ನಮ್ಮ ಮನಸ್ಸು ವರ್ತಿಸುವ ಬಗೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ನಿಷ್ಠೆ. ನಮ್ಮೆಲ್ಲ ಭಯ ಆತಂಕಗಳಿಗೆ ನಮ್ಮ ಮನಸ್ಸು, ವಿಚಾರಗಳೇ ಕಾರಣ. ಅದು ಯೋಚಿಸುವ, ವರ್ತಿಸುವ, ಪ್ರತಿಕ್ರಿಯಿಸುವ ರೀತಿಯೇ ಕಾರಣ. ನನಗೆ ಯಾವ ಭಯವೂ ಇಲ್ಲ ಎಂದು, ನಾವು ಅಂದುಕೊಳ್ಳಬಹುದು. ಆದರೆ ಅದು ಒಂದು ದೊಡ್ಡ ಸುಳ್ಳು. ನನ್ನ ಪದವಿಗೆ ಧಕ್ಕೆ ಬರುತ್ತದೆ ಎಂದೋ, ನನ್ನ ಸುಖ ಕಳೆದು ಹೋಗುತ್ತದೆ ಎಂತಲೋ, ನನ್ನ ಪ್ರಿಯರಾದವರಿಗೆ ಕಷ್ಟ ಬರುತ್ತದೆಂತಲೋ ಇನ್ನೂ ಏನೇನೋ ಭಯಗಳು ನಮಗೆ ಗೊತ್ತಿಲ್ಲದಂತೆ ನಮ್ಮಲ್ಲಿ ಮನೆ ಮಾಡಿರುತ್ತವೆ. ಆದರೆ ನಿಷ್ಠೆ ಯಿಂದ ಇವುಗಳನ್ನು ಗಮನಿಸಿದಾಗ, ನಾವು ಪ್ರಾಮಾಣಿಕತೆಯಿಂದ ನಡೆದುಕೊಂಡಾಗ, ನಾವು ಆಳವಾಗಿ ಅರ್ಥಮಾಡಿಕೊಂಡಾಗ ಅನೇಕ ಸೂಕ್ಷ್ಮ ವಿಷಯಗಳು ನಮ್ಮೆದುರಿಗೆ ತೆರೆದುಕೊಳ್ಳುತ್ತವೆ. ನಮ್ಮ ಇರವನ್ನು ಅದಕ್ಕಾಗಿ ಮುಡಿಪಾಗಿ ಇರಿಸಿದಾಗ ನಮ್ಮ ಭಯಗಳು

ಇಲ್ಲವಾಗುವ ಸಂಭವ ಉಂಟು. ಆಗ ವ್ಯಕ್ತಿಯ ಮೇಲೆ ಪರಿಸರದ ಪರಿಣಾಮ ವಾಗುವುದಿಲ್ಲ. ಅಂತರಂಗದಲ್ಲಿಯ ಸ್ಪಷ್ಟತೆ ಮತ್ತು ನಿರಾತಂಕತೆಯು, ಬಾಹ್ಯ ಪರಿಸರವನ್ನು ಹೊಸ ದೃಷ್ಟಿಯಿಂದ ನೋಡುವಂತೆ ಮಾಡುತ್ತದೆ.

Vachana 70: Nishteyembudu - Devotion paves the way

ನಿಷ್ಠೆಯೆಂಬುವದು ತನುವಿನ ಪ್ರಕೃತಿಯ ಕೆಡಿಸುವುದು
ನಿಷ್ಠೆಯೆಂಬುವದು ಮನದ ಮಾಯೆಯನಳಿವುದು
ನಿಷ್ಠೆಯೆಂಬುವದು ಜ್ಞಾನದ ಬಟ್ಟೆಯ ತೋರುವುದು
ನಿಷ್ಠೆಯೆಂಬುವದು ಅಖಂಡೇಶ್ವರ ಲಿಂಗವನೊಲಿಸುವುದು

TRANSLITERATION

niShTheyeMbuvadu tanuvina prakRutiya keDisuvudu
niShTheyeMbuvadu manada maayeyanaLivudu
niShTheyeMbuvadu j~jaanada baTTeya tOruvudu
niShTheyeMbuvadu akhaMDEshvaraliMgavanolisuvudu

TRANSLATION (WORDS)

niShThey (devotion) eMbuvadu (so called) tanuvina (of the body) prakRutiya (nature, characteristics, tendencies) keDisuvudu (destroys)
niShThey (devotion) eMbuvadu (so called) manada (of mind) maayeyanu (illusion)aLivudu (destroys)
niShThey (devotion) eMbuvadu (so called) j~jaanada (of self-knowledge) baTTeya (way) tOruvudu (shows)
niShThey (devotion) eMbuvadu (so called) akhaMDEshvaraliMgavanu (Lord of the Universe) olisuvudu (persuades, comes up on)

TRANSLATION

Devotion destroys the tendencies of the body!
Devotion destroys the illusion of the mind!
Devotion shows the way for self-knowledge!
Devotion persuades the Lord of the Universe!

COMMENTARY

In this Vachana Sharana Shanmuka Swamy stresses the concepts of devotee and devotion portrayed in the last two postings, saying that devotion destroys the common tendencies of the body, destroys the illusion of the mind, shows the way for self-realization and enables one to reach the Lord.

The word 'niShThey' is commonly translated as 'devotion'. Devotion usually means devotion to God or Bhakti. We are accustomed to providing a form for God and worshipping Him through various rituals and routine beliefs. We assume that being involved in ritualistic practices is true devotion or bhakti. This and the previous two Vachanas take us away from this narrow interpretation of devotion or bhakti. Devotion is the commitment to do whatever we do without attention to gain or loss from it, without the goal of satisfying someone else but ourselves, and with immense honesty to ourselves. When we examine within and perform with such devotion we unearth the subtleties which erase the difference between right and wrong, remove the illusions of mind and take us away from the mundane tendencies of the body. This is self-realization, the way to reach the Lord. This mode of intense devotion removes all our expectations from the Lord or the fellow beings and paves the way for self-realization.

Let us examine ourselves with immense honesty towards becoming intense devotees!

KANNADA COMMENTARY

ಇದು ಷಣ್ಮುಖಸ್ವಾಮಿಗಳ ವಚನ. ಅವರೂ ಕೂಡ ದೇವರದಾಸಿಮಯ್ಯನವರ ಭಾವವನ್ನೇ ಒತ್ತಿ ಹೇಳುತ್ತಿದ್ದಾರೆ. ಇಲ್ಲಿ ನಿಷ್ಠೆ ಎಂಬುದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಬಹು ಮುಖ್ಯವಾದದ್ದು. ಅದನ್ನು, ನಾವು ತಿಳಿದುಕೊಂಡಂತೆ ಭಕ್ತಿ ಎಂದು ಅರ್ಥೈಸುವುದು ತಪ್ಪಾಗುತ್ತದೆ. ಏಕೆಂದರೆ, ನಾವು, ಮೂಢನಂಬಿಕೆ ಅಥವಾ ಧರ್ಮಾಚಾರವನ್ನೇ ಭಕ್ತಿಯೆಂದು ತಿಳಿದುಕೊಂಡಿದ್ದೇವೆ. ದೇವರ ಒಂದು ರೂಪವನ್ನು ನಂಬಿ, ಅದಕ್ಕೆ ತಕ್ಕಂ ತೆ ಧಾರ್ಮಿಕ ಅನುಷ್ಠಾನವನ್ನು ಕೈಗೊಳ್ಳುವುದು ಭಕ್ತಿ ಎನಿಸಿದೆ. ಇಂತಹ ಭಕ್ತಿಯಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದಲೇ ಇಲ್ಲಿ ಭಕ್ತಿಯ ಬದಲು ನಿಷ್ಠೆಗೆ ಮಹತ್ವವನ್ನು ಕೊಟ್ಟಿದ್ದಾರೆ. ಹಾಗಾದರೆ ನಿಷ್ಠೆ ಎಂದರೇನು? ಅಂದರೆ, ನಾವು ಏನೇ ಮಾಡಿದರೂ ಅದನ್ನು ಯಾವುದೇ ಲಾಭ ನಷ್ಟಗಳ ಚಿಂತೆಯಿಲ್ಲದೆ, ಯಾರನ್ನಾದರೂ ಒಲಿಸುವ ದೃಷ್ಟಿಯಿಂದಲ್ಲದೆ, ಕೇವಲ ಪ್ರಾಮಾಣಿಕತೆಯಿಂದ ಸಂಪೂರ್ಣವಾಗಿ ಗಮನವಿತ್ತು ಮಾಡುವುದು ಎಂದು ಹೇಳಬಹುದು. ಅಖಂಡೇಶ್ವರನ ಒಲಿಸುವ ಸಂದರ್ಭದಲ್ಲಿ, ಯಾವ ನಿರೀಕ್ಷೆಯನ್ನೂ ಇಟ್ಟುಕೊಳ್ಳದೆ ನಮ್ಮನ್ನು ನಾವು ಗಮನಿಸುವುದು. ಅಂದರೆ, ಗಮನಿಸುವುದರಿಂದ ನನಗೆ ಇಂತಿಂತಹದು ಲಭ್ಯವಾಗಬೇಕು, ದೇವರು ಸಿಗಬೇಕು ಎಂದೆಲ್ಲ ಆಶಿಸದೆ ಕೇವಲ ಗಮನಿಸುವುದು. ಈ ರೀತಿಯಾಗಿ ನಿಷ್ಠೆಯಿಂದ ಗಮನಿಸುವುದರಿಂದ ಸಾಮಾನ್ಯವಾಗಿ ಕಂಡುಬರದ ಅನೇಕ ಸೂಕ್ಷ್ಮ ವಿಷಯಗಳು ಗಮನಕ್ಕೆ ಬರುತ್ತವೆ. ಈ ಸ್ಥಿತಿಯಲ್ಲಿ ಗಮನಿಸುವವ ಮತ್ತು ಗಮನಿಸಿದ ವಿಷಯವೆಂಬ ಭೇದವಿರುವುದಿಲ್ಲ. ಆದ್ದರಿಂದ ಇದು ತಪ್ಪು ಅಥವಾ ಇದು ಸರಿ ಎಂಬಂತಹ ಭಾವಗಳು ಇರುವುದಿಲ್ಲ. ಇದ್ದದ್ದು ಇದ್ದಂತೆ ತೋರಿಬರುವುದು. ಇದರಿಂದ ಎಲ್ಲ ರೀತಿಯ ಭೇದ ಭಾವಗಳು, ತನುಗುಣಗಳು ಅಳಿಯುತ್ತವೆ, ಮನದಲ್ಲಿಯ ಭ್ರಾಂತಿಗಳು ಅಳಿಯುತ್ತವೆ, ಆ ನಿಷ್ಠೆಯೇ ಜ್ಞಾನದ ದಾರಿಯನ್ನು ತೋರುವುದರ ಮೂಲಕ ಲಿಂಗವು ಒಲಿಯುವಂತೆ ಮಾಡುತ್ತದೆ ಎನ್ನುತ್ತಾರೆ ಷಣ್ಮುಖ ಸ್ವಾಮಿಗಳು. ಅಂದರೆ, ಯಾವುದು ನಿಜವಾದ ಜ್ಞಾನ ಎಂಬುದರ ಅರಿವಾಗುತ್ತದೆ ಎನ್ನುತ್ತಾರೆ. ಆದ್ದರಿಂದ ನಾವು ನಿಷ್ಠೆಯನ್ನು ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ನಾವು ಹರಿದ ಗೋಣಿಯಂತಾಗುತ್ತೇವೆ, ಪಟ್ಟಣದಲ್ಲಿದ್ದೂ ಭಯಕ್ಕೆ ತುತ್ತಾಗುತ್ತೇವೆ.

Vachana 71: Kurupi Surupiya – Intense devotion

ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೆ?
ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೆ?
ಧನ ಉಳ್ಳವರ ನೆನೆದಡೆ ದರಿದ್ರ ಹೋಹುದೆ?
ಪುರಾತರ ನೆನೆದು ಕೃತಾರ್ಥರಾದೆವೆಂಬರು;
ತಮ್ಮಲ್ಲಿ ಭಕ್ತಿ ನಿಷ್ಠೆಯಿಲ್ಲದವರ ಕಂಡಡೆ ಮೆಚ್ಚನು ನಮ್ಮ ಗುಹೇಶ್ವರನು

TRANSLITERATION

kurUpi surUpiya nenedaDe surUpiyappane?
aa surUopi kurUpiya nenedaDe kurUpiappane?
dhana uLLavara nenedaDe daridra hOhude?
Puraatara nenedu kRutaartharaadeveMbaru;
Tammalli bhakti niShTheyilladavara kaMDaDe meccanu namma guhEshvaranu

TRANSLATION (WORDS)

kurUpi (an ugly person) surUpiya (a good looking person)nenedaDe (if thinks of) surUpiyappane? (will ugly person become good looking?)
aa surUpi (that good looking person)kurUpiya (an ugly person) nenedaDe (if thinks of) kurUpiyappane?(will become ugly?)
Dhana uLLavara (wealthy people)nenedaDe (by thinking of) daridra (poverty) hOhude? (will disappear?)
Puraatara (earlier/past devotees) nenedu (thinking of, by remembering) kRutaartharaadeveMbaru; (they say they are accomplished;)
Tammalli (in one's own self) bhakti (devotion) niShThe (being one with, observation, commitment,dedication) illadavara (those without) kaMDaDe (if seen, if comes to know) meccanu (will not approve) namma (our) guhEshvaranu (Lord of Caves)

TRANSLATION

Does an ugly person become good looking by thinking of a good looking person?
Does a good looking person become ugly by thinking of an ugly person?
Will the poverty disappear by thinking of wealthy people?
They say they are accomplished just by thinking of past devotees!
Lord Guheshvara will not approve of those without being one with their own selves!

COMMENTARY

In this Vachana Allama Prabhu uses two important words: bhakti (devotion) and niShThe (commitment/dedication). He stresses that the devotion should eventually take the intense form to make the devotee becoming one with his own self. Bhakti which begins with belief/faith has to turn into commitment & self enquiry. One should examine oneself for the grounds of his devotion, without which devotion will beignorance. Just as an ugly person does not become good looking just by thinking about a good looking person and vice versa, and one does not get out of poverty just by thinking of wealthy individuals, a devotee does not become an accomplished one just by thinking of past accomplished devotees. One has to follow the rigorous path that the past devotees followed to accomplish what they did. An individual on the path of self-realization must get away from the mundane want and need pitfalls, must stay strong while facing life's pains and pleasures, and stay dedicated to the exploration of the self with utmost commitment. Allama prabhu says that the Lord will not approve of those without the firmness and belief in one self. The firmness and belief simply mean the honest observation of one self. Such observation requires the stabilization of mind (i.e. not allowing the mind to wander), perseverance and intense practice. Thus, committed

devotion is the path for self-realization.
Although the Vachana speaks of self-realization, the message is equally valid for all the activities we are involved in our daily lives. Success in our activities is only brought about by intense devotion to the activity.

Let us develop the honesty and integrity to commit fully to whatever we do!

KANNADA COMMENTARY

ವಚನ ಸಾಹಿತ್ಯವನ್ನು ಓದುವಾಗ ಈ ನಿಷ್ಠೆಯ ಬಗ್ಗೆ ಅನೇಕ ವಚನಕಾರರ ವಚನಗಳು ಸಿಗುತ್ತವೆ. ಅವರೆಲ್ಲರೂ ಭಕ್ತಿಗಿಂತಲೂ ನಿಷ್ಠೆಗೆ ಹೆಚ್ಚು ಮಹತ್ವ ಕೊಟ್ಟದ್ದು ಕಂಡುಬರುತ್ತದೆ. ಇಲ್ಲಿ ನಿಷ್ಠೆಯ ಬಗ್ಗೆ ಅಲ್ಲಮ ಪ್ರಭುಗಳ ಇನ್ನೊಂದು ವಚನವಿದೆ. ಈ ವಚನದಲ್ಲಿ ಅವರು ಕೆಲವು ಉದಾಹರಣೆಗಳೊಂದಿಗೆ ನಿಷ್ಠೆಯ ಮಹತ್ವವನ್ನು ಹೇಳುತ್ತಾರೆ.

ಪುರಾತರನ್ನು, ಎಂದರೆ, ಹಿಂದೆ ಆಗಿಹೋದ ಶರಣರನ್ನು ನೆನೆದು ನಾವು ಕೃತಾರ್ಥರಾದೆವು ಎಂದುಕೊಳ್ಳುವವರು ಅನೇಕರಿದ್ದಾರೆ. ಆದರೆ ಅದು ಹೇಗೆ ಸಾಧ್ಯ? ಕುರೂಪಿಯೊಬ್ಬನು ಸ್ಫುರದ್ರೂಪಿಯನ್ನು ನೆನೆಯುತ್ತಿದ್ದರೆ ಆತನು ಸುರೂಪಿಯಾಗಲು ಸಾಧ್ಯವೆ? ಹಾಗೆಯೇ ಸುರೂಪಿಯೊಬ್ಬನು ಕುರೂಪಿಯನ್ನು ನೆನೆದರೆ ಕುರೂಪಿಯಾಗಲು ಸಾಧ್ಯವೆ? ಧನಿಕರನ್ನು ನೆನೆಯುವ ಮಾತ್ರದಿಂದಲೇ ದಾರಿದ್ರ್ಯ ತೊಲಗುವುದೆ? ತನ್ನಲ್ಲಿಯೇ ನಿಷ್ಠೆಯಿಲ್ಲದವನನ್ನು ಗುಹೇಶ್ವರನು ಮೆಚ್ಚುವುದಿಲ್ಲ ಎನ್ನುತ್ತಾರೆ ಅಲ್ಲಮಪ್ರಭುಗಳು. ಆದ್ದರಿಂದ ನಿಷ್ಠೆಯು ಭಕ್ತಿಗಿಂತಲೂ ಮುಖ್ಯವಾದದ್ದು. ಇಲ್ಲಿ ಕೊಟ್ಟಿರುವ ಉದಾಹರಣೆಗಳಿಂದಲೇ, ಭಕ್ತಿಯಲ್ಲಿ , ಭಾವನಾತ್ಮಕತೆ ಮತ್ತು ಮೌಢ್ಯವಿದೆ ಎನ್ನುವುದು ತಿಳಿಯುತ್ತದೆ. ಸುರೂಪಿಯನ್ನು ನೆನೆಯುವುದರಿಂದ ತಾನೂ ಸುರೂಪಿಯಾಗುತ್ತೇನೆ ಎಂದುಕೊಳ್ಳುವುದು ಮೌಢ್ಯ. ಅದು ಸಾಧ್ಯವಿಲ್ಲ. ಕೇವಲ ಹಿಂದಿನ ಭಕ್ತರನ್ನು ನೆನೆದು ತಾನು ಕೃತಾರ್ಥನಾಗುತ್ತೇನೆ ಎನ್ನುವುದು ಸಹ ಹಾಗೆಯೇ. ಅವರನ್ನು ಕೇವಲ ನೆನೆಯದೆ ಅವರು ಬಾಳಿದ ರೀತಿಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅಲ್ಲಮರು ಇಲ್ಲಿ ಭಕ್ತಿನಿಷ್ಠೆ ಎಂಬ ಪದವನ್ನು ಬಳಸಿದ್ದಾರೆ. ಆರಂಭದಲ್ಲಿ ಭಕ್ತಿಯು ಬೇಕಾಗುತ್ತದೆ. ಅಂದರೆ ಒಳ್ಳೆಯದರಲ್ಲಿ ನಂಬಿಕೆ ಬೇಕಾಗುತ್ತದೆ. ಆದರೆ ಅದು ಮುಂದುವರಿದು ನಿಷ್ಠೆಯಾಗಬೇಕು. ಭಕ್ತಿಯಲ್ಲಿಯೇ ಉಳಿದರೆ ಅದು ನಿಂತ ನೀರಾಗುತ್ತದೆ, ಮೂಢ ನಂಬಿಕೆಯಾಗುತ್ತದೆ.

ತಮ್ಮಲ್ಲಿಯೇ ತಮಗೆ ನಂಬಿಕೆಯಿಲ್ಲದವರನ್ನು, ತಮ್ಮಲ್ಲಿ ದೃಢತೆಯಿಲ್ಲದವರನ್ನು ಗುಹೇಶ್ವರನು ಮೆಚ್ಚನು ಎನ್ನುತ್ತಾರೆ ಅಲ್ಲಮ ಪ್ರಭುಗಳು. ಸೂಕ್ಷ್ಮವಾಗಿ ಗಮನಿಸಿದಾಗ, ತಮ್ಮಲ್ಲಿ ದೃಢತೆ ಮತ್ತು ನಂಬಿಕೆಯಿಲ್ಲದವರು ಮೌಢ್ಯಕ್ಕೆ ಒಳಗಾಗುತ್ತಾರೆ ಎನ್ನುವುದು ತಿಳಿದುಬರುತ್ತದೆ. ತಮ್ಮಲ್ಲಿ ದೃಢತೆಯಿರುವುದು ಎಂದರೇನು? ಮನಸ್ಸನ್ನು ಪ್ರಾಮಾಣಿಕವಾಗಿ ಗಮನಿಸುವುದರಲ್ಲಿ ತೊಡಗಿಸುವುದು. ಇದಕ್ಕೆ ಆತ್ಮಬಲ ಬೇಕು. ಮನಸ್ಸು ಬಹು ಬೇಗ ಅತ್ತಿತ್ತ ಹರಿದಾಡುತ್ತದೆ. ಎಲ್ಲೆಲ್ಲಿಯೋ ಜಾರಿ ಹೋಗುತ್ತದೆ. ಇಲ್ಲವೆ ಮೂರ್ತವಾದದ್ದೇನನ್ನೋ ಬಯಸುತ್ತದೆ. ಆದರೆ ಅಮೂರ್ತವಾದ ಆ ಸತ್ಯವನ್ನು ಮೂರ್ತದಲ್ಲಿ ಪಡೆಯುತ್ತೇನೆ ಎನ್ನುವುದು ಕೂಡ ಮೂರ್ಖತನವೆ. ಆ ಅಮೂರ್ತದಲ್ಲಿ ದೃಢತೆಯನ್ನು ಕಾಪಾಡಿಕೊಳ್ಳುವುದು ಕಷ್ಟ. ಆದರೆ ದೃಢತೆಯಿಲ್ಲದೆ ಏನನ್ನೂ ಸಾಧಿಸಲಾಗುವುದಿಲ್ಲ. ಅಂತಹವನನ್ನು ಗುಹೇಶ್ವರನು ಮೆಚ್ಚುವುದಿಲ್ಲ. ದೃಢತೆಯಿಲ್ಲದವನು ಹರಿದ ಗೋಣಿಯಂತೆ. ಅಲ್ಲಿ ಇದ್ದದ್ದೆಲ್ಲವೂ ಕಳೆದುಹೋಗುತ್ತದೆ.

Vachana 72: Olidu Olisikollabeku - Love to be loved

ಒಲಿದು ಒಲಿಸಿಕೊಳ್ಳಬೇಕು, ಒಲಿದಲ್ಲದೆ ಇಲ್ಲ.

ಹಲವು ಕೊಂಬೆಗೆ ಹಾರದಿರು ಮರುಳೇ

ಅಟ್ಟಿ ನೋಡುವ, ಮುಟ್ಟಿ ನೋಡುವ, ತಟ್ಟಿ ನೋಡುವ, ಒತ್ತಿ ನೋಡುವ,

ಅಟ್ಟಿದಡೆ, ಒತ್ತಿದಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ ಮಹಾಲಿಂಗ ಕಲ್ಲೇಶ್ವರ

TRANSLITERATION

Olidu olisikoLLabEku, olidallade illa.
Halavu oMbegaLige haaradiru maruLE.

**aTTi nODuva, muTTi nODuva, taTTi nODuva, otti nODuva,
aTTidaDe, ottidaDe niShTheya biDadirdaDe tannanIva mahaliMga kallEshvara**

TRANSLATION (WORDS)

olidu (love) olisikoLLabEku, (to be loved) olidallade (without loving) illa (not) halavu (many) koMbege (branches) haaradiru (don't jump) maruLE (you fool) aTTi (expel) nODuva (he will see) muTTi (touch) nODuva (he will see) taTTi (knock) nODuva (he will see), otti (squeeze, press) nODuva (he will see) aTTidaDe (if expelled) ottidaDe (if squeezed) niShTheya (commitment) biDadirdaDe (if not abandoned) tannanIva (will bestow himself) mahaaliMga kallESvara (Lord Mahalinga kalleshvara)

TRANSLATION

**Love to be loved, without loving it cannot be.
Do not jump from branch to branch, you fool!
He will expel and see, He will touch and see, He will knock and see, He will squeeze and see.
If commitment is not abandoned when expelled and squeezed, Lord Mahalinga kalleshvara will bestow Himself!**

COMMENTARY

This Vachana from Sharana Haavinahaala kallayya stresses the importance of 'commitment' (niShThe) to reach the Lord (i.e. realize self). He says one has to love (others) to be loved (by them), without loving it is not possible to receive love from others. We have roughly translated the word 'Olidu' as 'love'. In this Vachana's context it could be 'faith, belief, affection, single mindedness'. Essentially, one has to have a deep love for the Lord to receive His love. Kallayya compares the state of our mind to a monkey constantly jumping from one branch to the other and cautions against it, implying focusing single mindedly on the Truth (the Lord). When our commitment is not deep enough, we feel that the Lord tests us by expelling, touching, knocking and squeezing. This is how a non-committed devotee attributes all occurings in life to the Lord. But, if one does not abandon commitment, Kallayya says that the Lord will bestow Himself on the devotee.

Essentially, one has to have a deep love (faith) in the Truth (the Lord). Only through this deep unconditional love without any expectations, and commitment one can realize the Truth. Without the deep commitment, our mind tends to stray towards other branches of desires forgetting the main goal. Even when one tends to return to the main goal, lack of constant commitment will only result in undesired consequences. We even feel that the Lord is posing these problems on us. The key then is to develop an unwavering commitment to seek the Truth. With such commitment, all the so called undesired consequences lose their effect on us and the Lord bestows Himself.

Let us Love to be Loved!

KANNADA COMMENTARY

ನಿಷ್ಠೆಯ ಬಗ್ಗೆ ಇನ್ನೊಂದು ವಚನ ಹಾವಿನಹಾಳ ಕಲ್ಲಯ್ಯನವರದ್ದು. ಇಲ್ಲಿ ಆ ಸತ್ಯಕ್ಕೆ ಒಲಿದು ಒಲಿಸಿಕೊಳ್ಳುವ ನಡುವಿನ ಪ್ರಕ್ರಿಯೆಯ ಬಗ್ಗೆ ಬಹಳ ಸೊಗಸಾಗಿ ಹೇಳಿದ್ದಾರೆ. ಮೊದಲು ಆ ಸತ್ಯದ ಬಗ್ಗೆ ನಮ್ಮಲ್ಲಿ ಒಲವು ಇರಬೇಕು. ಆ ಒಲವಿನ ಮೂಲಕವೇ ಅದನ್ನು ಒಲಿಸಿಕೊಳ್ಳಲು ಸಾಧ್ಯವೇ ಹೊರತು ಇಲ್ಲದಿದ್ದರೆ ಅದು ನಮಗೆ ಒಲಿಯುವುದಿಲ್ಲವೆನ್ನುತ್ತಾರೆ ಕಲ್ಲಯ್ಯನವರು. ಆ ಸತ್ಯವನ್ನು ಕಂಡುಕೊಳ್ಳಬೇಕು ಎನ್ನುವ ಬಯಕೆ ಎಲ್ಲರ ಮನದಲ್ಲೂ ಇರಬಹುದು. ಆದರೆ ಅದು ಆಳವಾಗಿರುವುದಿಲ್ಲ. ಆದ್ದರಿಂದ ಬಹು ಬೇಗ ಅದು ಬೇರೆ ಕಡೆಗೆ ತಿರುಗಿಕೊಳ್ಳುತ್ತದೆ. ಮನಸ್ಸು ಬಯಕೆಯ ಇತರ ಕೊಂಬೆಗಳಿಗೆ ಹಾರುತ್ತದೆ, ಮತ್ತು ಮೂಲ ಆಶಯವನ್ನೇ ಮರೆತುಬಿಡುತ್ತದೆ. ಆಗಾಗ ಅದು ಹಿಂತಿರುಗಿ ಮೂಲ ಆಶಯಕ್ಕೆ ಬಂದರೂ ಅಲ್ಲಿ ನಿರಂತರವಾದ ನಿಷ್ಠೆ ಯಿರುವುದಿಲ್ಲ. ಇಂತಹ ಸ್ಥಿತಿಯಲ್ಲಿ ನಮಗೆ ನಾನಾ ತೊಂದರೆಗಳು ಬರುತ್ತವೆ. ಅವೆಲ್ಲ ನಮ್ಮ ಮನಸ್ಸಿನ ಅಲೆಯುವಿಕೆಯ ಕಾರಣದಿಂದಲೇ ಉಂಟಾಗುವಂತಹವು. ಆದರೆ, ನಮ್ಮಲ್ಲಿ ಆ ನಿಷ್ಠೆಯಿಲ್ಲದ್ದರಿಂದ ಆ ದೇವರೇ ನಮಗೆ ಕಷ್ಟಕೊಡುತ್ತಿದ್ದಾನೆ ಎನ್ನಿಸುತ್ತದೆ. ಅದನ್ನೇ ಇಲ್ಲಿ ಕಲ್ಲಯ್ಯನವರು "ಅಟ್ಟಿ ನೋಡುವ" ಎಂದು ಹೇಳುತ್ತಿದ್ದಾರೆ. ಆ ಸತ್ಯದಲ್ಲಿ ನಿಷ್ಠೆಯಿಲ್ಲದಿದ್ದಾಗ ಆ ದೇವರ ಮೇಲೆಯೇ ನಮಗೆ ಕೋಪಬರುತ್ತದೆ. ಆತನು ನಮ್ಮನ್ನು ದೂರ ಹೋಗುವಂತೆ ಮಾಡುತ್ತಾನೆ. ಇನ್ನು ಕೆಲವುಸಲ ಮುಟ್ಟಿ ನೋಡುತ್ತಾನೆ. ಎಂದರೆ ಪ್ರೀತಿಯನ್ನು ತೋರುತ್ತಾನೆ. ನಮ್ಮನ್ನು ಮುಟ್ಟಿ ತನ್ನ ಇರುವಿಕೆಯ ಅರಿವುಂಟುಮಾಡುತ್ತಾನೆ. ಆದರೆ ಆ ಸ್ಪರ್ಶ ಬಹು ಸೂಕ್ಷ್ಮವಾಗಿರುತ್ತದೆ. ನಿಷ್ಠೆಯಿಲ್ಲದಿದ್ದರೆ ಅದನ್ನು ಗುರುತಿಸುವುದು ಕಷ್ಟವೇ. ನಮ್ಮನ್ನು ಹೊಡೆದೂ ನೋಡುತ್ತಾನೆ, ಒತ್ತಿಯೂ ನೋಡುತ್ತಾನೆ. ಇವುಗಳು ನಿಷ್ಠೆಯಿಲ್ಲದಿದ್ದರೆ ಅನುಭವಕ್ಕೆ ಬರುವ ಸ್ಥಿತಿಗಳು. ಈ ಎಲ್ಲವುಗಳ ನಡುವೆಯೂ ಸತ್ಯದ ಬಗ್ಗೆ ಒಲವು ನಿರಂತರವಾಗಿ ಕಾಪಾಡಿಕೊಳ್ಳುವುದು ಮುಖ್ಯ. ಇಲ್ಲಿ ಒಲವು ಎನ್ನುವ ಪದ ಮುಖ್ಯವಾದದ್ದು. ಯಾವುದೇ ಸ್ವಾರ್ಥವಿಲ್ಲದೆ ಇರುವುದೇ ಒಲವು, ಲಾಭದ ಆಸೆಯಿಲ್ಲದಿರುವುದು, ನಿರ್ವ್ಯಾಜ ಪ್ರೇಮ. ದೇವರು ನನಗೆ ಇಂತಿಂತಹುದನ್ನು ದಯಪಾಲಿಸುತ್ತಾನೆ ಎಂದುಕೊಂಡು ಮಾಡುವುದು ನಿಷ್ಠೆಯಲ್ಲ. ಆದ್ದರಿಂದಲೇ ಇಲ್ಲಿ ಕಲ್ಲಯ್ಯನವರು ನಕಾರಾತ್ಮಕವಾದ ವಿಷಯಗಳನ್ನೇ " ಅಟ್ಟಿ, ತಟ್ಟಿ, ಒತ್ತಿ ನೋಡುವ'" ಎಂದು ಹೇಳುತ್ತಿದ್ದಾರೆ. ಇಷ್ಟೆಲ್ಲ ನಡೆದ ಮೇಲೂ ಆತನ ಬಗ್ಗೆ ಒಲವು ತೋರಿದರೆ ಆತನು ತನ್ನನ್ನೇ ಭಕ್ತನಿಗೆ ಕೊಟ್ಟುಕೊಳ್ಳುತ್ತಾನೆ ಎನ್ನುತ್ತಾರೆ. ಏಕೆಂದರೆ ನಿಷ್ಠೆಯಿದ್ದಾಗ 'ಆತನು ತನ್ನಿಂದ ಬೇರೆ, ನನ್ನನ್ನು ಅಟ್ಟುತ್ತಿದ್ದಾನೆ, ತಟ್ಟುತ್ತಿದ್ದಾನೆ, ಒತ್ತುತ್ತಿದ್ದಾನೆ ' ಎನ್ನುವ ಭಾವಗಳಿಗೆ ಅಲ್ಲಿ ಸ್ಥಾನವೇ ಇರುವುದಿಲ್ಲ. ಅಲ್ಲಿ ಅಭಿನ್ನ ಭಾವ ಮನೆಮಾಡಿರುತ್ತದೆ.

Vachana 73: Kombeyamelana Markatadante - My Wandering Mind

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು
ಕೂಡಲಸಂಗಮದೇವಾ, ನಿಮ್ಮ ಚರಣ ಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ

TRANSLITERATION

koMbeya mElaNa markaTadaMte laMghisuvudenna manavu
niMdalli nilalIyadenna manavu

hoMdidalli hoMdalIyadenna manavu
kUDaladaMgamadEvaa, nimma caraNakamaladalli bhramaranaagirisu nimma dharma

TRANSLATION (WORDS)

koMbeya (of the branch) mElaNa (on top) markaTanaMte(like a monkey) laMghisuvudu (jumps) enna (my) manavu (mind)
niMdalli (in one place) nilalIyadu (won't stay put) enna (my) manavu(mind)
hoMdidalli (established, structured) hoMdalIyadu (doesn't stay established, structured) enna(my) manavu(mind)
kUDalasaMgamadEvaa (Lord Kudalasanagamadeva)
nimma (your) caraNakamaladalli (in lotus feet) bhramaranaagirisu (make me a bee and keep) nimma dharma (your dharma, something that you have to do)

TRANSLATION

My mind jumps around like a monkey on the branch (of a tree)!
My mind won't stay put in one place!
My mind does not stay structured where it was structured!
Oh! Lord of Meeting Rivers, make me into a bee and keep me on your lotus feet, it is what you have to do (your Dharma)!

COMMENTARY

In previous Vachanas we addressed the importance of devotion (Bhakti) turning into intense commitment (Nishtey) as the way for self-realization. Our wandering mind comes in the way of developing such commitment. In this Vachana, Basavanna compares the mind to a monkey hopping from branch to branch on a tree. Indeed, our senses provide newer attractions for our mind on a continuous basis. The mind chases them until the novelty of those attractions wear out or a much fancier attraction pops up. We get disappointed when the chased attraction does not yield the pleasure or the wealth expected of it. In general, it becomes hard to keep the mind focused on the ultimate. Basavanna says that his attempts to keep the mind controlled have not been successful and he requests the Lord to convert him into a bee and make him stay put at His lotus feet. Basvanna emphasizes that it is Lord's dharma to make him stay focused on the Ultimate. Basavanna is expressing complete faith in the Lord. The nature of the Bee is to hop from flower to flower collecting the nectar. It is said that once the Bee tastes the nectar of the Lotus, it does not stray from that flower.

Complete faith in the Lord is considered as the first step in the path of self-realization. Sharanas supported a six fold path for realizing the ultimate, known as Shatstala (Shat = six, Stala = stage). The first stage is known as Bhakta Stala (the stage of faith and intense devotion). The subsequent stages are: Maheswara Stala (strong will and discipline), Prasadi Stala (All Grace), Pranalinga Stala (Presence of the Ultimate in Life breath), Sharana Stala (total surrender), and Aikya Stala (Sublime Union, merging with Him).

Let us conquer the mind monkey!

KANNADA COMMENTARY

ಹಿಂದಿನ ವಚನಗಳಲ್ಲಿ ತನ್ನ ತಾನರಿಯಬೇಕಾದರೆ, ಬಯಲ ಭಾವ ಅಳವಡಬೇಕಾದರೆ, ನಿಷ್ಠೆ ಬಹು ಮುಖ್ಯವಾದದ್ದು ಎಂಬುದನ್ನು ನೋಡಿದೆವು. ಆದರೆ ಈ ನಿಷ್ಠೆಗೆ ಅಡ್ಡಿಯಾಗುವುದು ಎಲ್ಲೆಲ್ಲಿಗೋ ಹಾರುವ ನಮ್ಮ ಮನಸ್ಸು. ಇಲ್ಲಿ ಬಸವಣ್ಣನವರು ಅದರ ಮರ್ಕಟ ಸ್ವಭಾವವನ್ನು ತಿಳಿಸುತ್ತಿರುವರು.

ಮಂಗನನ್ನು ಗಮನಿಸಿದವರೆಲ್ಲರಿಗೂ ತಿಳಿದೇ ಇದೆ ಅದು ಒಂದೆಡೆ ಇರುವುದಿಲ್ಲವೆಂಬುದು. ಅದು ಕೊಂಬೆಯಿಂದ ಕೊಂಬೆಗೆ ಹಾರುತ್ತಲೇ ಇರುತ್ತದೆ, ಹೊಸ ಹೊಸ ಆಕರ್ಷಣೆಗೆ ಒಳಗಾಗುತ್ತಲೇ ಇರುತ್ತದೆ. ಆದರೆ ಆ ಆಕರ್ಷಣೆ ಕೂಡ ತಾತ್ಕಾಲಿಕವಾದದ್ದು. ಅದೇ ರೀತಿಯಾಗಿ ಮನವು ಸಹ ಹೊಸ ಹೊಸ ಆಕರ್ಷಣೆಗೆ ಒಳಗಾಗಿ ಕೆಲ ಹೊತ್ತು ಅವುಗಳ ಬೆನ್ನು ಹತ್ತಿ ಅಲೆದಾಡುತ್ತದೆ. ಬಹು ಬೇಗ ಆ ಆಕರ್ಷಣೆ ಇಲ್ಲವಾಗುತ್ತದೆ. ಮನಸ್ಸು ಅತೃಪ್ತಿಯಿಂದ ಮತ್ತೆ ಹೊಸದರ ಹಿಂದೆ ಓಡುತ್ತದೆ. ಮನಬಂದಂತೆ ಹಾರಾಡಿ ಘಾಸಿಗೊಳ್ಳುತ್ತದೆ. ಹಾಗಾದಾಗ ಕಷ್ಟಪಟ್ಟು ಅದನ್ನು ವ್ಯವಸ್ಥಿತಗೊಳಿಸಿ ಒಂದೆಡೆ ಇರುವಂತೆ ಮಾಡಿದರೂ ಅದು ಅಲ್ಲಿ ಇರುವುದಿಲ್ಲ. ತನ್ನ ಹಾರಾಟದ ಸ್ವಭಾವವನ್ನು ಬಿಡುವುದಿಲ್ಲ. ಇಂದ್ರಿಯಗಳಿಗೆ ಪಕ್ಕಾಗಿ ನಾನಾಕಡೆ ಓಡುತ್ತದೆ. ಅದನ್ನು ಒಂದೆಡೆ ಇರಿಸಲು ಹೆಣಗಾಡಿ ಸೋತು ಕೊನೆಗೆ ಕೂಡಲಸಂಗಮನನ್ನೇ ಮೊರೆ ಹೋಗುತ್ತಾರೆ. ಆತನಿಗೆ ಶರಣಾಗಿ ಆತನ ಚರಣಕಮಲದಲ್ಲಿ ಭ್ರಮರನಾಗಿರಿಸು ಎಂದು ಕೇಳಿಕೊಳ್ಳುತ್ತಾರೆ. ಭ್ರಮರವು ಅನೇಕ ಹೂವುಗಳಿಗೆ ಎರಗುತ್ತದೆ. ಆದರೆ ಅದಕ್ಕೆ ತೃಪ್ತಿ ಸಿಗುವುದಿಲ್ಲ. ಆದರೆ ಅದು ಒಮ್ಮೆ ಕಮಲದ ಮಧುವನ್ನು ರುಚಿ ನೋಡಿದ ಮೇಲೆ ತೃಪ್ತಿಗೊಂಡು ಅಲ್ಲಿಯೇ ಇದ್ದು ಬಿಡುತ್ತದೆ. ಅದೇ ರೀತಿಯಾಗಿ ತನ್ನ ಮನಸ್ಸೆಂಬ ಭ್ರಮರನನ್ನು ದೇವರ ಚರಣಕಮಲದಲ್ಲಿ ನಿಲ್ಲು ವಂತೆ ಮಾಡೆಂದು ಕೇಳುತ್ತಿದ್ದಾರೆ ಬಸವಣ್ಣನವರು.

ವೀರಶೈವ ಧರ್ಮದಲ್ಲಿ ಷಟ್ಸ್ಥಲ ಎಂಬ ಒಂದು ಸಿದ್ಧಾಂತವಿದೆ. ಷಟ್ಸ್ಥಲವೆಂದರೆ ಆರು ಸೋಪಾನಗಳೆಂದು ಹೇಳಬಹುದು. ಭಕ್ತನು ದೇವರೊಂದಿಗೆ ಒಂದಾಗುವವರೆಗೆ ಕರೆದೊಯ್ಯುವ ಸೋಪಾನಗಳು. ಅವುಗಳಲ್ಲಿ ಮೊದಲನೆಯದು ಭಕ್ತ ಸ್ಥಲ. ವಚನಕಾರರ ವಚನಗಳನ್ನು, ಅವುಗಳಲ್ಲಿ ವ್ಯಕ್ತವಾದ ಭಾವಕ್ಕನುಗುಣವಾಗಿ ಷಟ್ಸ್ಥಲದ ವಚನಗಳಲ್ಲಿ ವಿಭಾಗಿಸಿದ್ದಾರೆ. ಈ ಮೇಲಿನ ವಚನವು ಭಕ್ತಸ್ಥಲದ ವಚನವಾಗಿದೆ. ಇಲ್ಲಿ ದೇವರಲ್ಲಿ ಭಕ್ತಿ ಇದ್ದು ವಿಶ್ವಾಸವಿರುತ್ತದೆ. ಆತನು ತನ್ನನ್ನು ಕಾಪಾಡುತ್ತಾನೆ ಎಂದು ನಂಬಿ ಭಕ್ತನು ಆತನನ್ನು ಪ್ರಾರ್ಥಿಸುತ್ತಾನೆ. ಅದನ್ನೇ ಇಲ್ಲಿ ಕಾಣಬಹುದು. ಅಧ್ಯಾತ್ಮದ ದಾರಿಯಲ್ಲಿ ಇದು ಮೊದಲನೆ ಮೆಟ್ಟಿಲು.

Vachana 74: Vedangala Hinde Hariyadiru – Intense Need to Know!

ವೇದಂಗಳ ಹಿಂದೆ ಹರಿಯದಿರು ಹರಿಯದಿರು!

ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು!

ಪುರಾಣಗಳ ಹಿಂದೆ ಬಳಸದಿರು ಬಳಸದಿರು!

ಆಗಮಂಗಳ ಹಿಂದೆ ತೊಳಲದಿರು ತೊಳಲದಿರು!

ಸೌರಾಷ್ಟ್ರ ಸೋಮೇಶ್ವರನ ಕೈ ಹಿಡಿದು,

ಶಬ್ದ ಜಾಲಂಗಳಿಗೆ ಬಳಲದಿರು ಬಳಲದಿರು!

TRANSLITERATION

vEdaMgaLa hiMde hariyadiru hariyadiru!
shaastraMgaLa hiMde suLiyadiru suLiyadiru!
puraaNagaLa hiMde baLasadiru baLasadiru!
aagamaMgaLa hiMde toLaladiru toLaladiru!

souraaShtra sOmEswhvarana kai hiDidu,
shabda jaalaMgaLige baLaladiru baLaladiru!

TRANSLATION (WORDS)
vEdaMgaLa (the vEdaas) hiMde (behind) hariyadiru (don't drift) hariyadiru(don't drift)
shaastraMgaLa (the rituals) hiMde (behind) suLiyadiru (don't swirl)suLiyadiru(don't swirl)
puraaNagaLa(mythology) hiMde(behind) baLasadiru(don't go around) baLasadiru(don't go around)
aagamaMgaLa(sacraments)hiMde(behind) toLaladiru(don't suffer) toLaladiru(don't suffer)
souraaShtra sOmEswhvarana (Sourashtra someshvara's) kai (hand) hiDidu (holding)
shabda (words)jaalaMgaLige(in the net of) baLaladiru(don't tire out, don't be exhausted) baLaladiru (don't tire out, don't be exhausted)

TRANSLATION

Don't drift behind Vedas (Sacred texts), Don't drift!
Don't swirl behind the rituals, Don't swirl!
Don't run around Mythology, Don't run around!
Don't suffer behind Sacraments, Don't suffer!
Holding the hand of Lord Sourashtra someshvara,
Don't tire out in the net of words, Don't tire out!

COMMENTARY
In previous posting Basavanna compared the human mind to a monkey jumping from branch to branch on a tree. Once we realize that controlling the mind is a tough task, we resort to finding ways to assist us in this task. We start exploring wise sayings of our sages, prescriptions in our sacred texts, examples from Mythology, and rituals and methods of worship described in our Sacraments to find ways for mind control and self-realization. In this Vachana Sharana Aadayya says that such efforts are not really fruitful. He advocates escaping from these nets of words holding the hand (with the help) of the Lord. Aadayya is not saying that we should stop perusing the above venues in our efforts to develop the mind control. He is implying that a quick reading of the texts, a routine practice of rituals, etc. would not help. The only way to gain clear understanding of the truth is to have an intense desire for self enquiry.

As an example, Kenopanishat (a part of Veda) says "Yacchkshusha na pashyati ena chakshomshi pashyati, tadeva Brahma tvam viddhi nedam yadidamupasate" meaning "Brahma is not what everyone worships as Brahma, it is not what the eyes see, but it is that which sees those eyes!" What is addressed here is the concept of enabling the eyes to see Brahma. This can be understood only when there is honest questioning and intense desire crops up within us to understand the truth. There are several verses of this type in Vedas describing the Brahma. These verses are gifts of our sages to us. They are important and valid contributions. A mere memorizing of these verses and chanting them just make us stuck in the net of words. What is needed is an intense desire and corresponding effort to understand the truth.

We memorize 1001 names of the Lord and chant them repeatedly, most of the time not even knowing the meaning or reason for these names, hoping that that would bring our mind under control. We routinely pour 100 gallons of milk and honey on Lord Ganesha's head without even thinking twice about the significance of this act, because it is a prescribed way of worship from our books and customs. Such routine activity does not take us to Him. According to Aadayya, an intense, burning desire to know, and understand the self is needed to reach the Lord.

Let us not run behind the scriptures blindley!

KANNADA COMMENTARY

ಮನಸ್ಸು ಮಂಗನಂತೆ ಕೊಂಬೆಯಿಂದ ಕೊಂಬೆಗೆ ಹಾರುತ್ತಿರುವಾಗ ಅದನ್ನು ನಿಯಂತ್ರಿಸಲು ನಾನಾ ಉಪಾಯಗಳನ್ನು ಮಾಡುತ್ತಾನೆ ಮಾನವ. ಋಷಿ ಮುನಿಗಳು ಏನು ಹೇಳಿದ್ದಾರೆ, ನಮ್ಮ ವೇದ, ಶಾಸ್ತ್ರ ಗ್ರಂಥಗಳು ಏನು ಹೇಳಿವೆ ಎಂದು ನೋಡುತ್ತಾನೆ. ವೇದ ಆಗಮಗಳನ್ನು ಓದಿದರೆ ಅದನ್ನು ಸಾಧಿಸಬಹುದು ಎಂಬ ನಂಬಿಕೆಯಿಂದ, ಪುರಾಣಗಳ ಉದಾಹರಣೆಗಳನ್ನು ತಿಳಿದುಕೊಂಡರೆ ಸುಲಭವಾಗಬಹುದು ಎಂಬ ಆಸೆಯಿಂದ, ಆಗಮಗಳಲ್ಲಿ ಹೇಳಿದ ಪೂಜಾ ವಿಧಾನಗಳನ್ನು ಅನುಸರಿಸಿದರೆ ಮನಸ್ಸು ಒಂದೆಡೆ ನಿಲ್ಲುವುದೆಂಬ ತಲೆಬುಡವಿಲ್ಲದ ಭರವಸೆಯಿಂದ ಬಹು ಬೇಗ ಅಂತಹ ವಿಧಿಗಳಲ್ಲಿ ತೊಡಗಿಕೊಳ್ಳುತ್ತಾನೆ. ಅಂತಹವರನ್ನು ಕಂಡು ಆದಯ್ಯನವರು ಅವೆಲ್ಲ ಕೇವಲ ಶಬ್ದ ಜಾಲಂಗಳು ಎಂದು ಹೇಳುತ್ತಾರೆ. ಇದು ಸತ್ಯವಾದ ಮತ್ತು ಬಲು ದಿಟ್ಟವಾದ ಮಾತು? ಅದು ಹೇಗೆ ಎಂದು ನೋಡೋಣ.

"ಯಚ್ಚಕ್ಷುಷಾ ನ ಪಶ್ಯತಿ ಎನ ಚಕ್ಷೂಂಷಿ ಪಶ್ಯತಿ, ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೆ"
ಎಂದು ವೇದದ ಭಾಗವಾದ ಕೇನೋಪನಿಷತ್ತು ಹೇಳುತ್ತದೆ. ಎಂದರೆ "ಎಲ್ಲರೂ ಯಾವುದನ್ನು ಬ್ರಹ್ಮವೆಂದು ಉಪಾಸಿಸುತ್ತಾರೋ ಅದು ಬ್ರಹ್ಮವಲ್ಲ, ಯಾವುದನ್ನು ಈ ಕಣ್ಣು ಗಳು ನೋಡುತ್ತವೆಯೋ ಅದು ಬ್ರಹ್ಮವಲ್ಲ, ಯಾವುದರಿಂದ ಕಣ್ಣುಗಳನ್ನು ನೋಡಲ್ಪಡುತ್ತದೆಯೋ ಅದು ಬ್ರಹ್ಮ" ಎಂದರ್ಥ. ಆದರೆ ಇದು ಅರ್ಥವಾಗುವುದು, "ಬ್ರಹ್ಮ" ಎಂದರೆ ಏನು ಎಂಬ ಪ್ರಾಮಾಣಿಕವಾದ ಪ್ರಶ್ನೆ, ಮತ್ತು ಅದನ್ನು ಅರಿಯಬೇಕೆಂಬ ಆಳವಾದ ಹಂಬಲ ನಮ್ಮಲ್ಲಿ ಹುಟ್ಟಿದಾಗ ಮಾತ್ರ ಸಾಧ್ಯ. ಆ ಬ್ರಹ್ಮನ ಬಗ್ಗೆ ಇಂತಹ ಅನೇಕ ಮಂತ್ರಗಳು ವೇದಗಳಲ್ಲಿ ಕಂಡುಬರುತ್ತವೆ. ಆ ಮಂತ್ರಗಳು ಋಷಿಗಳ ಕಾಣ್ಕೆಯ ಫಲ. ಆ ಕಾಣ್ಕೆ ಮುಖ್ಯ. ಆ ಕಾಣ್ಕೆ ಇಲ್ಲದಿದ್ದಲ್ಲಿ ಅವು ಕೇವಲ ಶಬ್ದಗಳಾಗಿ ಉಳಿಯುತ್ತವೆ. ವೇದ ಉಪನಿಷತ್ತುಗಳ ವಾಕ್ಯಗಳನ್ನು ಕೇವಲ ಬಾಯಿಪಾಠಮಾಡಿ ಪುನರುಚ್ಚರಿಸುತ್ತಿದ್ದರೆ ಯಾವ ಲಾಭವೂ ಇಲ್ಲ. ಆದ್ದರಿಂದಲೇ ಅವುಗಳ ಹಿಂದೆ ಹರಿಯದಿರು ಎನ್ನುತ್ತಾರೆ ಆದಯ್ಯ ಶರಣರು.
ಶಾಸ್ತ್ರಗಳಲ್ಲಿ ಅನೇಕ ಪೂಜಾವಿಧಿಗಳನ್ನು, ಸಿದ್ಧಾಂತಗಳನ್ನು ವಿವರಿಸಿದೆ. ಅವುಗಳು ಪ್ರತೀಕತ್ಮಾಕ (symbolic) ವಾದವುಗಳು. ಅವುಗಳ ಹಿಂದಿರುವ ಅರ್ಥವನ್ನು ಮನನ ಮಾಡಿ ಪ್ರತಿಸಲವೂ ಅವುಗಳನ್ನು ಪಾಲಿಸುವಾಗ ಮಾತ್ರವಲ್ಲದೆ ಸದಾ ಅವುಗಳನ್ನು ಪ್ರಶ್ನಿಸುತ್ತ ಅವುಗಳ ಆಳವಾದ ಅರ್ಥವನ್ನು ಕಂಡುಕೊಳ್ಳಲು ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಮನಸ್ಸನ್ನು ಪೂರ್ತಿಯಾಗಿ ಅದರಲ್ಲಿ ತೊಡಗಿಸಿದರೆ ಮಾತ್ರ ಅದರಿಂದ ಲಾಭವಾಗ ಬಹುದು. ಆದರೆ ಅದನ್ನು ಶಾಸ್ತ್ರಾಗಮಗಳಲ್ಲಿ ಹೇಳಿದೆ ಎಂಬ ಕಾರಣಕ್ಕಾಗಿ ಯಾಂತ್ರಿಕವಾಗಿ ಅನುಸರಿಸಿದರೆ ಯಾವ ಉಪಯೋಗವೂ ಇಲ್ಲ. ಆದ್ದರಿಂದ ಅವುಗಳ ಹಿಂದೆ ಸುಳಿಯಬೇಡ ಎನ್ನುತ್ತಾರೆ.
ಪುರಾಣಗಳ ಕಥೆಗಳಲ್ಲಿ ಬರುವ ಪಾತ್ರಗಳ ಉದಾಹರಣೆಗಳು ಬಹಳ ಮನೋಹರವಾಗಿವೆ. ಯಾವ ಯಾವ ರಾಜನು

ಎಂತೆಂತಹ ತಪ್ಪುಗಳನ್ನು ಮಾಡಿದನು ಅವನಿಗೆ ಯಾವ ಗತಿ ಪ್ರಾಪ್ತವಾಯಿತು, ಅಥವಾ ಯಾರು ಯೋಗ್ಯರಾಗಿ ನಡೆದುಕೊಂಡರು ಅವರು ಹೇಗೆ ಸತ್ಫಲವನ್ನು ಪಡೆದರು ಎಂಬಂತಹ ಅನೇಕ ಉದಾಹರಣೆಗಳು ಅಲ್ಲಿ ಕಂಡುಬರುತ್ತವೆ. ಅವುಗಳನ್ನು ತಿಳಿದುಕೊಂಡು ಅನುಸರಿಸುವುದು ಸುತ್ತು ಬಳಸಿನ ಮತ್ತು ಫಲವಿಲ್ಲದ ದಾರಿ. ಏಕೆಂದರೆ ನಮ್ಮ ಬದುಕಿನಲ್ಲಿ ಪ್ರತಿಯೊಂದು ಸನ್ನಿವೇಶಕ್ಕೆ ತಕ್ಕಂತಹ ಉದಾಹರಣೆ ಸಿಗದಿರಬಹುದು, ಅಂತಹವುಗಳು ಇದ್ದರೂ ಆ ಕ್ಷಣದಲ್ಲಿ ನೆನಪಿಗೆ ಬರದಿರಬಹುದು, ಬಂದರೂ ಮನಸ್ಸು ಆ ಉದಾಹರಣೆಗಳಿಗೆ ಭಾವನಾತ್ಮಕವಾಗಿ ಅಂಟಿಕೊಳ್ಳುತ್ತದೆಯೇ ಹೊರತು ಆ ಬ್ರಹ್ಮನನ್ನು ಕಂಡುಕೊಳ್ಳುವುದರಲ್ಲಿ ತೊಡಗುವುದಿಲ್ಲ.

ಈ ರೀತಿಯಾಗಿ ವೇದ ಶಾಸ್ತ್ರ, ಆಗಮ ಪುರಾಣಗಳೆಲ್ಲವೂ ಯಾವ ಕೆಲಸಕ್ಕೂ ಬಾರದವಾಗುತ್ತವೆ. ಏಕೆಂದರೆ ಇದೆಲ್ಲಕ್ಕೂ ಮೂಲವಾದದ್ದು ನಮ್ಮ ಮನಸ್ಸು. ಆ ಮನಸ್ಸಿನ ಗತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಮ್ಮಲ್ಲಿ ಜಿಜ್ಞಾಸೆ ಮತ್ತು ಆಳವಾದ ಹಂಬಲವಿಲ್ಲದಿದ್ದರೆ ಈ ಎಲ್ಲ ಗ್ರಂಥಗಳು ಕೇವಲ ಶಬ್ದಜಾಲಗಳಾಗಿ ಉಳಿಯುತ್ತವೆ. ಅವುಗಳ ಹಿಂದೆ ಹೋಗಿ ಬಳಲಬೇಡ ಎಂದು ಶರಣ ಆದಯ್ಯನವರು ಹೇಳುತ್ತಾರೆ. ಅವರ ಸ್ವಂತ ಕಾಣ್ಕೆಯ ಪರಿಣಾಮವೇ ವೇದಾಗಮಗಳೂ ಕೇವಲ ಶಬ್ದ ಜಾಲಗಳು ಎಂದು ಹೇಳುವ ಅವರ ದಿಟ್ಟತನ.

Vachana 75: Veda Shastra Puranangalella - Learn the ways of the mind

ವೇದ ಶಾಸ್ತ್ರ ಪುರಾಣಂಗಳೆಲ್ಲ ಕೊಟ್ಟಣವ ಕುಟ್ಟುತ್ತ
ನುಚ್ಚು ತೌಡು ಕಾಣಿ ಭೋ, ಇವ ಕುಟ್ಟಲೇಕೆ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚ ಬರಿಯ ಬಯಲು ಚೆನ್ನ ಮಲ್ಲಿಕಾರ್ಜುನ

TRANSLITERATION

vEda shaastra puraaNaMgaLella koTTaNava kuTTutta
nuccu touDu kaaNibhO, iva kuTTalEke?
Attlitta hariva manada shiravanaridaDe
Bacca bariya bayalu cennamallikaarjuna.

TRANSLATION (WORDS)

vEda(veda) shaastra(rituals) puraaNaMgaLella (mythology ,all are like) koTTaNava (in the mortar)kuTTutta (pounding)
nuccu (coarse powder) touDu (husk) kaaNibhO,(you see) iva (all these) kuTTalEke?(why pound)

Attalitta (here and there) hariva (wavering) manada (the mind) shiravanu (the head) aridaDe (if understood)
Bacca (plain) bariya(only) bayalu (open space – null, ultimate) cennamallikaarjuna.(Cenna Mallikaarjuna)

TRANSLATION

By pounding sacred texts (Vedas), rituals and mythology in the mortar,
All you get is coarse flour and husk, why pound them?
Understanding the ways of the wavering mind,
Is the plain path to the ultimate (space, Self, Bayalu), Lord ChennaMallikarjuna!

COMMENTARY

Akka Mahadevi is expressing the gist of her experience in the path of self-realization in this Vachana. She probably might have immersed herself in the study of sacred texts, rituals and mythological stories and was disappointed with the results. She might have realized that the only way to realize self is to understand the ways of the wavering mind and bring control to it. To separate rice from the paddy, we pound the paddy in a mortar. The product of this activity is a combination of rice, coarse (broken) rice and the powdered husk. We then separate the rice from the rest hoping that we get most of the rice intact. Akka says that when Vedas, rituals and mythology are pounded in the mortar, the product is only coarse rice and the husk, with no useable rice, implying that the resulting product is not what is desired. She questions as to why we need to go through this pounding? She concludes that the prime way to self-realization (finding self) is to control the wavering mind. Once we gain such control and develop an intense desire to look inside, we will be successful in reaching the Self!

Is Akka advocating discarding Vedas and rituals and Mythology? Certainly not! These texts describe the concept of 'self' in various ways. They attach various attributes and point to multiple ways of realizing it. But, just studying them or blindly following the rituals prescribed in these texts will not get us to the ultimate. When studying these texts, if our mind keeps wavering, we will not be able to see the directions provided in them. If we can control the mind and develop a feverish desire to realize the 'Truth' or the 'Self 'we will be on the right path. Propelled by that inherent desire, we should then strive to reach the self by ourselves. No one else can take us there; others can only point to it!

Katopanishad says that:
nAyamAtmA pravachanEna laByo
na mEdhayA na bahunA shrutEna!
yamEvaisha vruNatE tEna labya-
stasvysha atmA vivruNatE tanUm swAm!
The Atma (soul, self) cannot be reached by listening to lectures, intellectual discussions and such. It can only be reached by an intense prayer to reach the Atma by the Atma! This is the essential concept Akka depicts in this Vachana.

The horse can only be led to the water, it has to drink the water by itself!

KANNADA COMMENTARY

ಇದು ಅಕ್ಕಮಹಾದೇವಿಯ ವಚನ. ಇಲ್ಲಿ ಆಕೆ ತನ್ನ ಅನುಭವದ ಸಾರವನ್ನು ಹೇಳುತ್ತಿದ್ದಾಳೆ. ಬಹುಶಃ ಆಕೆ ಕೂಡ ಮೊದ ಮೊದಲು ಸತ್ಯವನ್ನು ಕಂಡುಕೊಳ್ಳಲು ವೇದ ಶಾಸ್ತ್ರ ಪುರಾಣಗಳನ್ನು ಅವಲಂಬಿಸಿರಬೇಕು. ಅಲ್ಲಿ ನಿರಾಶೆಯಾದಾಗ ತನ್ನದೇ ದಾರಿ ಕಂಡುಕೊಂಡಿರಬೇಕು. ಅದಕ್ಕಾಗಿಯೇ, ವೇದ ಶಾಸ್ತ್ರಗಳೆಲ್ಲ ನುಚ್ಚು ತೌಡು ಎಂದು ಹೇಳುತ್ತಾಳೆ. ಅಕ್ಕಿಯನ್ನು ಪಡೆಯಬೇಕಾದರೆ ಭತ್ತವನ್ನು ಕೊಟ್ಟಣದಲ್ಲಿ ಕುಟ್ಟಬೇಕು. ಅದರಲ್ಲಿ ನುಚ್ಚು ತೌಡು ಕೂಡ ಇರುತ್ತದೆ. ಅದೆಲ್ಲವನ್ನೂ ಬೇರ್ಪಡಿಸಿ ಅಕ್ಕಿಯನ್ನು ಪಡೆಯಬೇಕು. ಆದರೆ ಇಲ್ಲಿ ಅಕ್ಕಿಯ ಮಾತೇ ಇಲ್ಲ. ವೇದ ಶಾಸ್ತ್ರ ಪುರಾಣಗಳೆಲ್ಲವೂ ಕುಟ್ಟಿ ಕೇವಲ ನುಚ್ಚು ತೌಡು ಪಡೆದಂತಾಗುತ್ತದೆ ಎನ್ನುತ್ತಾಳೆ. ಹಾಗಾದರೆ ವೇದಗಳಲ್ಲಿ ಹೇಳಿದ್ದೆಲ್ಲವೂ ಸುಳ್ಳೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಇದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳುವುದು ಬಹು ಮುಖ್ಯ. ಪ್ರತಿಯೊಬ್ಬನಿಗೂ ತಾನಾಗಿಯೇ ಸತ್ಯದ ದರ್ಶನವಾಗಬೇಕೇ ಹೊರತು ಬೇರೆಯವರು ಅದನ್ನು ಮಾಡಿಸಲಿಕ್ಕಾಗುವುದಿಲ್ಲ. ಬೇರೆಯವರು ಅದನ್ನು ವರ್ಣಿಸಬಹುದು, ಅದು ಎಲ್ಲಿದೆ ಎಂಬುದನ್ನು ತೋರಿಸಿ ಹೇಳಬಹುದು, ಆದರೆ ಅದನ್ನು ವ್ಯಕ್ತಿಯ ಅನುಭವಕ್ಕೆ ತರಲಾರರು. ಆ ಅನುಭವ ವ್ಯಕ್ತಿಗೆ ಆಗಬೇಕಾದರೆ ಆತನ ಮನಸ್ಸು ಅದಕ್ಕೆ ಸಿದ್ಧವಾಗಿರಬೇಕು. ಅದನ್ನು ಯಾರೂ ಬೇರೆಯವರಾಗಲಿ, ಅಥವಾ ಯಾವುದೇ ವೇದ ಶಾಸ್ತ್ರ ಪುರಾಣವೇ ಆಗಲಿ ಮಾಡಲಾಗುವುದಿಲ್ಲ. ವೇದ ಶಾಸ್ತ್ರ ಪುರಾಣಗಳು, ಆ ಸತ್ಯವನ್ನು ವರ್ಣಿಸುತ್ತವೆ, ಆ ಸತ್ಯವನ್ನು ಹೊಂದುವ ನಾನಾ ಉಪಾಯಗಳನ್ನು ತೋರುತ್ತವೆ.ಅಲ್ಲಿಗೆ ಹೋಗಿ ಮುಟ್ಟಲು ದಾರಿಯನ್ನು ತೋರಿಸುತ್ತವೆ, ಆದರೆ ದಾರಿಯನ್ನು ನಾವೇ ತುಳಿಯಬೇಕಲ್ಲವೆ? ಆ ಉಪಾಯಗಳನ್ನು ನಾವೇ ಅಳವಡಿಸಿಕೊಳ್ಳಬೇಕಲ್ಲವೆ? ಆ ವರ್ಣನೆಯ ಅರ್ಥವನ್ನು ನಾವೇ ಸರಿಯಾಗಿ ಗ್ರಹಿಸ ಬೇಕಲ್ಲವೆ? ಈ ರೀತಿಯಾಗಿ ಮಾಡುವಾಗ ಮನಸ್ಸು ಅಡ್ಡಿ ಉಂಟುಮಾಡುತ್ತದೆ. ಆ ಮನಸ್ಸಿನ ಚಲನೆಯನ್ನು ಅರಿಯಬೇಕು ಆಗಮಾತ್ರ ಸತ್ಯದ ದರ್ಶನ ಸಾಧ್ಯವಾಗುತ್ತದೆ. ಈ ಅರ್ಥದಲ್ಲಿ ವೇದ ಶಾಸ್ತ್ರ ಪುರಾಣಗಳು ಕೇವಲ ನುಚ್ಚು ತೌಡು ಎಂದು ಹೇಳುತ್ತಿರುವಳು. ಆ ಅನುಭವವನ್ನು ಸ್ವತಃ ಪಡೆಯಬೇಕಾದರೆ ಮನಸ್ಸಿನ ಶಿರವನ್ನರಿಯಬೇಕು. ಮನಸ್ಸಿನ ಮೂಲವನ್ನು ತಿಳಿದುಕೊಳ್ಳಬೇಕು. ಅದು ಹೇಗೆ ಕೆಲಸ ಮಾಡುತ್ತದೆ, ಹೇಗೆ ನಡೆದುಕೊಳ್ಳುತ್ತದೆ, ಏಕೆ ಹಾಗೆ ನಡೆದುಕೊಳ್ಳುತ್ತದೆ, ಎಂಬುದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿ ಅರ್ಥ ಮಾಡಿಕೊಂಡಾಗ ಬೇರೆಯದೇ ಏನೋ ಹೊಳೆಯುತ್ತದೆ. ಆ ಹೊಳಹು ತಾನಾಗಿಯೇ ಆಗಬೇಕೇ ಹೊರತು ವೇದ ಶಾಸ್ತ್ರ ಪುರಾಣಗಳಿಂದ ಸಾಧ್ಯವಿಲ್ಲ ಎನ್ನುತ್ತಾಳೆ ಅಕ್ಕ.

ಕಠೋಪನಿಷತ್ತು ಕೂಡ ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ
ಯಮೇವೈಷ ವೃಣುತೇ ತೇನ ಲಭ್ಯ
ಸ್ತಸ್ಯೈಷ ಅತ್ಮಾ ವಿವೃಣತೇ ತನೂಂ ಸ್ವಾಮ್

ಎಂದು ಹೇಳುತ್ತದೆ. ಎಂದರೆ, ಈ ಆತ್ಮನು ಪ್ರವಚನಗಳನ್ನು ಕೇಳುವುದರಿಂದಾಗಲಿ, ಮೇಧಾಶಕ್ತಿಯಿಂದಾಗಲಿ, ಬಹಳ ಶ್ರವಣದಿಂದಾಗಲಿ ಲಭ್ಯನಲ್ಲ. ತನ್ನ ಆತ್ಮನನ್ನೇ ಬೇಡುವ ಆತ್ಮನಿಂದ ಆತ್ಮನು ದೊರೆಯುವನು, ಯಥಾರ್ಥ ಸ್ವರೂಪವನ್ನು ತೋರುವನು ಎಂದರ್ಥ. ಇದನ್ನೇ ಅಕ್ಕಮಹಾದೇವಿಯೂ ಹೇಳುತ್ತಿರುವಳು. ಆತ್ಮನನ್ನೇ ಪಡೆಯಬೇಕೆಂಬ ಹಂಬಲ ಇರಬೇಕು ಅದು ಮುಖ್ಯವೇ ಹೊರತು ಶಾಸ್ತ್ರ ಪುರಾಣಗಳಲ್ಲ.

Vachana 76:Anantha Veda Shaatra Aagama - Awareness

ಅನಂತ ವೇದ ಶಾಸ್ತ್ರ ಆಗಮ ಪುರಾಣ ತರ್ಕ ತಂತ್ರಂಗಳನ್ನು
ಆತ್ಮನು ಮಾಡಿದನಲ್ಲದೆ ಆತ್ಮನನ್ನವು ಮಾಡಿದುದಿಲ್ಲ
ಎನ್ನಂತರಂಗದ ಅರಿವಿನ ಮೂರ್ತಿಯಾಗಿ
ಎನ್ನ ಉರಿಲಿಂಗದೇವರು ಸಂಕಲ್ಪಿಸಿ ಆಗೆಂದರಾದವು

TRANSLITERATION

anaMta vEda shaastra aagama puraaNa tarka taMtragaLannu
aatmanu maaDidanallade aatmanannavu maaDidudilla
ennaMtaraMgada arivina mUrtiyaagi
enna uriliMgadEvaru saMkalpisi aageMdaraadavu

TRANSLATION (Words)

anaMta (endless) vEda (veda) shaastra (proceduress) aagama (sacrament)
puraaNa(mythology) tarka (logic) taMtragaLannu (the ways of religious rituals)
aatmanu (the soul)maaDidanu (made)allade (not) aatmanannu (the soul) avu (they)
maaDidudilla (have not done)
enna (my) aMtaraMgada (inward) arivina (awareness) mUrtiyaagi (personified, materialized)
enna(my) uriliMgadEvaru (urilinagadeva) saMkalpisi (when willed) aageMdare (asked to be done) aadavu(came into existence)

TRANSLATION

All the Vedas, sacraments, mythologies, logic and religious rituals were created by the soul (self), but not the other way (i.e. they did not create the soul)! When my inner awareness materialized into my Lord Urilingeswara who (in turn) willed them to be, they came into existence!

COMMENTARY

The previous two postings advocated that mind control and intense desire to know as the prerequisites for self-realization. Both suggested not being too involved in the superficiality of reading and blind following of sacred texts. In this Vachana Sharana Urilingadeva continues that thought process and says that his inner awareness reached such an intense level that it materialized itself as the Lord, who in turn created all the sacred texts as aids for the realization of the Self. He says that the inner (self) awareness is more important than all the sacred texts such as Vedas, Sacraments, Mythologies, etc. and the soul created the sacred texts rather than sacred text creating the soul.
Urilingadeva agrees with the belief that the Vedas were created by God, not Man. In this context it is interesting to examine the concepts of God and Man. We have said that the individual soul (Jeevaatma) is a spark of the supreme soul (Paramaatma, God). As such, each individual has a Godly attribute in him/her. When this attribute is camouflaged by ignorance and non-awareness of the self, the Man gets involved in and influenced by material aspects. When he removes the camouflage through self-awareness, intense desire to probe self and mind control, his Godly nature wins and he contributes to and consumes Vedas and other sacred texts appropriately.

We should never interpret this and the previous postings as advocating staying away from sacred texts. We should question them, analyze and understand the subtle suggestions in them towards achieving self-realization. Sarvagna (Knower of Everything) a 16th century poet/philosopher said that we should acquire knowledge from those who know, from respected texts and from the company of knowledgeable individuals.

Let us bring out the godlyness in us!

KANNADA COMMENTARY

ಇದು ಉರಿಲಿಂಗದೇವರ ವಚನ. ಅವರು ಮಠಾಧೀಶರಾಗಿದ್ದು ಬಸವಣ್ಣನವರ ಸಮಕಾಲೀನರಾಗಿದ್ದರು. ಅವರು ಮಹಾ ಭಕ್ತರಾಗಿದ್ದರೂ ಮಹಾ ಕ್ರಾಂತಿಕಾರರೂ ಆಗಿದ್ದರು. ಇವರ ಶಿಷ್ಯರೇ ಉರಿಲಿಂಗಿ ಪೆದ್ದಿ. ವೇದ ಶಾಸ್ತ್ರ, ಪುರಾಣ, ಆಗಮಗಳಿಗಿಂತ ಸ್ವ ಅರಿವು ಏಕೆ ಮುಖ್ಯವಾದದ್ದು ಎನ್ನುವುದನ್ನು ಯಾವ ಆಡಂಬರವೂ ಇಲ್ಲದೆ ಬಹಳ ಸರಳವಾಗಿ ತಿಳಿಸಿದ್ದಾರೆ.
ವೇದಗಳು ಅಪೌರುಷೇಯ ಎನ್ನುತ್ತಾರೆ. ಏನು ಹಾಗೆಂದರೆ? ಎಂದರೆ ಮಾನವನು ಮಾಡಿದುದಲ್ಲ. ಹಾಗಾದರೆ ಯಾರು ಮಾಡಿದುದು? ದೇವರು ಮಾಡಿದವುಗಳು ಎನ್ನುತ್ತಾರೆ. ಅದನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಇದನ್ನು

ಅರ್ಥಮಾಡಿಕೊಳ್ಳಲು ಮಾನವನೆಂದರೆ ಯಾರು, ದೇವರು ಎಂದರೆ ಯಾರು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. *"ಮರೆತರೆ ಮಾನವ ಅರಿತರೆ ದೇವ"*. ಯಾರನ್ನು ಮರವೆ ಆವರಿಸಿಕೊಂಡಿರುತ್ತದೆಯೋ, ಈ ಮರವೆಯ ಕಾರಣದಿಂದ ಮಾಯೆಯಲ್ಲಿ ಮುಳುಗಿರುತ್ತಾನೆಯೋ ಆತನೇ ಮಾನವ. ಯಾರು ಅರಿವುಳ್ಳವನಾಗಿರುತ್ತನೆಯೋ ಆತನೇ ಜಾಗೃತನಾಗಿ ದೇವನಾಗುತ್ತಾನೆ. ಆತನು ಯಾವುದೇ ರೀತಿಯ ಪ್ರಭಾವಗಳಿಗೆ ಒಳಗಾಗುವುದಿಲ್ಲ. ಆತನು ಎಲ್ಲ ರೀತಿಯ ತನುಗುಣಗಳಿಂದ ಮುಕ್ತನಾಗಿರುತ್ತಾನೆ. ಭೂತ, ವರ್ತಮಾನ, ಭವಿಷ್ಯ ಎಂಬ ತ್ರಿಕಾಲಗಳಿಗೆ ಒಳಗಾಗುವುದಿಲ್ಲ, ಸತ್ವ ರಜೋ ತಮೋಗುಣಗಳನ್ನು ಮೀರಿರುತ್ತಾನೆ, ಎಲ್ಲ ವಿರೋಧಗಳನ್ನು ಮೀರಿರುತ್ತಾನೆ, ಎಲ್ಲ ಕಂದಕಗಳನ್ನು ಮುಚ್ಚಿ ಬಯಲ ದೇಹಿಯಾಗಿರುತ್ತಾನೆ. ಮಾನವನ ಯಾವ ಗುಣಗಳೂ ಆತನಿಗೆ ಅಂಟಿರುವುದಿಲ್ಲ. ಆತನು ಎಚ್ಚರವೇ ತಾನಾಗಿರುತ್ತಾನೆ. ಈ ರೀತಿಯ ಅರಿವೇ ಮೂರ್ತಿಯಾಗಿ ನುಡಿದಾಗ ಅದು ಅಪೌರುಷೇಯವಾಗುತ್ತದೆ. ಆ ಅರಿವನ್ನುಂಟು ಮಾಡಿದುದು ಆತ್ಮ. ಆತ್ಮನ ಸಂಕಲ್ಪದಿಂದಲೇ ಆ ವೇದಗಳು ಮೂಡಿಬಂದಿವೆ. ಆದ್ದರಿಂದ ಆತ್ಮನೇ ವೇದಗಳನ್ನು ಸೃಷ್ಟಿಸಿದ್ದಾನಲ್ಲದೆ ವೇದವು ಆತ್ಮನನ್ನು ಸೃಷ್ಟಿಸಿಲ್ಲ ಎನ್ನುತ್ತಾರೆ ಉರಿಲಿಂಗಿದೇವರು. ಈ ಕಾರಣದಿಂದ ವೇದಾಗಮಗಳು ಆತ್ಮಕ್ಕಿಂತ ದೊಡ್ಡವಲ್ಲ ಎಂದು ಹೇಳುತ್ತಾರೆ. *"ಅರಿವು"* ಎಲ್ಲಕ್ಕಿಂತ ಮುಖ್ಯವಾದದ್ದು. ಆದ್ದರಿಂದ ವೇದ ಶಾಸ್ತ್ರ ಆಗಮ ಪುರಾಣಗಳ ಹಿಂದೆ ಧಾವಿಸುವುದನ್ನು ಬಿಟ್ಟು ಅರಿವು ಪಡೆಯುವುದರಕಡೆ ಗಮನವಿರಲಿ ಎಂಬ ಧ್ವನಿ ಈ ವಚನದ್ದು.

Vachana 77: Ajnaanavemba Thottilolage – Reaching Self

ಅಜ್ಞಾನವೆಂಬ ತೊಟ್ಟಿಲೊಳಗೆ
ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದಶಾಸ್ತ್ರವೆಂಬ ನೇಣಕಟ್ಟಿ,
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿ ಎಂಬ ತಾಯಿ
ತೊಟ್ಟಿಲು ಮುರಿದು ನೇಣು ಹರಿದು ಜೋಗುಳ ನಿಂದಲ್ಲದೆ
ಗುಹೇಶ್ವರ ಲಿಂಗ ಕಾಣಬಾರದು

TRANSLITERATION

Aj~jaanaveMba toTTiloLage
J~jaanaveMba shishuva malagisi
Sakala vEdashaastraveMba nENakaTTi
hiDidu tUgi jOguLavaaDuttiddaaLe bhraaMtieMba taayi
toTTilu muridu nENu haridu jOguLa niMdallade
guhEshvara liMga kaaNabaaradu

TRANSLATION (WORDS)

Aj~jaanaveMba (of ignorance) toTTiloLage (in the cradle)
J~jaanaveMba (of awareness) shishuva (infant) malagisi (putting to sleep)
Sakala (entire) vEdashaastraveMba (of, vEda and shaastras) nENa (rope) kaTTi (tied)
hiDidu (holding) tUgi (swinging) jOguLavaaDuttiddaaLe (singing a lullaby)
bhraaMtieMba (of illusion) taayi (mother)

toTTilu (cradle) muridu (broken) nENu (rope) haridu (ripped, torn) jOguLa (lullaby) niMdallade (unless ended)
guhEshvara liMga (Guheshvara Linga)kaaNabaaradu (cannot be seen)

TRANSLATION

In the cradle of ignorance,
Putting the infant of awareness to sleep,
Hanging the cradle with ropes of the entire Vedas and Sacraments,
The mother illusion is holding the ropes, swinging the cradle and singing lullabies.
Unless the cradle is broken, rope is torn and lullaby ended,
Guheswara Linga cannot be seen!

COMMENTARY

This beautiful Vachana from Allama Prabhu depicts the state of affairs of our daily lives with a simple simile. The mother (named illusion) is putting the infant (of Awareness) to sleep in the cradle of ignorance. She has tied the cradle with the ropes of sacred texts and rituals, swinging the cradle and singing lullabies. Allama Prabhu says that the Lord cannot be realized (seen) unless the cradle is broken, ropes are torn and lullaby is ended.

There is a cradle with an infant in it. The cradle is hanging from the roof with ropes tied to it. The mother is holding those ropes to swing the cradle and she is singing lullabies to put the infant to sleep. The major intention on the part of the mother here is to make sure that the infant goes to sleep and does not wake up. Our soul is the infant. He is pure and awareness is his inherent attribute. This soul gets hidden (sleeps) in the cradle of ignorance (our bodies, our concepts of life and death, etc.). Mere reading of Vedas and following rituals routinely adds another layer to the ignorance covering the true nature of the soul further. We become victims of illusion (me, mine, I did it, etc.) which is the mother here utilizing the ropes and lullaby to keep the soul in the covered state. Allama Prabhu urges us to remove the three sheaths (ignorance, routine dependence on sacred texts and rituals and illusion) to realize the 'self' (reach or see the Lord).
Awareness is our inherent nature. It needs to be awakened. Instead we cover it with ignorance. We depend on the reasoning and rituals handed to us from previous generations. These will have lost their meanings and pertinence due to time and changing environments. When they are accepted without questioning, we end up covering the true awareness within us. All the material comforts sing the lullaby to keep the infant of awareness at sleep. The infant has begun to believe that the sleep is the pleasure of life. The mother of illusion is simply adding to the cover of ignorance. We need to escape from this cover of ignorance. We need to remove our attachment to the materialistic comforts as the way to be. We need to awaken the awareness from its hidden state to let us realize the Lord within us.

Let us uncover and shine our Awareness!

KANNADA COMMENTARY

ಇದು ಅಲ್ಲಮಪ್ರಭುಗಳ ಬಹು ಸುಂದರವಾದ ವಚನ. ಈ ಜಗತ್ತಿನಲ್ಲಿ ನಡೆಯುತ್ತಿರುವುದರ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಜ್ಞಾನವೆಂಬ ಮಗುವನ್ನು ಅಜ್ಞಾನವೆಂಬ ತೊಟ್ಟಿಲಲ್ಲಿ ಮಲಗಿಸಿಲಾಗಿದೆ. ಆ ತೊಟ್ಟಿಲನ್ನು ವೇದಶಾಸ್ತ್ರಗಳೆಂಬ ಹಗ್ಗದಿಂದ ಕಟ್ಟಲಾಗಿದೆ. ಅದನ್ನು ಭ್ರಾಂತಿ ಎಂಬ ತಾಯಿ ಜೋಗುಳವನ್ನು ಹಾಡುತ್ತ ನಿದ್ರೆಗೆ ತಳ್ಳುತ್ತಿದ್ದಾಳೆ. ಆ ಜ್ಞಾನವೆಂಬ ಶಿಶು ಎಚ್ಚರಗೊಳ್ಳಬೇಕಾದರೆ ತೊಟ್ಟಿಲು ಮುರಿಯಬೇಕು, ನೇಣು ಹರಿಯಬೇಕು. ಹಾಗಾಗದಿದ್ದಲ್ಲಿ ಗುಹೇಶ್ವರ ಲಿಂಗವು ಕಾಣುವುದಿಲ್ಲ ಎಂದು ಹೇಳುತ್ತಾರೆ ಅಲ್ಲಮ ಪ್ರಭುಗಳು.

ಜ್ಞಾನವು ಸುಪ್ತವಾಗಿರುತ್ತದೆ. ಅದನ್ನು ಎಚ್ಚರಗೊಳಿಸಬೇಕು. ಆದರೆ ಅದಕ್ಕೆ ಬದಲಾಗಿ ಅದನ್ನು ಇನ್ನೂ ಹೆಚ್ಚಿನ ಅಜ್ಞಾನಕ್ಕೆ ತಳ್ಳಲಾಗುತ್ತದೆ. ಆ ಶಿಶುವಿನ ಸುತ್ತ ಇರುವುದೆಲ್ಲ ಅಜ್ಞಾನವೇ. ಎಲ್ಲವೂ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಯಾಂತ್ರಿಕವಾಗಿ ಹರಿದು ಬಂದ ಒಂದು ರೀತಿಯ ಮಾಹಿತಿ ಅಷ್ಟೆ. ಅಥವಾ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹರಿದುಬಂದ ಆಚಾರವಿಚಾರಗಳು. ಈ ರೀತಿಯಾಗಿ ಹರಿದುಬಂದ ಮಾಹಿತಿ ಮತ್ತು ಆಚಾರ ವಿಚಾರಗಳನ್ನು ಪ್ರಶ್ನಿಸದೆ ಸ್ವೀಕರಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಆ ಯಾವುದರಲ್ಲಿಯೂ ಹೊಸತನವಿಲ್ಲ. ಅವುಗಳಲ್ಲಿಯ ಸತ್ವ ಎಂದೋ ಮಾಯವಾಗಿದೆ. ಸುಖದ ಪರಿಕಲ್ಪನೆ ಕೂಡ ಇನ್ನೊಬ್ಬರಿಂದ ಬಂದದ್ದು. ನಿಜವಾದ ಸುಖದ ಅರ್ಥವೇ ತಿಳಿಯದೆ ಯಾವ್ಯಾವುದನ್ನೋ ಸುಖವೆಂದು ಭಾವಿಸಿ ಅದನ್ನು ಅರಸುವ ಧಾವಂತ. ಆದರೆ ಅದರ ಅರಿವೇ ಇಲ್ಲದೆ ಶಿಶು ಅಜ್ಞಾನದ ತೊಟ್ಟಿಲಲ್ಲಿ ನಿಶ್ಚಿಂತೆಯಿಂದ ಮಲಗಿದೆ. ಆ ನಿದ್ರೆಯನ್ನೇ ಸುಖವೆಂದುಕೊಂಡಿದೆ. ಅಷ್ಟೇ ಅಲ್ಲ ವೇದ ಶಾಸ್ತ್ರಗಳಿಗೆ ಜೋತುಬೀಳುವ ಗುಣವೇ ನೇಣಾಗಿ ಆ ಅಜ್ಞಾನದ ತೊಟ್ಟಿಲಿನ ಬಂಧನವನ್ನು ಇನ್ನೂ ಗಟ್ಟಿಯಾಗಿಸಿದೆ.
ಈ ಅಜ್ಞಾನಕ್ಕೆ ಭ್ರಾಂತಿಯೇ ಕಾರಣ. ನಾನಾ ಪ್ರಾಪಂಚಿಕ ಸುಖಗಳು ಜೋಗುಳ ಹಾಡುತ್ತಿವೆ. ಪ್ರಾಪಂಚಿಕ ಸುಖಗಳು ಅಜ್ಞಾನದ ನಿದ್ರೆಗೆ ತಳ್ಳುತ್ತವೆ. ವೇದ ಶಾಸ್ತ್ರಗಳ ಜ್ಞಾನವು ನಮಗೆ ಮುಕ್ತಿಯನ್ನು ಕೊಡುತ್ತದೆ ಎಂದು ನಂಬಿ ಅದಕ್ಕೆ ಜೋತುಕೊಳ್ಳುವುದು ಕೂಡ ಅಜ್ಞಾನವೇ. ಈ ಅಜ್ಞಾನವು ಹೋಗಿ ನಿದ್ರೆಯಿಂದ ಎಚ್ಚರಗೊಳ್ಳಬೇಕಾದರೆ ಅಜ್ಞಾನದ ತೊಟ್ಟಿಲು ಮುರಿಯಬೇಕು, ನಾವು ಜೋತುಕೊಂಡಿರುವ ನೇಣು ಹರಿಯಬೇಕು, ಅಂದರೆ ವೇದ ಶಾಸ್ತ್ರಗಳಿಗೆ ಜೋತುಬೀಳುವ ಗುಣವನ್ನು ತ್ಯಜಿಸ ಬೇಕು. ವೇದ ಶಾಸ್ತ್ರಗಳೆಂದರೆ ಕೇವಲ ಆ ಪುರಾತನ ಪವಿತ್ರ ಗ್ರಂಥಗಳೆಂದಲ್ಲ. ಆ ರೀತಿಯ ಎಲ್ಲವೂಗಳು, ಅಂದರೆ ಯಾರೋ ಗುರು ಎಂದು ಹೇಳಿಕೊಳ್ಳುವವನ ಮಾತುಗಳಿರಬಹುದು, ತಾನು ತೋರಿಸುವ ದಾರಿಯೇ ಪರಮ ಶ್ರೇಷ್ಠವೆಂದು ಹೇಳುವ ಮತ ಪ್ರಚಾರಕನ ಮಾತುಗಳಿರಬಹುದು, ನಾವು ಮಹಾ ಜ್ಞಾನವೆಂದುಕೊಂಡು ಗಳಿಸಿದ ನಾನಾ ರೀತಿಯ ಆಧುನಿಕ ಪದವಿಗಳಿರಬಹುದು. ಅಥವಾ ಅಂತಹ ಇನ್ನಾವುವೋ ದಾರಿಗಳಿರಬಹುದು, ಅವೆಲ್ಲ ಯಾವ ಉಪಯೋಗಕ್ಕೂ ಬರುವುದಿಲ್ಲ. ಈ ಎಲ್ಲವು ಗಳಿಂದ ಯಾವ ಸುಖವೂ ಇಲ್ಲ. ಇವುಗಳು ಭ್ರಾಂತಿಯಲ್ಲಿ ಕೆಡಹುವಂತಹವು. ಇವುಗಳಿಗೆ ಜೋತುಬೀಳುವುದು ಸಲ್ಲ. ಸಕಲ ಭ್ರಾಂತಿಗಳು ನಿರಸನಗೊಳ್ಳಬೇಕು ಆಗಮಾತ್ರ ಶಿಶು (ಜ್ಞಾನ) ಎಚ್ಚರಗೊಳ್ಳುತ್ತದೆ. ಅರಿವು ಉಂಟಾಗುತ್ತದೆ, ಗುಹೇಶ್ವರ ಲಿಂಗವು ಕಾಣುತ್ತದೆ.

Vachana 78: Gaganada Megangalella – Pure Mind

ಗಗನದ ಮೇಘಂಗಳೆಲ್ಲ ಸುರಿದವು ಭೂಮಿಯಮೇಲೆ

ಭೂಮಿ ದಣಿಯುಂಡು ಸಸಿಗಳೆಲ್ಲಾ ಬೆಳೆದವು

ಬಹು ವಿಕಾರದಿಂದ ಬೆಳೆದ ಸಸಿಯ

ವಿಕಾರದಿಂದ ಗ್ರಹಿಸುವ ಕಾಮವಿಕಾರಿಗಳು

ಲಿಂಗವನೆತ್ತಬಲ್ಲರು ಗುಹೇಶ್ವರಾ?

TRANSLITERATION

Gaganada mEghaMgaLella suridavu bhoomiyamele
Bhoomi daNiyuMDu sasigaLella beLedavu
Bahu vikaaradiMda beLeda sasiya
vikaaradiMda grahisuva kaamavikaarigaLu
liMgavanettaballaru guhEshvaraa?

TRANSLATION (WORDS)

Gaganada (of sky) mEghaMgaLella(all the clouds) suridavu (poured) bhoomiyamele (on the earth)Bhoomi (earth) daNiyuMDu (took in, received to its heart's content, drank enough and was satisfied) sasigaLella (and all the plants) beLedavu (were grown)
Bahu (many,a lot of) vikaaradiMda (of transformation) beLeda (grown *after*) sasiya(of plant *which is*) vikaaradiMda (from that modification) grahisuva (comprehend those) kaamavikaarigaLu (people who are changed because of their desire, conditioned people) liMgavanettaballaru (how will they know the linga) guhEshvaraa? (Guheshvara)

TRANSLATION

All the clouds in the sky poured on the Earth.
The Earth drank to heart's content and the plants grew.
These plants that grew after multiple transformations,
were observed by individuals transformed by their desires.
How can such transformed individuals know the Lord? Oh! Guhesvara!

COMMENTARY

Allama Prabhu paints a nice picture of how the common man understands and views the world around him in this Vachana. Clouds are formed in the sky. They pour on the Earth. The Earth absorbs the water and enables the seeds to sprout and grow into plants. We observe the plants and enjoy their fruits and flowers. All these are the natural cycle of events. We never pay attention to the events leading to the plants. Allama Prabhu is trying to draw our attention to the truth behind the natural cycle that led to plants. He further says that these plants are being observed (viewed, comprehended) by individuals who themselves are transformed by their desires. Our view of the plant depends on our frame of mind and our interest in that plant's utility for us. We tag it to be tall, short, beautiful, medicinal, weed, grass, etc. We not only fail to grasp the transformations (water, Earth, seed, plant) behind the plant, but also tinge the plant with our jaundiced eyes and transformed views. Allam Prabhu questions as to how such transformed individuals, jaundiced by their desires can see the Lord, an untransformed one!

Katopanishad says:

agniryathaikO BuvanaM praviShTO

rUpaM rUpaM pratirUpO baBUva|

EkastathA sarva BUtAMtarAtmA

rUpaM rUpaM pratirUpO bahiSca

As the fire takes the shape of what it burns, the Self takes the shape of everything it enters, but remains unchanged. This concept is further clarified as,

EkO vaSI sarvaBUtAMtarAtmA

EkaM rUpaM bahudhA yaH karOti|

tamAtmasthaM yEnupaSyaMti dhIrA-

stEShAM suKaM SASvataM nEtarEShAm

Truly, there is no diversity here. Those who perceive diversity due to the defects of the inner organs experience birth and death, as they have to conform to what they believe in. What one intensely believes in, that one experiences, because every belief pertains to an aspect of reality. But, because individual beliefs are partial, the experiences corresponding to these too are partial. This is the reason, why desirers or perceivers of quality and

multiplicity do not have absolute experience, but are caught in the meshes of the effects of their own desires.

Thus, as Allama Prabhu says, we can see the Lord only when we are free from all the transformations (jaundices) of our mind!

Let us learn to see the truth and keep an uncluttered mind!

KANNADA COMMENTARY

ಇಲ್ಲಿ ಸಾಮಾನ್ಯ ವ್ಯಕ್ತಿಯು ಈ ಜಗತ್ತನ್ನು ಅರಿತುಕೊಳ್ಳುವ ಬಗೆಯನ್ನು, ಪ್ರಕೃತಿಯಲ್ಲಿ ನಡೆಯುವ ಕ್ರಿಯೆಯಚಿತ್ರಣದ ಮೂಲಕ ತಿಳಿಸುತ್ತಿರುವರು ಅಲ್ಲಮಪ್ರಭುಗಳು. ಆಗಸದಲ್ಲಿ ಮೋಡಗಳು ಉಂಟಾಗುತ್ತವೆ, ಆ ಮೋಡಗಳು ಭೂಮಿಯ ಮೇಲೆ ಸುರಿಯುತ್ತವೆ. ಭೂಮಿ ಮನ ದಣಿಯೆ ನೀರನ್ನು ಹೀರಿಕೊಳ್ಳುತ್ತದೆ, ಅದರ ಫಲವಾಗಿ ಅನೇಕ ಸಸಿಗಳು ಬೆಳೆಯುತ್ತವೆ. ಇದು ಪ್ರಕೃತಿಯಲ್ಲಿ ನಡೆಯುವ ಸಹಜವಾದ ಕ್ರಿಯೆ. ಈ ಕ್ರಿಯೆಯನ್ನು ಮೇಲ್ನೋಟದಿಂದ ನೋಡಿ ನಾವು ಅದನ್ನು ನಮ್ಮ ಸೀಮಿತವಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತೇವೆ. ಇದೆಲ್ಲವೂ ಸಹಜವೇ. ಆದರೆ ಈ ಕ್ರಿಯೆಯ ಹಿಂದೆ ಇರುವ ಸತ್ಯದ ಕಡೆಗೆ ನಮ್ಮ ಗಮನ ಹೋಗುವುದಿಲ್ಲ. ಈ ವಚನದಲ್ಲಿ ಅದರ ಕಡೆಗೆ ನಮ್ಮ ಗಮನವನ್ನು ಸೆಳೆಯುವ ಪ್ರಯತ್ನ ನಡೆದಿದೆ. ಅಲ್ಲಮರು ಹೇಳುತ್ತಾರೆ, ಈ ಸಸಿಗಳು ಬಹು ವಿಕಾರದಿಂದ ಬೆಳೆದಿರುವವು ಎಂದು. ಅಂದರೆ ಅನೇಕ ಮಾರ್ಪಾಟುಗಳ ನಂತರ ಸಸಿಗಳು ರೂಪತಾಳುತ್ತವೆ. ಒಂದೇ ಶಕ್ತಿ ನಾನಾ ರೂಪ ತಾಳುತ್ತದೆ. ಆವಿಯಾಗಿ ಮೋಡವಾಗುತ್ತದೆ. ಅದೇ ಮೋಡ ನೀರಾಗಿ ಸುರಿಯುತ್ತದೆ. ಆ ನೀರನ್ನೇ ಭೂಮಿ ಕುಡಿಯುತ್ತದೆ, ನಾನಾ ಸಸಿಗಳ ರೂಪದಲ್ಲಿ ತೋರ್ಪಡಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಇರುವ "ಆ ಒಂದೇ" ಈ ಪ್ರಕೃತಿಯ ಇಡೀ ಕ್ರಿಯೆಯಲ್ಲಿ ಪ್ರತಿ ಹಂತದಲ್ಲಿಯೂ ವಿಕಾರಹೊಂದಿ ಭಿನ್ನ ಭಿನ್ನ ರೂಪ ತಾಳುತ್ತದೆ. ನಾವು ಹೊರಗೆ ಕಾಣುವ ಆ ಸೀಮಿತವಾದ ಆಕಾರವನ್ನಷ್ಟೇ ನಿಜವೆಂದು ನಂಬುತ್ತೇವೆ. ಸಸಿಯನ್ನು ನೋಡುವಾಗ ನಮಗೆ ಅದು ಮೋಡದ, ಮಳೆಯ, ಭೂಮಿಯ ರೂಪಕೂಡ ಎಂಬುದು ಗಮನಕ್ಕೆ ಬರುವುದಿಲ್ಲ. ಅಥವಾ ಈ ಎಲ್ಲದರ ಮೂಲ ರೂಪದಕಡೆಗೆ ಕೂಡ ಗಮನವಿರುವುದಿಲ್ಲ. ನಾವು ನೋಡುವುದು ಕೇವಲ ಸಸಿಯನ್ನು ಮಾತ್ರ. ಇದು ನಮ್ಮ ಗ್ರಹಿಕೆ. ನಾವು ಅದನ್ನು ಗ್ರಹಿಸುವುದು ಹೇಗೆ? ಅದನ್ನು ಗ್ರಹಿಸುವ ನಾವು ಕೂಡ ವಿಕಾರಿಗಳು, ಎಂದರೆ, ನಮ್ಮ ದೃಷ್ಟಿಯು ಶುದ್ಧವಾದುದಲ್ಲ. ಅದು ಅನೇಕ ಪ್ರಭಾವಗಳಿಗೆ ಒಳಗಾಗಿದೆ. ಕಾಮ ಅಥವಾ ಬಯಕೆಯಿಂದ ಕೂಡಿ ಅದು ಇನ್ನೂ ವಿಕಾರಗೊಂಡಿದೆ. ಆದ್ದರಿಂದಲೇ ಸಸಿಯನ್ನು ನಾವು, ಚೆನ್ನಾಗಿದೆ, ಚೆನ್ನಾಗಿಲ್ಲ, ಉಪಯೋಗಕ್ಕೆ ಬರುತ್ತದೆ, ಉಪಯೊಗಕ್ಕೆ ಬರುವುದಿಲ್ಲ, ಗಿಡ್ಡವಾಗಿದೆ, ಉದ್ದವಾಗಿದೆ, ಹಸುರಾಗಿದೆ, ಅಥವಾ ಇಲ್ಲ, ಅದರಲ್ಲಿ ಔಷಧಿಯಗುಣವಿದೆ ಎಂಬಂತಹ ಹೋಲಿಕೆಯ ದೃಷ್ಟಿಯಿಂದ ಅದನ್ನು ನೋಡುತ್ತೇವೆ.ಈ ಹೋಲಿಕೆಗಳು ನಮ್ಮ ಅನುಭವಗಳನ್ನು ಅವಲಂಬಿಸಿರುತ್ತವೆ, ಈ ರೀತಿಯಾಗಿ ನೋಡುವ ನಮ್ಮ ದೃಷ್ಟಿ ಅನೇಕ ಪ್ರಭಾವಗಳಿಂದ ವಿಕಾರಗೊಂಡಿರುತ್ತದೆ. ಇಂತಹ ವಿಕಾರಗೊಂಡ ದೃಷ್ಟಿಯಿಂದ, ವಿಕಾರಗಳಿಂದ ಉಂಟಾದದ್ದನ್ನು ನೋಡಿ ಅದನ್ನೇ ಸತ್ಯವೆಂದು ಗ್ರಹಿಸುತ್ತೇವೆ. ಅಂದರೆ ನಾವು ಗ್ರಹಿಸುವ ಎಲ್ಲವೂ ವಿಕಾರಮಯವೇ. ಇಂತಹವರು ಯಾವ ವಿಕಾರಕ್ಕೂ ಒಳಗಾಗದ ಗುಹೆಶ್ವರಲಿಂಗವನ್ನು ಕಾಣಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ ಅಲ್ಲಮರು.

ಇದನ್ನು ಕಠೋಪನಿಷತ್ತಿನಲ್ಲಿ ಈ ರೀತಿಯಲ್ಲಿ ಹೇಳಲಾಗಿದೆ.

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ|
ಏಕಸ್ತಥಾ ಸರ್ವ ಭೂತಾಂತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ

ಅಗ್ನಿಯು ಹೇಗೆ ಈ ಲೋಕವನ್ನು ಪ್ರವೇಶಿಸಿ ತಾನು ಸುಡತಕ್ಕ ವಸ್ತುಗಳಿಗನುಗುಣವಾಗಿ ಬಹು ವಿಧವಾಗಿರುತ್ತದೆಯೋ ಹಾಗೆಯೇ ಪಂಚಭೂತಗಳಲ್ಲಿರುವ ಒಬ್ಬನೇ ಆತ್ಮನು ಎಲ್ಲ ರೂಪಗಳಿಗೂ ಮೂಲವಾಗಿರುವನು, ಮತ್ತು ಹೊರಗೂ ಇರುವನು. ಇದನ್ನೇ ಇನ್ನೂ ಸ್ಪಷ್ಟಪಡಿಸುತ್ತಾ-

ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ|
ತಮಾತ್ಮಸ್ಥಂ ಯೇನುಪಶ್ಯಂತಿ ಧೀರಾ-
ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ಎಂದು ಹೇಳುತ್ತದೆ ಕಠೋಪನಿಷತ್ತು.

ಆತ್ಮನು ಅದ್ವಿತೀಯನು, ಆತನು ಸರ್ವ ಪ್ರಾಣಿಗಳ ಅಂತರಾತ್ಮನು, ಜಗತ್ತೆಲ್ಲವೂ ಆತನ ವಶದಲ್ಲಿರುತ್ತದೆ. ಆತನು ಏಕನಾದರೂ ನಾಮ ರೂಪಗಳೆಂಬ ಉಪಾಧಿಗಳಿಂದ ಬಹುವಿಧವಾಗಿರುತ್ತಾನೆ. ಆತನ ಮೂಲರೂಪವನ್ನು ಯಾವ ವಿವೇಕಿಗಳು ನೋಡುತ್ತಾರೆಯೋ ಅವರಿಗೆ ಶಾಶ್ವತವಾದ ಸುಖವು ದೊರೆಯುತ್ತದೆಯೇ ಹೊರತು ಇತರರಿಗಲ್ಲ.

ಎಂದರೆ ಅಲ್ಲಮರು ಹೇಳುವಂತೆ ನಮ್ಮ ಮನಸ್ಸಿನ ಎಲ್ಲ ವಿಕಾರಗಳನ್ನು ಕಳೆದುಕೊಂಡಾಗ ಮಾತ್ರ ಆ ಗುಹೇಶ್ವರನ ಅರಿವು ಉಂಟಾಗಲು ಸಾಧ್ಯ.

Vachana 79: Ghanagambhira Mahavarudhiyalli – All in Him and Him in All

ಘನಗಂಭೀರ ಮಹಾವಾರುಧಿಯಲ್ಲಿ
ನೊರೆ ತೆರೆ ಬುದ್ಬುದ ಫೇನ ತರಂಗಗಳು ತೋರಿತ್ತಲ್ಲಾ ಎಂದಡೆ
ಅವು ಬೇರೆಯಾಗಬಲ್ಲವೆ?
ಪರ ಶಿವನೆಂಬ ಅಂಬುಧಿಯಲ್ಲಿ
ಸಕಲ ಬ್ರಹ್ಮಾಂಡಗಳಾದವಲ್ಲದೆ ಬೇರಾಗಬಲ್ಲವೆ?
ಇದ ಬೇರೆಂಬ ಅರೆಮರುಳರ ನಾನೇನೆಂಬೆ?
ವಿಶ್ವವ ತಿಳಿದು ನೋಡಲು ಚೇಮಲಿಂಗೆಯ ಚೆನ್ನರಾಮನೆಂಬ ಲಿಂಗವು ತಾನೆ!

TRANSLITERATION

Ghana gaMbhIra mahaavaarudhiyalli
Nore tere budbuda phEna taraMgagaLu tOrittallaa eMdaDe
avu bEreyaagaballave?
parashivaneMba aMbudhiyalli
sakala brahmaaMDagaLaadavallade bEraagaballave?
Ida bEreMba aremaruLara naanEneMbe?
Vishvava tiLidu nODalu cImaliMgeya cennaraamaneMba liMgavu taane!

TRANSLATION (WORDS)

Ghana (profound) gaMbhIra (sublime) mahaavaarudhiyalli (in the enormous ocean) Nore (froth) tere (ripple) budbuda(bubble) phEna (foam) taraMgagaLu (waves) tOrittallaa (seen) eMdaDe(if said) avu (they) bEre (separate, diferent) aagaballuve?(can they be?) parashivanu (the Supreme Lord) eMba(said) aMbudhiyalli (in the ocean) sakala(all, entire) brahmaaMDagaLu (cosmos) aaduvallade (have not taken birth?) bEraagaballave? (will they be different, separate?)
Ida (this) bEreMba(saying, considering different) aremaruLara(half-witted individuals)

naanEneMbe?(what can I call?)
Vishvava(the Universe) tiLidu(understanding) nODalu (seen) cImaliMgeya cennaraamaneMba liMgavu (it is cimalingeya cennaraama Linga) taane (alone).

TRANSLATION

How can the froth, ripple, bubbles, foam and waves seen in the profound, sublime and enormous ocean, be separate from it (the ocean)?
How can the entire Cosmos having taken its birth in the ocean known as the Lord Supreme, be separate from Him?
What shall I call the half-witted individuals who call them separate?
To observe and understand the Universe in full, all one needs is cimalingeya cennaraama Linga!

COMMENTARY

In this Vachana, Sharana Chandimarasa is emphasizing that despite multiple forms, there is only one Supreme Lord. The froth, ripples, bubbles and waves all appear in the ocean as distinct entities. But, they all belong to the ocean, with their basic constituent of water. Along the same lines, the entire Cosmos has taken its birth from the Supreme Lord. The Cosmos consisting of Universe, the planets, the stars, etc. are infinite forms of Him and are not separate from Him. Chandimarasa calls those trying to separate the two as half-witted and proclaims that all one needs to understand the Universe, is just concentrating on the Lord. He uses the Cennaraama Linga of Cimalinge as his signature.
Allama Prabhu said that the basic truth (the Lord) is one, but takes infinite forms. Chandimarasa is supporting that notion. We have said that every being in the Universe (Jeevaatma) has a spark of the Supreme soul (Paramaatma). Thus the Lord exists in each of us and each of us exists in Him. Krishna in Bhagavad Gita said that “He is in all and all are in Him”.

Although the froth, ripples and waves are distinct forms, it is very easy to realize that their prime constituent is the water in the ocean. These forms do not have separate existence from water. All the entities around us (planets, plants, animals, etc.) are so different in their form, it is difficult for us to realize that the basic constituent of each is the Lord. Such realization requires a subtle awareness. Development of such awareness requires a calm and settled mind.

Let us realize, that one Lord in all we see !

KANNADA COMMENTARY

ಇದು ಶರಣ ಚಂದಿಮರಸರ ವಚನ. ಇಲ್ಲಿ ದೇವರ ರೂಪಗಳು ಬೇರೆಬೇರೆಯಾದರೂ ಆ ಪರಶಿವನು ಒಬ್ಬನೇ ಎಂಬುದನ್ನು ಅವರು ಉದಾಹರಣೆ ಸಹಿತ ತಿಳಿಸುತ್ತಿದ್ದಾರೆ. ಮಹಾಸಾಗರದಲ್ಲಿ ಕಂಡು ಬರುವ ಗುಳ್ಳೆ, ನೊರೆ, ತೆರೆಗಳನ್ನು ಸಾಗರವಲ್ಲದೆ ಬೇರೆ ಎನ್ನಬಹುದೆ? ಅವು ಸಾಗರದ ಮೇಲ್ಭಾಗದಲ್ಲಿ ಮಾತ್ರ ಕಂಡು ಬರುತ್ತವೆ. ಅಂದಮಾತ್ರಕ್ಕೆ ಅವು

ಸಾಗರದಿಂದ ಬೇರೆಯಾಗಬಲ್ಲುವೆ? ಇಲ್ಲ. ಅದೇ ರೀತಿಯಾಗಿ ಪರಶಿವನೆಂಬ ಸಾಗರದಲ್ಲಿ ಸಕಲ ಬ್ರಹ್ಮಾಂಡಗಳಿವೆ. ಇಡೀ ವಿಶ್ವ, ಸೂರ್ಯ ಚಂದ್ರ ಇತರ ಗ್ರಹಗಳು, ಆಕಾಶಗಂಗೆಗಳು, ಉಳಿದೆಲ್ಲವೂಗಳು ಆತನಲ್ಲಿಯೇ ಜನ್ಮತಾಳಿವೆ. ಅಂದಮೇಲೆ ಅವು ಆತನಿಂದ ಹೇಗೆ ಬೇರೆಯಾಗಬಲ್ಲವು? ಇದನ್ನು ಅರ್ಥಮಾಡಿಕೊಳ್ಳದೆ ಅವುಗಳನ್ನು ಬೇರೆ ಎನ್ನುವ ಅರೆಮರುಳರನ್ನು ಏನೆನ್ನಬೇಕು ಎಂದು ಕೇಳುತ್ತಾರೆ. ಹಿಂದೆ ಅಲ್ಲಮರು ಹೇಳಿದಂತೆ ಇರುವ ಆ ಒಂದು ತತ್ವವೇ ಬೇರೆ ಬೇರೆ ರೂಪದಲ್ಲಿ ಪ್ರಕಟವಾಗುತ್ತದೆ. ಅಂದಮಾತ್ರಕ್ಕೆ ಅದನ್ನು ಬೇರೆ ಬೇರೆ ಎನ್ನಲಾಗುವುದಿಲ್ಲ.

ನೀರಿನಲ್ಲಿ ಕಂಡು ಬರುವ ಅಲೆ,ಫೇನ, ಗುಳ್ಳೆಗಳು ಕೂಡ ನೀರೇ ಎಂದು ಅರ್ಥಮಾಡಿಕೊಳ್ಳುವುದು ಸುಲಭ. ಏಕೆಂದರೆ ಅವು ಇನ್ನೂ ನೀರಿನಲ್ಲಿಯೇ ಕಂಡುಬರುತ್ತವೆ.ಅವುಗಳಿಗೆ ನೀರಿನಿಂದ ದೂರವಾದ ಮೇಲೆ ಬೇರೆ ಅಸ್ತಿತ್ವವಿಲ್ಲ. ಆದರೆ ಪ್ರಕೃತಿಯಲ್ಲಿ ಇತರ ರೂಪಗಳು ಬಹು ಭಿನ್ನ ಭಿನ್ನವಾಗಿ ಕಂಡುಬರುತ್ತವೆ. ಅದು ಕೇವಲ ತೋರಿಕೆ. ಆದರೆ ಅವುಗಳ ರೂಪ ಸಂಪೂರ್ಣ ಭಿನ್ನವಾಗಿ ಕಾಣುತ್ತದೆ. ಆ ವಿಭಿನ್ನ ವಾದ ರೂಪಗಳ ಹಿಂದೆಯೂ ಕೂಡ ಅದೇ ತತ್ತ್ವ ಅಡಕವಾಗಿದೆ, ಆ ಎಲ್ಲವೂ ಕೂಡ ಒಂದೇ ಎಂದು ಕಂಡುಕೊಳ್ಳಲು ಸೂಕ್ಷ್ಮವಾದ ದೃಷ್ಟಿಯ ಅವಶ್ಯಕತೆ ಇದೆ. ಆ ಸೂಕ್ಷ್ಮ ದೃಷ್ಟಿ ಅಳವಡಬೇಕಾದರೆ ಮನಸ್ಸು ಶಾಂತವಾಗಬೇಕು. ಈ ರೀತಿಯಾಗಿ ಚೇಮಲಿಂಗೆಯ ಚೆನ್ನರಾಮನನ್ನು ಅರ್ಥಮಾಡಿಕೊಳ್ಳದ ಜನರು ಅರೆಮರುಳು ಎನ್ನುವರು ಚಂದಿಮರಸರು.

Vachana 80: Ettana Maamara - How are we related?

ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ?

ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯ?

ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?

TRANSLITERATION

ettaNa maamara ettaNa kOgile ettaNiMdetta saMbaaMdhavayyaa?
beTTada nellikaayi samudradoLagaNa uppu ettaNiMdetta saMbaMdhavayyaa?
guhEshvara liMgakkeyU enageyU ettaNiMdetta saMbaMdhavayyaa?

TRANSLATION (WORDS)

ettaNa (from where) maamara(mango tree) ettaNa (from where) kOgile (Nightingale, koel bird) ettaNiMdetta (how are they) saMbaaMdhavayyaa?(connected, What is the relationship)
beTTada(of the hill) nellikaayi(goose berry) samudradoLagaNa(in the sea) uppu (salt) ettaNiMdetta(how are they) saMbaMdhavayyaa?(connected? ,How are they related?)
guhEshvara liMgakkeyU(Guheshvara Linga and) enageyU (me) ettaNiMdetta (how are they) saMbaMdhavayyaa?(connected? What is the relationship?)

TRANSLATION

The Mango tree and the Nightingale bird, how are they related?
The mountain Goose berry and the salt from the sea, how are they related?
Lord Guheshvara Linga and and me, how are we related?

COMMENTARY

In this very popular Vachana from Allama Prabhu, he wonders about the relation between two sets of disparate entities to drive home the catalyst needed to accomplish the merger (Saamarasya) of the individual (Jeevatma, Anga) with the Lord (Paramaatma, Linga). Through his wondering style, Allama Prabhu succeeds in raising the curiosity of the

listener as to what the Vachana is about to address.

A Mango tree with its ever full foliage is hardly noticed by anyone during most of the year. As the Spring arrives, it starts putting out golden pink leaves, followed by fragrant flowers and delicious fruits. The Nightingale bird mute hitherto gets attracted by this transformed tree and starts making its melodies. The tree and the bird were totally unrelated until the arrival of Spring. The Spring season is the catalyst to bring the two together and cultivate the best in both.

The Goose berry grown on trees somewhere in the forest is very astringent in taste. It is certainly far away from the sea. But when a chemist separates salt from the sea, and the gooseberry is eaten with the salt, the combination of astringent and salt tastes very good. The chemist is the catalyst for this transformation.
Allama prabhu wonders as to what is the relation between the omnipotent, omniscient, omnipresent Lord (who is pure, beyond the influence of Maya or worldly lures, who is beyond time and causes and effects, so on) and an individual (who is immersed in Maya and materialistic pursuits, lives in past and future, consumed by ego, so on). The catalyst needed to forge the relation between the two entities here, is the awakening of the awareness in the individual of the Lord within. We have said that when the intense desire to seek the spiritual path sprouts in the individual, a teacher (Guru) appears to guide him towards the merger with the Lord (i.e. Linga-Anga Saamarsya, or reaching the Bayalu, realizing the Self, achieving the Null!).

The nature has disparate entities seemingly and usually unrelated at the first sight. When we develop the inclination to see the finer details and develop the awareness to fuse them, we see the world in its finest glory.

Let us seek the fineness in everything around us!

KANNADA COMMENTARY

“ಎತ್ತಣ ಮಾಮರ ಎತ್ತಣ ಕೋಗಿಲೆ” ಎಂಬ ಅಲ್ಲಮ ಪ್ರಭುಗಳ ಈ ವಚನ ಕಿವಿಗೆ ಎಷ್ಟು ಆಪ್ಯಾಮಾನವೋ ಮತ್ತು ಎಷ್ಟು ಪ್ರಸಿದ್ಧವೋ ಅಷ್ಟೇ ಅದರ ಭಾವ ಕೂಡ ಸುಂದರವಾಗಿದೆ. ಅನುಭಾವಿಗಳಾದ ಅಲ್ಲಮರೇ ಕೌತುಕಗೊಳ್ಳುವಂತೆ ಮಾಡಿದ ವಿಷಯವನ್ನು ಎಲ್ಲರಲ್ಲಿ ಇನ್ನೂ ಹೆಚ್ಚಿನ ಕೌತುಕ ಹುಟ್ಟುವಂತೆ ಹೇಳಿದ್ದಾರೆ ಈ ವಚನದಲ್ಲಿ.

ಇಲ್ಲಿ ಮಾಮರ ಮತ್ತು ಕೋಗಿಲೆಯ, ಬೆಟ್ಟದ ನೆಲ್ಲಿಕಾಯಿ ಮತ್ತು ಉಪ್ಪಿನ. ಪರಮಾತ್ಮ ಮತ್ತು ಜೀವಾತ್ಮನ ಸಂಬಂಧದ ಬಗ್ಗೆ ಹೇಳುತ್ತಿದ್ದಾರೆ. ಮಾಮರ ಮತ್ತು ಕೋಗಿಲೆಗಳು ಇಡೀ ವರ್ಷವೆಲ್ಲ ಯಾರ ಗಮನಕ್ಕೂ ಬಾರದೆ, ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಇರುತ್ತವೆ. ಆದರೆ ವಸಂತ ಋತು ಬಂತೆಂದರೆ ಸಾಕು ಮಾಮರ ಅಗಾಧ ಸೌಂದರ್ಯದ ಗಣಿಯಾಗುತ್ತದೆ. ತಾಮ್ರವರ್ಣದ ಚಿಗುರುಗಳು ಕೆಲ ಸಮಯದಲ್ಲಿಯೇ ಪಚ್ಚೆಬಣ್ಣ ತಾಳುತ್ತವೆ, ಇಡೀ ಮರವು ಹೊಸ ಕಾಂತಿಯಿಂದ ನಳನಳಿಸುತ್ತದೆ. ನವಿರಾದ ಸುಗಂಧ ಬೀರುವ ಹೂವಿನ ಗೊಂಚಲುಗಳು ಮರವೆಲ್ಲ ಆವರಿಸಿಬಿಡುತ್ತವೆ. ಎಲ್ಲಿಯೋ ಮೂಕವಾಗಿದ್ದ ಕೋಗಿಲೆ ಇದ್ದಕ್ಕಿದ್ದಂತೆ ಕಂಠಸಿರಿಯಿಂದ ಅವತರಿಸುತ್ತದೆ. ಮಾಮರಕ್ಕೆ ಬಂದು ಪಂಚಮ

ಸ್ವರದಲ್ಲಿ ಉತ್ಕಟತೆಯನ್ನು ತೋರುತ್ತ ಮಧುರ ಗಾನದಲ್ಲಿ ತೊಡಗುತ್ತದೆ. ಇದು ಎಂತಹ ಸಂಬಂಧವೆಂದು ಅಲ್ಲಮರು ಅಚ್ಚರಿಗೊಳ್ಳುತ್ತಾರೆ. ಅದೇ ರೀತಿ ಬೆಟ್ಟದ ನೆಲ್ಲಿಕಾಯಿಯು ಎಲ್ಲೋ ದೂರದ ಕಾಡಿನಲ್ಲಿ ಬೆಳೆಯುತ್ತದೆ. ಉಪ್ಪು, ಸಮುದ್ರದ ನೀರಿನಲ್ಲಿ ಅಡಗಿರುತ್ತದೆ. ರಸಜ್ಞನೊಬ್ಬನು ಅ ಸಮುದ್ರದ ನೀರಿನಲ್ಲಿಯ ಉಪ್ಪನ್ನು ಬೇರ್ಪಡಿಸಿದಾಗ, ಅದನ್ನು ನೆಲ್ಲಿಯಕಾಯಿಯ ಜೊತೆಗೆ ತಿಂದಾಗ ಬೆಟ್ಟದ ನೆಲ್ಲಿಕಾಯಿಯ ಒಗರು ರುಚಿ ಉಪ್ಪಿನ ರುಚಿಯ ಜೊತೆ ಸೇರಿ. ತಿನ್ನಲು ಇನ್ನೂ ಹಿತವಾಗಿರುತ್ತದೆ. ಅದರ ಸ್ವಾದವನ್ನು ತಿಂದೇ ಅನುಭವಿಸಬೇಕು. ಇಂತಹ ಆಪ್ಯಾಯಮಾನವಾದ ರುಚಿಯನ್ನು ಕೊಡುವ ಈ ಎರಡರ ಸಂಬಂಧವೆಂತಹುದು? ಎಂದು ಅಚ್ಚರಿಪಡುತ್ತಾರೆ ಅಲ್ಲಮರು. ಪ್ರಕೃತಿಯಲ್ಲಿನ ಈ ಎರಡು ಉದಾಹರಣೆಗಳ ನಂತರ ಈಗ ಅಲ್ಲಮರು ಈಶ್ವರ ಮತ್ತು ಜೀವರ ಸಂಬಂಧದ ಬಗ್ಗೆ ಹೇಳುತ್ತಾರೆ. ಗುಹೆಶ್ವರ ಲಿಂಗಕ್ಕೂ ಮತ್ತು ತನಗೂ ಎಂಲ್ಲಿಂದೆಲ್ಲಿಯ ಸಂಬಂಧವೆನ್ನುತ್ತರೆ. ಎಲ್ಲ ಗುಣಗಳನ್ನು ಮೀರಿದವನು, ನಿಷ್ಕಳಂಕನು, ಶಬ್ದಾತೀತನು, ಮಾಯಾತೀತನು, ಸಂಸಾರದ ಆಗುಹೋಗುಗಳಿಗೆ ಸಿಲುಕದವನು, ಕಾಲಾತೀತನು ಆದ ಗುಹೇಶ್ವರನಿಗೂ ಮತ್ತು ಕಾಮಾದಿಗಳಲ್ಲಿ ಮುಳುಗಿ ನರಳುವ, ಸಂಸಾರ ಸಾಗರದಲ್ಲಿ ತೊಳಲುವ, ಭೂತ, ವರ್ತಮಾನ ಮತ್ತು ಭವಿಷ್ಯದಲ್ಲಿ ಉಯ್ಯಾಲೆಯಾಡುವ, ಅಹಂಕಾರದಿಂದ ಮೆರೆದಾಡುವ ಈ ಜೀವನಿಗೂ ಎಲ್ಲಿಂದೆಲ್ಲಿಯ ಸಂಬಂಧವೆಂದು ಅಚ್ಚರಿ ಪಡುತ್ತಾರೆ ಅಲ್ಲಮರು. ಎಲ್ಲವನ್ನೂ ಮೀರಿ ಅನಂತ ಎತ್ತರದಲ್ಲಿರುವ ಆ ಗುಹೇಶ್ವರನಿಗೂ ಈ ಸಂಸಾರದ ಕೆಸರಿನಲ್ಲಿ ತೊಳಲುತ್ತಿರುವ ಜೀವನಿಗೂ ಸಂಬಂಧವೇ ಇಲ್ಲದಂತೆ ತೋರುತ್ತದೆ. ಆದರೆ ಸಮಯ ಕೂಡಿದಾಗ, ಗುರುವಿನ ಕರುಣೆಯಾದಾಗ, ಆ ಪರಮಾತ್ಮನ ಒಲವು ಜೀವನ ಮೇಲೆ ಹರಿದಾಗ ಈ ಎರಡೂ ಒಂದಾಗುತ್ತವೆ. ಪರಮಾತ್ಮ ಮತ್ತು ಜೀವಾತ್ಮನ ಈ ಸಂಬಂಧವು ಅತ್ಯಂತ ಆಶ್ಚರ್ಯಕರವಾದದ್ದು ಎಂಬುದನ್ನು ಕೇವಲ ಉದ್ಗಾರಗಳ ಮೂಲಕ ಈ ವಚನದಲ್ಲಿ ವ್ಯಕ್ತ ಪಡಿಸುತ್ತಿದ್ದಾರೆ. ಮಾಮರ ಮತ್ತು ಕೋಗಿಲೆಯ ಸಂಬಂಧದಲ್ಲಿ ವಸಂತ ಋತು ಅವುಗಳನ್ನು ಕೂಡಿಸುವ ನೆಪವಾಗುತ್ತದೆ. ಬೆಟ್ಟದ ನೆಲ್ಲಿಕಾಯಿ ಮತ್ತು ಉಪ್ಪಿನ ಸಂಬಂಧವನ್ನು ಹೊಸೆಯಲು ರಸಜ್ಞನು ನೆಪವಾಗುತ್ತಾನೆ, ಮತ್ತು ಈಶ್ವರ ಮತ್ತು ಜೀವನ ಸಂಬಂಧ ಹೊಸೆಯಲು ಗುರುವು ಕಾರಣನಾಗುತ್ತಾನೆ. ಈ ಪ್ರಕೃತಿಯಲ್ಲಿ ಎಲ್ಲವೂ ಎಲ್ಲೆಲ್ಲೋ ದೂರದೂರದಲ್ಲಿ ಇರಬಹುದು. ಆದರೆ ಎಲ್ಲವೂ ಒಂದಕ್ಕೊಂದು ಕಣ್ಣಿಗೆ ಕಾಣಲಾರದ, ಶಬ್ದಗಳಲ್ಲಿ ವ್ಯಕ್ತಪಡಿಸಲಾರದ ಸಂಬಂಧ ಹೊಂದಿರುತ್ತವೆ. ಸುಪ್ತವಾದ ಅಂತಹ ಸಂಬಂಧವನ್ನು ನಾವು ಕಂಡುಕೊಳ್ಳುವುದು ಅಥವಾ ಆ ಸಂಬಂಧಕ್ಕೆ ಸಂವೇದನಶೀಲರಾಗಿರುವುದು ಮುಖ್ಯವಾದದ್ದು, ಆ ಸಂವೇದನಾಶೀಲತೆಯು ನಮ್ಮನ್ನು ಪರಮಾತ್ಮನ ಜೊತೆಗೂಡಿಸತ್ತದೆ ಎಂಬ ಧ್ವನಿ ಈ ವಚನದ್ದು.

Vachana 81: nambaru Neccharu – Belief and Trust

ನಂಬರು ನೆಚ್ಚರು ಬರಿದೆ ಕರೆವರು ನಂಬಲರಿಯರೀ ಲೋಕದ ಮನುಜರು

ನಂಬಿ ಕರೆದಡೆ ಓ ಎನ್ನನೆ ಶಿವನು?

ನಂಬದೆ ನೆಚ್ಚದೆ ಬರಿದೆ ಕರೆವರ

ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ

TRANSLITERATION

naMbaru neccaru baride karevaru
naMbalariyarI jagada manujaru
naMbi karedaDe O ennane shivanu?
namBade neccade baride karevara
koMba meTTi kUgeMda kUDalasaMgamadEva

TRANSLATION (WORDS)

naMbaru (they don't believe) neccaru (they don't trust) baride (simply, just) karevaru(they call, plea)
naMbalariyaru (don't know to believe) I (this) jagada (world's) manujaru (people)
naMbi (with belief) karedaDe (if one calls) O ennane (will he not respond?) shivanu (Shiva)?
namBade (without believing) neccade (without trusting) baride (simply) karevara (of people who call)
koMba (horn- symbol of ego) meTTi (stamp, trample) kUgeMda (announce, let others know it) kUDalasaMgamadEva (Kudalsamgamadeva)

TRANSLATION

They neither believe nor trust, but just call Him.
These people of the world, who don't know how to believe!
If they call with belief and faith, would He not respond?
To those who call Him without belief or trust,
"Blow the horn and shout" says Kudala Sangama Deva.

COMMENTARY

In this popular Vachana, Basavanna identifies trust and belief as required prerequisites for true devotion. He says that people simply call on God when needed without true belief and trust (faith) and assume that He will respond with the requested favors. The Vachana

advocates that people in this category must be shouted at with the highest vigor to cultivate belief and trust first.

We become devotees the moment a hardship arises and request God to favor us with all His powers. We go through ritualistic worship and chanting without even understanding the meaning behind them. We tend to show off that we are true devotees. All these are activities in vain, without the required faith and belief. Requisite for the development of faith and belief is the true knowledge and awareness of God.

Consider the mundane activity of using a car as our transportation. It is essential that we understand the essential features, capabilities and requirements for using it. We should know how to fill its tank with the fuel, occasionally wash it and clean it, get the maintenance done, so on. Further, we cannot expect the car to let us fly in it or transport us over the ocean. Once we understand its capabilities and develop faith in its fitness to be a safe transport, we can be sure that it serves the purpose well.

God cannot be seen or touched. He can only be experienced. Understanding Him requires a subtle and calm mind and a keen awareness. We need to gain such understanding and call Him with true faith and belief, for Him to respond. This process of learning the true nature of everything around us, not tinging them with our biases, realizing the true and natural relationships between entities seem to be the optimum living!

Let us become true believers and devotees!

KANNADA COMMENTARY

ಬಸವಣ್ಣವರು ಈ ವಚನದಲ್ಲಿ ತಮ್ಮನ್ನು ತಾವು ಭಕ್ತರೆಂದುಕೊಳ್ಳುವವರು ನಡೆದುಕೊಳ್ಳುವ ರೀತಿಯನ್ನು ಹೇಳುತ್ತಿರುವರು. ತಮ್ಮನ್ನು ತಾವು ಭಕ್ತರೆಂದು ಹೇಳಿಕೊಳ್ಳುವ ಸಾಮಾನ್ಯರು ದೇವರನ್ನು ನಿಜವಾಗಿ ನಂಬುವುದಿಲ್ಲ, ನಂಬಿದ್ದೇವೆ ಎಂದುಕೊಳ್ಳುತ್ತಾರೆ ಅಷ್ಟೆ. ಈ ಲೋಕದ ಜನರು ಶಿವನನ್ನು ನಂಬುವುದು ಏನೆಂದು ಅರಿಯರು. ಆದರೆ ಕಷ್ಟ ಬಂದಾಗ ಮಾತ್ರ ಕಷ್ಟದಿಂದ ಮುಕ್ತಿ ಪಡೆಯಲು ಆತನನ್ನು ಕರೆಯುವರು. ಅಂತಹವರ ಕರೆಗೆ ಶಿವನು ಓಗೊಡುವನೆ? ಇಂತಹವರನ್ನು "ನಂಬರು ನೆಚ್ಚರು ಬರಿದೆ ಕರೆವರು"ಎನ್ನುತ್ತಿದ್ದಾರೆ. ನಿಜವಾಗಿಯೂ ನಂಬಿ ಕರೆದರೆ ಶಿವನು ಖಂಡಿತವಾಗಿಯೂ ಕರೆಗೆ ಓಗೊಡುವನು ಎನ್ನುತ್ತಾರೆ.

ನಿಜವಾಗಿಯೂ ನಂಬುವುದು ಎಂದರೆ ಏನು?

ನಾವು ಯಾವುದನ್ನು ನಂಬುತ್ತೇವೆಯೋ ಅದರ ಬಗ್ಗೆ ನಮಗೆ ಸರಿಯಾದ ಜ್ಞಾನವಿರಬೇಕು. ಇಲ್ಲಿ ಒಂದು ಸಾಮಾನ್ಯವಾದ ಉದಾಹರಣೆಯನ್ನು ನೋಡ ಬಹುದು. ನಾವು ಸಂಚಾರಕ್ಕಾಗಿ ಕಾರನ್ನು ನಂಬುತ್ತೇವೆ ಎಂದಿಟ್ಟುಕೊಳ್ಳೋಣ. ಬರಿದೆ ಅದನ್ನು ನಂಬುವುದರಿಂದ ನಮ್ಮ ಸಂಚಾರದ ಎಲ್ಲ ಸಮಸ್ಯೆಗಳು ಬಗೆ ಹರಿಯುವುದಿಲ್ಲ. ಕಾರಿನ ಸಾಮರ್ಥ್ಯ, ಶಕ್ತಿ ಮತ್ತು ಅದರ ಅವಶ್ಯಕತೆಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಅದನ್ನು ಆಗಾಗ ಕಾಳಜಿ ವಹಿಸಿ ಸ್ವಚ್ಛಗೊಳಿಸಬೇಕಾಗುತ್ತದೆ. ಅದರ ಭಾಗಗಳು ಸರಿಯಾಗಿ ಕೆಲಸ ಮಾಡುವ ಸ್ಥಿತಿಯಲ್ಲಿವೆಯೇ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಅವು ಸರಿಯಾಗಿ

ಕೆಲಸ ಮಾಡುವಂತೆ ನೋಡಿಕೊಳ್ಳಬೇಕಾಗುತ್ತದೆ. ಅದರಲ್ಲಿ ಇಂಧನವನ್ನು ತುಂಬಿಸಬೇಕಾಗುತ್ತದೆ. ಇಷ್ಟೆಲ್ಲ ಮಾಡಿದಾಗ ಮಾತ್ರ ಅದನ್ನು ಒಂದು ಸೀಮಿತವಾದ ಮಟ್ಟಕ್ಕೆ ನಂಬಬಹುದು. ಇದಾವುದನ್ನೂ ಮಾಡದೆ, ಕಾರಿನ ಬಗ್ಗೆ ಸರಿಯಾದ ತಿಳಿವಳಿಕೆಯಿಲ್ಲದೆ, ಕಾರು ತನ್ನನ್ನು ನೀರಿನ ಮೇಲೆಯೂ ಕರೆದುಕೊಂಡು ಹೋಗಬೇಕು, ಆಕಾಶಮಾರ್ಗದಲ್ಲಿಯೂ ಕರೆದುಕೊಂಡುಹೋಗಬೇಕು, ತನ್ನ ಸಂಚಾರದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಆಸೆಪಟ್ಟರೆ ಆ ಆಸೆ ಪೂರ್ತಿಯಾಗುತ್ತದೆಯೇ? ಖಂಡಿತವಾಗಿಯೂ ಇಲ್ಲ.
ಈ ಎಲ್ಲದರ ಅರ್ಥವೇನಾಯಿತು?

ಅಂದರೆ ಕಾರನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳುವುದು, ಅದರ ಬಗ್ಗೆ ಪೂರ್ಣವಾದ ಅರಿವು ಪಡೆಯುವುದು ಎಂದಲ್ಲವೆ. ಆ ಅರಿವು ವೈಜ್ಞಾನಿಕವಾದದ್ದು. ಅಂದರೆ ಅದರ ಬಗ್ಗೆ ನಮ್ಮ ತಿಳಿವಳಿಕೆಗೆ ಒಂದು ಗಟ್ಟಿಯಾದ ಆಧಾರವಿರುತ್ತದೆ. ಅದು ಕೇವಲ ಕುರುಡು ನಂಬಿಕೆಯಲ್ಲ. ಅಲ್ಲವೆ?

ಇದೇ ರೀತಿಯಾಗಿ ದೇವರ ಬಗ್ಗೆಯೂ ನಮ್ಮ ಅರಿವು ಗಟ್ಟಿಯಾಗಿರಬೇಕಾಗುತ್ತದೆ. ಅದು ಅರ್ಥವಿಲ್ಲದ ಯಾವುದೋ ಕುರುಡು ನಂಬಿಕೆಯಾಗಿರಬಾರದು. ದೇವರ ಬಗ್ಗೆ ಗಟ್ಟಿಯಾದ ಅರಿವನ್ನು ಹೊಂದಲು ಮನಸ್ಸು ಅತ್ಯಂತ ಸೂಕ್ಷ್ಮವಾಗಬೇಕಾಗುತ್ತದೆ, ಏಕೆಂದರೆ ದೇವರು ಕಣ್ಣಿಗೆ ಕಾಣುವ ಅಥವಾ ಕೈಯಿಂದ ಮುಟ್ಟಬಹುದಾದಂತಹ ವಸ್ತುವಲ್ಲ. ಅವನು ಕೇವಲ ಅನುಭಾವಕ್ಕೆ ಬರುವವನು. ಪ್ರಕೃತಿಯಲ್ಲಿಯ ಪ್ರತಿಯೊಂದರ ಸಂಬಂಧವನ್ನು ಆಳವಾಗಿ ಅವಲೋಕಿಸಿ ಅರ್ಥಮಾಡಿಕೊಳ್ಳಬೇಕಾಗುತ್ತದೆ, ಪ್ರಕೃತಿಯಲ್ಲಿ "ಇರುವುದನ್ನು" ಇರುವಂತೆಯೆ, ಅದಕ್ಕೆ ಯಾವುದೇ ಬಣ್ಣವು ಅಂಟಿಸದೆ ಅದರ ನಿಜವಾದ ರೂಪದಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಪ್ರಕೃತಿಯಲ್ಲಿ ಇಲ್ಲದೆ ಇರುವುದನ್ನು ಬೇಡುವುದರ ನಿರರ್ಥಕತೆ ಅರಿವಿಗೆ ಬರುತ್ತದೆ. "ಇರುವುದರ" ಬಗ್ಗೆ ಅಲ್ಲಿ ನಿಜವಾದ ನಂಬಿಕೆಯುಂಟಾಗುತ್ತದೆ. ಅಂತಹ ನಿಜವಾದ ನಂಬಿಕೆಗೆ ದೇವರು ಖಂಡಿತವಾಗಿಯೂ ಸ್ಪಂದಿಸುತ್ತಾನೆ ಎನ್ನುತ್ತಾರೆ ಬಸವಣ್ಣನವರು.

ಇದಾವುದನ್ನೂ ಮಾಡದೆ ಬರಿದೆ ದೇವರನ್ನು ನಂಬಿದ್ದೇನೆ ಎಂದುಕೊಂಡು ಆತನನ್ನು ಕರೆಯುವುದು, "ನಾನು ನಂಬಿದ್ದೇನೆ" ಎನ್ನುವ ಅಹಂಭಾವವಾಗುತ್ತದೆ. ಅಂತಹವರನ್ನು ಮೆಟ್ಟಿ ಕೂಗೆನ್ನುತ್ತಾರೆ, ಅವರ ಅಹಂಭಾವವನ್ನು ತುಳಿದು ಕೂಗಿ ಘೋಷಿಸು ಎನ್ನುತ್ತಾರೆ ಬಸವಣ್ಣನವರು.

Vachana 82: kangala mundana belaga kanade - See the Light!

ಕಂಗಳ ಮುಂದಣ ಬೆಳಗ ಕಾಣದೆ ಕಂಡಕಂಡವರ ಹಿಂದೆ ಹರಿದು,

ಇನ್ನು ಬೇರೆ ಕಂಡೆನೆಂಬ ಭಂಗಿತರ ನೋಡಾ!

ತನ್ನಲ್ಲಿ ತಾ ಸುಯಿದಾನಿಯಾಗಿ ನೋಡಲರಿಯದೆ,

ಭಿನ್ನಗಣ್ಣಲಿ ನೋಡಿಹೆನೆಂದು ತಮ್ಮ ಮರೆದು

ಇನ್ನುಂಟೆಂದು ಅರಸುವ ಅಣ್ಣಗಳಿರಾ, ನೀವು ಕೇಳಿರೆ.

ಮನವು ಮಹದಲ್ಲಿ ನಿಂದುದೆ ಲಿಂಗ;

ಕರಣಂಗಳರತುದೆ ಕಂಗಳ ಮುಂದಣ ಬೆಳಗು,

ಇದನರಿಯದೆ, ಮುಂದೆ ಘನವುಂಟೆಂದು ತೊಳಲಿ ಬಳಲಿ, ಅರಸಿಹೆನೆಂದು

ಅರೆಮರುಳಾಗಿ ಹೋದರಯ್ಯಾ ನಿಮ್ಮ ನೆಲೆಯನರಿಯದೆ

ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

TRANSLITERATION

kaMgala muMdaNa beLaga kaaNade kaMDakaMDavara hiMde haridu
innu bEre kaMDeneMba bhaMgitara nODaa!
Tannalli taa suyidaaniyaagi nODalariyade
bhinnagaNNali nODiheneMdu tamma maredu
innuMTeMdu arasuva aNNagaLiraa, nIvu kELire.
Manavu mahadalli niMdude liMga;
karaNaMgaratude kaMgaLa muMdaNa beLagu.
Idanariyade muMde ghanavuMTeMdu toLali baLali arasiheneMdu
aremaruLaagi hodarayyaa nimma neleyanariyade
appaNNapriya cennabasavaNNa

TRANSLATION (WORDS)

kaMgala(of eyes) muMdaNa (in front,) beLaga (light) kaaNade(without seeing) kaMDakaMDavara (every Tom, Dick and Harry, all kinds of people) hiMde (behind) haridu (going)
innu (now) bEre (other, different) kaMDeneMba (I saw) bhaMgitara(disappointed people) nODaa!(you see)
Tannalli (in oneself) taa (one) suyidaaniyaagi (being awake) nODalariyade (not knowing to see)
bhinnagaNNali (through different eye, other than being awake) nODiheneMdu (say that I have seen) tamma(themselves) maredu(forget)
innuMTeMdu (thinking that there is more) arasuva (seeking) aNNagaLiraa,(Oh! Brothers) nIvu kELire.(you listen)
Manavu (mind) mahadalli (in the profound) niMdude(If established) liMga;(that is linga)
karaNaMgaratude(that which is understood by the senses) kaMgaLa (the eyes) muMdaNa

(before) beLagu.(is light)
Idanariyade (without understanding this) muMde (somewhere far off) ghanavuMTeMdu(is profound) toLali (being suffered) baLali (being exausted) arasiheneMdu (saying that I have found)
aremaruLaagi (Half mad) hodarayyaa (are gone) nimma (your) neleyanariyade (not knowing dwelling, abode)
appaNNapriya cennabasavaNNa (Appannapriya chennabasavanna)

TRANSLATION

Pray see, these disappointed people running behind everyone else to find the light, without seeing the light right before their eyes!
Pray listen, Oh brothers! Without knowing how to awaken the within to see the divine, you are seeking the eyes of someone else to see the divine!
Establishing the mind in the profound is finding Him!
That which is understood by the senses is the light before the eyes!
Not realizing this, looking for the divine all over, they have suffered, exhausted and have become half-witted, while not finding Your Abode, Oh AppaNNapriya CennabasavaNNa!

COMMENTARY

This Vachana is from Sharane Lingamma, wife of Sharana Hadapada Appanna. She uses the signature AppaNNapriya (Appanna's beloved) CennabasavaNNa! She is lamenting on how we simply do not recognize the divine right before our eyes, but look for all the wrong places with all the wrong aids to see Him. To see the Light (the profound, the divine) all that is needed is awakening the within or developing a keen awareness. It has to come from within. It cannot be transferred by one to other. Lingamma says that establishing the mind in the Profound is the right light to be seen. We do not recognize this simple fact. We are always distracted by our senses and hence we are told that we need to control them. Lingamma on the other hand says that what we perceive from our senses leads to the divine light! We have all we need. It is just a matter of utilizing what our senses offer (i.e. understanding the senses) to see the divine. She is asking us to open our keen, observative eye and set the mind on the divine, rather than going around finding all sorts of devices, rituals and individuals to follow. While she calls us half-witted, tired and exhausted because of these unnecessary means, her compassion pours out when she uses 'Oh! Elder brothers!' to alert us!

Let us open our inner eyes to understand the senses and see the Light!

KANNADA COMMENTARY

ಇದು ಹಡಪದ ಅಪ್ಪಣ್ಣನವರ ಪತ್ನಿಯಾದ ಲಿಂಗಮ್ಮನ ವಚನ. ಇಲ್ಲಿ ಆಕೆ ಸಾಮಾನ್ಯರ ಅರೆಮರುಳುತನವನ್ನು ಚೆನ್ನಾಗಿ ತಿಳಿಸುತ್ತಿದ್ದಾಳೆ. ಆ ಮಹಾಬೆಳಗು ಕಣ್ಣಮುಂದೆಯೇ ಇದೆ. ಆದರೆ ಅದನ್ನು ನೋಡುವುದರಲ್ಲಿ ಜನರಿಗೆ ಆಸಕ್ತಿ ಇಲ್ಲ. ಕಂಡಕಂಡವರು ಹೇಳುತ್ತಿರುವುದರ ಹಿಂದೆ ಹೋಗುವುದರಲ್ಲಿ ಅವರಿಗೆ ಆಸಕ್ತಿ ಇದೆ. ಅವರ ಹಿಂದೆ ಹೋಗಿ ಏನೋ ಬೇರೆ ಕಾಣುತ್ತೇನೆ ಎಂದು ನಿರಾಶೆಗೊಳ್ಳುತ್ತಾರೆ. ತನ್ನನ್ನು ತಾನು ಶಾಂತಿಯಿಂದ, ಎಚ್ಚರಿಕೆಯ ಕಣ್ಣಿನಿಂದ ನೋಡಲು ಅರಿಯದೆ

ಬೇರೆ ಕಣ್ಣಿನಿಂದ ನೋಡುತ್ತೇನೆ ಎಂದು ತನ್ನನ್ನೇ ಮರೆತು ಬೇರೆ ಏನನ್ನೋ ಹುಡುಕುವವರನ್ನು ಪ್ರೀತಿಂದ ಅಣ್ಣಗಳಿರಾ ಎಂದು ಸಂಬೊಧಿಸುತ್ತ ಕಳಕಳಿಯಿಂದ ನೀವು ನೋಡಿರಿ, ಕೇಳಿರಿ ಎಂದು ಹೇಳುತ್ತಿದ್ದಾಳೆ. ಬೆಳಗನ್ನು ಕಾಣಲು ಸಾಧ್ಯವಾಗುವುದು ಕೇವಲ ಎಚ್ಚರವೆಂಬ ಕಣ್ಣಿನಿಂದ. ಅದನ್ನು ಬಿಟ್ಟು ಅಂದರೆ ಎಚ್ಚರವಾಗಿರಲು ಸೋಮಾರಿತನದಿಂದ ಬೇರೆ ಕಣ್ಣಲಿ ನೋಡುತ್ತೇನೆ ಎಂಬುದು ಹುಚ್ಚುತನ. ಅಂತಹವರಿಗೆ ಯಾವುದು ಬೆಳಗು, ಯಾವುದು ಲಿಂಗ ಎಂಬುದನ್ನು ಅತ್ಯಂತ ಸರಳವಾಗಿ ತಿಳಿಸುತ್ತಿದ್ದಾಳೆ. ಮನಸ್ಸು ಆ ಮಹತ್ತಿನಲ್ಲಿ ನೆಲೆಗೊಳ್ಳುವುದೇ ಲಿಂಗವೆನ್ನುತ್ತಾಳೆ. ಎಲ್ಲರಿಗೂ ಆ ಮಹತ್ತಿನ ಅನುಭವ ಯಾವಾಗಲಾದರೊಮ್ಮೆಯಾದರೂ ಆಗಿಯೇ ಆಗುತ್ತದೆ. ಆದರೆ ಎಲ್ಲರೂ ಅದನ್ನು ಗುರುತಿಸುವುದಿಲ್ಲ. ತಮ್ಮ ತಮ್ಮ ಲೋಕದಲ್ಲಿ, ಇಂದ್ರಿಯಗಳ ಎಳೆದಾಟದಲ್ಲಿ ಸಿಲುಕಿಕೊಂಡಿರುವುದರಿಂದ ಅದು ಗಮನಕ್ಕೆ ಬರುವುದಿಲ್ಲ. ಅಪ್ಪಿ ತಪ್ಪಿ ಅದು ಅನುಭವಕ್ಕೆ ಬಂದರೂ ಮನಸ್ಸನ್ನು ಅದರಲ್ಲಿ ನಿಲ್ಲಿಸುವುದು ಕಷ್ಟ ಸಾಧ್ಯ. ಆದರೆ ಮನಸ್ಸನ್ನು ಅದರಲ್ಲಿ ನಿಲ್ಲಿಸುವುದೇ ಲಿಂಗವೆನ್ನುತ್ತಾಳೆ ಹಡಪದ ಲಿಂಗಮ್ಮ. ಅಷ್ಟೇ ಅಲ್ಲ ಮುಂದೆ, ಎಚ್ಚರವಾಗಿದ್ದು ಇಂದ್ರಿಯಗಳನ್ನು ಗಮನಿಸಿ ಅರಿತುಕೊಳ್ಳುವುದೇ ಬೆಳಗು ಎನ್ನುತ್ತಾಳೆ. ಇಲ್ಲಿ ಗಮನಿಸಬೇಕಾದದ್ದೇನೆಂದರೆ ಇಂದ್ರಿಯಗಳನ್ನು ತುಳಿಯಬೇಕು ಅಥವಾ ನಿಗ್ರಹಿಸಬೇಕೆಂದು ಅವಳು ಹೇಳುತ್ತಿಲ್ಲ. ಅವುಗಳನ್ನು ಅರಿತುಕೊಳ್ಳಬೇಕೆಂದು ಹೇಳುತ್ತಿರುವುದು ವಿಶೇಷ. ಏಕೆಂದರೆ ಇಂದ್ರಿಯಗಳನ್ನು ನಿಗ್ರಹಿಸುವುದಾಗಲಿ ಅಥವಾ ತುಳಿದಿಡುವುದಾಗಲಿ ಎರಡೂ ಅಪಾಯಕಾರಿ. ಏಕೆಂದರೆ ನಿಗ್ರಹ, ತುಳಿತ ಸ್ವಲ್ಪ ಸಡಿಲವಾದರೂ ಸಾಕು ಇಂದ್ರಿಯಗಳು ಇಮ್ಮಡಿ ಶಕ್ತಿಯಿಂದ ತಲೆ ಎತ್ತಿ ದಾರಿತಪ್ಪಿಸುತ್ತವೆ. ಇದರ ಪೂರ್ಣವಾದ ಅರಿವಿದ್ದುದರಿಂದಲೇ ಲಿಂಗಮ್ಮ ಇಂದ್ರಿಯಗಳ ಅರಿವು ದೂರ ಹೋಗಬೇಕಾಗಿಲ್ಲ. ಎಚ್ಚರವಾಗಿರುವ ಕಣ್ಣುಗಳ ಮುಂದೆಯೇ ಅದು ಇರುತ್ತದೆ. ಅವುಗಳ ಅರಿವೇ ಕಣ್ಣ ಮುಂದಿರುವ ಬೆಳಗು ಅಥವಾ ಜ್ಞಾನ ಎನ್ನುತ್ತಾಳೆ. ಆ ಬೆಳಗನ್ನು ಕಾಣಲು ಎಲ್ಲಿಯೂ ಹೋಗಬೇಕಾಗಿಲ್ಲ, ಇತರ ಜ್ಞಾನಿಗಳನ್ನು ಹಿಂಬಾಲಿಸಬೇಕಾಗಿಲ್ಲ. ಇದನ್ನು ಅರಿಯದೆ ಎಲ್ಲೋ ದೂರದಲ್ಲಿ ಘನವಾದದ್ದೇನೋ ಇದೆ ಎಂದು ಭಾವಿಸಿ ಅದನ್ನು ಪಡೆಯಲು ತೊಳಲುವುದು, ಬಳಲುವುದು ಜನರ ರೀತಿಯಾಗಿದೆ. ಇಲ್ಲಿ ಆಕೆ ಬಳಸಿದ ತೊಳಲುವುದು, ಬಳಲುವುದು ಎಂಬ ಪದಗಳನ್ನು ಗಮನಿಸ ಬೇಕು. ತನ್ನಲ್ಲಿ ಇರುವುದನ್ನು ಕಡೆಗಣಿಸಿ, ಇಲ್ಲದ್ದನ್ನು ಬೇರೆ ಎಲ್ಲಿಯೋ ಹುಡುಕಿದರೆ ತೊಳಲಿಕೆ ಬಳಲಿಕೆಯಲ್ಲದೆ ಏನೂ ದೊರಕದು. ಇಂತಹ ಕೆಲಸ ಮಾಡುವವರು ದೇವರ ನೆಲೆಯನ್ನರಿಯದೆ ಅರೆಮರುಳಾಗಿ ಹೋಗುತ್ತಾರೆ. ಅವರು ಆ ಮರುಳುತನದಿಂದ ಹೊರಬರುವುದು ಸಾಧ್ಯವೇ ಇಲ್ಲವೆನ್ನುವ ಧ್ವನಿ ವಚನದಲ್ಲಿದೆ.

Vachana 83: Kangaleke Nodabedavendade Maanavu? - Overcoming Senses

ಕಂಗಳೇಕೆ ನೋಡಬೇಡವೆಂದಡೆ ಮಾಣವು?

ಶ್ರೋತೃಂಗಳೇಕೆ ಆಲಿಸಬೇಡವೆಂದಡೆ ಮಾಣವು?

ಜಿಹ್ವೆಯೇಕೆ ರುಚಿಸಬೇಡವೆಂದಡೆ ಮಾಣವು?

ನಾಸಿಕವೇಕೆ ವಾಸಿಸಬೇಡವೆಂದಡೆ ಮಾಣವು?

ತ್ವಕ್ಕೇಕೆ ಸೋಂಕಿಸಬೇಡವೆಂದಡೆ ಮಾಣವು?

ಈ ಭೇದವನರಿದು ನುಡಿಯಲು ಸಮಧಾತುವಾಯಿತ್ತು

ಗುಹೇಶ್ವರಲಿಂಗಕ್ಕೆ ಒಲಿದ ಕಾರಣ

ಅಭಿಮಾನ ಲಜ್ಜೆ ಬೇಸತ್ತು ಹೋಯಿತ್ತು

TRANSLITERATION

kaMgaLEke nODabEdaveMdaDe maaNavu?
shrOtRuMgaLEke aalisabEdaveMdaDe maaNavu?
jihveyEke rucisabEdaveMdaDe maaNavu?
naasikavEke vaasisabEdaveMdaDe maaNavu?
tvakkEke sOMkisabEdaveMdaDe maaNavu?
I bhEdavanaridu nuDiyalu samadhaatuvaayittu
guhEshvaraliMgakke olida kaaraNa
abhimaana lajje bEsattu hOyittu

TRANSLATION (WORDS)

kaMgaLEke (why do the eyes) nODabEdaveMdaDe(if asked not to see) maaNavu? (don't let go/ quit)
shrOtRuMgaLEke (why do the ears) aalisabEdaveMdaDe(if asked not to listen/ hear) maaNavu?(don't let go/ quit)
jihveyEke(why do the tongue) bEdaveMdaDe (if asked not to taste) maaNavu?(don't let go/ quit)
naasikavEke(why do the nose) vaasisabEdaveMdaDe(if asked not to smell) maaNavu? (don't let go/ quit)
tvakkEke(why do the skin) sOMkisabEdaveMdaDe (if asked not to touch) maaNavu?(don't let go/ quit)
I(this) bhEdavanaridu(by knowing this secret) nuDiyalu(if said, revealed) sama(equal, one with)dhaatuvaayittu (the original, the god)
guhEshvaraliMgakke(for Guheshvara) olida (surrender, love) kaaraNa(for the reason of)
abhimaana(pride) lajje (shame,shyness) bEsattu(bored, tired) hOyittu(disappeared)

TRANSLATION

Why do the eyes, when asked not to see, don't quit seeing?

Why do the ears, when asked not to hear, don’t quit hearing?
Why does the tongue, when asked not to taste, doesn’t quit tasting?
Why does the nose, when asked not to smell, doesn’t quit smelling?
Why does the skin, when asked not to touch, doesn’t quit touching?
On knowing the secret and revealing, they merge in Him!
On surrendering to Guhesvara Linga, pride and shyness get tired and dissappear!

COMMENTARY

The key phrase in this Vachana by Allama Prabhu is ‘sama (equal, one with)dhaatuvaayittu (the original, the god)’ meaning merging or one with Him. This is linga-anga saamarasya! What is holding us from achieving this state is our dependence on the five sense organs. We do not know how to be free from them. We can command these organs not to see, not to hear, not to taste, not to smell, and not to touch. But, they do not heed. Their very nature is always to sense the external. They are not designed to perceive the internal. Since we lack this knowledge, we get immersed in materialistic endeavors. When we experience good, we get intoxicated with joy and our ego goes further up. When we experience bad, our sorrow takes us down to depths. We can never have the strength to escape from the influence of the five sense organs. It is interesting that Allama Prabhu chooses to ask five questions one for each organ, instead of asking one common question for all. His repeated questioning must have come from his deep inspection of how to escape from the influence of these organs, or his intent to stress how important it is for us to look deep into the nature of these organs.

How does one gain the knowledge of becoming free from the influence of these organs? It has to come from a knowledgeable Guru who has conquered them. Once knowing this secret, the disciple follows it and overcomes the influence of sense organs and merges with God. Having merged with God and surrendered to Him, his ego, shyness and other negative attributes vanish. The lesson then is not attempting to control the sense organs, but to become free from their influence. The teacher can transfer the required knowledge, but the disciple is the one who has to follow it.

Let us not be swayed by the sensory pleasures and displeasures!

KANNADA COMMENTARY

“ಸಮಧಾತು” ಪದದ ಅರ್ಥವನ್ನು ನೋಡೋಣ. ಸಮ=ಸಮಾನ, ಒಂದೇ ರೀತಿಯ, ಧಾತು=ಮೂಲ ವಸ್ತು, ದೇವರು. ಜೀವವು ಮೂಲವಸ್ತುವಾದ ಆ ದೇವರೊಂದಿಗೆ ಒಂದಾಗುವುದು ಎಂದರ್ಥ. ಈ ದಿಸೆಯಲ್ಲಿ ಅಡ್ಡಿಯುಂಟಾಗುವುದು ಇಂದ್ರಿಯಗಳು ವಿಷಯಗಳಲ್ಲಿ ತೊಡಗುವುದರಿಂದ. ಲಿಂಗದೊಂದಿಗೆ ಒಂದಾಗದೆ ಇರುವುದಕ್ಕೆ ನಾವುಗಳು ಇಂದ್ರಿಯಗಳಿಗೆ ವಶವಾಗಿರುವುದೇ ಕಾರಣ. ಮತ್ತು ಅವುಗಳಿಂದ ಬಿಡುಗಡೆ ಪಡೆಯುವ ರೀತಿ ನಮಗೆ ತಿಳಿದಿಲ್ಲ. ನಾವು ಅವುಗಳಿಗೆ “ನೀನು ನೋಡಬೇಡ, ಆಲಿಸಬೇಡ, ವಾಸನೆ ನೋಡಬೇಡ, ಸ್ಪರ್ಶಿಸಬೇಡ, ರುಚಿಸಬೇಡ “ ಎಂದೆಲ್ಲ ಹೇಳುತ್ತೇವೆ. ಆದರೆ ಇಂದ್ರಿಯಗಳು ಯಾವುದನ್ನೂ ಕೇಳುವುದಿಲ್ಲ. ಏಕೆಂದರೆ ಅವುಗಳ ರೀತಿಯೇ ಹೊರಗೆ ಹೋಗುವುದು. ಅಂದರೆ ಹೊರಗೆ ಇರುವುದಕ್ಕೇ ಮಹತ್ವ ಕೊಡುವುದು, ಒಳಗನ್ನು ನೋಡುವುದರ ಕಡೆಗೆ

ಗಮನವಿರುವುದಿಲ್ಲ. ಆದರೆ ಇದು ನಮಗೆ ತಿಳಿಯುವುದಿಲ್ಲ. ಈ ಅಜ್ಞಾನದ ಕಾರಣದಿಂದಲೇ ಹೊರಗಣ ಬದುಕಿನಲ್ಲಿ ತನ್ನನ್ನು ತಾನು ಸಿಲುಕಿಸಿಕೊಂಡು ನಾನಾ ಕೋಟಲೆಗೊಳಗಾಗುತ್ತದೆ ಜೀವ. ಒಳ್ಳೆಯದನ್ನು ಅನುಭವಿಸಿದಾಗ ಸಂತೋಷ ತಲೆಗೇರಿ ಅಹಂಕಾರ ಉಂಟಾಗುತ್ತದೆ, ಕೆಟ್ಟದ್ದನ್ನು ಅನುಭವಿಸಿದಾಗ ದುಃಖದಿಂದ ಪಾತಾಳಕ್ಕಿಳಿಯುತ್ತದೆ ಜೀವ. ಆಗ ಅದು ಈ ತೊಳಲಿಕೆಯಿಂದ ದೂರವಿರಲು ಪ್ರತಿಯೊಂದು ಇಂದ್ರಿಯಕ್ಕೂ ಬುದ್ಧಿ ಹೇಳುವ ಪ್ರಯತ್ನ ಮಾಡುತ್ತದೆ. ಅಲ್ಲಮ ಪ್ರಭುಗಳು, ಏಕೆ ಇಂದ್ರಿಯಗಳು ಬೇಡವೆಂದರೂ ವಿಷಯಗಳಲ್ಲಿ ತೊಡಗುತ್ತವೆ ಎಂದು ಕೇಳುತ್ತಾರೆ. ಈ ವಚನದ ಧಾಟಿಯ ಕಡೆಗೆ ಗಮನಕೊಡುವುದು ಮುಖ್ಯ. ಅಲ್ಲಮರು, ಕಣ್ಣುಗಳೇಕೆ ನೋಡಬೇಡವೆಂದರೂ ನೋಡುವುದನ್ನು ಬಿಡುವುದಿಲ್ಲ? ಕಿವಿಗಳೇಕೆ ಕೇಳಬೇಡವೆಂದರೂ ಕೇಳುವುದನ್ನು ಬಿಡುವುದಿಲ್ಲ? ಮೂಗೇಕೆ ಆಘ್ರಾಣಿಣಸಬೇಡವೆಂದರೂ ಆಘ್ರಾಣಿಸುವುದನ್ನು ಬಿಡುವುದಿಲ್ಲ? ನಾಲಿಗೆ ಏಕೆ ರುಚಿಸಬೇಡ ಎಂದರೂ ರುಚಿಸುವುದನ್ನು ಬಿಡುವುದಿಲ್ಲ? ತ್ವಚೆಯು ಸ್ಪರ್ಶಿಸಬೇಡವೆಂದರೂ ಸ್ಪರ್ಶಿಸುವುದನ್ನು ಬಿಡುವುದಿಲ್ಲ?" ಎಂದು ಪ್ರತಿಯೊಂದು ಇಂದ್ರಿಯವನ್ನು ಕುರಿತು ಪ್ರಶ್ನೆ ಕೇಳುತ್ತಿದ್ದಾರೆ. ಎಲ್ಲ ಇಂದ್ರಿಯಗಳನ್ನು ಕುರಿತು ಒಂದೇ ಸಲ ಪ್ರಶ್ನೆ ಕೇಳಿದ್ದರಾಗುತ್ತಿತ್ತು. ಅವರು ಮತ್ತೆ ಮತ್ತೆ ಈ ಪ್ರಶ್ನೆ ಕೇಳುವುದರ ಅರ್ಥ, ಇಂದ್ರಿಯಗಳಿಂದ ಘಾಸಿಗೊಂಡಿರುವುದಾಗಿದೆ, ಇಂದ್ರಿಯಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಾಗಿದೆ. ಅವುಗಳ ಸ್ವಭಾವವನ್ನು ಅರಿತುಕೊಳ್ಳುವುದರ ಕಡೆಗೆ ಗಮನವೀಯುವುದರ ಸೂಚನೆಯಾಗಿದೆ. ಪದೇ ಪದೇ ಅದನ್ನು ಕೇಳುವುದು, ಅವುಗಳು ಜೀವನನ್ನು ಅಪಾರವಾಗಿ ಕಾಡುವುದನ್ನು ಬಿಂಬಿಸುತ್ತದೆ. ಇಂದ್ರಿಯಗಳು ಯಾವುದಕ್ಕೂ ಜಗ್ಗುವುದಿಲ್ಲ. ಅವು ತಮ್ಮ ಆಟ ಆಡುತ್ತಲೇ ಇರುತ್ತವೆ. ಅಂದರೆ ಹೊರಗಿನ ಅಂಶಗಳಲ್ಲಿ ತೊಡಗಿಕೊಂಡು ಘಾಸಿಗೊಳ್ಳುತ್ತವೆ, ದುಃಖಕ್ಕೆ ಈಡಾಗುತ್ತವೆ. ಇವುಗಳಿಂದ ಬಿಡುಗಡೆ ಹೇಗೆ? ಅಲ್ಲಮ ಪ್ರಭುಗಳು ಹೇಳುತ್ತಾರೆ " ಇದರ ರಹಸ್ಯವನ್ನು ಅರಿತು ಹೇಳಿದಾಗ ಜೀವ ಲಿಂಗದೊಂದಿಗೆ ಒಂದಾಗುತ್ತದೆ" ಎಂದು. ಆದರೆ ಇಂದ್ರಿಯಗಳ ರಹಸ್ಯವನ್ನು ಹೇಳುವವರು ಯಾರು? ಅದನ್ನು ಹೇಳುವವನು ಗುರು. ಗುರುವು ಇಂದ್ರಿಯಗಳು ಹೇಗೆ ವರ್ತಿಸುತ್ತವೆ, ಅವುಗಳ ಸ್ವಭಾವ ಎಂತಹುದು, ಅವುಗಳಿಂದ ಬಿಡುಗಡೆ ಹೇಗೆ ಪಡೆಯಬಹುದು, ಎಂಬುದರ ರಹಸ್ಯವನ್ನು ಬಲ್ಲವನಾಗಿದ್ದು ತಿಳಿಸಿ ಹೇಳುತ್ತಾನೆ. ಆಗ ಸಾಧಕನು ಆ ದಾರಿಯಲ್ಲಿ ನಡೆಯುತ್ತಾನೆ ಮತ್ತು ಆತನಿಗೆ ಅರಿವುಂಟಾಗುತ್ತದೆ. ಆಗ ಗುಹೇಶ್ವರನ ಬಗ್ಗೆ ಒಲವು ಮೂಡುತ್ತದೆ. ಆ ಒಲವಿನ ಕಾರಣದಿಂದ ಮಾನಸಿಕ ದೌರ್ಬಲ್ಯಗಳಾದ ಅಭಿಮಾನ ಮತ್ತು ಲಜ್ಜೆಗಳು ಹೇಳ ಹೆಸರಿಲ್ಲದೆ ಅಡಗಿ ಹೋಗುತ್ತವೆ ಎನ್ನುತ್ತಾರೆ ಅಲ್ಲಮರು. ಒಟ್ಟಿನಲ್ಲಿ ಇಂದ್ರಿಯಗಳನ್ನು ತುಳಿಯುವುದು ಅಥವಾ ಅವುಗಳಿಗೆ ತಿಳಿ ಹೇಳುವುದು ಮುಂತಾದ ದಾರಿಗಳಿಂದ ಯಾವ ಪ್ರಯೋಜನವೂ ಇಲ್ಲ. ಅವುಗಳ ಪ್ರಭಾವದಿಂದ ಬಿಡುಗಡೆಗೆ ಬೇರೆ ದಾರಿಯನ್ನೇ ಕೈಗೊಳ್ಳಬೇಕು. ಆ ದಾರಿಯನ್ನು ಅರಿತವನೊಬ್ಬನು ತೋರಬಹುದು ಆದರೆ ದಾರಿ ತುಳಿಯಬೇಕಾದವನು ಜೀವನು.

Vachana 84: Ayyaa nararoLu huTTi - From Ignorance to Awareness

ಅಯ್ಯಾ ನರರೊಳು ಹುಟ್ಟಿ, ಮರಹಿನೊಳಗೆ ಬಿದ್ದವಳ ತಂದು
ಮಹಾಶರಣರು ಎನಗೆ ಕುರುಹ ತೋರಿದರು.

ಗುರುವೆಂಬುದನರುಹಿದರು, ಜಂಗಮವೆ ಜಗದ ಕರ್ತುವೆಂದರುಹಿದರು.

ಅವರ ನೆಲೆವಿಡಿದು ಮನವ ನಿಲಿಸಿದೆ, ಕಾಯ ಜೀವವೆಂಬುದನರಿದೆ,

ಭವ ಬಂಧನವ ಹರಿದೆ, ಮನವ ನಿರ್ಮಲ ಮಾಡಿದೆ.

ಬೆಳಗಿದ ದರ್ಪಣದಂತೆ ಚಿತ್ತ ಶುದ್ಧವಾದಲ್ಲಿ,

ನೀವು ಅಚ್ಚೊತ್ತಿದ್ದ ಕಾರಣದಿಂದ ನಿಮ್ಮ ಪಾದವಿಡಿದು

ನಾನು ನಿಜಮುಕ್ತಳಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

TRANSLITERATION

Ayyaa nararoLu huTTi, marahinoLage biddavaLa taMdu
mahaasharaNaru enage kuruha tOridaru
guruveMbudanaruhidaru, jaMgamave jagada kartuveMdaruhidaru.
Avara neleviDidu manava niliside, kaaya jIvaveMbudanaride.
Bhava baMdhanava haride, manava nirmala maaDide.
beLagida darpqaNadaMte citta shuddhavaadalli,
nIvu accottidda kaaraNadiMda nimma paadaviDidu
naanu nijamuktaLaadenayyaa appaNNapriya cennabasavaNNa

TRANSLATION (WORDS)

Ayyaa (sir) nararoLu (among humans) huTTi (born), marahinoLage (in ignorance) biddavaLa (lying) taMdu (brought)
mahaasharaNaru (great sharaNaas) enage (to me) kuruha (the symbol of god) tOridaru (showed)
guruvu (guru) eMbudanu (what is) aruhidaru,(revealed) jaMgamave (jaMgama alone) jagada (of the world) kartuveMdu (maker) aruhidaru.(revealed)
Avara (their) neleviDidu (holding feet) manava (my mind) niliside (established, I put in place) kaaya (body) jIvavu (life) eMbudanu (what is) aride.(I understood)
Bhava(worldly) baMdhanava(ties, bondage) haride,(I tore) manava (the mind) nirmala (pure) maaDide.(I made)
beLagida(polished) darpaNadaMte(like a mirror) citta (mind) shuddhavaadalli,(when it is pure)
nIvu(you) accottidda(were imprinted) kaaraNadiMda(for the reason) nimma (your) paadava (feet) iDidu (holding)
naanu (I) nijamuktaLaadenayyaa (became completely free) appaNNapriya cennabasavaNNa (Appanna priya Chennabasavanna)

TRANSLATION

Dear Sirs! Having born among ordinary humans, I had fallen in ignorance!
The great Sharanaas showed me the symbol of (way to) God.
They revealed the concept of guru, they revealed that Jangama alone is the maker of the

World
Holding their feet, I established my mind, I understood the body and the soul,
I tore the bondages of the world and purified my mind.
As the mind became clear as a polished mirror,
with Your abstraction imprinted on it, I held on to it and
became completely (truly) free, Oh! Appanna priya Chennabasavanna!

COMMENTARY

In this Vachana, Sharane Hadapada Lingamma traces her path from ignorance to enlightenment. She says that having born among ordinary (common) people, she was drowned in the sea of ignorance. Shranaas revealed her the symbol of enlightenment. They showed the concept of guru and impressed that this world is made by jangama alone. With these concepts understood, Lingamma says that she established her mind in that bliss, understood the meaning and purpose of body and soul, tore up the worldly bondages and purified her mind. With that clear mind on which the God concept was impressed, she held on to it and became truly free.

This Vachana provides the roadmap for self-realization or becoming truly free. Having born among common humans, we are all occupied by our routine worldly activities and seldom find time or develop an inclination to seek the true freedom. Sharanaas urged us to get away from that ignorant mode through the concepts of Guru and Jangama. The word 'Guru' stands for the one who erases ignorance. We immediately associate Guru to an individual preferably with yellow robes, always quoting slokas and mantras. Lingamma takes us away from this thinking saying that sharanaas showed her 'what is Guru' i.e. the concept of guru not an individual guru. The keen desire and awareness needed to move from ignorance to enlightenment is the conceptual guru. Along the same lines, Jangama is equated to a wandering ascetic who has given up his worldly possessions and has devoted himself to enhancing God awareness among the common men. Lingamma says that the Sharanaas impressed on her that Jangama alone is the maker of the world. Jangama stands for 'mobile, dynamic, non-static' implying that nothing in this world is static or permanent except the true awareness. With the concepts of guru and jangama in hand, Lingamma could tear up the worldly bondages, could understand the true meaning and purpose of body and soul (Jeevaatma) and achieved the true freedom. With this roadmap we all can reach the heights Lingamma reached starting from her beginnings as an ignorant individual.

Let us invite the conceptual guru and jangama into our lives!

KANNADA COMMENTARY

ಈ ವಚನದಲ್ಲಿ, ತಾನು, ಮರೆವಿನ ಸ್ಥಿತಿಯಿಂದ ಅರಿವಿನ ಸ್ಥಿತಿಗೆ ಬಂದ ಬಗೆಯನ್ನು ತಿಳಿಸುತ್ತಿದ್ದಾಳೆ ಹಡಪದ ಲಿಂಗಮ್ಮ.

ತಾನು ಸಾಮಾನ್ಯ ನರಜನ್ಮ ಪಡೆದು ಮರೆವಿನಲ್ಲಿ ಮುಳುಗಿದ್ದೆ ಎಂದು ಹೇಳುತ್ತಾಳೆ. ಅಂತಹ ಅಜ್ಞಾನದ ಸ್ಥಿತಿಯಲ್ಲಿದ್ದವಳನ್ನು ಕರೆತಂದು ಶರಣರು ಅರಿವಿನ ಕುರುಹ (symbol)ನ್ನು ತೋರಿದರು, ಗುರು ಎಂದರೇನು ಎಂಬುದನ್ನು ತಿಳಿಸಿದರು, ಈ ಜಗತ್ತನ್ನು ಮಾಡಿರುವುದೇ ಜಂಗಮದಿಂದ ಎಂಬುದನ್ನು ತಿಳಿಯುವಂತೆ ಮಾಡಿದರು. ಗುರು ಮತ್ತು ಜಂಗಮದ ನೆಲೆಯನ್ನು ಹಿಡಿದು ಅಲ್ಲಿ ಮನವನ್ನು ನಿಲ್ಲಿಸಿದೆ, ಕಾಯವೆಂದರೇನು ಜೀವ ವೆಂದರೇನು ಎಂಬುದನ್ನು ಅರಿತುಕೊಂಡೆ. ಆ ಕಾರಣ ಭವ ಬಂಧನವನ್ನು ಹರಿದೆ,ಮನವನ್ನು ನಿರ್ಮಲಗೊಳಿಸಿದೆ. ಮನಸ್ಸು ಬೆಳಗಿದ ಕನ್ನಡಿಯಂತೆ ಶುದ್ಧವಾದಾಗ ಅಲ್ಲಿ ಪರತತ್ವ ಅಚ್ಚೊತ್ತಿದಂತೆ ಇದ್ದ ಕಾರಣ ಅದನ್ನು ಹಿಡಿದು ತಾನು ಮುಕ್ತಳಾದೆ ಎನ್ನುತ್ತಾಳೆ.

ಲಿಂಗಮ್ಮ ಕೆಳಜಾತಿಯಲ್ಲಿ ಹುಟ್ಟಿದವಳು. ಆದರೆ ಅವಳು ಬೆಳೆದ ರೀತಿ ಅದ್ಭುತವಾದದ್ದು, ಅವಳು ಅಧ್ಯಾತ್ಮದಲ್ಲಿ ಪಡೆದ ಸ್ಥಾನ ಅತ್ಯುನ್ನತ ಮಟ್ಟದ್ದು. ಅದು ನಡೆದದ್ದು ಹೇಗೆ? ಮರವೆ ಆವರಿಸಿ ಸಂಸಾರದಲ್ಲಿ ಮುಳುಗಿರುವ ಸಾಮಾನ್ಯ ಮಾನವಳಾಗಿ ಹುಟ್ಟಿದವಳು ಲಿಂಗಮ್ಮ. ಆದರೆ ಮಹಾಶರಣರು ಆಕೆಗೆ ಪರತತ್ವದ ಕುರುಹು ತೋರಿದರು. ಕುರುಹನ್ನು ತೋರಿದರೆ ಕೆಲಸ ಮುಗಿಯಲಿಲ್ಲ. ಏಕೆಂದರೆ ಕುರುಹೇ ಅಂತಿಮವಲ್ಲ. ಅಲ್ಲಿಂದ ನಿಜಮುಕ್ತಿಯ ದಾರಿ ಬಹುದೂರ. ಕುರುಹೇ ನಿಜವೆಂದು ಮೌಢ್ಯಕ್ಕೆ ಒಳಗಾಗುವುದು ಸಾಮಾನ್ಯ. ನಾವು ಇಂದು ಅದನ್ನು ಎಲ್ಲೆಲ್ಲೂ ನೋಡುತ್ತೇವೆ. ದೇವರ ಕುರುಹೆಂದು ಸ್ಥಾಪಿಸಿದ ದೇವರ ಮೂರ್ತಿಯನ್ನೇ ನಿಜವಾದ ದೇವರೆಂದು ಪೂಜಿಸುವುದರಲ್ಲಿಯೇ ತಮ್ಮ ಇಡೀ ಬದುಕನ್ನೇ ಕಳೆಯುತ್ತಾರೆ ಜನರು. ಅದು ಸಮಾನ್ಯ ನರರ ರೀತಿ. ಆದರೆ ಶರಣರು ಲಿಂಗಮ್ಮನನ್ನು ಅಲ್ಲಿಗೆ ಬಿಡಲಿಲ್ಲ. ಶರಣರು "ಗುರುವೆಂಬುದನ್ನರುಹಿದರು" ಎನ್ನುತ್ತಾಳೆ ಆಕೆ. ಇಲ್ಲಿ ಆಕೆ ಬಳಸಿದ "ಗುರುವೆಂಬುದನ್ನು" ಎಂಬ ಪದವನ್ನು ಗಮನಿಸುವುದು ಬಹು ಮುಖ್ಯ. ಆಕೆ ಬಳಸಿದ ಪದ ವ್ಯಕ್ತಿವಾಚಕವಲ್ಲ. ಆಕೆ ಗುರುವನ್ನು ಎನ್ನಲಿಲ್ಲ. ಏಕೆಂದರೆ ಗುರು ಎಂದ ತಕ್ಷಣ ಎಲ್ಲರ ಮನದಲ್ಲಿ ಮಠಾಧಿಪತಿಯದೋ, ಕಾವಿಧಾರಿಯದೋ, ಗಡ್ಡಧಾರಿಯದೋ, ಸಂನ್ಯಾಸಿಯದೋ, ಗುಹಾವಾಸಿಯದೋ ಚಿತ್ರ ಮೂಡುತ್ತದೆ. ಆದ್ದರಂದ ಆಕೆ "ಗುರುವೆಂಬುದನ್ನು" ಎನ್ನುತ್ತಾಳೆ. ಎಂದರೆ ಗುರು ಎನ್ನುವ ತತ್ವವನ್ನು ತಿಳಿಸಿದರು ಎಂದರ್ಥ. "ಗುರು" ಎಂದರೆ ಮಹಾನ್ ಎಂದೂ, ಕತ್ತಲೆಯನ್ನು ಕಳೆಯುವವ ಎಂದೂ ಅರ್ಥಗಳಿವೆ.ಕತ್ತಲೆ ಅಥವಾ ಅಜ್ಞಾನದಲ್ಲಿ ಮುಳುಗಿದವನನ್ನು ಬೆಳಕಿನೆಡೆಗೆ ಕರೆದೊಯ್ಯುವ ತತ್ವ ಗುರು. ಮೊದಲು ಆ ತತ್ವ ವ್ಯಕ್ತಿಯ ರೂಪದಲ್ಲಿ ತೋರಬಹುದು, ಆದರೆ ಅದು ಆ ವ್ಯಕ್ತಿಯೇ ಅಲ್ಲ. ಗುರು ತತ್ವವನ್ನು ಅರಿತುಕೊಳ್ಳಬೇಕೇ ಹೊರತು ಒಬ್ಬ ವ್ಯಕ್ತಿಯನ್ನು ಗುರುವೆಂದು ಪೂಜಿಸುವುದಲ್ಲ. ಹಾಗೆ ವ್ಯಕ್ತಿಯನ್ನು ಗುರುವೆಂದು ಪೂಜಿಸಿ, ನಿಂತ ನೀರಾಗುವುದು ಸಾಮಾನ್ಯ ನರನ ರೀತಿ. ಶರಣರ ಕರುಣೆಯಿಂದ ತಾನು ಸಾಮಾನ್ಯ ನರನ ಸ್ಥಿತಿಯಿಂದ ಮೇಲೆದ್ದೆ ಎನ್ನುತ್ತಾಳೆ ಲಿಂಗಮ್ಮ.ಇಷ್ಟೇ ಅಲ್ಲ ಶರಣರು "ಜಂಗಮವೆ ಜಗದ ಕರ್ತುವೆಂದರುಹಿದರು" ಜಂಗಮವೇ ಜಗತ್ತಿನ ಕರ್ತೃ ಎಂಬುದನ್ನೂ ಅರುಹಿದರು ಎನ್ನುತ್ತಾಳೆ. ಈ ಜಗತ್ತು ಚೈತನ್ಯಯುಕ್ತವಾದದ್ದು. ಸದಾ ಚಲನಶೀಲವಾದದ್ದು, ಇಲ್ಲಿ ಯವುದೂ ಶಾಶ್ವತವಲ್ಲ. ಎಂಬಂತಹ ಅರಿವನ್ನುಂಟುಮಾಡಿದರು ಶರಣರು ಎನ್ನುತ್ತಾಳೆ. ಇಲ್ಲಿಯೂ ಕೂಡ ಜಂಗಮವೆಂದರೆ ಸಾಮನ್ಯರ ಗ್ರಹಿಕೆ ಬಹಳ ಸೀಮಿತವಾದದ್ದು. ವಿಭೂತಿ, ರುದ್ರಾಕ್ಷಿಧಾರಿಗಳನ್ನು ಮಾತ್ರ ಜಂಗಮರೆನ್ನುವ ಪರಿಪಾಠವಿದೆ. ಲಿಂಗಮ್ಮ ಅದನ್ನು ವ್ಯಕ್ತಿಗೆ ಸೀಮಿತಗೊಳಿಸಿಲ್ಲ. ಜಂಗಮ ಒಂದು ತತ್ವ. ಅದು ಚೈತನ್ಯ ತತ್ವ. ಗುರು ಮತ್ತು ಜಂಗಮ ತತ್ವಗಳು ಅಮೂರ್ತ (abstract) ವಾದವುಗಳು. ಮೊದಲು ಕುರುಹನ್ನು ಕೊಟ್ಟು ನಂತರ ಅದರ ಮೂಲಕ ಅಮೂರ್ತ ತತ್ವವನ್ನು ತಿಳಿಸಿದರು ಶರಣರು. ಅವರು ತಿಳಿಸಿದ ತತ್ವವನ್ನು ಹಿಡಿದು, ಆ ತತ್ವಗಳಲ್ಲಿ ಮನವನ್ನು ನಿಲ್ಲಿಸಿ ಕಾಯ ಮತ್ತು ಜೀವಗಳನ್ನು ಅರ್ಥಮಾಡಿಕೊಂಡೆ ಎನ್ನುತ್ತಾಳೆ. ಕಾಯದ ಮತ್ತು ಜೀವದ ಇತಿಮಿತಿಗಳೇನು? ಗುಣಗಳೇನು? ಅವುಗಳ ಸ್ಥಾನವೇನು? ಎಂಬುದಲ್ಲದೆ ಅವುಗಳ ನಶ್ವರತೆಯನ್ನು ಅರಿತುಕೊಂಡಳು. ಇದರಿಂದ

ಅಪ್ರಯತ್ನವಾಗಿಯೇ ಅವುಗಳ ಬಗ್ಗೆ ವೈರಾಗ್ಯ ಉಂಟಾಯಿತು. ತನುಗುಣಗಳು ಅಳಿದು ಹೋದವು. ಭವ ಬಂಧನ ಹರಿದು ಹೋಯಿತು. ಮಾಯೆಯೆಲ್ಲ ಅಳಿಸಿಹೋಗಿ ಮನಸ್ಸು ನಿರ್ಮಲವಾಯಿತು. ಅದು ಬೆಳಗಿದ ಕನ್ನಡಿಯಂತೆ ಉಜ್ವಲವಾಯಿತು. ಆಗ ಅಲ್ಲಿ ಪರಮಾತ್ಮನ ಸ್ವರೂಪ ಅಚ್ಚೊತ್ತಿದಂತುಳಿಯಿತು ಆ ಒಂದನ್ನುಳಿದು ಬೇರೆಯದೆಲ್ಲನಿರ್ನಾಮವಾಯಿತು. ಆ ಪರತತ್ವದ ಪಾದಗಳನ್ನು ಹಿಡಿದು ತಾನು ಪೂರ್ಣರೂಪದಿಂದ ಮುಕ್ತಳಾದೆ ಎನ್ನುತ್ತಾಳೆ ಹಡಪದ ಲಿಂಗಮ್ಮ. ಇಲ್ಲಿಯೂ ಕೂಡ ಆಕೆ ದೇವರೆಂಬ ಪದವನ್ನೇ ಬಳಸಿಲ್ಲ. ಆ ಅಮೂರ್ತನನ್ನು ತಿಳಿದುಕೊಳ್ಳುವುದನ್ನು ನಮಗೇ ಬಿಟ್ಟಿದ್ದಾಳೆ ಲಿಂಗಮ್ಮ. ಇದು ಸಾಮಾನ್ಯಳಾಗಿ ಹುಟ್ಟಿ ಆಕೆ ಮುಟ್ಟಿದ ಎತ್ತರ.

Vachana 85: Guruvingu Shishyangu – You are your teacher!

ಗುರುವಿಂಗೂ ಶಿಷ್ಯಂಗೂ ಆವುದು ದೂರ? ಆವುದು ಸಾರೆ? ಎಂಬುದನು ಆರು ಬಲ್ಲರು?
ಗುರುವೇ ಶಿಷ್ಯನಾದ ತನ್ನ ವಿನೋದಕ್ಕೆ, ಶಿಷ್ಯನೇ ಗುರುವಾದ ತನ್ನ ವಿನೋದಕ್ಕೆ.
ಕರ್ಮವೆಂಬ ಕೌಟಿಲ್ಯ ಎಡೆವೊಕ್ಕ ಕಾರಣ ಭಿನ್ನವಾಗಿ ಇದ್ದಿತ್ತೆಂದಡೆ, ಅದು ನಿಶ್ಚಯವಹುದೆ?

ಆದಿ ಅನಾದಿಯಿಂದತ್ತತ್ತ ಮುನ್ನಲಾದ ಪರತತ್ವಂ ತಿಳಿದು ನೋಡಲು,

ನೀನೇ ಸ್ವಯಂ ಜ್ಯೋತಿಪ್ರಕಾಶವೆಂದರಿಯಲು,

ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕವಪ್ಪ ಗುರುವುಂಟೆ?

ಇದುಕಾರಣ ಗುಹೇಶ್ವರಲಿಂಗ ತಾನೇ ಎಂಬುದನು ತನ್ನಿಂದ ತಾನೇ ಅರಿಯಬೇಕು ನೋಡಾ.

TRANSLITERATION

guruviMgU shiShyaMgU aavudu doora? Aavudu saare? eMbudanu aaru ballaru?
guruvE shiShyanaada tanna vinOdakke, shiShyanE guruvaada tanna vinOdakke.
karmaveMba kouTilya eDevokka kaaraNa bhinnavaagidditeMdaDe,
adu nishcayavahude?
Aadi anaadiyiMdattatta munnalaada paratatvaM tiLidu nODalu,
nInE svayaM jyOtiprakaashaveMdariyalu,
ninage nInE guruvallade ninniMdadhikavappa guruvuMTe?
idukaaraNa guhEshvaraliMga taanE eMbudanu tanniMda taanE ariyabEku nODaa

TRANSLATION (WORDS)

guruviMgU (to the guru, to the teacher) shiShyaMgU-(and to the disciple-)
aavudu (which is) doora? (far?) Aavudu (which is) saare?(near?) eMbudanu (that which is asked) aaru (who) ballaru?(knows?)
guruvE (teacher himself)shiShyanaada(became disciple) tanna (his own) vinOdakke, (pleasure) shiShyanE (the disciple himself) guruvaada (became teacher)tanna(his own) vinOdakke.(pleasure)
karma(action) veMba (which is)kouTilya(hypocracy, deceit) eDevokka(has entered *the mind*) kaaraNa (for the reason)bhinnavaagidditeMdaDe,(if seems different)
adu (it) nishcayavahude? (is *it* for sure?)
Aadi (beginning) anaadi (without beginning) yiMdattatta (beyond) munnalaada (which existed before*)* paratatvaM (the ultimate) tiLidu (understanding, comprehending) nODalu,(if seen)
nInE (you alone)svayaM (your self) jyOtiprakaashavu (bright light) eMdariyalu,(if understood) ninage(to yourself) nInE(you alone) guruvallade (if not the teacher)ninniMda (to you) adhikavappa(superior) guruvuMTe?(is there a teacher)
idukaaraNa(for this reason) guhEshvaraliMga (Guheshvara linga)taanE(oneself) eMbudanu(which is)
tanniMda(from oneself) taanE (one) ariyabEku(should understand) nODaa.(you see.)

TRANSLATION

Who knows how far apart or how close are the teacher and the disciple?
The teacher became the disciple for his pleasure, and the disciple became the teacher for his pleasure!
Deceived by the materialistic activity, if the teacher and disciple appear to be different, can it be for sure?

To really comprehend the Ultimate *which existed before the idea of beginning and without beginning came in to being*,
To realize that you yourself is that ever shining illumination,
You have to be your own teacher, there is no other superior guru.
As such, you yourself have to realize that you are the Guhesvara Linga, you see!

COMMENTARY

Our previous postings mention that a guru (teacher) is needed to get one started on the spiritual path for self-realization. We have also said that when an intense desire arises in the disciple, a guru appears, meaning that disciple must be ready to receive the knowledge. An intense desire to do so is a must. Allama Prabhu expands on the concept of guru further in this Vachana. He says who knows how far apart or close the guru and disciple are, essentially leading to the thought that the two are one and the same. Guru becomes a disciple for his pleasure and the disciple becomes guru for his pleasure. What is the significance of this paradox? An individual with a kindled intense desire to learn becomes a disciple, while the individual on gaining the knowledge becomes a guru. Ignorance can be considered as the characteristic of the disciple. When he realizes his state of ignorance, he might look for a guru to guide him. Even after such guidance is provided, the disciple continues to be ignorant unless he is willing to shine the light on the recently gained knowledge by himself. Neither the guru nor others around him are of any help in this regard. He himself has to become his guru. Allama Prabhu says that we tend to distinguish guru and disciple as separate because of the ignorance covering us due to the mundane materialistic activities we are involved in. If we can emerge from the grip of this ignorance, we realize that the only guru we have and need are ourselves. It is interesting that Allama prabhu concludes the Vachana saying that one has to see that he/she and the God (Guhesvara Linga) are one and he/she has to realize it by himself/herself.

In summary, a guru is essential to guide us in the right path. An intense desire and awareness is a must to seek and find such guru. Even after receiving the knowledge from a guru, internalizing it and seeing the divine through this enhanced awareness is still the responsibility of the individual. No one else can give one such power. Finally, the Lord and the individual are one and the same, there is no duality or separation. When the awareness heightens, the unity of jeevatma and paramatma becomes obvious.

Let us find the guru in us!

KANNADA COMMENTARY

ಅಲ್ಲಮಪ್ರಭುಗಳು ಈ ವಚನದಲ್ಲಿ ಗುರು ಎಂದರೆ ಯಾರು ಎಂಬುದನ್ನು ವಿವರವಾಗಿ ತಿಳಿಸಿ ಹೇಳುತ್ತಿದ್ದಾರೆ. ಗುರು ಮತ್ತು ಶಿಷ್ಯ ಇಬ್ಬರೂ ಬೇರೆ ಬೇರೆಯೆ? ಇವರಲ್ಲಿ ಯಾರು ಹತ್ತಿರದವರು ಯಾರು ದೂರದವರು? ಎಂಬುದನ್ನು ಯಾರು ಹೇಳಬಲ್ಲರು?ಎಂದು ಕೇಳುತ್ತಾರೆ. ಏಕೆಂದರೆ ಅವರಿಬ್ಬರೂ ಭಿನ್ನವಲ್ಲವೆಂಬುದು ಅವರ ಅಂಬೋಣ. ಗುರುವೇ ತನ್ನ ವಿನೋದಕ್ಕೆ ಶಿಷ್ಯನಾಗುತ್ತಾನೆ ಮತ್ತು ತನ್ನ ವಿನೋದಕ್ಕೆ ಗುರುವೂ ಆಗುತ್ತಾನೆ ಎನ್ನುತ್ತಾರೆ.ಈ ಸೋಜಿಗವನ್ನು

ಅರ್ಥಮಾಡಿಕೊಳ್ಳುವುದು ಹೇಗೆ? ಏನು ಹಾಗೆಂದರೆ? ವ್ಯಕ್ತಿಯು ತಾನು ತಿಳಿದುಕೊಳ್ಳಬೇಕೆನಿಸಿದಾಗ ಶಿಷ್ಯನಾಗುತ್ತಾನೆ, ತಿಳಿದುಕೊಂಡಾಗ ತಾನೇ ಗುರುವಾಗುತ್ತಾನೆ. ಅಜ್ಞಾನ ಶಿಷ್ಯನ ಲಕ್ಷಣವೆನ್ನಬಹುದು. ಆಗ ಆತನು ಹೊರಗಣ ಗುರುವನ್ನು ಅರಸುತ್ತ ಹೋಗುತ್ತಾನೆ. ಯಾರೋ ಒಬ್ಬ ದಾರಿಯನ್ನು ಸೂಚಿಸಬಹುದು. ಆದರೆ ಅದರಿಂದ ಅರಿವು ಉಂಟಾಗುವುದಿಲ್ಲ. ತನಗೆ ತಾನೇ ಬೆಳಕಾದಾಗ ಮಾತ್ರ ಅರಿವು ಉಂಟಾಗುತ್ತದೆ. ಆದ್ದರಿಂದ ತನಗೆ ತಾನೇ ಗುರು ತನಗೆ ತಾನೇ ಶಿಷ್ಯನೆಂದು ಹೇಳುತ್ತಾರೆ ಅಲ್ಲಮ ಪ್ರಭುಗಳು. ಹಾಗಾದರೆ "ಗುರು" "ಶಿಷ್ಯ" ಎಂದು ಏಕೆ ಹೇಳುವರು? "ಕರ್ಮ ಕೌಟಿಲ್ಯ ಎಡೆವೊಕ್ಕ ಕಾರಣ ಭಿನ್ನವಾಗಿದ್ದಿತೆಂದೆಡೆ" ಎಂದರೆ ನಮ್ಮ ಮನದಲ್ಲಿ ಕರ್ಮದ ಮೋಸ ಮನೆ ಮಾಡಿರುವುದರಿಂದ ಅವರಿಬ್ಬರೂ ಬೇರೆ ಬೇರೆಯಾಗಿ ಕಾಣುತ್ತಾರೆ. ನಮ್ಮ ಕರ್ಮವೇ, ನಮಗೆ ಮೋಸ ಮಾಡುತ್ತದೆ. ಇಲ್ಲಿ "ಕರ್ಮ" ವೆಂದರೆ ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವೆಂದರ್ಥವಲ್ಲ. ಶರಣರು ಅಂತಹ ಕರ್ಮವನ್ನು ಒಪ್ಪಿದವರಲ್ಲ. ಇಲ್ಲಿ ಅವರ ಅರ್ಥವೇ ಬೇರೆಯಾಗಿದೆ. ಪ್ರತಿಯೊಬ್ಬನಿಗೂ ತನ್ನ ಗುರು ತಾನೇ ಆಗುವ ಅವಕಾಶವಿದ್ದೇ ಇದೆ. ತನ್ನಲ್ಲಿ ಅರಿವಿಗಾಗಿ ಆಳವಾದ ಹಂಬಲವಿದ್ದಾಗ ಅರಿವು ತಾನಾಗಿಯೇ ಒಲಿಯುತ್ತದೆ. ಆದರೆ ತನ್ನ ಅಜ್ಞಾನದಿಂದಾಗಿ, ತನ್ನಲ್ಲಿ ಅರಿಯುವ ಆಳವಾದ ಹಂಬಲವಿಲ್ಲದ್ದರಿಂದಾಗಿ, ಅನೇಕ ಗೊಂದಲಗಳಲ್ಲಿ ಸಿಕ್ಕಿಕೊಂಡಿರುವುದರಿಂದ ತಾನು ಅಜ್ಞಾನದಲ್ಲಿ ಮುಳುಗಿರುತ್ತಾನೆ. ಈ ರೀತಿಯಾಗಿ ತಾನೇ ತನ್ನ ಮೋಸಕ್ಕೆ ಒಳಗಾಗುತ್ತಾನೆ ವ್ಯಕ್ತಿ. ತನ್ನದೇ ಕುಟಿಲತೆಗೆ ಒಳಗಾಗುತ್ತಾನೆ. ಹೊರಗಣ ಗುರುವನ್ನು ಅರಸಲು ಹೊರಡುತ್ತಾನೆ. ಹೀಗಾಗಿ ಗುರು ಮತ್ತು ಶಿಷ್ಯರು ಬೇರೆ ಬೇರೆಯಾಗಿ ತೋರುತ್ತಾರೆ. ಇದು ತಾನೇ ಮಾಡಿಕೊಂಡ ಮೋಸ.ಅಥವಾ ತನ್ನನ್ನು ಆ ಸ್ಥಿತಿಯಲ್ಲಿ ಇರಲು ಅವಕಾಶಮಾಡಿಕೊಡುವ ಮೂಲಕ ತನಗೆ ತಾನೇ ಮಾಡಿಕೊಂಡ ಮೋಸ. ಕರ್ಮ ಕೌಟಿಲ್ಯ. ಈ ಕಾರಣಕ್ಕಾಗಿ ಗುರು ಮತ್ತು ಶಿಷ್ಯರು ಭಿನ್ನ ಭಿನ್ನರಾಗಿ ಕಾಣುತ್ತಾರೆ. ಹಾಗೆಂದಮಾತ್ರಕ್ಕೆ ಅವರು ಭಿನ್ನ ಎಂದು ನಿಶ್ಚಯಿಸುವುದು ಸರಿಯೆ? ಎಂದು ಕೇಳುತ್ತಾರೆ ಅಲ್ಲಮರು.

ಆದಿ ಮತ್ತು ಅನಾದಿಯನ್ನು ಮೀರಿದ, ಅದಕ್ಕಿಂತಲೂ ಮುನ್ನಿನ, ಆದಿ ಅನಾದಿ ಎಂಬ ವಿಚಾರವು ಹುಟ್ಟುವುದಿಕ್ಕಿಂತ ಮುನ್ನ ಇದ್ದ ಪರತತ್ವವನ್ನು ತಿಳಿದು ನೋಡಲು ತಾನೇ ಸ್ವಯಂ ಜ್ಯೋತಿ ಎಂಬ ಅರಿವು ಮೂಡುತ್ತದೆ. ಅದನ್ನು ತಿಳಿದುಕೊಂಡಾಗ ತನಗೆ ತಾನೇ ಗುರುವಲ್ಲದೆ ತನಗಿಂತ ಹೆಚ್ಚಿನ ಬೇರೆ ಗುರು ಇರುವುದಿಲ್ಲ. ಆದ್ದರಿಂದ ತನಗೆ ತಾನೇ ಗುರುವೆಂಬುದನ್ನು ತಾನೇ ಅರಿಯಬೇಕು. ಆ ಅರಿವು ಕೂಡ ಇತರರಿಂದ ಬರಲು ಸಾಧ್ಯವಿಲ್ಲ. ಎಂದು ಹೇಳುತ್ತಾರೆ ಅಲ್ಲಮಪ್ರಭುಗಳು.

Vachana 86: Lokadalliha Nuuraaru Gurugalu – True Teacher

ಲೋಕದಲ್ಲಿಹ ನೂರಾರು ಗುರುಗಳ ನೋಡಿ ನೋಡಿ ನಾನು ಬೇಸರಗೊಂಡೆನಯ್ಯಾ
ವಿತ್ತಾಪಹಾರಿ ಗುರುಗಳು ನೂರಾರು
ಶಾಸ್ತ್ರಾರ್ಥ ಹೇಳುವ ಗುರುಗಳು ನೂರಾರು,
ಮಂತ್ರತಂತ್ರದಿಂದುಭಯ ಲೋಕದಲ್ಲಿ ಸುಖದುಃಖವೀವ ಗುರುಗಳು ನೂರಾರು
ಸತ್ಕರ್ಮೋಪದೇಶವನರುಹಿ ಸ್ವರ್ಗಮರ್ತ್ಯದಲ್ಲಿ ಸುಖವೀವ ಗುರುಗಳು ನೂರಾರು;
ವಿಚಾರಮುಖದಿಂದ ಷಟ್ಸಾಧನೆಯನರುಹುವ ಗುರುಗಳು ನೂರಾರು.

ವಿಷಯಂಗಳೆಲ್ಲ ಮಿಥ್ಯಂಗಳೆಂದರುಹಿ ಆತ್ಮಾನುರಾಗತ್ವವನೀವ ಗುರುಗಳು ನೂರಾರು;
ಶಿವಜೀವರ ಏಕತ್ವವನರುಹಿ ನಿರ್ಮಲಜ್ಞಾನವೀವ ಗುರುಗಳು ಪ್ರಮಥರು.
ಸಂಶಯಾಳಿಗಳನೆಲ್ಲ ಜ್ಞಾನಾಗ್ನಿಯಿಂದ ದಹಿಸಿ ಮುಕ್ತಿಯ ಹಂಗೆಂಬುದ ಅರುಹಿನ ಬಂಧದಲ್ಲಿರಿಸಿದ ಗುರು
ಚೆನ್ನಬಸವಣ್ಣನಲ್ಲದೆ ಮತ್ತೋರ್ವನ ಕಾಣೆ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.

TRANSLITERATION

lOkadalliha nURaaru gurugaLa nODi nODi naanu bEsaragoMDenayya
vittaapahaari gurugaLu nUraaru
shaastraartha hELuva gurugaLu nUraaru,
maMtrataMtradiMdubhaya lOkadalli sukhaduHkhavIva gurugaLu nUraaru
satkaramOpadEshavanaruhi Svarga martydalli sukhavIva gurugaLu nUraaru
vicaaramukhadiMda ShaTsaadhaneyanruhuva gurugaLu nURaaru
viShayaMgaLella mithyaMgaLeMdaruhi aatmaanuraagatvavanIva gurugaLu nUraaru
shivajIvara Ekatvanaruhi nirmalaj~jaanavIva gurugaLu pramatharu.
saMshayaaLigaLanella j~jaanagniyiMda dahisi muktiya haMgeMbuda aruhina baMdhadallirisida guru
cennabasavaNNanallade mattOrvana kaaNe nODaa, kapilasiddhamallikaarjunaa.

TRANSLATION (WORDS)

lOkadalliha (present in this world) nURaaru (handreds of) gurugaLa (teachers, gurus)
nODi nODi (seeing again and again) naanu (I) bEsaragoMDenayya (am tired sir)
vittaapahaari (wealth stealing, taking away the wealth) gurugaLu (gurus) nUraaru (are hundreds)
shaastraartha (explaination to rituals) hELuva (giving) gurugaLu (the gurus) nUraaru,(are hundreds)
maMtrataMtradiMda (sacred verse and technique) ubhaya (both) lOkadalli (in the world) sukha(happiness) duHkhav (suffering) Iva(giving) gurugaLu (the teachers) nUraaru (are hundreds)
satkaramOpadEshavanu (preaching good deeds) aruhi (informing, talking about)
Svarga (heaven) martydalli (in the mortal world) sukhavIva (giving pleasure) gurugaLu (teachers) nUraaru (hundreds of)
vicaaramukhadiMda (giving importance to thinking) ShaTsaadhaneyanruhuva(teaching six achievements) gurugaLu (teachers) nURaaru (are hundreds)
viShayaMgaLella (all the objects of desire) mithyaMgaLeMdu (are false) aruhi (saying) aatmaanuraagatvavanIva (making one self centered) gurugaLu nUraaru (teachers are hundreds)
shiva(god, shiva) jIvara (the living being) Ekatvanaruhi (making one know the unity of) nirmalaj~jaanavIva (giving pure knowledge) gurugaLu (teachers) pramatharu (are pramathas, the early Sharanas)
saMshayaaLigaLanella (chain of doubts) j~jaanagniyiMda (with the fire of pure knowledge) dahisi (burning)
muktiya (of freedom) haMgeMbuda (obligation, debt) aruhina (the awareness)

baMdhadallirisida (has kept it tied by) guru (the guru who) cennabasavaNNanallade (ChennabasavaNNa) mattOrvana (other than) kaaNe nODaa,(I don't see sir!) kapilasiddhamallikaarjunaa.(Kapilasiddhamallikaarjuna)

TRANSLATION

After seeing the hundreds of Gurus of this world over and over again, I am tired Sir!
There are hundreds of Gurus snatching your wealth.
There are hundreds of Gurus explaining the meaning of rituals.
There are hundreds of Gurus that offer pleasure and sorrow in this and the world beyond, through sacred verses and techniques.
There are hundreds of Gurus that preach good conduct that gives pleasure here and in heaven.
There are hundreds of Gurus that preach that intense thinking is the way to achieve the sixfold wealth.
There are hundreds of Gurus that say that all objects of desire are false and make one self-centered.
Pramathas (accomplished Sharanas) are the gurus that show the unity of Shiva (Linga, God) and Jeeva (Anga, individual) and provide the pure self-knowledge.
Having burnt the chain of doubts with the fire of knowledge, the only Guru who tied up the debt of freedom with ropes of awareness is Chennabasavanna and no one else, you see!
Kapilasidda Mallikarjuna!

COMMENTARY

This Vachana is from Sharana Siddarameswara. Siddarameswara resident of Sholapur area is said to have become an ardent devotee of Shiva very early in his life. He devotes a major part of his life to worshipping Shiva in the form of temple-resident (Static, Sthavara) Linga. He also believed that serving community is an important part of devotee's life and said to have constructed wells, shelters and lakes. Allama Prabhu in his effort to drive home to Siddarameswara that devotion and community projects are not the end in themselves, and the Self-knowledge and awareness of the unity of the Lord and the devotee (i.e. Linga-Anga Saamarasya) are the most important, brings him in contact with Sharanas at the city of Kalyana. Siddarameswara participates in Anubhava Mantapa (platform of experience) of Sharanas and becomes a disciple of Chennabasavanna (nephew of Basavanna). In this Vachana, Siddarameswara enumerates the variety of teachers (Gurus) found in the world and emphasizes that the true teacher is the one who enhances the intense desire and awareness to achieve self-realization.
It is apparent that even in the eleventh century (the time of Sharana movement) Gurus of various types and inclinations were present. Some were more interested in snatching the wealth of their disciples. Some gurus preached the ritualistic way of life. Some offered techniques to enhance pleasure and avoid sorrow in this and the next worlds. Some preached that the good conduct here is the only way to achieve heaven. Some advocated thinking and questioning as the mechanism for achieving the sixfold wealth: sama (Control of mind – ManoNigraha), dama (control of external senses, Baahyandriya Nigraha) ,

uparati (Withdrawing from objects, Vairaagya), titiksa (endurance of pain/pleasure, heat/cold, etc.), sradda(faith, belief) and samaadhana (single-pointedness of mind). Some teach that all objects of desire are false and one should get self-centered. Siddarameswara concludes that the Sharanas who have accomplished Linga-Anga Saamarasya (Unity with Him) are the only true Gurus who can remove the chain of doubts from disciple's mind and impart pure knowledge of the self. They are the only Gurus who can show the true freedom through true awareness. In particular, Siddarameswara offers his utmost respect saying that his Guru Chennabasavanna is the only true guru that he has come across and no one else.

Let us become aware and gain pure self-knowledge through those who have achieved it!

KANNADA COMMENTARY

ಇದು ಸಿದ್ಧರಾಮೇಶ್ವರರ ವಚನ. ಇಲ್ಲಿ ಅವರು ಅನೇಕ ಬಗೆಯ ಗುರುಗಳ ವಿಷಯ ಹೇಳುತ್ತ ನಿಜವಾದ ಗುರು ಯಾರು ಎಂಬುದನ್ನು ಹೇಳುತ್ತಿದ್ದಾರೆ. ಈ ವಚನವನ್ನು ನೋಡಿದರೆ ಎಂಟು ನೂರು ವರ್ಷಗಳ ಹಿಂದೆಯೂ ಇಂದಿನ ಪರಿಸ್ಥಿತಿಯೇ ಇತ್ತು ಎಂಬುದು ಕಂಡುಬರುತ್ತದೆ. ಸಿದ್ಧರಾಮರು, ಲೋಕದಲ್ಲಿ ನೂರಾರು ಗುರುಗಳನ್ನು ನೋಡಿ ಬೇಸರಗೊಂಡೆನೆಂದು ಹೇಳುತ್ತಾರೆ. ಏಕೆಂದರೆ ಅವರೆಲ್ಲ ನಿಜವಾದ ಜ್ಞಾನವನ್ನು ತೋರದೆ ಅರ್ಥವಿಲ್ಲದ ಯಾವುದೋ ಒಂದನ್ನು ಜ್ಞಾನವೆಂದು ತೋರುತ್ತಾರೆ. ಅಷ್ಟೇ ಅಲ್ಲದೆ ಮೋಸಮಾಡುವ ಗುರುಗಳೂ ಇದ್ದಾರೆ. ಮೋಸ ಮಾಡಿ ಶಿಷ್ಯರಿಂದ ಹಣವನ್ನು ದೋಚುತ್ತಾರೆ. ಅವರ ಮಾತಿನ ಮೋಡಿಗೆ ಒಳಗಾಗಿ ಶಿಷ್ಯರು ಗುರುಗಳು ಕೇಳಿದ್ದನ್ನು ಕೊಡುತ್ತಾರೆ. ಇನ್ನು ಕೆಲವರು, ಶಾಸ್ತ್ರಗಳ ಅರ್ಥವನ್ನು ಹೇಳಿ ಶಿಷ್ಯರನ್ನು ಅದೇ ಜ್ಞಾನವೆನ್ನುವ ಭ್ರಮೆಯಲ್ಲಿಡುತ್ತಾರೆ. ಇನ್ನು ಅನೇಕ ಗುರುಗಳು ಮಂತ್ರ ತಂತ್ರಗಳನ್ನು ತಿಳಿಸುತ್ತ, ಅವುಗಳಿಗೆ ಇಲ್ಲದ ಮಹತ್ವವನ್ನು ಕೊಡುತ್ತ ಅವುಗಳಿಂದುಂಟಾಗುವ ಸುಖ ದುಃಖದಲ್ಲಿ ಶಿಷ್ಯರನ್ನು ಮುಳುಗಿಸುತ್ತಾರೆ, ಇನ್ನೂ ಹೆಚ್ಚಿನ ಅಜ್ಞಾನಕ್ಕೀಡುಮಾಡುತ್ತಾರೆ. ಇನ್ನೂ ನೂರಾರು ಗುರುಗಳು ಯಾವುದು ಒಳ್ಳೆಯ ಕರ್ಮ ಯಾವುದು ಕೆಟ್ಟ ಕರ್ಮ ಎಂಬುದನ್ನು ವಿವರಿಸುತ್ತ, ಒಳ್ಳೆಯ ಕರ್ಮ ಮಾಡಿದರೆ ಸ್ವರ್ಗವು ದೊರೆಯುತ್ತದೆ, ಕೆಟ್ಟ ಕರ್ಮ ಮಾಡಿದರೆ ಮರ್ತ್ಯದಲ್ಲಿಯೇ ಇರಬೇಕಾಗುತ್ತದೆ ಎಂದು ನಂಬಿಸಿ ಶಿಷ್ಯರನ್ನು ಸತ್ಯದಿಂದ ದೂರವಿರಿಸುತ್ತಾರೆ. ಇನ್ನು ಬಹು ಸಂಖ್ಯೆಯ ಗುರುಗಳು ವಿಚಾರಕ್ಕೆ ಪ್ರಾಮುಖ್ಯತೆ ಕೊಟ್ಟು ಷಟ್ಸಾಧನೆಗಳನ್ನು ತಿಳಿಸುತ್ತಾರೆ. ಶಮೆ, (ಆತ್ಮ ಸಂಯಮ), ದಮೆ(ಇಂದ್ರಿಯ ನಿಗ್ರಹ), ತಿತಿಕ್ಷೆ (ಸಹನೆ ,ತಾಳ್ಮೆ), ಉಪರತಿ (ವೈರಾಗ್ಯ), ಶ್ರದ್ಧೆ ಮತ್ತು ಸಮಾಧಾನ ಇವು ಷಟ್ಸಂಪತ್ತುಗಳು. ಇವುಗಳನ್ನು ಸಾಧಿಸುವುದು ಷಟ್ಸಾಧನೆ. ಇವೆಲ್ಲವುಗಳನ್ನು ಕೇವಲ ವಿಚಾರಗಳಿಂದ ಸಾಧಿಸುವುದು ಸಾಧ್ಯವಿಲ್ಲ. ವೈಚಾರಿಕತೆಯಿಂದ ಅವುಗಳನ್ನು ಬೌದ್ಧಿಕವಾಗಿ ತಿಳಿದುಕೊಳ್ಳಬಹುದೇ ಹೊರತು ಅವುಗಳನ್ನು ಹೊಂದುವುದು ಸಾಧ್ಯವಿಲ್ಲ. ಆದರೆ ಗುರುಗಳು, ಶಿಷ್ಯರನ್ನು, ಅವುಗಳನ್ನು ವಿಚಾರದಿಂದ ಸಾಧಿಸಬಹುದು ಎಂಬ ಭ್ರಮೆಯಲ್ಲಿಡುತ್ತಾರೆ. ಇಂದ್ರಿಯ ವಿಷಯಗಳೆಲ್ಲವೂ ಮಿಥ್ಯೆ ಎಂದು ತಿಳಿಸುತ್ತಾರೆ. ಅದು ಕೂಡ ಇನ್ನೊಂದು ರೀತಿಯ ಭ್ರಮೆ. ಇಂದ್ರಿಯ ಸುಖ ಬೇಕು ಎನ್ನುವವನಿಗೂ ಮತ್ತು ಇಂದ್ರಿಯ ಸುಖ ಬೇಡವೆನ್ನುವವನಿಗೂ ಲಿಂಗಾಂಗ ಸಾಮರಸ್ಯವಿಲ್ಲ ಎನ್ನುತ್ತಾರೆ ಶರಣರು. ಇಂದ್ರಿಯಗಳು ಮಿಥ್ಯೆ ಎಂದು ಪರಿಗ್ರಹಿಸಿ ಅವುಗಳನ್ನು ಕೃತಕವಾಗಿ ನಿಗ್ರಹದಲ್ಲಿಡುವುದು ಸಾಧ್ಯವೂ ಇಲ್ಲ ಮತ್ತು ಸಾಧುವೂ ಅಲ್ಲ. ಆದರೆ ಶಿಷ್ಯರಿಂದ ಇಂತಹದನ್ನು ಮಾಡಿಸುವವರು ನೂರಾರು ಗುರುಗಳು. ಅವುಗಳನ್ನು ನಿಗ್ರಹದಲ್ಲಿಟ್ಟಿದ್ದೇನೆ ಎನ್ನುವ ಭ್ರಮೆಯಲ್ಲಿ ಶಿಷ್ಯ ಆ ಸಾಧನೆಯ ಅಹಮ್ಮಿನಲ್ಲಿರುತ್ತಾನೆ. ಆತನು ತನ್ನ ಬಗ್ಗೆಯೇ ಅನುರಾಗದಲ್ಲಿ ಮೈ ಮರೆಯುತ್ತಾನೆ, ಎನ್ನುತ್ತಾರೆ ಸಿದ್ಧರಾಮೇಶ್ವರರು. ಇಂತಹ ಶಿಷ್ಯರನ್ನು ತಯಾರಿಸುವ

ಗುರುಗಳು ನೂರಾರು ಸಿಗುತ್ತಾರೆ ಎನ್ನುತಾರೆ. ಆದರೆ ಶಿವ ಮತ್ತು ಜೀವ ಇವರ ಏಕತೆಯನ್ನು ತಿಳಿಸಿ, ಯಾವ ಭ್ರಮೆಗೂ ಒಳಗಾಗದೆ, ಯಾವ ಪ್ರಭಾವಕ್ಕೂ ಒಳಗಾಗದೆ ಇರುವ ನಿರ್ಮಲವಾದ ಜ್ಞಾನವನ್ನು ಉಂಟುಮಾಡುವವರು ಕೇವಲ ಪ್ರಮಥರು, ಎಂದರೆ ಸಾಮರಸ್ಯ ಪಡೆದ ಶರಣರು ಮಾತ್ರ ಎನ್ನುತ್ತಾರೆ ಸಿದ್ಧರಾಮರು. ಸಂಶಯದ ಶೃಂಖಲೆಗಳನ್ನೆಲ್ಲ ಜ್ಞಾನದ ಅಗ್ನಿಯಿಂದ ಸುಟ್ಟು, ಮುಕ್ತಿಯ ಹಂಗನ್ನು ಅರಿವಿನ ಬಂಧದಲ್ಲಿರಿಸುವಂತೆ ಮಾಡಿದ ತನ್ನ ಗುರು. ಅರಿವು ಉಂಟಾದಾಗ ಮುಕ್ತಿಯ ಹಂಗು ಅಥವಾ ಅದರ ಅವಶ್ಯಕತೆಯಿರುವುದಿಲ್ಲ. ಆದ್ದರಿಂದ ಅದು ಅರಿವಿನ ಬಂಧದಲ್ಲಿದೆ ಎನ್ನುತ್ತಾರೆ. ಆ ಗುರು ಕೇವಲ ಚೆನ್ನಬಸವಣ್ಣನಲ್ಲದೆ ಬೇರಾರೂ ಅಲ್ಲ ಎಂದು ತಮ್ಮ ಗುರುವನ್ನು ನೆನೆಯುತ್ತಾರೆ.

ಸ್ಥಾವರ ಲಿಂಗಾರಾಧನೆಯಲ್ಲಿ ಮತ್ತು ಲೋಕೋದ್ಧಾರದ ಕನಸಿನಲ್ಲಿ ದಿನಗಳನ್ನು ಕಳೆಯುತ್ತಿದ್ದ ಸಿದ್ಧರಾಮನಿಗೆ ಅಲ್ಲಮರು ಪ್ರಮಥರ ಶಿವಯೋಗದ ರಹಸ್ಯವನ್ನು ತೋರಿಸಲು ಕಲ್ಯಾಣಕ್ಕೆ ಕರೆತರುತ್ತಾರೆ. ಅಲ್ಲಿ ಚೆನ್ನಬಸವಣ್ಣನವರಿಂದ ಅವರಿಗೆ ದೀಕ್ಷೆಯಾಗುತ್ತದೆ. ಅವರ ಭ್ರಮೆಗಳು ಕಳಚಿಹೋಗುತ್ತವೆ. ಅವರು ತಮ್ಮ ಸಾಧನೆಯ ಸಮಯದಲ್ಲಿ ನಾನಾ ತರಹದ ಗುರುಗಳನ್ನು ಕಂಡಿರಬಹುದು. ಆದರೆ ಚೆನ್ನಬಸವಣ್ಣನವರನ್ನು ಮತ್ತು ಇತರ ಶರಣರನ್ನು ಕಂಡ ಮೇಲೆ ಅವರಿಗೆ ನಿಜವಾದ ಗುರು ಯಾರೆಂಬುದು ತಿಳಿದದ್ದಕ್ಕೆ ಈ ವಚನವೇ ಸಾಕ್ಷಿ.

Vachana 87: Brahmananaagali Kshatriyanaagali - True Disciple

ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ವೈಶ್ಯನಾಗಲಿ ಶೂದ್ರನಾಗಲಿ
ಆವ ಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ
ಗುರು ಕಾರುಣ್ಯ ಪಡೆದು ಅಂಗದ ಮೇಲೆ ಲಿಂಗವ ಧರಿಸಿದವನು
ಆಚಾರ ಸಂಪನ್ನ ಸತ್ಕ್ರಿಯನಾದ ಮಹಾತ್ಮನೇ
ಮೂರು ಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ.

TRANSLITERATION

braahmaNanaagali kShatriyanaagali vaishyanaagali shUdranaagali
aava jaatiyalli huTTidaatanaadarU aagali

guru kaaruNya paDedu aMgada mEle liMgava dharisidavanu
aacaara saMpanna satkriyanaada mahaamanE
mUru loKakke adhikaariyu nODaa akhaMDEshvaraa.

TRANSLATION (WORDS)

braahmaNanaagali (let him be a Brahmin , born in the highest caste) kShatriyanaagali (let him be a warrior) vaishyanaagali (let him be a trader) shUdranaagali (let him be a manual laborer)
aava(whichever) jaatiyalli (caste) huTTidaatanaadarU aagali (let him be born)
guru (the Guru,the teacher) kaaruNya (blessings) paDedu(received) aMgada mEle (on the body) liMgava (Linga, the icon of God) dharisidavanu (who wares)
aacaara(good behavior) saMpanna (the one with) satkriyanaada (one with right actions) mahaatmanE (great soul indeed)
mUru (three) loKakke (worlds) adhikaariyu (authority over) nODaa (you see) akhaMDEshvaraa. (Akhamdeshvara)

TRANSLATION

Whether one is a Brahmin, Kshatriya, Vysya or Sudra,
No matter which caste one is born in,
After earning the blessings of the Guru, the one who wares Linga on his body,
and the one with good conduct and right actions, is the great soul indeed!
He is the authority over the three worlds, you see, Akhamdeshvara!

COMMENTARY

In previous postings we have addressed the concept of Guru, the teacher. It is said that Guru appears when the disciple is ready, or the disciple finds the Guru when he is ready for receiving the knowledge. In this Vachana, Sharana Shanmuka Swamy addresses as to who would be qualified to be a disciple and the state the disciple would reach once blessed by the Guru.

It is apparent that the four-caste system consisting of Brahmin (knowledge bearer, the highest caste), Kshatriya (warrior, protector), Vysya (Trader, Merchant) and Sudra (manual laborer, the lowest caste) was very prevalent and hence Sharana Shanmuka Swamy clarifies that it is immaterial as to which cast the disciple is born in. As long as the disciple earns/receives the blessings of the guru, he becomes eligible for the divine knowledge. As we have mentioned in previous postings, guru is not limited to be an individual, rather it is a concept. Those who develop an intense desire to be enveloped by this concept, obtain the keenness of detecting the subtlety in all things around them. Such subtle nature enables them to see the truth beyond what appears at the surface of entities around them. That is the blessing of the guru. As a symbol of acquiring the subtle divine principle, guru offers the disciple Linga, the icon of the divine principle. The disciple wears the Linga on his body. It is not sufficient to wear the Linga as a ritual, but the disciple has to grasp the true meaning behind it and conduct himself well in all aspects and perform

right actions. He thus becomes the authority of all the three worlds (Heaven, Mortal and Hell), implying that he is capable of realizing the whole Universe, commonly believed to be consisting of the three worlds. Shanmuka Swamy says that such a true disciple has reached the ultimate level of merger with the God, the so called Linga-Anga saamarasya.

In general, understanding the material of which any given object is made yields an understanding of everything else made of the same material. For example, understanding properties of Gold, allows understanding of all jewelry made of Gold no matter what their shapes and sizes are. Similarly, all things in this world, although identified with different names and shapes, have the same life source. The blessing of guru provides us the insight into this life source and allows us to talk authoritatively about all entities around us. Such blessing and insight are not limited by the caste one is born in.

Let our conduct and actions become that of a blessed disciple!

KANNADA COMMENTARY

ಇಲ್ಲಿಯವರೆಗೆ ಗುರುವಿನ ಬಗ್ಗೆ ತಿಳಿದುಕೊಂಡೆವು. ಈಗ ಇಲ್ಲಿ ಶಿಷ್ಯನ ಬಗ್ಗೆ ಹೇಳುತ್ತಿದ್ದಾರೆ ಷಣ್ಮುಖಸ್ವಾಮಿಗಳು. ಶಿಷ್ಯನಾಗಲು ಯಾರು ಅರ್ಹರು ಮತ್ತು ಗುರುವಿನ ಕಾರುಣ್ಯದಿಂದ ಶಿಷ್ಯನು ಯಾವ ಸ್ಥಿತಿಗೇರುತ್ತಾನೆ ಎಂಬುದನ್ನುಷಣ್ಮುಖಸ್ವಾಮಿಗಳು ಬಹಳ ಸೊಗಸಾಗಿ ಹೇಳಿದ್ದಾರೆ.
ಶಿಷ್ಯನು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಶೂದ್ರ ಯಾವ ಜಾತಿಯವನೇ ಆಗಲಿ ಆತನಿಗೆ ಗುರು ಕಾರುಣ್ಯ ಉಂಟಾಗಿದ್ದರೆ ಸಾಕು ಅದೇ ಆತನಿಗೆ ಜ್ಞಾನಿಯಾಗುವ ಅರ್ಹತೆಯನ್ನು ಒದಗಿಸುತ್ತದೆ ಎನ್ನುತ್ತಾರೆ, ಆದರೆ ಗುರು ಕಾರುಣ್ಯವೆಂದರೇನು? ಅದು ಹೇಗೆ ಉಂಟಾಗುತ್ತದೆ? ಸಾಮಾನ್ಯವಾಗಿ ನಾವು ಗುರುಕಾರುಣ್ಯವೆಂದರೆ ಗುರು ವ್ಯಕ್ತಿಯ ರೂಪದಲ್ಲಿ ಬಂದು ಶಿಷ್ಯನಿಗೆ ಉಪದೇಶಿಸುತ್ತಾನೆ ಎಂದುಕೊಳ್ಳುತ್ತೇವೆ. ಗುರುವು ಶಿಷ್ಯನನ್ನು ಹುಡುಕಿಕೊಂಡು ಬರುತ್ತಾನೆ, ಶಿಷ್ಯನು ಹಂಬಲಿಸಿದರೆ ಸಾಕು ಗುರು ತಾನೇ ಸ್ವತಃ ಹುಡುಕಿಕೊಂಡು ಬಂದು ಕರುಣಿಸುತ್ತಾನೆ ಎಂಬಂತಹ ಮಾತುಗಳನ್ನು ಎಲ್ಲರೂ ಕೇಳಿರುತ್ತಾರೆ. ಆದರೆ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಈ ಹಿಂದೆಯೇ ನಾವು ಗುರುವು ಕೇವಲ ವ್ಯಕ್ತಿಯಲ್ಲ, ಅಮೂರ್ತವಾದ ಬೆಳಕಾಗಿ ಬರುವ ತತ್ವ ಎಂಬುದನ್ನು ಕಂಡುಕೊಂಡಿದ್ದೇವೆ. ಯಾರಿಗೆ ಮನಸ್ಸಿನಲ್ಲಿ ಆ ತತ್ವವನ್ನು ಹೊಂದಬೇಕೆನ್ನುವ ಆಳವಾದ ಹಂಬಲವಿರುತ್ತದೆಯೋ ಆತನಿಗೆ ದೈವಕೃಪೆಯಾಗುತ್ತದೆ. ಅಂದರೆ ಆತನ ಮನಸ್ಸು ಸೂಕ್ಷ್ಮವಾಗಿ ಎಲ್ಲವನ್ನೂ ಹೊಸ ದೃಷ್ಟಿಯಿಂದ ನೋಡಲುಪಕ್ರಮಿಸುತ್ತದೆ. ಆತನಿಗೆ ಜಗತ್ತಿನ ಪ್ರತಿಯೊಂದರಲ್ಲಿ ಬೇರೆ ಯಾವುದೋ ತತ್ವದ ಆಟ ಕಾಣುತ್ತದೆ. ಮೇಲು ನೋಟಕ್ಕೆ ಕಾಣುವುಷ್ಟೇ ಪೂರ್ಣ ಸತ್ಯವಲ್ಲ ಅಲ್ಲ, ಅದನ್ನು ಮೀರಿದುದದೇನೋ ಕಾಣಿಸುತ್ತದೆ. ಈ ಸೂಕ್ಷ್ಮ ದೃಷ್ಟಿಯ ಲಾಭವೇ ಒಂದು ರೀತಿಯಿಂದ ಗುರು ಕಾರುಣ್ಯವೆಂದು ಹೇಳಬಹುದು. ಈ ರೀತಿಯ ಗುರು ಕಾರುಣ್ಯ ಉಂಟಾದ ಯಾವ ಜಾತಿಯ ವ್ಯಕ್ತಿಯೇ ಆಗಲಿ ದೀಕ್ಷೆಗೆ ಅರ್ಹನಾಗುತ್ತಾನೆ ಎನ್ನುತ್ತಾರೆ ಷಣ್ಮುಖ ಸ್ವಾಮಿಗಳು. ಇದನ್ನು ಸರಿಯಾಗಿ ಅರ್ಥಮಾಡಿಕೊಂಡವರಿಗೆ ಜಾತಿಯ ಪ್ರಶ್ನೆಯೇ ಹುಟ್ಟುವುದಿಲ್ಲ.

ಗುರು ಕಾರುಣ್ಯ ಪಡೆದು ಅಂಗದ ಮೇಲೆ ಲಿಂಗವ ಧರಿಸಿದವನು
ಆಚಾರ ಸಂಪನ್ನ ಸತ್ಕ್ರಿಯನಾದ ಮಹಾತ್ಮನೇ

ಮೂರು ಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ ಎನ್ನುತ್ತಾರೆ. ಗುರುಕಾರುಣ್ಯವೇ ಎಲ್ಲವೂ ಅಲ್ಲ. ಆ ದಾರಿಯಲ್ಲಿ ಇನ್ನೂ ಮುಂದುವರಿಯ ಅವಶ್ಯಕತೆಯಿರುತ್ತದೆ. ಆ ದಾರಿ, ಆತನಿಗೆ ವ್ಯಕ್ತಿಯ ರೂಪದಲ್ಲಿ ಬರುವ ಗುರುವಿನಿಂದ ತಿಳಿಯುತ್ತದೆ. ಆ ಗುರು ಶಿಷ್ಯನಿಗೆ ಆ ಪರತತ್ವದ ಕುರುಹಾದ ಲಿಂಗವನ್ನು ಅನುಗ್ರಹಿಸುತ್ತಾನೆ. ಆ ಗುರುವಿನ ಸಹಾಯದಿಂದ ಶಿಷ್ಯನು ಲಿಂಗವನ್ನು ಧರಿಸಿ ಆಚಾರ ಸಂಪನ್ನ ಮತ್ತು ಸತ್ಕ್ರಿಯವಂತನಾಗುತ್ತಾನೆ. "ಆಚಾರ" ವೆನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ವಿಭೂತಿ ಧರಿಸುವುದು, ಲಿಂಗ ಪೂಜೆ ಮಾಡುವುದು ಮಾತ್ರ ಆಚಾರವಲ್ಲ. "ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಡೆ ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ?" ಎಂದು ಹೇಳಿ ಅದು ಆಚಾರವಲ್ಲ ಎಂದು ಅಲ್ಲಮರು ಮೊದಲೇ ಹೇಳಿದ್ದಾರೆ. 'ಅಂತರಂಗ ಬಹಿರಂಗ ಶುದ್ಧಿ" ಬಹು ಮುಖ್ಯವೆಂದು ಬಸವಣ್ಣನವರು ಹೇಳಿದ್ದಾರೆ. ಎಲ್ಲವನ್ನೂ ಸೂಕ್ಷ್ಮವಾಗಿ ನೋಡಿ, ಕಂಡುಕೊಳ್ಳುವವ ಲಿಂಗಧಾರಣೆಯನ್ನು ಮತ್ತು ಇತರ ಅಚಾರ ಮತ್ತು ಸತ್ಕ್ರಿಯೆಗಳನ್ನು ಕೇವಲ ಶಾಸ್ತ್ರಕ್ಕಾಗಿ ಮಾಡುವವನಲ್ಲ. ಆತನು ಅದರ ಹಿಂದೆ ಇರುವ ಅರ್ಥವನ್ನು ಕಾಣುತ್ತಾನೆ. ಆದ್ದರಿಂದ ಅದು ಕೇವಲ ಬಾಹ್ಯ ಆಚಾರವಾಗುವುದಿಲ್ಲ. ಅಂತಹ ವ್ಯಕ್ತಿ ಮೂರುಲೋಕಕ್ಕೂ ಅಧಿಕಾರಿಯಾಗುತ್ತಾನೆ ಎಂದು ಹೇಳುತ್ತಾರೆ. ಮೂರು ಲೋಕ ಎಂದರೆ "ಸ್ವರ್ಗ, ಮರ್ತ್ಯ ಮತ್ತು ಪಾತಾಳ ಅಥವಾ ನರಕ" ವೆಂದರ್ಥ. ಈ ಲೋಕಗಳಿಗೆ ಅಧಿಕಾರಿಯಾಗುವುದೆಂದರರೇನು?
ಮೂರು ಲೋಕವೆಂದರೆ ಇಲ್ಲಿ ಇಡೀ ವಿಶ್ವ ಎಂದರ್ಥ. ವಿಶ್ವಕ್ಕೆ ಅಧಿಕಾರಿ ಎಂದರೆ ಈ ವಿಶ್ವದ ಪ್ರತಿಯೊಂದರ ಬಗ್ಗೆ ಅಧಿಕಾರದಿಂದ ಮಾತನಾಡುವ ಸಾಮರ್ಥ್ಯ ಆತನಿಗೆ ಇರುತ್ತದೆ ಎಂದರ್ಥ. ಈ ಸಾಮರ್ಥ್ಯ ಆತನಿಗೆ ಹೇಗೆ ಒದಗುತ್ತದೆ? ಇದನ್ನು ಅರುಹುವ ಒಂದು ಕತೆ ಉಪನಿಷತ್ತಿನಲ್ಲಿ ಬರುತ್ತದೆ.

ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಒಂದು ಕತೆ:
ಉದ್ದಾಲಕ ಮಹರ್ಷಿಯು ತನ್ನ ಮಗ ಶ್ವೇತಕೇತುವನ್ನು ವಿದ್ಯಾರ್ಜನೆಗಾಗಿ ಗುರುಕುಲಕ್ಕೆ ಕಳಿಸುತ್ತಾನೆ. ಗುರುಕುಲದಲ್ಲಿ ಅನೇಕ ವಿಷಯಗಳ ಅಧ್ಯಯನ ಮಾಡಿ ವಿದ್ಯಾಭೂಷಣನಾಗಿ ಶ್ವೇತಕೇತು ಹಿಂತಿರುಗುತ್ತಾನೆ. ಆತನಿಗೆ ಆಗಲೆ ತಾನು ಗಳಿಸಿದ ವಿದ್ಯೆಯ ಬಗ್ಗೆ ಸಾಕಷ್ಟು ಅಹಂಕಾರ ಉಂಟಾಗಿರುತ್ತದೆ. ಅದನ್ನು ಕಂಡು ಉದ್ದಾಲಕನು ಮಗನನ್ನು ಕುರಿತು " ಶೇತಕೇತು! ಈಗಾಗಲೇ ನೀನು ಜಗತ್ತಿನಲ್ಲಿರುವ ಎಲ್ಲ ವಿದ್ಯೆಗಳನ್ನೂ ಕಲಿತಿರುವೆಯಲ್ಲವೆ?" ಎಂದು ಕೇಳುತ್ತಾನೆ.
"ಹೌದು" ಎಂದುತ್ತರಿಸುತ್ತಾನೆ ಶ್ವೇತಕೇತು.
"ಆದರೆ, ತಿಳಿಯದೆ ಇರುವುದನ್ನು ತಿಳಿಯುವ, ಗ್ರಹಿಸಲು ಬಾರದುದನ್ನು ಗ್ರಹಿಸುವ, ಕಿವಿಗೆ ಕೇಳಿಸದೆ ಇರುವಂತಹದನ್ನು ಕೇಳಿಸಿಕೊಳ್ಳುವ ವಿದ್ಯೆ ನಿನಗೆ ಲಭಿಸಿದೆಯೆ?" ಎಂದು ಕೇಳುತ್ತಾನೆ. ಈ ಪ್ರಶ್ನೆಯಿಂದ ಅಚ್ಚರಿಗೊಂಡು ಶ್ವೇತಕೇತುವು "ಅಂತಹ ವಿದ್ಯೆಯೊಂದಿದ್ದರೆ ಅದನ್ನು ನೀವು ನನಗೆ ದಯಪಾಲಿಸಿರಿ" ಎಂದು ಕೇಳಿಕೊಳ್ಳುತ್ತಾನೆ. ಆಗ ಉದ್ದಾಲಕನು ಕೆಲ ಪ್ರಯೋಗಗಳಿಂದ ಮತ್ತು ಉದಾಹರಣೆಗಳಿಂದ ಆ ವಿದ್ಯೆಯು ಮಗನಿಗೆ ಅರ್ಥವಾಗುವಂತೆ ಮಾಡುತ್ತಾನೆ. ಶ್ವೇತಕೇತುವಿನ ಅಹಂಕಾರ ಕಳೆದುಹೋಗುತ್ತದೆ. ಅದರಲ್ಲಿಯ ಒಂದು ಉದಾಹರಣೆಯನ್ನು ಇಲ್ಲಿ ಉದ್ಧರಿಸಬಹುದು:

"ಮಣ್ಣಿನ ಗುಣಗಳನ್ನು ಅರಿತುಕೊಂಡಾಗ ಮಣ್ಣಿನಿಂದ ಮಾಡಿದ ಎಲ್ಲವುಗಳನ್ನು ತಿಳಿಯಬಹುದು. ಚಿನ್ನದ ಗುಣಗಳನ್ನು ಅರಿತಾಗ ಚಿನ್ನದಿಂದ ಮಾಡಿದ ಎಲ್ಲವುಗಳನ್ನು ಅರಿಯಬಹುದು. ಕೇವಲ ಅವುಗಳ ಆಕಾರ ಮತ್ತು ಹೆಸರುಗಳು ಬೇರೆಯಾಗಿರುತ್ತವೆ ಆದರೆ ಅವೆಲ್ಲವೂ ಮಣ್ಣಿನವೇ ಅಥವಾ ಚಿನ್ನದವೇ ಆಗಿರುತ್ತವೆ. ಅದೇ ರೀತಿ ಈ ಜಗತ್ತಿನಲ್ಲಿ ಕಂಡುಬರುವ ಎಲ್ಲವುಗಳ ಹೆಸರುಗಳು ಮತ್ತು ಆಕಾರಗಳು ಬೇರೆಯಾಗಿವೆ. ಆದರೆ ಅವುಗಳಲ್ಲಿಯ ಚೈತನ್ಯ ಒಂದೇ ಆಗಿದೆ. **Understanding the material of which any given object is made yields an**

understanding of everything else made of the same material." ಇದನ್ನು ತಿಳಿದುಕೊಂಡಾಗ ಆ ವಸ್ತುಗಳಬಗ್ಗೆ ಅಧಿಕಾರಯುತವಾಗಿ ಮಾತಾಡುವ ಸಾಮರ್ಥ್ಯ ತಾನೇ ತಾನಾಗಿ ಬರುತ್ತದೆ."
ಅದೇ ರೀತಿಯಾಗಿ ಆಂತರಿಕವಾದ ಗುರುವಿನ ಕೃಪೆಯಿಂದ ಎಲ್ಲವುಗಳ ಬಗ್ಗೆ ಅಧಿಕಾರಯುತವಾಗಿ ಮಾತಾಡುವ ಒಳದೃಷ್ಟಿಉಂಟಾಗುತ್ತದೆ, ಈ ಒಳದೃಷ್ಟಿ ಯಾವ ಒಂದು ಜಾತಿಯ ವ್ಯಕ್ತಿಯ ಸ್ವತ್ತಲ್ಲ, ಎನ್ನುತ್ತಾರೆ ಷಣ್ಮುಖಸ್ವಾಮಿಗಳು.

Vachana 88: Eriya Kattabahudallade - Disciple's Responsibility

ಏರಿಯ ಕಟ್ಟಬಹುದಲ್ಲದೆ, ನೀರ ತುಂಬಬಹುದೆ?
ಕೈದು ಕೊಡಬಹುಲ್ಲದೆ, ಕಲಿತನವ ಕೊಡಬಹುದೆ?
ವಿವಾಹ ಮಾಡಬಹುದಲ್ಲದೆ, ಪುರುಷತನವನರಸಬಹುದೆ?
ಘನವ ತೋರಬಹುದಲ್ಲದೆ, ನೆನೆಹ ನಿಲಿಸಬಹುದೆ?
'ಓದೊಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಲೋಕದ ಮಾತಿನಂತೆ
ಸದ್ಗುರು ಕಾರುಣ್ಯವಾದರೂ ಸಾಧಿಸಿದವನಿಲ್ಲ ಸಕಳೇಶ್ವರಾ

TRANSLITERATION

Eriya kaTTabahudallade nIra tuMbabahude?
Kaidu koDabahudallade kalitanava koDabahude?
Vivaaha maaDabahudallade, puruShatanavanarasabahude?
Ghanava tOrabahudallade, neneha nilisabahude?
'Odokkaalu buddhi mukkaalu' eMba lOkada maatinaMte
Sadguru kaaruNyavaadarU saadhisidavanilla sakalEshavaraa

TRANSLATION (WORDS)

**Eriya (the raised bank) kaTTabahudallade (can be built) nIra (water) tuMbabahude? (but can one fill it with?)
Kaidu (weapon) koDabahudallade(can be given) kalitanava (bravery) koDabahude?(but can one give?)
Vivaaha (marriage) maaDabahudallade,(can be conducted) puruShatanavanarasabahude?(but can one seek virility)
Ghanava (the profound) tOrabahudallade,(can be shown) neneha (attention) nilisabahude? (but can one set, resolute)
'Odokkaalu (study, reading is one fourth) buddhi (intelligence) mukkaalu (is three fourth)' eMba (as) lOkada (world's) maatinaMte (the saying goes)
Sadguru (the teacher, the guru) kaaruNyavaadarU (even with the blessings of) saadhisidavanilla
(there is no one who has achieved) sakalEshavaraa (Sakaleshvara)**

TRANSLATION

**The tank bund can be built, but can it be filled with water?
The weapons can be provided, but can bravery be imparted?
The marriage can be conducted, but can one seek virility?
The profound can be shown, but can attention be set (can one be made resolute)?
As the saying goes, 'Reading is one fourth, intelligence is three fourth,'
Even with the blessings of Guru, no one has achieved It, Oh Sakaleshvara!**
COMMENTARY

**In previous postings we have addressed the importance of Guru's blessings and corresponding intense desire and awareness in the disciple for successful transmission of the knowledge. In this Vachana, Sharana Sakalesha Maadarasa says that Guru's blessing is not the end of it all. It is just the first step and there is something more needed, and it depends on the disciple.
We can build the raised bank (bund) of a tank (lake), but filling it with water requires adequate rainfall. In addition to the rain, the water needs to be channeled to fill the tank. Thus, success in making the tank complete is a combined effort of the man and the divine. We can provide the most powerful weapons to a soldier, but he cannot use them efficiently without inherent bravery. The bravery is a result of his practice and training of the body, and the invisible force that bestows him with the mental strength. Similar combination is needed for the development of virility in married individuals. Along the same lines, the Guru can show the profound, but cannot make the disciple set on the profound. The combination of persistence practice by the disciple and his inherent nature to stabilize the mind on the profound is needed. It is said that 'reading and studying is only one fourth of the effort, the intelligence is the rest of three-fourth. That means, in addition to the efforts by the individual, we need some abstract power that propels us to find the divine. That power could be our inherent nature. It should be recognized and kindled to achieve the**

ultimate knowledge. Maadarasa says that not many have achieved such capability.

In summary, Guru's blessings and lessons give us the initial resource towards achieving the ultimate knowledge. We then try to supplement that initial resource with persistent practice and develop an intense desire to achieve it. In this process, we end up making mental images of what needs to be achieved. This image and the intense desire sway us away from achieving the ultimate. Since the ultimate is beyond the sphere of human mind, it cannot be visualized or desired. We should develop a clear understanding of how the mind works and enhance our inner strength to see the ultimate. This inner strength is the invisible divine power, the three-fourth component.

Let us expand our inner strength to invite the divine power into us!

KANNADA COMMENTARY

ಹಿಂದೆ ನಾವು ಗುರುಕಾರುಣ್ಯವೆಂದರೇನು? ಮತ್ತು ಅದು ಎಷ್ಟು ಮುಖ್ಯವೆಂಬುದನ್ನು ತಿಳಿದುಕೊಂಡೆವು. ಆದರೆ ಈ ವಚನದಲ್ಲಿ ಸಕಲೇಶ ಮಾದರಸರು ಕೇವಲ ಗುರು ಕಾರುಣ್ಯವಾದರೆ ಸಾಲದು, ಅದು ಮೊದಲ ಮೆಟ್ಟಿಲು, ಅದೇ ಕೊನೆಯಲ್ಲ, ಅದಕ್ಕಿಂತ ಹೆಚ್ಚಿನದೇನೋ ಇದೆ. ಅದು ಶಿಷ್ಯನನ್ನು ಅವಲಂಬಿಸಿದೆ ಎಂಬುದನ್ನು ದೃಷ್ಟಾಂತ ಸಹಿತ ಹೇಳುತ್ತಿದ್ದಾರೆ.
ಏರಿಯನ್ನು ಕಟ್ಟಬಹುದು, ಆದರೆ ಆ ಕೆರೆಯಲ್ಲಿ ನೀರನ್ನು ತುಂಬಬಹುದೆ? ಅಲ್ಲಿ ನೀರು ತುಂಬ ಬೇಕಾದರೆ ಮಳೆ ಬರಬೇಕು. ಅಂದರೆ ದೈವ ಅಥವಾ ಪ್ರಕೃತಿ ಒಲಿಯಬೇಕು. ಮತ್ತು ವ್ಯಕ್ತಿಯ ಪ್ರಯತ್ನವೂ ಸೇರಬೇಕು. ಬೇರೆ ಬೇರೆ ಕಡೆ ಹರಿದು ಹೋಗುವ ನೀರನ್ನು ಕೆರೆಗೆ ಹರಿದು ಬರುವಂತೆ ಮಾಡಬೇಕು. ಆಗ ಕೆರೆ ಪೂರ್ತಿಯಾಗಿ ತುಂಬಬಹುದು. ಶಸ್ತ್ರಾಸ್ತ್ರಗಳನ್ನು ಕೊಡಬಹುದು. ಆದರೆ ಕಲಿತನವ ಕೊಡಬಹುದೆ? ಎಂಬುದು ಎರಡನೆಯ ದೃಷ್ಟಾಂತ. ವ್ಯಕ್ತಿಯ ಕೈಯಲ್ಲಿ ಶಸ್ತ್ರಗಳನ್ನು ಕೊಟ್ಟರೂ ಆತನಲ್ಲಿ ಶೌರ್ಯವಿಲ್ಲದಿದ್ದರೆ ಏನು ಪ್ರಯೋಜನ? ಆ ಶೌರ್ಯವು ಅದೃಶ್ಯ ಶಕ್ತಿ ಮತ್ತು ಪುರುಷ ಸಾಧನೆ ಎರಡರ ಮೇಳದ ಪರಿಣಾಮ. ದೈಹಿಕ ವ್ಯಾಯಾಮ, ಒಳ್ಳೆಯ ಆಹಾರ, ನಿರಂತರ ಅಭ್ಯಾಸದಿಂದ ಶಾರೀರಿಕ ಬಲವನ್ನು ಪಡೆಯಬಹುದು ಆದರೆ ಮಾನಸಿಕ ಧೈರ್ಯ ಶೌರ್ಯಗಳು ಬೇರೆ ರೀತಿಯ ಸಾಧನೆಯಿಂದ ಒದಗುತ್ತವೆ. ಇದೇ ಮಾತು ಪುರುಷತನಕ್ಕೂ ಅನ್ವಯಿಸುತ್ತದೆ. ವಿವಾಹವನ್ನು ಮಾಡಿಸಬಹುದು ಆದರೆ ಪುರುಷತನವನ್ನು ಕೊಡಲಾಗುವುದಿಲ್ಲ. ಗುರುವಾದವನು ಘನವನ್ನು ತೋರಿಸಬಹುದು ಆದರೆ ಆ ಘನದಲ್ಲಿ ಮನವನ್ನು ನಿಲ್ಲಿಸುವುದು, ಆ ವ್ಯಕ್ತಿ ತನ್ನಲ್ಲಿ ಸುಪ್ತವಾಗಿರುವ ಶಕ್ತಿಯಿಂದ ಮಾಡಬೇಕು. ಇಲ್ಲಿ ಕೊಟ್ಟಿರುವ ಸಕಲ ದೃಷ್ಟಾಂತಗಳಲ್ಲಿಯೂ ಪುರುಷ ಪ್ರಯತ್ನದ ಜೊತೆಗೆ ಇನ್ನಾವುದೋ ಅದೃಶ್ಯ ಶಕ್ತಿಯೂ ಬೇಕಾಗುತ್ತದೆ ಎಂಬ ಸೂಚನೆ ಇದೆ. ಅದು ನಮ್ಮಲ್ಲಿಯೇ ಸುಪ್ತವಾಗಿರುವ ಶಕ್ತಿಯಾಗಿರಬಹುದು. ಅದನ್ನು ಗುರುತಿಸಿ ಜಾಗೃತಗೊಳಿಸ ಬೇಕು. "ಓದು ಒಕ್ಕಾಲು ಬುದ್ಧಿ ಮುಕ್ಕಾಲು" ಎಂದು ಕೂಡ ಹೇಳುತ್ತಾರೆ. ಎಷ್ಟೇ ಅಧ್ಯಯನ ಮಾಡಿದರೂ ಅದು ನಾಲ್ಕನೇ ಒಂದಂಶ ಮಾತ್ರವಾಗಿರುತ್ತದೆ. ಅದರಲ್ಲಿ ಮುಕ್ಕಾಲು ಬುದ್ಧಿ ಸೇರಿದಾಗ ಮಾತ್ರ ಅದು ಅರ್ಥಪೂರ್ಣವಾಗುತ್ತದೆ. ಇದು ಲೋಕೋಕ್ತಿ. ಗುರು ಕಾರುಣ್ಯವು ನಾಲ್ಕನೆ ಒಂದಂಶ. ಅದರಲ್ಲಿ ಶಿಷ್ಯನ ಪ್ರಯತ್ನ, ಅಂದರೆ ಪೂರ್ಣ ಜ್ಞಾನವನ್ನು ಪಡೆಯಲು ಬೇಕಾಗುವ, ತನ್ನಲ್ಲಿ ಇರುವ ಸುಪ್ತ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳುವುದು ಆತನ ಸಾಧನೆ. ಅದೇ ಹೆಚ್ಚಿನ ಮಹತ್ವದ್ದು. ಅದನ್ನು ಸಾಧಿಸಿದವರು ಯಾರೂ ಇಲ್ಲ ಎನ್ನುತ್ತಾರೆ ಸಕಲೇಶ ಮಾದರಸರು. ಎಂದರೆ ಅದು ಅತ್ಯಂತ ವಿರಳ. ಎಲ್ಲರೂ ಗುರು ಕಾರುಣ್ಯವಾಯಿತೆಂದು ತೃಪ್ತಿಪಟ್ಟು ಕೊಂಡು ಅಷ್ಟಕ್ಕೇ ಸುಮ್ಮನಿದ್ದು ಬಿಡುತ್ತಾರೆ, ಅಥವಾ ಅಹಂಕಾರದಿಂದ ಮೆರೆಯುತ್ತಾರೆ. ಅಂತಹವರಿಗೆ

ಅಲ್ಲಿಗೇ ಎಲ್ಲವೂ ಮುಗಿಯಲಿಲ್ಲ. ಇನ್ನೂ ಸಾಧಿಸಬೇಕಾದುದು ಮುಕ್ಕಾಲು ಪಾಲು ಇದೆ ಎಂಬುದನ್ನು ಈ ವಚನದ ಮೂಲಕ ತಿಳಿಸುತ್ತಿದ್ದಾರೆ.

ಈ ಮುಕ್ಕಾಲು ಪಾಲು ಇರುವುದನ್ನು ಹೇಗೆ ಸಾಧಿಸಬಹುದು? ಎನ್ನುವ ಪ್ರಶ್ನೆ ಹುಟ್ಟುತ್ತದೆ. ಏಕೆಂದರೆ ಅದನ್ನು ಪಡೆಯುವುದು ಮನುಷ್ಯ ಪ್ರಯತ್ನದಿಂದ ಸಾಧ್ಯವಿಲ್ಲ ಎಂದು ವಚನಕಾರರು ಹಿಂದಯೇ ಹೇಳಿರುವರು . ಅಂದರೆ ಪೂಜೆ ಮಾಡುವುದರಿಂದ, ಶಾಸ್ತ್ರಗಳನ್ನು ಓದುವುದರಿಂದ ಅಥವಾ ಯೋಗಾಸನಗಳನ್ನು ಮಾಡುವುದರಿಂದ ಅದು ಲಭ್ಯವಾಗುವುದಿಲ್ಲ. ಹಾಗಾದರೆ ಏನು ಮಾಡುವುದು? ಏನಾದರೂ ಮಾಡಿ ಅದನ್ನು ಪಡೆಯಬೇಕೆನ್ನುವ ಆತುರತೆಯನ್ನು ಮೊದಲು ಕಳೆದುಕೊಳ್ಳಬೇಕು. ಏಕೆಂದರೆ ಹಾಗೆ ಮಾಡಿದಾಗ ಅದರಬಗ್ಗೆ ನಮ್ಮ ಮನಸ್ಸಿನಲ್ಲಿ ನಮಗೆ ತಿಳಿಯದೆಯೆ ಅದರ ಬಗ್ಗೆ ಒಂದು ಚಿತ್ರ ಮೂಡಿರುತ್ತದೆ. ಮತ್ತು ನಾವು ಅದನ್ನು ಅರಸುತ್ತೇವೆ. ಆದರೆ ಆ ಪರತತ್ವ ಮನೋ ವಲಯದಿಂದಾಚೆಗೆ ಇರುವಂತಹುದು ಎಂದು ಹೇಳುತ್ತಾರೆ. ಅದರ ಬಗ್ಗೆ ಯಾವ ನಿರೀಕ್ಷೆಯೂ ಇರದಂತೆ ನೋಡಿಕೊಳ್ಳುವುದೇ ಬಹು ಮುಖ್ಯ. ಅಥವಾ ನಮ್ಮ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವುದು ಮುಖ್ಯ. ಅದು ಸಾಮಾನ್ಯವಾದ ಕೆಲಸವಲ್ಲ. ಅದಕ್ಕೆ ಅಪಾರವಾದ ಆತ್ಮ ಬಲ ಬೇಕು. ಇದನ್ನೇ ಇಲ್ಲಿ ಆ ಮತ್ತೊಂದರ ಕೃಪೆ ಎಂದು ಹೇಳುತ್ತಿರುವುದು.

Vachana 89: Tanuva Tontavamaadi - Nurturing the Body-Mind Garden

ತನುವ ತೋಂಟವ ಮಾಡಿ, ಮನವ ಗುದ್ದಲಿಯ ಮಾಡಿ, ಅಗೆದು ಕಳೆದೆನಯ್ಯಾ ಭ್ರಾಂತಿನ ಬೇರ;
ಒಡೆದು ಸಂಸಾರದ ಹೆಂಟೆಯ, ಬಗೆದು ಬಿತ್ತಿದೆನಯ್ಯಾ ಬ್ರಹ್ಮ ಬೀಜವ;
ಅಖಂಡ ಮಂಡಲವೆಂಬ ಬಾವಿ, ಪವನವೇ ರಾಟಾಳ, ಸುಷುಮ್ನ ನಾಳದಿಂದ ಉದಕವ ತಿದ್ದಿ,
ಬಸವಗಳೈವರು ಹಸಗೆಡಿಸಿಹವೆಂದು, ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ,
ಆವಾಗಲೂ ಈ ತೋಟದಲ್ಲಿ ಜಾಗರವಿದ್ದು, ಸಸಿಯ ಸಲಹಿದೆನುಕಾಣಾ ಗುಹೇಶ್ವರಾ

TRANSLITERATION

Tanuva tOMTava maaDi, manava guddaliya maaDi, Agedu kaLedenayyaa bhraaMtina bEra;
oDedu saMsaarada heMTeya, Bagedu bittidenayyaa brahma bIjava;
aKaMDa maMDalaveMba baavi, pavanavE raaTAALa, suShumna naaLadiMda udakava tiddi,
basavagaLaivaru hasageDisihaveMdu, samate sairaNe eMba bEliyanikki,
aavaagalU I tOTadalli jaagaraviddu, sasiya salahidenu kaaNaa guheshvaraa

TRANSLATION (WORDS)

Tanuva (the body) tOMTava (garden) maaDi, (I made) manava (the mind) guddaliya (pick axe) maaDi (I made), Agedu (by digging)` kaLedenayyaa (I got rid of) bhraaMtina

(illusion)bEra (the roots of); oDedu (breaking) saMsaarada (worldly) heMTeya (chunks of mud), Bagedu(after digging,raking) bittidenayyaa (sowed) brahma bIjava (the seed of Brahma);
aKaMDa (complete, non fragmented) maMDalavu(space, expanse) eMba (called) baavi (well), pavanavE (breath alone) raaTAALa (is pulley), suShumna naaLadiMda (with the energy channel called sushumna) udakava (water) tiddi (I irrigated the garden)' basavagaLaivaru (five bulls) hasageDisihavu (will destroy) eMdu (thinking that), samate (balance, equanimity)sairaNe(tolerance) eMba (called) bEliyanikki,(put the fence of) aavaagalU (all the time) I (this) tOTadalli (in garden) jaagaraviddu (being awake), sasiya (of plant) salahidenu (I took care) kaaNaa (you see) guheshvaraa (Guheshvaraa)

TRANSLATION

I made the body a garden and the mind a pick axe,
I dug and got rid of the roots of illusion; I broke the worldly mud chunks and sowed the seeds of Brahma;
From the well of non-fragmented expanse, with breath alone as the pump and from the deoths of sushumna, I irrigated the garden;
Concerned that the five bulls will destroy it, I installed the fence of balance and tolerance;
Being awake all the time, I took care of the sapling, you see Guhesvaraa!

COMMENTARY

In this beautiful Vachana, Allama Prabhu comments on the ingredients needed to implant and enhance the Godliness within us to make the body into a true temple, using the various gardening activities as simile. The body is made into a garden plat (Body is the temple). The mind is made into a pick axe, a tool that helps digging. The characteristic of the mind is to always 'dig', dig the past, dig the present and dig (worry about) the future. Allama Prabhu uses this mind pick axe to dig and get rid of the roots of illusion. For a garden to flourish, the soil has to be free of knots. Allama Prabhu compares the worldly activities to the knots (chunks) of mud that need to be broken. Indeed, our worldly activities tie our lives into knots that keep us bound. We need to untie those knots. Into this tended soil, the seed of Brahma (profound knowledge, awareness) is sown. The word 'bagedu' has two meanings: digging or raking, and learning. Allama Prabhu is emphasizing that he learnt all about the seed of Brahma (the divine) before planting it; he did not just dig the soil and plant the seed. We need learn to all about the seed and make sure it is the right kind, to get the right crop. Once the seeds are sown, it is time to irrigate them. The source for this irrigation is the well of the whole expanse (Universe). Allama Prabhu uses the channel of Sushumna to fetch the water from the deep well. Sushumna is the channel of energy flow in the (subtle) body that starts at the lowest and ends at the highest Chakra (nerve/ energy bundle) locations. Essentially, Allama Prabhu is invoking the deepest energy source in the body and carries this energy through the body to soak the seeds just sown. This is the concept of awakening the Kundalini Shakti (power/energy). Farmers use a mechanism called 'Etha' or 'raataala' (in Kannada) to fetch the water from wells. The farmer moves the Eetha down (collecting water from the well) and up (bringing up and releasing the

water into the garden). Allama Prabhu uses 'breath' as Etha. The up/down motion of Etha is compared to inhale/exhale aspects of breath. As the seeds sprout, Allama Prabhu is concerned that the five bulls (referring to the five senses) might destroy the garden. As such, he builds a fence around the garden with balance (equality) and tolerance as the components. In addition, he is staying awake all the time to make sure that the garden flourishes, meaning that it is a must for us to be aware and awake for the divine knowledge in us to sprout and flourish – just planting it is not sufficient. The Vachana is thus a complete guide to self-realization!

Let us grow the garden of self-realization!

KANNADA COMMENTARY

ಈ ವಚನವನ್ನು ಅಲ್ಲಮರು, ಬಾಹ್ಯ ತೋಟ ಮಾಡುವ ಕಲೆಯಲ್ಲಿ ನಿಷ್ಣಾತನಾದ ಹಾಗೂ ಅದನ್ನೇ ಸರ್ವ ಶ್ರೇಷ್ಠವೆಂದು ತಿಳಿದು ಅದರಲ್ಲಿಯೇ ಮುಳುಗಿ ಹೋದ ಗೊಗ್ಗಯ್ಯನಿಗೆ, ತಾವು ಮಾಡಿದ ತೋಟದ ಬಗೆಯನ್ನು ವರ್ಣಿಸುವ ಮೂಲಕ, ಅಂತರಂಗದ ಸೂಕ್ಷ್ಮವಾದ ಈ ತೋಟ ಎಲ್ಲದಕ್ಕಿಂತಲೂ ಮುಖ್ಯವಾದದ್ದು ಹಾಗೂ ಶ್ರೇಷ್ಠವಾದದ್ದು ಎಂದು ಪರೋಕ್ಷವಾಗಿ ಹೇಳುವ ವಚನ. . ಅಂತರಂಗದ ತೋಟವನ್ನು ಅವರು ಮಾಡಿದ ರೀತಿ: ದೇಹವೇ ಒಂದು ತೋಟ, ಆ ತೋಟದ ನೆಲವನ್ನು ಮನವೆಂಬ ಗುದ್ದಲಿಯಿಂದ ಅಗೆದಿದ್ದಾರೆ. ಗುದ್ದಲಿಯಿಲ್ಲದೆ ನೆಲ ಅಗೆಯುವುದು ಬಲು ಕಷ್ಟ. ನೆಲ ಅಗೆಯದೆ ಬಿತ್ತಣಿಗೆ ಮಾಡುವುದು ಸಾಧ್ಯವಿಲ್ಲ. ಅದೇ ರೀತಿ ಮನಸ್ಸೇ ಎಲ್ಲದಕ್ಕೂ ಮೂಲ. ಏನೇ ಮಾಡಿದರೂ ಮನಸ್ಸಿನಿಂದಲೇ ಮಾಡಬೇಕು.ಆದ್ದರಿಂದ ಮನವನ್ನೇ ಗುದ್ದಲಿಯಾಗಿ ಮಾರ್ಪಡಿಸಿದ್ದಾರೆ. ಆ ಮನಸ್ಸೆಂಬ ಗುದ್ದಲಿಯಿಂದ ಮಣ್ಣಿನಲ್ಲಿ ಮನೆಮಾಡಿದ್ದ ಭ್ರಾಂತಿ ಎಂಬ ಬೇರುಗಳನ್ನು ತೆಗೆದಿದ್ದಾರೆ. ಬೇರೆ ಬೇರುಗಳು ಉಳಿದುಕೊಂಡಿರುವ ಸ್ಥಳದಲ್ಲಿ ಹೊಸ ಸಸಿಗಳು ಬೆಳೆಯುವ ಅವಕಾಶವಿರುವುದಿಲ್ಲ. ಹಾಗೆಯೇ ನಮ್ಮಲ್ಲಿ ಮನೆಮಾಡಿರುವ ಭ್ರಾಂತಿಯ ಬೇರುಗಳನ್ನು ತೆಗೆಯಬೇಕು. ಭ್ರಾಂತಿಯು ತಪ್ಪು ತಿಳಿವಳಿಕೆಗೆ ದಾರಿ ಮಾಡಿಕೊಡುತ್ತದೆ. ಆ ಪರಮ ಸತ್ಯದ ಸಾಕ್ಷಾತ್ಕಾರಕ್ಕೆ ಅಡ್ಡಿಮಾಡುತ್ತದೆ. ಭ್ರಾಂತಿ ಎಂಬ ಆ ಹಳೆ ಬೇರುಗಳನ್ನು ಕಿತ್ತೆಸೆಯಲೇ ಬೇಕು. ಆದರೆ ಅಷ್ಟರಿಂದಲೇ ಕೆಲಸ ನಡೆಯುವುದಿಲ್ಲ. ಬೇರುಗಳನ್ನು ತೆಗೆದ ಮೇಲೆ ಅಲ್ಲಿಯ ಮಣ್ಣಿನ ಹೆಂಟೆಗಳನ್ನು ಒಡೆಯ ಬೇಕು. ಮಣ್ಣಿನ ಕಣಗಳು ಒಂದಕ್ಕೊಂದು ಗಟ್ಟಿಯಾಗಿ ಅಂಟಿಕೊಂಡು ಹೆಂಟೆಯಾಗಿ, ಬೆಳೆಗೆ ಗಾಳಿ ಬೆಳಕು ಸರಿಯಾಗಿ ಪ್ರವೇಶಿಸದಂತೆ ಮಾಡುತ್ತವೆ. ಆದ್ದರಿಂದ ಅವುಗಳನ್ನು ಒಡೆಯಬೇಕು. ತನುವೆಂಬ ತೋಟದ ಸಂದರ್ಭದಲ್ಲಿ ಸಂಸಾರದ ಮೋಹವು ಹೆಂಟೆಯಂತೆ ಅಡ್ಡಿಮಾಡುತ್ತದೆ. ಅದರಿಂದ ಕಳಚಿಕೊಳ್ಳುವುದು ಬಹು ಮುಖ್ಯ. ಹೀಗೆ ಮಾಡಿದ ಮೇಲೆ ಮಣ್ಣು ಹದವಾಗುತ್ತದೆ, ಅಂತರಂಗ ಶುದ್ಧವಾಗುತ್ತದೆ, ಬೀಜ ಬಿತ್ತಲು ಯೋಗ್ಯವಾಗುತ್ತದೆ. ಅಲ್ಲಿ ಅಲ್ಲಮರು, ಬ್ರಹ್ಮ ಬೀಜವನ್ನು ಬಿತ್ತುತ್ತಾರೆ. ಇಷ್ಟೆಲ್ಲ ಶ್ರಮ ಪಟ್ಟು ಅಂತಿಂತಹ ಬೀಜ ಬಿತ್ತಿದರೇನು ಫಲ? ಘನವಾದ ಬೀಜವನ್ನೇ ಬಿತ್ತುತ್ತಾರೆ. ಇನ್ನು ಅದಕ್ಕೆ ನೀರಿನ ಅವಶ್ಯಕತೆಯಿದೆ. ಅವರು ಅದಕ್ಕೆ ನೀರು ಹಾಯಿಸುವ ರೀತಿ ಯೋಗಕ್ಕೆ ಸಂಬಂಧಪಟ್ಟದ್ದು. ಅಖಂಡ ಮಂಡಲವೆಂಬ ಬಾವಿ, ಎಂದರೆ ಪರಿಪೂರ್ಣತೆ ಎಂದರ್ಥ. ಬ್ರಹ್ಮ ಬೀಜವು ಪರಿಪೂರ್ಣವಾದದ್ದು. ಅದಕ್ಕೆ ಬೇಕಾದ ಉದಕವು ಪರಿಪೂರ್ಣದಿಂದಲೇ ಬರಬೇಕು. ಆ ಪರಿಪೂರ್ಣದಿಂದಲೇ ಅದಕ್ಕೆ ಪೋಷಕ ತತ್ವ ಬೇಕು. ಪರಿಪೂರ್ಣತೆ ಎಂಬ ಬಾವಿಯಿಂದ ಅಲ್ಲಮರು ಪ್ರಾಣವಾಯುವೆಂಬ ರಾಟಾಳದ ಮೂಲಕ ನೀರನ್ನು ಹರಿಸುತ್ತಾರೆ. ಯೋಗ ಶಾಸ್ತ್ರದ ಪ್ರಕಾರ ಇಡಾ, ಪಿಂಗಳ ಮತ್ತು ಸುಷುಮ್ನ ಎಂಬ ಮೂರು ಮುಖ್ಯ ನಾಡಿಗಳಿವೆ. ಪ್ರತಿಯೊಬ್ಬ ವ್ಯಕ್ತಿಯು ಇಡಾ ಮತ್ತು ಪಿಂಗಳ ನಾಡಿಗಳಿಂದ ಉಸಿರಾಡುತ್ತಾನೆ. ಕೆಲವರಲ್ಲಿ ಇಡಾ ನಾಡಿಯೂ , ಇನ್ನು ಕೆಲವರಲ್ಲಿ ಪಿಂಗಳ ನಾಡಿಯು ಹೆಚ್ಚು

ಶಕ್ತಿಶಾಲಿಯಾಗಿರುತ್ತದೆ. ಇವೆರಡು ಸಮಾನವಾಗಿ ಕೆಲಸ ಮಾಡಿದಾಗ, ಈ ಎರಡರ ಸಂತುಲನೆಯನ್ನು ಸಾಧಿಸಿದಾಗ, ಈ ಎರಡು ನಾಡಿಗಳ ಮಧ್ಯೆ ಇರುವ ಸುಷುಮ್ನ ನಾಡಿಯ ಮೂಲಕ ಪ್ರಾಣವಾಯು ಹರಿಯುತ್ತದೆ ಮತ್ತು ವ್ಯಕ್ತಿಯಲ್ಲಿ ಸುಪ್ತವಾಗಿದ್ದ ಕುಂಡಲಿನೀ ಶಕ್ತಿಯು ಎಚ್ಚರಗೊಳ್ಳುತ್ತದೆ. ಕುಂಡಲಿನಿ ಶಕ್ತಿಯು ಬ್ರಹ್ಮ ರಂಧ್ರಕ್ಕೇರಿದಾಗ ವ್ಯಕ್ತಿಯು ಅನಂದ ಸಾಗರದಲ್ಲಿ ಓಲಾಡುತ್ತಾನೆ. ಕುಂಡಲಿನಿ ಶಕ್ತಿಯು ಬ್ರಹ್ಮ ರಂಧ್ರಕ್ಕೇರಬೇಕು. ತನುವೆಂಬ ತೋಟದಲ್ಲಿ ಬಿತ್ತಿದ್ದ ಬ್ರಹ್ಮ ವೆಂಬ ಬೀಜಕ್ಕೆ ಸಮತೆಯಿಂದ ಸಾಧಿಸಿದ ವಿಶೇಷ ವಾದ ಜಲದ ಅವಶ್ಯಕತೆಯಿದೆ. ಅದನ್ನು ಅಲ್ಲಮರು ಪ್ರಾಣವಾಯುವಿನ ಸಾಧನೆಯ ಮೂಲಕ ಒದಗಿಸುತ್ತಾರೆ. ಅಲ್ಲಿಗೆ ಮುಗಿಯಿತು ಕೆಲಸವೆಂದು ಸುಮ್ಮನಿರುವುದು ಸಲ್ಲ. ಏಕೆಂದರೆ ಐದು ಬಸವಗಳು ತೋಟದಲ್ಲಿ ಬೆಳೆದ ಸಸಿಯನ್ನು ತಿನ್ನಲು ಕಾಯುತ್ತಿರುತ್ತವೆ. ಎಂದರೆ ಐದು ಇಂದ್ರಿಯಗಳು ಬ್ರಹ್ಮ ಬೀಜವನ್ನು ಬೆಳೆಯಲು ಅಡ್ಡಿಮಾಡುತ್ತವೆ ಎಂದು ಅರ್ಥ. ಸಮತೆ ಮತ್ತು ಸ್ಯೆರಣೆ ಎಂಬ ಬೇಲಿಯನ್ನು ಕಟ್ಟಿ, ಆ ಎತ್ತುಗಳು ತೋಟವನ್ನು ಹಾಳುಮಾಡದಂತೆ ನೋಡಿಕೊಳ್ಳುತ್ತಾರೆ. ಇಲ್ಲಿ ಸಮತೆ ಮತ್ತು ಸ್ಯೆರಣೆ ಎಂಬ ಪದಗಳು, ಇಂದ್ರಿಯಗಳೊಂದಿಗೆ ಅವರು ನಡೆದುಕೊಳ್ಳುವ ಬಗೆಯನ್ನು ತಿಳಿಸುತ್ತವೆ. ಇಂದ್ರಿಯಗಳನ್ನು ಶಿಕ್ಷಿಸುವುದಾಗಲಿ ಅಥವಾ ತುಳಿದಿಡುವುದಾಗಲಿ ಅವರು ಒಪ್ಪುವುದಿಲ್ಲ. ಸಮತೆ ಮತ್ತು ಸ್ಯೆರಣೆ, ಎಂದರೆ ಅವುಗಳೊಂದಿಗೆ ಯುಕ್ತವಾಗಿ, ಸಂಯಮದಿಂದ ನಡೆದುಕೊಳ್ಳುವುದು, ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ವ್ಯವಹರಿಸುವುದು. ಹಾಗಾದಾಗ ಮಾತ್ರ ಅವುಗಳು ತಮ್ಮ ಸ್ಥಳದಲ್ಲಿ ತಾವಿರುತ್ತವೆ. ಅವುಗಳಿಂದ ತೊಂದರೆಯುಂಟಾಗುವುದಿಲ್ಲ. ಬ್ರಹ್ಮ ಬೀಜವು ನಿರಾಳತೆಯಿಂದ ಬೆಳೆಯುತ್ತದೆ. ಈ ರೀತಿಯಾದ ಕಾಳಜಿ ವಹಿಸಿ ಅವರು ಸಸಿಯನ್ನು ಬೆಳೆಸಿ ತೋಟವನ್ನು ಮಾಡುತ್ತಾರೆ.

Vachana 90: Tanuva Gelalariyade - Body, Mind and Wealth

ತನುವ ಗೆಲಲರಿಯದೆ, ಮನವ ಗೆಲಲರಿಯದೆ

ಧನವ ಗೆಲಲರಿಯದೆ, ಭ್ರಮೆಗೊಂಡಿತ್ತು ಲೋಕವೆಲ್ಲವು,

ತನುವ ದಾಸೋಹಕೆ ಸವೆಸಿ, ಮನವ ಲಿಂಗ ಧ್ಯಾನದಲ್ಲಿ ಸವೆಸಿ,

ಧನವ ಜಂಗಮದಲ್ಲಿ ಸವೆಸಿ ಗೆಲ್ಲಬಲ್ಲಡೆ

ಸಂಗನ ಬಸವಣ್ಣನಲ್ಲದೆ ಮತ್ತಾರನೂ ಕಾಣೆ ಗುಹೇಶ್ವರಾ-

ನಿಮ್ಮ ಶರನಣ ಸಂಗನ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು

TRANSLITERATION

Tanuva gelalariyade, manava gelalariyade
Dhanava gelalariyade, bhramegoMDittu lOkavellavu,
Tanuva daasOhake savesi, manava liMga dhyaanadalli savesi,
Dhanava jaMgamadalli savesi gellaballaDe
saMgana basavaNNanallade mattaaranU kaaNe guhEshvaraa-
nimma sharanaNa saMgana basavaNNaMge namO namO enutirdenu

TRANSLATION (WORDS)

Tanuva (the body) gelalariyade,(not knowing to conquer) manava (the mind) gelalariyade (not knowing to conquer)
Dhanava (the wealth) gelalariyade,(not knowing to conquer) bhramegoMDittu (is illusioned) lOkavellavu,(the whole world)
Tanuva (the body) daasOhake(for daasoha) savesi,(used, engaging in service) manava (mind) liMga (the god) dhyaanadalli (in meditation) savesi, (engaging in)

Dhanava (wealth) jaMgamadalli (towards jangama) savesi (engaging in service) gellaballaDe (to know to conquer)
saMgana basavaNNanallade (other than sangana Basavanna) mattaaranU(no one else) kaaNe (I don't see)
guhEshvaraa-(Guheshvara) nimma (your)sharanaNa saMgana basavaNNaMge (to devotee basavanna)
namO namO enutirdenu (I bow to him)

TRANSLATION

Not knowing how to conquer the body, not knowing how to conquer the mind, and not knowing how to conquer the wealth, the whole world is under illusion!
Conquering the body by engaging it in service (Daasoha), Conquering the mind by engaging it in meditation upon the God (Linga), and Conquering the wealth by dedicating it to wandering ascetics (Jangamas), is only accomplished by Basavanna of Sangama – I don't know anyone else, Oh Guhesvara!
I bow to your devotee Basavanna of Sangama!
COMMENTARY

In this Vachana, Allama Prabhu provides a guide to how best we should utilize the three prime resources we are all endowed with: Body, Mind and Wealth. He says that the world is under illusion by not knowing how to conquer these entities. The body should be engaged in service of the fellow beings around us (Daasoha). The mind must be immersed in meditation to merge with the divine and the wealth should be utilized in supporting the activities of realized souls (Jangamas) dedicated to bringing awareness to the community. Allama prabhu says that Basavanna is the only individual he has come across who has conquered all the three resources. He shows his utmost respect and admiration of Basavanna by saying 'I bow to your devotee Basavanna, Oh Guhesvara'.

We have said that the body is the temple and it should be kept fit for God to reside in it. We exercise and eat right to keep the body fit and healthy. Indeed, we spend so much time and resources to take care of the body that we become servants of the body rather than the body being at our service. It is not sufficient that the body serves our needs, but it should be dedicated to the service of the community around us.

We have said that the mind is a monkey and its natural state is that of wandering around. We have to control our minds. We have to evaluate our wants and needs and minimize our desires. Meditating upon the divine and constant awareness of the divine within and around us is a must. We should be the masters of our mind and not vice versa.
Honest, unselfish work and devotion to profession is a must to earn an honest living. Indeed, it is a must to take care of the needs of the family. Beyond that, the wealth should be dedicated to support the activities that make the society better.
In summary, Allama Prabhu is advocating us to become masters of our body, mind and wealth and use them appropriately, rather than being their servants.

Let us conquer body, mind and wealth!

KANNADA COMMENTARY

ತನು, ಮನ, ಧನಗಳನ್ನು ಹೇಗೆ ಸವೆಸಬೇಕು ಎನ್ನುವುದಕ್ಕೆ ಈ ವಚನವು ಕೈಪಿಡಿಯಂತಿದೆ. ತನು ಮನವನ್ನು ಗೆಲ್ಲಲ್ಲು ಬರದೆ ಅವುಗಳಿಗೆ ದಾಸರಾಗಿ ಈ ಲೋಕದ ಜನರೆಲ್ಲ ಭ್ರಮೆಗೊಳ್ಳುತ್ತಾರೆ. ದೇಹದ ಬೇಕು ಬೇಡಗಳನ್ನು ಅರಿತುಕೊಂಡು ನಡೆದುಕೊಳ್ಳುವವರು ಅತಿ ವಿರಳ. ತನುವಿನ ಬೇಕು ಬೇಡಗಳನ್ನು ಅರಿತುಕೊಂಡು ನಡೆದರೆ ಅದನ್ನು ಗೆಲ್ಲಬಹುದು. ಎಂದರೆ ಅದು ನಾವು ಹೇಳಿದಂತೆ ಕೇಳುವಂತೆ ಮಾಡಬಹುದು. ಆದರೆ ನಾವೇ ಅದರ ದಾಸರಾಗಿ ಬಿಡುತ್ತೇವೆ. ಅದನ್ನು ಅತಿಯಾದ ಮಮತೆಯಿಂದ ಬೆಳೆಸುತ್ತೇವೆ. ಆಗ ಅದು ನಮ್ಮ ಮಾತು ಕೇಳುವುದಿಲ್ಲ. ಮನಸ್ಸಿನ ಸ್ಥಿತಿಯೂ ಇದೇ ಆಗಿದೆ.

ಮನಸ್ಸನ್ನು ಅದು ಇಷ್ಟ ಪಟ್ಟ ಕಡೆಗೆ ಹೋಗಲು ಬಿಡುತ್ತೇವೆ. ಅದರ ಅವಶ್ಯಕತೆಗಳನ್ನು ಗುರುತಿಸಿ ಅವನ್ನು ಮಾತ್ರ ಪೂರ್ತಿಗೊಳಿಸದೆ, ಅದರ ಆಸೆಗಳನ್ನು ಒಳ್ಳೆಯದು ಕೆಟ್ಟದ್ದು ಎಂದು ವಿಮರ್ಶಿಸದೆ ಅದು ಬಯಸಿದುದನೆಲ್ಲ ಒದಗಿಸಿಕೊಟ್ಟು, ಅದನ್ನು ಕೆಡಿಸಿಬಿಡುತ್ತೇವೆ. ಕೊನೆಯಲ್ಲಿ ಅದರ ದಾಸರಾಗುತ್ತೇವೆ. ಧನವು ಕೂಡ ನಮ್ಮನ್ನು ತನ್ನ ದಾಸನಾಗಿ ಮಾಡಿಕೊಂಡಿದೆ. ಏಕೆಂದರೆ ಅದರ ಬಗ್ಗೆ ಅತಿಯಾದ ಮೋಹದಿಂದ ನಾವು ಅದಕ್ಕೆ ಸಲ್ಲಬೇಕಾದ ಸ್ಥಾನವನ್ನು ಕೊಡದೆ ಪರಮೋಚ್ಚ ಸ್ಥಾನವನ್ನು ಕೊಡುತ್ತೇವೆ. ಅದನ್ನು ನೆಚ್ಚಿಕೊಂಡು, ಮೆಚ್ಚಿಕೊಂಡು, ಅದನ್ನೇ ಕಚ್ಚಿಕೊಂಡು ಒದ್ದಾಡುತ್ತೇವೆ. ಆದರೆ ಅದು ನಮ್ಮಿಂದ ನುಣುಚಿಕೊಳ್ಳುತ್ತದೆ ಅಥವಾ ನಮಗಿಂತ ಮೇಲೆ ಕುಳಿತುಕೊಂಡು ನಮ್ಮ ಮೇಲೆ ಅಧಿಕಾರ ನಡೆಸುತ್ತದೆ. ಹೀಗಾಗಿ ತನು, ಮನ, ಧನಗಳನ್ನು ಗೆಲ್ಲುವ ಕಲೆಯಿಂದ ನಾವೆಲ್ಲರೂ ವಂಚಿತರಾಗಿದ್ದೇವೆ. ಇದನ್ನು ಕಂಡು ಅಲ್ಲಮರು "ಲೋಕವೆಲ್ಲ ಭ್ರಮೆಗೊಂಡಿದೆ ಎಂದು ಹೇಳುತ್ತಾರೆ". ತನುವನ್ನು ದಾಸೋಹದಲ್ಲಿ ಸವೆಸುವುದು, ಮನವನ್ನು ಲಿಂಗದಲ್ಲಿ ನಿಲಿಸುವುದು ಮತ್ತು ಧನವನ್ನು ಜಂಗಮಕ್ಕಾಗಿ ಸವೆಸುವುದು ಬಸವಣ್ಣನವರಿಗೆ ಮಾತ್ರ ಸಾಧ್ಯವೆಂದು ಹೇಳುತ್ತಾರೆ.

ದಾಸೋಹವೆಂದರೆ ತನ್ನಲ್ಲಿದ್ದುದನ್ನು ಭಕ್ತರೊಂದಿಗೆ ಹಂಚಿಕೊಳ್ಳುವುದು. ತನಗೆ ಬೇಕು ಎಂತಲೋ ಅಥವಾ ನಾಳೆಗಿರಲಿ ಎಂದೋ ತನ್ನದನ್ನು ಬೇರೆ ಇಡುವುದಲ್ಲ. ತನ್ನಲ್ಲಿರುವುದನ್ನೆಲ್ಲ, ಅದು ತನ್ನದಲ್ಲ, ಅದು ಸಮಾಜದ್ದು, ಎಂದು ನಿರ್ವಂಚನೆಯಿಂದ ಇತರರೊಂದಿಗೆ ಹಂಚಿಕೊಳ್ಳುವುದು. ಅದಕ್ಕಾಗಿ ದೇಹವನ್ನು ಸವೆಸುವುದು, ದುಡಿಯುವುದು. ಮನಸ್ಸನ್ನು ಲಿಂಗದಲ್ಲಿ ನಿಲ್ಲಿಸುವುದು ಎಂದರೆ ಸದಾ ಆ ಪರಮ ತತ್ವವನ್ನು ನೆನೆಯುವುದು. ಸಂಸಾರದ ತಾಪತ್ರಯಗಳಿಂದ ದೂರವಿದ್ದು ಅದರ ಮಾಯಾ ಮೋಹಗಳಿಗೆ ಅಂಟಿಕೊಳ್ಳದೆ ಮನವನ್ನು ಲಿಂಗದ ಧ್ಯಾನದಲ್ಲಿ ತೊಡಗಿಸುವುದು. ಹೀಗೆ ಮಾಡಲು ಮೊದಲು ವ್ಯಕ್ತಿಗೆ ಈ ಸಂಸಾರವು ಹುರುಳಿಲ್ಲದ್ದು, ಅದರಿಂದ ಯಾವ ಪ್ರಯೋಜನವೂ ಇಲ್ಲ, ಅದಕ್ಕೆ ಅಂಟಿಕೊಳ್ಳುವುದರಿಂದ ದುಃಖಕ್ಕೆ ದಾರಿಯಾಗುತ್ತದೆ ಎಂಬುದು ಆಳವಾಗಿ ಮನವರಿಕೆಯಾಗಬೇಕಾಗುತ್ತದೆ. ಹಾಗಾದಾಗ ಮಾತ್ರ ಸಂಸಾರದಿಂದ ಮನಸ್ಸು ವಿಮುಖಗೊಂಡು ಆ ಪರಮತತ್ವದಲ್ಲಿ ನಿಲ್ಲುತ್ತದೆ. ಈ ರೀತಿ ಸಂಸಾರದಿಂದ ಮನಸ್ಸು ವಿಮುಖಗೊಳ್ಳಬೇಕಾದರೆ ಸಂಸಾರವನ್ನು ಬಹಳ ಆಳವಾಗಿ ಯಾವ ಪೂರ್ವಗ್ರಹವಿಲ್ಲದೆ ವೀಕ್ಷಿಸಬೇಕಾಗುತ್ತದೆ. ಈ ಕಲೆ ಅಳವಟ್ಟಮೇಲೆ ವ್ಯಕ್ತಿ ಸಹಜವಾಗಿಯೇ ಅದರಿಂದ ದೂರಸರಿಯುತ್ತಾನೆ ಮತ್ತು ಎಲ್ಲವನ್ನೂ ಮೀರಿರುವ ತತ್ವದಲ್ಲಿ ಮನಸ್ಸನ್ನು ನೆಲೆಗೊಳಿಸುತ್ತಾನೆ. ತನು ಮನವಾದ ಮೇಲೆ ಧನವನ್ನೂ ಸಹ ಆತನು ಸಾರ್ಥಕವಾಗಿ ವ್ಯಯಿಸುತ್ತಾನೆ. ಜಂಗಮಕ್ಕಾಗಿ ಅದನ್ನು ಮುಡುಪಿಡುತ್ತಾನೆ. ಜಂಗಮವೆಂದರೆ ಬಯಲು ತತ್ವ, ದೇಹ

ಪ್ರಾಣ ಮತ್ತು ಮನಸ್ಸಿನ ತತ್ವಗಳನ್ನು ಮೀರಿದವನು. ಇಂತಹ ತತ್ವವನ್ನು ಹೊಂದಿದವನಿಗಾಗಿ, ತನ್ನ ಧನವನ್ನು ವ್ಯಯಿಸುವುದು.ಆ ತತ್ವಕ್ಕಾಗಿ ಧನವನ್ನು ಸವೆಸುವುದು. ಈ ತತ್ವಕ್ಕಾಗಿಯೇ ಅನುಭವ ಮಂಟಪವನ್ನು ಕಟ್ಟಿದರು. ಹೀಗೆ ಬಸವಣ್ಣನವರು ತಮ್ಮ ತನು ಮನ ಮತ್ತು ಧನವನ್ನು ಉದಾತ್ತ ವಿಚಾರಗಳಿಗೆ ಕೊಟ್ಟು ಶ್ರೇಷ್ಠಮಟ್ಟದ ವ್ಯಕ್ತಿಗಳಾಗಿ ಅಲ್ಲಮಪ್ರಭು ಗಳಿಂದಲೂ ಪೂಜಿತರಾದರು.

Vachana 91: baMda baTTeya niMdu nODade – The Old yields to the New

ಬಂದ ಬಟ್ಟೆಯ ನಿಂದು ನೋಡದೆ, ಬಂದ ಬಟ್ಟೆಯ ನೋಡಿ ಸುಖಿಯಾದೆ
ನಿಂದ ನಿಲವ ಮುಂದುಗೆಡಿಸಿ ನಿಂದ ನಿಲವ ಮುಂದುಗೊಂಡಿತ್ತು
ತಂದೆ ಮಕ್ಕಳ ಗುಣ ಒಂದೇ ಭಾವದಲಡಗಿ, ಸಂದಿಲ್ಲದ ಕಾಲೊಳಗೆ ಕೈಮೂಡಿತ್ತು
ಒಂದನೆ ಹಿಡಿದು ಒಂದನೆ ಬಿಟ್ಟಡೆ ಇಂದು ನಮ್ಮ ಗುಹೇಶ್ವರನ ಸದ್ಭಕ್ತಿಯಾಯಿತ್ತೈ ಸಂಗನ ಬಸವಣ್ಣಾ!

TRANSLITERATION

baMda baTTeya niMdu nODade, baMda baTTeya nODi sukhiyaade,
niMda nilava muMdugeDIsi niMda nilava muMdugoMDittu
taMde makkaLa guNa oMdE bhaavadalaDagi, saMdillada kaaloLage kai mUDittu.
oMdane hiDidu oMdane biTTaDE iMdu namma guhEshvarana sadbhaktiyaayittai saMgana basavaNNaa!

TRANSLATION (WORDS)

baMda (journey that has been taken, that I have travelled) baTTeya(the path,way) niMdu(being at) nODade,(not seeing, not accepting) baMda(that which has come) baTTeya (my way) nODi (accepting) sukhiyaade,(have become happy)
niMda nilava(my attitude, stand) muMdugeDIsi (destroyed, erased) niMda nilava(a new attitude, stand) muMdugoMDittu (started flowering)
taMde(father) makkaLa(issue's, son's) guNa (nature) oMdE(one) bhaavadalaDagi(hidden in one expression,view) saMdillada(without any gap) kaaloLage (in the leg) kai (hand) mUDittu(appeared),
oMdane (the one) hiDidu (holding) oMdane(the one) biTTaDE(if renounced) iMdu (today)namma(our) guhEshvarana(of Guheshvara) sadbhaktiyaayittai(it will be true bhakti you see) saMgana basavaNNaa(Sangana Basavanna)!

TRANSLATION

Not accepting the path I have travelled, I have become happy by accepting that which came my way!
My inbuilt attitude (stand) got erased and the new attitude started flowering
The natures of the father and the son merged into one, and a hand sprouted amidst the gapless legs
Holding on to one and renouncing the one (other), is the true devotion to Guhesvara today, you see, Sangana Basavanna!

COMMENTARY

This is one of Allama Prabhu's 'complex' Vachanas. I am using the word complex as a rough translation for the Kannada word 'bedagina'. The root of 'bedagina' is 'bedagu' meaning beautiful, breathtaking. A word close to bedagu is 'beragu' meaning surprising, shocking. Thus these complex vachanas are not only beautiful and breathtaking, but also meant to shock the reader into wondering what they mean. The realized souls like Allama Prabhu have used this medium to portray their experiences and realization in most exciting ways, almost as riddles. They have tried to express what cannot be expressed in words. The purpose seems to be to motivate the reader to think and interpret these words on his/her own.

The following depicts the 'bhava' (meaning and context) of this Vachana. I would like to suggest reflecting on the lines in the Vachana after carefully reading the following.
For ages unknown everyone has walked through the path of mundane life. This path is full of sorrow, dependency, ignorance, and death and such. This path takes one through innumerable difficulties and experiences. An awakened individual will never look back at this path. His journey is now completely in the new path shown to him by the conceptual Guru. The new path is the path of realizing Shiva, the Self. This new path is full of brightness, wisdom, independence, pure love and presence of the divine. As such, the individual forgets the old path, sheds all the old attitudes and attainments and embraces the new path. The Guru guides him. The Guru/disciple relation of the two manifests into a single nature of father and son. Their mutual respect and love results in internal and external purity of both and the emphasis changes to pure, impassionate merger with divine. Their actions are so alike that there is no gap between them and their common hand sprouts into performing the best for the fellow beings leading them towards godliness. Both the Guru and the disciple have discarded the mundane and have embraced the divine. This is the true devotion. In guru, this devotion is his merger with the divine; in disciple this devotion is his intense following of the divine path.

Let us Shed the Old and Embrace the New Path!

KANNADA COMMENTARY

ಇದು ಅಲ್ಲಮಪ್ರಭುಗಳ ಬೆಡಗಿನ ವಚನ. ಅನುಭಾವವನ್ನು ಸಾಂಕೇತಿಕವಾದ ಭಾಷೆಯಲ್ಲಿ ಮತ್ತು ವಿರೋಧೋಕ್ತಿಗಳಲ್ಲಿ ಹೇಳುವುದು ಬೆಡಗಿನ ವಚನವಗಳೆನ್ನಿಸಿಕೊಳ್ಳುತ್ತವೆ. ಇವು ಓದಿದಾಗ ಅರ್ಥವಾಗುವುದು ಕಷ್ಟ. ಅನುಭಾವದಿಂದುಂಟಾದ

ಆನಂದವನ್ನು ವ್ಯಕ್ತಪಡಿಸಲು ಶರಣರು ಈ ಕೌತುಕಮಯ ಮಾಧ್ಯಮವನ್ನು ಬಳಸಿದ್ದಾರೆ. ಅನುಭಾವವನ್ನು ವಿವರಿಸುವುದು ಅಸಾಧ್ಯ. ಅದು ಇಂದ್ರಿಯಾತೀತವಾದದ್ದು. ಮಾತಿಗೆ ಮೀರಿದ ಅದರ ಬಗ್ಗೆ ಜಿಜ್ಞಾಸೆ ಮೂಡಲಿ ಎಂಬ ಉದ್ದೇಶದಿಂದ ಚಾಮತ್ಕಾರಿಕವಾದ ರೀತಿಯಲ್ಲಿ ಕೌತುಕ ಹುಟ್ಟುವಂತೆ ಹೇಳಿದ್ದಾರೆ. ಇದು ಭಾರತಿಯ ಪ್ರಾಚೀನ ಪರಂಪರೆಯಾಗಿದೆ. ವೇದಗಳಲ್ಲಿ ಅಲ್ಲಲ್ಲಿ ಇದು ಕಂಡು ಬರುತ್ತದೆ. ಉತ್ತರ ಭಾರತದ ಕಬೀರದಾಸರ ಬಹಳಷ್ಟು ಪದಗಳು ಬೆಡಗಿನ ಪದಗಳಾಗಿವೆ. ಅನೇಕ ಶರಣರ ಮತ್ತು ಇತ್ತೀಚೆಗಿನ ಸಂತ ಶಿಶುನಾಳರ ರಚನೆಗಳಲ್ಲಿಯೂ ಈ ಲಕ್ಷಣಗಳನ್ನು ಕಾಣಬಹುದು. ಆದರೆ ಅಲ್ಲಮ ಪ್ರಭುಗಳ ಬೆಡಗಿನ ವಚನಗಳು ಸಂಖ್ಯೆಯಲ್ಲಿ ಅಧಿಕವಾಗಿದ್ದು ಓದುಗರ ಜಿಜ್ಞಾಸೆಯನ್ನು ಹೆಚ್ಚಿಸುತ್ತವೆ. ಇವು ಕಲಾತ್ಮಕವಾದ ಕಾವ್ಯಮಯ ಸೃಷ್ಟಿಯಾಗಿವೆ.

“ಬಂದ ಬಟ್ಟೆಯ ನಿಂದು ನೋಡದೆ” ಎಂದರೆ, ಜೀವಾತ್ಮನು ಇಲ್ಲಿಯವರೆಗೆ ನಡೆದು ಬಂದ ಸಂಸಾರದ ಅಥವಾ ಭವದ ಹಾದಿಯಲ್ಲಿ ನಿಲ್ಲದೆ, ಎಂದರೆ ಸಂಸಾರದಲ್ಲಿ ಇಲ್ಲಿಯವರೆಗೆ ಅನುಭವಿಸಿದ ಕಷ್ಟಗಳಲ್ಲಿಯೇ ಇದ್ದು ಬಿಡದೆ ಅವುಗಳನ್ನು ತ್ಯಜಿಸಿ, “ನೋಡದೆ” ಎಂದರೆ ಅವುಗಳನ್ನು ಕಡೆಗಣಿಸಿ, ಈಗ ಜ್ಞಾನದಿಂದುಂಟಾದ ಆನಂದದಿಂದ ಸುಖಿಯಾಗುತ್ತಾನೆ. ಸಂಸಾರದ ದುಃಖ, ಕಷ್ಟ ಕೋಟಲೆಗಳಲ್ಲಿಯೇ ಮುಳುಗದೆ, ಗುರುವಿನ ಕರುಣೆಯಿಂದ (ಗುರು ಎಂದರೆ ತತ್ವವೆಂಬುದನ್ನು ನೆನಪಿಡಬೇಕಾದ ಅಂಶ) ಇಲ್ಲಿಯವರೆಗೆ ನಡೆದು ಬಂದ ದಾರಿಯ ನಿರರ್ಥಕತೆ ತಿಳಿದು ಬಂದಿದೆ. ಆದ್ದರಿಂದ ಬಂದ ಬಟ್ಟೆ (ದಾರಿ) ಯನ್ನು ಬಿಟ್ಟು ಇಂದು ಗುರುವಿನ ಕರುಣೆಯಿಂದುಂಟಾದ ಜ್ಞಾನದಿಂದ ಸುಖಿಯಾಗಿದ್ದೇನೆ, ಎನ್ನುತ್ತಾರೆ. ಆ ಜ್ಞಾನವು ಇಲ್ಲಿಯವರೆಗೆ ಬಂದ ದಾರಿಯನ್ನು ಬಿಟ್ಟುಬಿಡುವಂತೆ ಮಾಡಿದೆ. ಹೀಗಾಗಿ ಹಳೆಯ ನಿಲವು, ಎಂದರೆ ಹಿಂದಿನ ಬದುಕಿನ ರೀತಿ, ನಾಶಗೊಂಡು ಈಗ ಇರುವ ನಿಲವು ಇಷ್ಟವಾಗಿದೆ. ಅಂದರೆ ಗುರವು ತೋರಿದ ಶಿವಪಥವು ಮಾತ್ರ ಮುಂದಿದೆ.

“ತಂದೆ ಮತ್ತು ಮಕ್ಕಳ ಗುಣ” ಎಂದರೆ ಗುರು ಮತ್ತು ಶಿಷ್ಯರ ಶುಚಿತ್ವ. ಎಂದರೆ ಅವರಿಬ್ಬರ ಪರಿಶುದ್ಧತೆಯಲ್ಲಿ ಲಿಂಗಭಾವ ಇದೆ. ಅವರಿಬ್ಬರ ಲಿಂಗಭಾವದಲ್ಲಿ ಎಲ್ಲಿಯೂ ಸಂದಿಲ್ಲ, ಅದು ಒಂದೇ ಆಗಿದೆ, ಅಲ್ಲಿ ನಿರಂತರತೆ ಇದೆ. ಅವರಿಬ್ಬರ ಗುಣ ಭಾವಗಳು ಒಂದೇ ಆಗಿವೆ. ಆದ್ದರಿಂದ ಅವರ (ಕಾಲೊಳಗೆ) ಆಚರಣೆಗಳಲ್ಲಿ ಎಲ್ಲಿಯೂ ಸಂದು ಇಲ್ಲ. ಆ ಆಚರಣೆಗಳಿಗೆ ತಕ್ಕವಾದ ಕ್ರಿಯೆಗಳು ಕಂಡು ಬರುತ್ತವೆ. ಅವರು ಮಾಡುವ ಪ್ರತಿಯೊಂದು ಕೆಲಸವೂ ಸದಾಚಾರದಿಂದ ಕೂಡಿರುತ್ತದೆ. “ಒಂದನ್ನು ಹಿಡಿದು ಒಂದನ್ನು ಬಿಟ್ಟಡೆ” ಎಂದರೆ ಗುರುವು ತೋರಿದ ಶಿವಪಥವನ್ನು ಹಿಡಿದು, ತನ್ನದಾಗಿಸಿಕೊಂಡು, ಸಂಸಾರದ ಜಂಜಾಟವನ್ನು ತ್ಯಜಿಸಿದರೆ, ಅದು ಗುಹೇಶ್ವರನ ನಿಜವಾದ ಭಕ್ತಿಯಾಗುತ್ತದೆ ಎನ್ನುತ್ತಾರೆ.

ಒಟ್ಟಿನಲ್ಲಿ, ಗುರುವಿನ ಕರುಣೆಯಾಗುವ ಮೊದಲು ಸಂಸಾರದ ಕೋಟಲೆಗಳಲ್ಲಿ ಬೇಯುತ್ತಿದ್ದೆ. ಗುರುವಿನ ಕರುಣೆಯಿಂದ ಜ್ಞಾನ ಉಂಟಾಯಿತು. ಆದ್ದರಿಂದ ಮತ್ತೆ ಹಿಂದಿನ ಬದುಕಿನೆಡೆಗೆ ತಿರುಗಿಯೂ ನೋಡಲಿಲ್ಲ. ಆ ಬದುಕು ಅಳಿಸಿಹೋಯಿತು. ಈಗ ಶಿವಪಥದಲ್ಲಿ ಮನಸ್ಸು ನಿಂತಿದೆ. ಗುರು ಮತ್ತು ಶಿಷ್ಯರ ಗುಣಗಳು ಒಂದೇ ಆಗಿವೆ. ಅವರಿಬ್ಬರ ಆಚರಣೆಯಲ್ಲಿ ಯಾವ ಸಂದೂ ಇಲ್ಲ. ಅವರು ಭವವನ್ನು ಬಿಟ್ಟು ಶಿವಪಥವನ್ನು ಹಿಡಿದಿದ್ದಾರೆ. ಅವರಿಬ್ಬರೂ ಯಾವಾಗಲೂ ಸದಾಚಾರದಿಂದ ಸತ್ಕ್ರಿಯೆಗಳಲ್ಲಿ ತೊಡಗಿದ್ದಾರೆ. ಇಂತಹವರ ಭಕ್ತಿಗೆ ಗುಹೇಶ್ವರನು ಒಲಿಯುತ್ತಾನೆ.

Vachana 92: aksharava ballevendu - Bookish Knowledge

ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯಾ

ಗುರುಹಿರಿಯರು ತೋರಿದ ಉಪದೇಶದಿಂದ

ವಾಗದ್ವೈತವ ಕಲಿತು ವಾದಿಪರಲ್ಲದೆ

ಆಗುಹೋಗೆಂಬುದನರಿಯರು!

ಭಕ್ತಿಯನರಿಯರು, ಯುಕ್ತಿಯನರಿಯರು, ಮುಕ್ತಿಯನರಿಯರು

ಮತ್ತೂ ವಾದಕೆಳಿಸುವರು ಹೋದರು

ಗುಹೇಶ್ವರಾ, ಸಲೆ ಕೊಂಡ ಮಾರಿಂಗೆ!

TRANSLITERATION

akSharava balleveMdu ahaMkaaraveDegoMDu lekkagoLLarayyaa
guru hiriyaru tOrida upadEshadiMda
vaagadvaitava kalitu vaadiparallade
aaguhOgeMbudanariyaru!
Bhaktiyanariyaru, yuktiyanariyaru, mutiyanariyaru
mattU vaadakeLisuvaru hodaru
guhEshvaraa. Sele koMDa maariMge!

TRANSLATION (WORDS)

akSharava (scriptures) balleveMdu (thinking I know) ahaMkaaraveDegoMDu (being proud) lekkagoLLarayyaa (don't respect)
guru (teacher)hiriyaru (seniors, those who are knowledgeable) tOrida(shown, taught) upadEshadiMda(from the teachings)
vaagadvaitava (nonduality only in words) kalitu (learning) vaadiparallade (they argue, but)
aaguhOgeMbudanariyaru! (they don't know what is actually happening)
Bhaktiyanariyaru,(they don't know devotion) yukityanariyaru,(they don't know the way) muktiyanariyaru (they don't know the freedom)
mattU (even then) vaadakeLisuvaru (they get into argument, discussion) hodaru (went)

guhEshvaraa. (Guheshvara) Sele koMDa maariMge! (they sold the material at the cost price and hence no profit)

TRANSLATION

Thinking that they know the scriptures, they become proud and do not respect others!
Having learnt the non-duality (concept) only in words from the teachings of the Guru and knowledgeable elders,
they argue, but they don't really know what is actually happening!
They don't know devotion, they don't know the way, they don't know the freedom (Mukti),
But they get into arguments, Oh! Guhesvara, they sell the material at the cost price (and hence no profit)!
COMMENTARY

In this Vachana, Allama Prabhu comments on individuals who read scriptures just for reading sake and do not actually understand them and do not use the knowledge from these scriptures in progressing on the spiritual path. These individuals gain the knowledge through reading, through interactions with the teacher and knowledgeable elders. But, they stop at becoming proud of their knowledge and start disrespecting others. They deliver lectures on scriptures, but do not utilize the knowledge in reaching the divine. They grasp the concepts of anga (Jivatma), linga (Divine, paramatma) and the merger of the two, only in words and not in practice. They do not know the technique of getting away from the materialism, neither they have the devotion to take them towards the God, nor they can even imagine the state of bliss at the merger of anga with linga (Linga anga saamarasya). Allama Prabhu says that such individuals don't know what devotion is, they don't know the way to reach the God, and they don't know the true meaning of merger with the God (mukti). But, they are fond of arguing and discussions. Allama Prabhu compares these individuals to merchants selling their goods at cost price, with no profits! Truly, they do not know the price of the goods (knowledge) they possess!

Let us internalize the knowledge gained!

KANNADA COMMENTARY

ಈ ವಚನದಲ್ಲಿ ಅಲ್ಲಮಪ್ರಭುಗಳು ಶಾಸ್ತ್ರಗಳನ್ನು ಕೇವಲ ಓದಿಗಾಗಿ ಓದಿದವರು ಹೇಗೆ ನಡೆದುಕೊಳ್ಳುತ್ತಾರೆ ಮತ್ತು ಅವರ ಗತಿ ಏನಾಗುತ್ತದೆ ಎಂಬುದನ್ನು ಹೇಳುತ್ತಿದ್ದಾರೆ. "ಅಕ್ಷರ" ಎಂಬ ಪದವು ಶಾಸ್ತ್ರಗಳನ್ನು ಪ್ರತಿಪಾದಿಸುತ್ತದೆ. ಶಾಸ್ತ್ರಗಳನ್ನು ಓದಿ ವ್ಯಕ್ತಿಯು ಅಹಂಕಾರಗೊಳ್ಳುತ್ತಾನೆ. ಶಾಸ್ತ್ರಗಳ ತಿಳಿವಳಿಕೆಯು ಆತನಲ್ಲಿ ತಾನು ಎಲ್ಲವನ್ನು ಬಲ್ಲವ, ತಾನೇ ಶ್ರೇಷ್ಠ, ಎಂಬ ಭಾವವನ್ನುಂಟುಮಾಡುತ್ತದೆ. ಆ ಶಾಸ್ತ್ರಗಳ ಆಶಯದ ಕಡೆಗೆ ಆತನ ಗಮನ ಹೋಗುವುದಿಲ್ಲ. ಕೇವಲ ಓದಿನಿಂದ ಗಳಿಸಿದ ಜ್ಞಾನದ ಬಗ್ಗೆ ಉಂಟಾದ ಅಹಂಕಾರವು ಆತನು ಯಾರನ್ನೂ ಲೆಕ್ಕಿಸದಂತೆ ಮಾಡುತ್ತದೆ. ಇತರರೇನು ಮಹಾ ಎನ್ನುವ ಭಾವಕ್ಕೆಡೆ ಮಾಡಿಕೊಡುತ್ತದೆ. ತನಗೆ ಉಪದೇಶಮಾಡಿದ ಗುರು ಹಿರಿಯರಿಂದ ತನಗೆ ದೊರೆತ ಕೇವಲ ಮಾತಿನ, ಶಾಬ್ದಿಕವಾದ ಅದ್ವೈತವನ್ನು ಕಲಿತು ವಾದಮಾಡುತ್ತಾನೆಯೆ ಹೊರತು ನಿಜವಾದ ಜ್ಞಾನವನ್ನು ಅರಿಯುವುದಿಲ್ಲ. ಬದುಕಿನ ಆಗುಹೋಗುಗಳನ್ನು, ಅವುಗಳ ನಿಜವಾದ ಸ್ಥಾನವನ್ನು ಅರಿಯುವುದಿಲ್ಲ. ಸತ್ಯವನ್ನು ಅರಿಯುವುದರಲ್ಲಿ ಆತನಿಗೆ

ಆಸಕ್ತಿ ಕಂಡು ಬರುವುದಿಲ್ಲ. ಶಾಸ್ತ್ರಗಳನ್ನು ಮೀರಿ ಹೊಗುವುದು ಮುಖ್ಯ. ಆದರೆ ಮನಸ್ಸು ಅಲ್ಲಿಯೇ ನಿಂತುಬಿಡುತ್ತದೆ. ತನಗೆ ಇತರರಿಂದ ದೊರೆತ ಜ್ಞಾನದಿಂದ ಅಹಂಕಾರಗೊಳ್ಳುತ್ತದೆ. ತಾನಾಗಿಯೇ ಏನನ್ನೂ ಕಂಡುಕೊಳ್ಳುವುದಿಲ್ಲ. ನಿಜವಾದ ಜ್ಞಾನವನ್ನು ಯಾರೂ ಕೊಡಲಾರರು. ಅದನ್ನು ಪ್ರತಿಯೊಬ್ಬನು ತಾನಾಗಿಯೇ ಕಂಡುಕೊಳ್ಳಬೇಕು. ಅಹಂಕಾರಕ್ಕೂ ಅದಕ್ಕೂ ಬಲು ದೂರ. ನಿಜವಾದ ಜ್ಞಾನವು ಅದ್ವೈತ ಭಾವವನ್ನುಂಟುಮಾಡುತ್ತದೆ. ಅದ್ವೈತ ಜ್ಞಾನದಿಂದ ವ್ಯಕ್ತಿಯು ವಿನೀತನಾಗುತ್ತಾನೆ. ಅಲ್ಲಿ ಅಹಂಕಾರಕ್ಕೆ ಸ್ಥಾನವೇ ಇರುವುದಿಲ್ಲ. ಆದರೆ ಶಾಸ್ತ್ರಗಳ ಜ್ಞಾನವು ಅದರ ಬಗ್ಗೆ ಒಣ ಹಮ್ಮು ಹುಟ್ಟುವಂತೆ. ಅಂದರೆ ಕೇವಲ ಮಾತುಗಳಲ್ಲಿ ಅಥವಾ ತರ್ಕಬದ್ಧವಾಗಿ ಅದನ್ನು ಮಂಡಿಸಲು ಕಲಿತು ಇತರರೊಂದಿಗೆ ವಾದಕ್ಕಿಳಿಯುತ್ತಾನೆ ವ್ಯಕ್ತಿ. ದೇವರ ಬಗ್ಗೆ ಭಕ್ತಿಯಾಗಲಿ, ಸಂಸಾರದ ಜಂಜಾಟದಿಂದ ಬಿಡಿಸಿಕೊಳ್ಳುವ ಯುಕ್ತಿಯಾಗಲಿ ಅಥವಾ ನಿಜವಾದ ಮುಕ್ತಿಯಾಗಲಿ ಅವನಿಗೆ ತಿಳಿದಿರುವುದಿಲ್ಲ. ಆದರೆ ಅವುಗಳ ಬಗ್ಗೆ ವಾದಮಾಡುವುದರಲ್ಲಿ ಅವನಿಗೆ ಆಸಕ್ತಿ. ಇಂತಹವನು ತಾನು ಕೊಂಡ ಸರಕನ್ನು ಕೊಂಡ ಬೆಲೆಗೆ ಮಾರಿ ಹೋಗುವ ವ್ಯಾಪರಿಯಂತೆ. ಎಂದರೆ ಅವನಿಗೆ ಯಾವ ಲಾಭವೂ ಆಗಲಿಲ್ಲ. ಅದರ ಬದಲಿಗೆ ಸರಕನ್ನು ಹೊತ್ತು ತಿರುಗಿದ ಆಯಾಸ ಮಾತ್ರ ಉಳಿಯುತ್ತದೆ. ಅಂದರೆ ಗುರು ಹಿರಿಯರಿಂದ ಪಡೆದ ಜ್ಞಾನವನ್ನು ತಾನು ಪಡೆದು ವೃಥಾ ವಾದಮಾಡಿದ ಆಯಾಸವನ್ನುಳಿದು ಯಾವ ಲಾಭವೂ ಆತನಿಗೆ ಆಗುವುದಿಲ್ಲ. ಅಲ್ಲಿ ಪಡೆದುದನ್ನು ಇಲ್ಲಿ ಒಪ್ಪಿಸುತ್ತಾನೆ ಅಷ್ಟೆ. ಆದರೆ ಶಾಸ್ತ್ರಗಳ ಉದ್ದೇಶವೇ ಬೇರೆ. ಅವುಗಳ ಅಧ್ಯಯನದ ಮೂಲಕ ಅವು ತೋರುವ ಮಾರ್ಗದಲ್ಲಿ ಮುಂದುವರಿದು ಸತ್ಯವನ್ನು ಕಂಡುಕೊಳ್ಳುವುದು. ಅವಗಳು ಕೇವಲ ದಾರಿ ತೋರುತ್ತವೆ. ಅದನ್ನು ಅರಿತು ಸ್ವತಃ ಸತ್ಯವನ್ನು ಕಂಡುಕೊಳ್ಳುವುದು ಪ್ರತಿಯೊಬ್ಬನು ಮಾಡಬೇಕಾದ ಕೆಲಸ.

Vachana 93: Bhoomiya katinawanu - Inherent Potential

ಭೂಮಿಯ ಕಠಿಣವನು ಆಕಾಶದ ಮೃದುವನು

ತಿಳಿವ ಗಮನ ಅಲ್ಲಿಯೇ ನಿಂದಿತ್ತು

ಉದಕದೊಳಗೆ ಹುಟ್ಟಿದ ತೃಷ್ಣೆ ಉದಕವನರಸಿತ್ತಲ್ಲಾ!

ಒಳಗೆ ಸತ್ತು ಹೊರಗೆ ಆಡುತ್ತದೆ;

ಗುಹೇಶ್ವರ ನಿಬ್ಬೆರಗಾಗಿ ಅಲ್ಲಿಯೇ ನಿಂದನು

TRANSLITERATION

bhUmiya kaThiNavanu aakaashada mRuduvanu
tiLiva gamana alliyE niMdittu
udakadoLage huTTida tRuShNe udakavanarasittallaa!
oLage sattu horage aaDuttade;
guhEshvara nibberagaagi alliyE niMdanu

TRANSLATION (WORDS)

bhUmiya (of the earth) kaThiNavanu (the hard quality,arduous) aakaashada (of the sky) mRuduvanu (softness)
tiLiva(understanding) gamana(attention) alliyE(right there) niMdittu (got stuck)
udakadoLage(in the waters) huTTida (taken birth)tRuShNe (thirst)
udakavanarasittallaa!(alas! searches for water)
oLage(inside) sattu (dead) horage(outside) aaDuttade;(is playing)
guhEshvara(Guheshvara) nibberagaagi (being aghast)alliyE niMdanu (stood right there)

TRANSLATION

Though capable of understanding the hardness of the Earth and softness of the sky, the attention got stuck right there (short of it).
Alas! The thirst that took birth in the water, searches for the water!
Dead inside, but playing outside;
Being aghast, Guhesvara stood right there.

COMMENTARY

We have said that the ultimate goal of all individual souls (Anga, Jiva, Jivaatma) is to merge with the divine (Linga, Isvara, Paramaatma), i.e. linga-anga saamarasya or reaching that nothingness (shoonya sampaadane). The jiva is inherently capable of reaching Isvara. But, it gets entangled in the affairs of the material world (Maya) and fails to reach that ultimate state. In this Vachana, Allama Prabhu wonders about this sorry state of the individual. The individual is capable of understanding the hardness (gross) of the Earth and the softness (subtle) of the sky, meaning that the capability is there to understand the Universe and hence the divine. But, the attention of the individual is stuck at the material world and is entangled in its affairs. The thirst born out of water is looking for water, meaning that having born in this mundane world, the individual is seeking the mundane world. He is not getting past the influences of the mundane world. The inherent capability to seek and reach the divine is dead inside, but behaves as an accomplished one outside. Observing this state of the individual, even Guhesvara is aghast.

The message of the Vachana then is that every individual is inherently capable of reaching the divine. He/she should recognize that inherent capability, overcome the distracting influences and strive to reach that goal. As Napoleon Hill says in his book 'Think and Grow Rich', 'if you can think of it, you can achieve it!'

Let us recognize our inherent potential and with it, reach the Ultimate!

KANNADA COMMENTARY

ಇಲ್ಲಿ ಅಲ್ಲಮ ಪ್ರಭುಗಳು ಜೀವಾತ್ಮನ ರೀತಿಯನ್ನು ಹೇಳುತ್ತಿದ್ದಾರೆ. ಜೀವಾತ್ಮ ಭೂಮಿಯ ಕಾಠಿಣ್ಯವನ್ನು ಮತ್ತು ಆಕಾಶದ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಅಂದರೆ ವಿಶ್ವದ ಆಳ ಮತ್ತು ವಿಸ್ತಾರಗಳನ್ನು ಅದು ಅರಿತುಕೊಳ್ಳಬಲ್ಲುದು. ಭೂಮಿ, ಜಲ, ವಾಯು, ತೇಜ ಮತ್ತು ಆಕಾಶ ಇವುಗಳನ್ನು ಅರಿತು ವಿಶ್ವವನ್ನು ಅರಿಯಬಲ್ಲುದು. ಸ್ಥೂಲವಂತೂ ಕಣ್ಣಿಗೆ ಕಾಣುತ್ತದೆ. ಆದರೆ ಅದರ ಹಿಂದೆ ಇರುವ ಸೂಕ್ಷ್ಮವನ್ನು ಅದು ಅರಿಯಬಲ್ಲುದು. ಅದರೆಡೆಗೆ ಗಮನ ಕೊಡಬೇಕು ಅಷ್ಟೆ. ಆಳವನ್ನು ಹೊಕ್ಕು ನೋಡಬೇಕು. ಆದರೆ ಜೀವಾತ್ಮನ ಗಮನ ಆ ದಿಕ್ಕಿನಲ್ಲಿ ಹೋಗದೆ ನಿಂತಲ್ಲಿಯೇ ನಿಂತುಬಿಟ್ಟಿದೆ.ಅಂದರೆ ಅದು ವಿಷಯ ಭೋಗಗಳಲ್ಲಿ ನಿಂತುಬಿಟ್ಟಿದೆ. ಅದರ ಈ ಸ್ಥಿತಿಯನ್ನು ನೋಡಿ ಅಲ್ಲಮರು "ಉದಕದೊಳಗೆ ಹುಟ್ಟಿ ತೃಷ್ಣೆ ಉದಕವನ್ನರಸಿತ್ತಲ್ಲಾ" ಎಂದು ಅಚ್ಚರಿಪಡುತ್ತಾರೆ. ತೃಷ್ಣೆಯು ಉದಕದಲ್ಲಿ ಎಂದರೆ ಸಂಸಾರದಲ್ಲಿ ಹುಟ್ಟಿ ಉದಕವನ್ನು ಎಂದರೆ ಸಂಸಾರವನ್ನೇ ಅರಸುತ್ತದೆ, ಸಂಸಾರದಲ್ಲಿಯ ವಿಷಯವಿಲಾಸವನ್ನೇ ಅರಸುತ್ತದೆ. ಅದರ ತೃಷ್ಣೆ ತೀರುವುದೇ ಇಲ್ಲ. ಆ ತೃಷ್ಣೆಯನ್ನು ಪೂರ್ತಿಗೊಳಿಸುವ ಅಸೆಯಿಂದ ಅಲ್ಲಿಯೇ ನಿಂತುಬಿಡುತ್ತದೆ ಜೀವ. ಅದು ತನ್ನ ಗಮನವನ್ನು ಬೇರೆಡೆಗೆ ಹರಿಸುವುದೂ ಇಲ್ಲ. ಸದಾ ವಿಷಯ ಸುಖದಲ್ಲಿ ಮುಳುಗಿರುವುದರಿಂದ ಅದು ಒಳಗೆ ಸತ್ತುಹೋಗಿದೆ. ಹೊರಗೆ ಕಂಡು ಬರುವ ಇಂದ್ರಿಯ ಸುಖದ ಬೆನ್ನು ಹತ್ತಿ ಹೋಗುತ್ತದೆ. ಸೂಕ್ಷ್ಮವಾದ ತನ್ನ ಒಳಗನ್ನು ಮರೆತಿದೆ. ಅಂದರೆ ಅದು ತನ್ನ ನಿಜವಾದ ಸ್ವರೂಪವನ್ನು ಮರೆತಿದೆ. ಆದ್ದರಿಂದ ಒಳಗೆ ಅದು ಸತ್ತು ಹೋಗಿದೆ. ಅಲ್ಲಿ ಕೇವಲ ಅಜ್ಞಾನವಿದೆ.ಹೊರಗೆ ಮಾತ್ರ ಆಡುತ್ತಿರುತ್ತದೆ. ಹೊರಗೆ ತಾನು ಜ್ಞಾನಿಯಂತೆ ನಡೆದುಕೊಳ್ಳುತ್ತದೆ. ಅದರ ಈ ಸ್ಥಿತಿಯನ್ನು ಕಂಡು ಗುಹೇಶ್ವರನು ಬೆರಗುಗೊಂಡು ಸಾಕ್ಷಿಯಾಗಿ ಅಲ್ಲಿಯೇ ನಿಂತಿದ್ದಾನೆ ಎನ್ನುತ್ತಾರೆ ಅಲ್ಲಮರು.

Vachana 94: Angada koneya melana - The Wandering Mind

ಅಂಗದ ಕೊನೆಯ ಮೇಲಣ ಕೋಡಗ ಕೊಂಬಿಂಗೆ ಹಾರಿತ್ತು.
ಅಯ್ಯಾ ಒಂದು ಸೋಜಿಗ!
ಕೈಯ ನೀಡಲು ಮೈಯೆಲ್ಲವ ನುಂಗಿತ್ತು.
ಒಯ್ಯನೆ ಕರೆದಡೆ ಮುಂದೆ ನಿಂತಿತ್ತು.
ಮುಯ್ಯಾಂತಡೆ ಬಯಲಾಯಿತ್ತು ಗುಹೇಶ್ವರಾ

TRANSLITERATION

Amgada koneya mElaNa kODaga koMbiMge haarittu

ayyaa oMdu sOjiga !

kaiya neeDalu maiyellava nuMgittu

oyyane karedaDe muMde niMtittu

muyyaaMtaDe bayalaayittu guhEshvaraa

TRANSLATION (WORDS)

Amgada (of the body) koneya(at the end) mElaNa(on, top) kODaga (the monkey)

koMbiMge (to the branches) haarittu (jumped)

ayyaa (sir) oMdu sOjiga ! (*what a* wonder)

kaiya (hand) neeDalu (*when* stretched) maiyellava (the whole body) nuMgittu (swallowed)

oyyane (lovingly) karedaDe (if called) muMde(before *me*) niMtittu (stood)

muyyaaMtaDe (when put in to contemplation) bayalaayittu (it disappeared) guhEshvaraa(Guheshvara)

TRANSLATION

The monkey on the limb jumped over branches.

Sir, What a wonder!

When a hand was offered, the whole body was swallowed.

When called lovingly, it stood right in front (of me).

When put in to contemplation, it disappeared, Guhesvara!

COMMENTARY

In this Vachana, Allama Prabhu offers suggestions for cultivating the human mind to reach the divine. The mind is compared to a monkey whose nature is to jump from branch to branch on a tree constantly. The monkey grabs a fruit from the branch it is on and starts eating it. Even before finishing the fruit, it sees another fruit on the next branch. It throws the half eaten fruit away and grabs the next fruit. The monkey does not even have the patience to enjoy the fruit at hand. So is the human mind. It starts on one thought and jumps to other thoughts as they occur. The sense organs keep stimulating the mind constantly and the mind keeps reacting to the stimuli. Allama Prabhu says 'when a hand is offered, the whole body is swallowed' meaning that when we yield to the simplest of the vagaries of the mind we get consumed completely. We stay tangled in the ropes of the material world. We continue to make the web more complex and binding rather than trying to get out of it. We always stay in an unsatisfied state. Even when we are enjoying a pleasure offered by our sense organs and mind, we will be looking for a more pleasurable event or activity. We thus become slaves of our senses and mind. Allama Prabhu offers a simple first step and says if we can call the mind lovingly, it comes and stands before us ready to serve. Calling the mind lovingly corresponds to understanding the nature of the mind and utilizing it to help us on the spiritual path, meaning minimizing wants and needs, not yielding to the desires posed by the wandering mind and concentrating on the divine. Allama Prabhu offers putting the mind in to contemplation as the next step. When the mind is stabilized and turned inwards 'it disappears' meaning that we reach the divine within us. We have called this state as achieving null or shoonya sampaadane, i.e. merging with Him.

Let us start understanding, loving and contemplating to reach the divine!

KANNADA COMMENTARY

ಮನವೆಂಬ ಮರ್ಕಟನ ಸ್ವಭಾವವನ್ನು ವಿವರಿಸುತ್ತ ಅದನ್ನು ಐಕ್ಯ ಸ್ಥಿತಿಗೆ ಒಯ್ಯುವ ಪರಿಯನ್ನು ಸರಳವಾಗಿ ತಿಳಿಸುತ್ತಿದ್ದಾರೆ ಅಲ್ಲಮ ಪ್ರಭುಗಳು. ಮನಸ್ಸನ್ನು ಗಮನಿಸಿದವರಿಗೆಲ್ಲ ಅದು ಕೋಡಗದಂತೆ ಎನ್ನುವುದು ತಿಳಿದೇ ಇರುತ್ತದೆ. ಮಂಗ ಹಣ್ಣು ಕಾಯಿಗಳ ಆಸೆಗಾಗಿ ಕೊಂಬೆಯಿಂದ ಕೊಂಬೆಗೆ ಹಾರುತ್ತದೆ. ಹಣ್ಣನ್ನು ನೋಡಿ ತಿನ್ನುವ ಆಸೆಗೆ ಒಳಗಾಗಿ ಕೊಂಬೆಯ ಹಣ್ಣಿಗೆ ಹಾರುತ್ತದೆ. ಅದನ್ನು ಶಾಂತಿಯಿಂದ ಪೂರ್ತಿಯಾಗಿ ತಿನ್ನುವುದೂ ಇಲ್ಲ. ಒಂದು ಹಣ್ಣು ತಿನ್ನುವಾಗಲೂ ಕೂಡ ಅದರ ಕಣ್ಣು ಆಗಲೆ ಇನ್ನೊಂದು ಹಣ್ಣಿನ ಮೇಲಿರುತ್ತದೆ. ಅರ್ಧಂಬರ್ಧ ತಿಂದು ಅದನ್ನು ಎಸೆದು ಇನ್ನೊಂದಕ್ಕೆ ಹಾರುತ್ತದೆ. ಇದು ಮಂಗನ ಸ್ವಭಾವ. ಒಂದೆಡೆ ನಿಲ್ಲುವುದಿಲ್ಲ ಕೋಡಗ. ಮನಸ್ಸಿನ ಪರಿಸ್ಥಿತಿಯೂ

ಸಹ ಇದೇ ಆಗಿದೆ. ಮನಸ್ಸು ನಿಂತಲ್ಲಿ ನಿಲ್ಲುವುದಿಲ್ಲ. ಅದು ಸುಲಭವಾಗಿ ತೃಪ್ತಗೊಳ್ಳುವುದಿಲ್ಲ. ಪ್ರತಿಸಲವೂ ಹೊಸದನ್ನು ಅರಸುತ್ತಲೇ ಇರುತ್ತದೆ. ತಾನೇ ಇಂದ್ರಿಯಗಳ ಆಕರ್ಷಣೆಗೆ ಒಳಗಾಗುತ್ತದೆ. ಒಂದು ಸುಖವನ್ನು ಅನುಭವಿಸುತ್ತಿರುವಾಗಲೇ ಅದಕ್ಕೆ ಇನ್ನೊಂದರ ಮೇಲೆ ಕಣ್ಣು. ಹೀಗಿರುವಾಗ ಅದಕ್ಕೇನಾದರೂ ಸ್ವಲ್ಪ ಹೆಚ್ಚಿನ ರುಚಿಯನ್ನು ತೋರಿಸಿದರೆ ಅಥವಾ ನಾವಾಗಿ ಇಂದ್ರಿಯ ವಿಷಯಸುಖದ ರುಚಿಯನ್ನು ತೋರಿಸಿದರೆ ಅದು ಇಡೀ ವಿಷಯ ಪ್ರಪಂಚವನ್ನೇ ನುಂಗಿಹಾಕುತ್ತದೆ. ಇದು ಸೋಜಿಗದ ವಿಷಯ. ಇದನ್ನೇ ಅಲ್ಲಮರು, "ಕೈಯ ನೀಡಲು ಮೈಯೆಲ್ಲವ ನುಂಗಿತ್ತು" ಎಂದು ಹೇಳುತ್ತಾರೆ. ಏನೋ ಪಾಪ ಎಂದು ಇಂದ್ರಿಯ ಸುಖಕ್ಕೆ ಒಂದವಕಾಶ ಮಾಡಿ ಕೊಟ್ಟಲ್ಲಿ ಅದು ಇಡೀ ಮೈಯನ್ನೇ ನುಂಗುತ್ತದೆ. ಈ ವಿಷಯದಲ್ಲಿ ಅದರ ಶಕ್ತಿ ಅಗಾಧವಾದದ್ದು. ಅಂದರೆ ಅದು ಇಂದ್ರಿಯಗಳನ್ನು ತೃಪ್ತ ಗೊಳಿಸುವುದರಲ್ಲಿ ಪೂರ್ತಿಯಾಗಿ ಮುಳುಗಿ ಹೋಗುತ್ತದೆ. ಅದರ ಗಮನ ಬೇರೆ ಇನ್ನಾವುದರ ಕಡಗೂ ಹರಿಯುವುದಿಲ್ಲ. ಆದರೆ ಅದು ಎಂದಿಗೂ ತೃಪ್ತವಾಗುವುದಿಲ್ಲ. ಅಂದರೆ ವ್ಯಕ್ತಿಯು ಸಂಸಾರದಲ್ಲಿ ಪೂರ್ತಿಯಾಗಿ ಮುಳುಗಿಹೋಗುತ್ತಾನೆ, ಘಾಸಿಗೊಳ್ಳುತ್ತಾನೆ. ಅಂದರೆ ಮನಸ್ಸನ್ನು ಅದರ ಇಷ್ಟದಂತೆ ಸ್ವಲ್ಪ ಹರಿಯ ಬಿಟ್ಟರೆ ಸಾಕು ಆನಂದವೆಂಬುದನ್ನು ಕಳೆದುಕೊಂಡಂತೆಯೆ. ವ್ಯಕ್ತಿಯೇ ಅದರ ದಾಸನಾಗುತ್ತಾನೆ. ಆದರೆ ಅದೇ ಮನಸ್ಸನ್ನು "ಒಯ್ಯನೆ ಕರೆದಡೆ"- ಪ್ರೀತಿಯಿಂದ ಸಂತೈಸಿದರೆ ಅದು ನಾವು ಹೇಳಿದಂತೆ ಕೇಳುತ್ತದೆ. ನಮ್ಮ ಮುಂದೆ ದಾಸನಂತೆ ಬಂದು ನಿಲ್ಲುತ್ತದೆ. ಅದನ್ನು ನಮ್ಮಿಷ್ಟಬಂದೆಡೆಗೆ ತಿರುಗಿಸಬಹುದು. ಇಷ್ಟು ಸಾಕಲ್ಲವೆ ನಮಗೆ. ಆದರೆ ಅಲ್ಲಮರು ಇದಕ್ಕಿಂತ ಎತ್ತರದ ದಾರಿ ತೋರಿಸುತ್ತಾರೆ. "ಮುಯ್ಯಾಂತಡೆ ಬಯಲಾಯಿತ್ತು" ಎನ್ನುತ್ತಾರೆ. ಸಂಯಮದಿಂದ ಮನಸ್ಸನ್ನು ಚಿಂತನೆಗೆ ಹಚ್ಚಿದರೆ ಅದು ಬಯಲಾಗುತ್ತದೆ. ಅದನ್ನು ಅದರಲ್ಲಿಯೇ ಹುದುಗಿರುವ ಅತ್ಮದ ಚಿಂತನೆಗೆ ತೊಡಗಿಸಿದರೆ ಮನಸ್ಸು ಅದರಲ್ಲಿಯೇ ಮಗ್ನವಾಗುತ್ತದೆ. ಅದರ ಚಂಚಲತೆ ಮಾಯವಾಗಿ ಮನಸ್ಸೇ ಇಲ್ಲಾಗುತ್ತದೆ. ಅದು ಬಯಲಾಗುತ್ತದೆ. ಕ್ಷುಲ್ಲಕವಾದ ಇಂದ್ರಿಯ ಸುಖದಿಂದ ಎತ್ತಿ ಮನಸ್ಸನ್ನು ಆತ್ಮನ ಚಿಂತನೆಗೆ ಹಚ್ಚುವ ಕೆಲಸ ನಾವು ಮಾಡಬೇಕಾದದ್ದು.

ಇಂದ್ರಿಯಗಳಂಬ ಕೊಂಬೆಗಳಿಗೆ ಹಾರಾಡುವ ಮನಸ್ಸನ್ನು ಸಂಯಮದಿಂದ ಒಲಿಸಿಕೊಂಡು ಆತ್ಮ ಚಿಂತನೆಗೆ ತೊಡಗಿಸಬೇಕು, ಎಂದು ಹೇಳುತ್ತಾರೆ ಅಲ್ಲಮಪ್ರಭುಗಳು.

Vachana 95: Harahara endu Hattubaari – The Means to Reach the Divine

**ಹರಹರ ಎಂದು ಹತ್ತುಬಾರಿ ಎನಬಹುದಲ್ಲ ದೆ,
ಹರಿವ ಮನವ ಮೆಟ್ಟಿ ಲಿಂಗದೊತ್ತಿನಲ್ಲಿ ನಿಂದಲರಿಯದು ನೋಡಾ!
ಇದು ಕಾರಣ, ತನುವ ಗುರುವಿಂಗಿತ್ತು,ಮನವ ಲಿಂಗಕ್ಕಿತ್ತು,
ಧನವ ಜಂಗಮಕ್ಕಿತ್ತು, ತ್ರಿವಿಧವನು ತ್ರಿವಿಧಕ್ಕಿತ್ತ ಬಳಿಕ,
ಒಂದಲ್ಲದೆ ಎರಡುಂಟೆ?
ಇದು ಮುಂದೆ ಆವನಾನೊಬ್ಬ ಭಕ್ತನು ನೋಡಿ ನಡೆವುದಕ್ಕೆ ಇದೇ ಸಾಧನ,
ಬಸವ ಪ್ರಿಯ ಕೂಡಲಚೆನ್ನಬಸವಣ್ಣಾ**

TRANSLITERATION

harahara eMdu hattubaari enabahudallade,

hariva manava meTTi liMgadottinalli niMdalariyadu nODaa!

Idu kaaraNa, tanuva guruviMgittu, manava liMgakkittu.

Dhanava jaMgamakkittu, trividhavanu trividhakkitta baLika,

oMdallade eraduMTe?

Idu muMde aavanaanobba bhaktanu nODi naDevudakke idE saadhana,

Basava priya kUDalacennabasavaNNaa

TRANSLATION (WORDS)

harahara (Hara Hara, God’s name) eMdu (as) hattu baari (ten times) enabahudallade,(one can say or chant, but)

hariva (wavering) manava (mind) meTTi (by controlling) liMgadottinalli (in linga, in God) niMdalariyadu (can’t establish) nODaa! (you see!)

Idu (for this) kaaraNa (reason) tanuva (the body) guruviMgittu,(offering to the teacher) manava (the mind) liMgakkittu.(offering to the God)

Dhanava (the wealth)jaMgamakkittu,(offering to the Jamgama) trividhavanu (triform,) trividhakkitta (offering to the triform) baLika,(after)

oMdallade (only one) eraduMTe?(can there be two, can there be duality)

Idu (this) muMde (later) aavanaanobba (some one) bhaktanu (devotee) nODi(observe, see) naDevudakke (to follow) idE saadhana, (this is the means)

Basava priya kUDalacennabasavaNNaa (Basavapriya Koodalacennabasavannaa)

TRANSLATION

One can chant God's name (Hara Hara) tens of times,

But can't control the wavering mind and establish it in Him, you see!

As such, offering the body to teacher (guru), mind to God (Linga) and the wealth to ascetics (jangama), thus offering the triform to the triform,

there can only be one, how can there be a duality?

This is the means to be followed by all future devotees,

Basava priya kUDala cennabasavaNNaa!

COMMENTARY

This Vachana from Sharana Hadapada Appanna hints at the only means of reaching the divine. We have commented on the three resources we all have – Body, Mind and Wealth. The body should be offered to the teacher (Guru) implying that one should be in close proximity and service of the Guru in order to be indoctrinated with the true knowledge and awareness of the spiritual path. This knowledge and awareness will lead the devotee towards controlling the wandering mind to establish it in Linga, the divine. The wealth should be utilized in support of the activities of Jangamas, the realized souls (wandering ascetics) who have devoted themselves to enhance the Godliness of the individuals and society. Appanna says that once the trifold resources are thus appropriately allocated and spent, there would be no question of man/God duality; the two will have merged into one. He says this is the only means of merging with the divine (reaching the God). No amount of rituals such as chanting multiple names of God multiple times, without actually developing the single minded intensity and awareness would be useful. This Vachana not only advocates the development of the self (body and mind), but also proactive support for the community for such development.

Let us dedicate our trifold resources to bring the heaven on Earth!

KANNADA COMMENTARY

[ಹಡಪದ ಅಪ್ಪಣ್ಣನವರು] ತನು ಮನ ಧನಗಳನ್ನು ಹೇಗೆ ಸಾರ್ಥಕವಾಗಿ ಉಪಯೋಗಿಸಬೇಕೆಂಬುದನ್ನು ಇಲ್ಲಿ ಹೇಳುತ್ತಾರೆ. ಜನರು ಬಾಯಿಯಿಂದ ದೇವರನಾಮವನ್ನು ಹೇಳುತ್ತಾರೆ, ಆದರೆ ಮನಸ್ಸೆಲ್ಲೋ ಇರುತ್ತದೆ. ಹತ್ತು ಸಲವೋ ನೂರುಸಲವೋ ದೇವರ ಹೆಸರನ್ನು ಹೇಳಿದ ಮಾತ್ರಕ್ಕೆ ದೇವರು ಸಿಗುವುದಿಲ್ಲ. ಹರಹರ ಎಂದರೆ ಹರನು ಸಿಗನು, ಹರಿವ ಮನಸ್ಸು ಲಿಂಗದಲ್ಲಿ ನಿಲ್ಲದು. ಮನಸ್ಸನ್ನು ಒಂದು ಕಡೆ ನಿಲ್ಲಿಸಲು ಉಪಾಯವಿದೆ. ಅದೇ ತ್ರಿವಿಧವನ್ನು ತ್ರಿವಿಧದಲ್ಲಿ ನಿಲ್ಲಿಸುವುದು. ತ್ರಿವಿಧವೆಂದರೆ ತನು, ಮನ ಮತ್ತು ಧನ. ಈ ತ್ರಿವಿಧವನ್ನು ಗುರು, ಲಿಂಗ , ಜಂಗಮವೆಂಬ ತ್ರಿವಿಧದಲ್ಲಿ ನಿಲ್ಲಿಸಬೇಕೆನ್ನುತ್ತಾರೆ. ಮೊಟ್ಟ ಮೊದಲಿಗೆ ತನುವನ್ನು ಗುರುವಿಗೆ ನೀಡಬೇಕು. ದೈಹಿಕವಾಗಿ ನಾವು ಗುರುವಿನ ಸೇವೆ ಮಾಡಿದರೆ ಗುರುವಿನ ಗುಣಗಳಿಂದ ಆಕರ್ಷಿತರಾಗುವ ಸಂಭವವಿರುತ್ತದೆ. ಆಗ ಗುರು ನಮಗೆ ಶಿವ ಕಾರುಣ್ಯ ಪಡೆಯುವ ದಾರಿಯನ್ನು ತೋರಿಸಿಕೊಡುತ್ತಾನೆ. ಆ ಕಾರುಣ್ಯ ನಮ್ಮ ಅಂತರಂಗದಲ್ಲಿ ಉದಿಸಿದ ನಂತರ ಅದನ್ನು ಬೆಳೆಸಿಕೊಳ್ಳುವುದರಲ್ಲಿ ಮನಸ್ಸು ಅನಾಯಾಸವಾಗಿ ತೊಡಗುತ್ತದೆ. ಹೀಗಾಗಿ ಮನಸ್ಸು ಲಿಂಗದಲ್ಲಿ ನಿಲ್ಲುವ ಸಂಭವವಿರುತ್ತದೆ. ಈ ಹಂತದಲ್ಲಿ ನಾವು ಸ್ವಲ್ಪ ಪ್ರಯತ್ನ ಮಾಡಬೇಕು. ಅದು ಯಾಂತ್ರಿಕವಾಗಿ “ಹರಹರ” ವೆನ್ನುವ ರೀತಿಯದಲ್ಲ. ಅರಿವಿನ ಕಣ್ಣು ತೆಗೆಸುವಂತಹದು. ತನು ಮನಗಳು ಗುರು ಲಿಂಗಕ್ಕೆ ಅರ್ಪಿಸಿದ ನಂತರ ಇನ್ನು ಧನವನ್ನು ಜಂಗಮಕ್ಕೆ ಅರ್ಪಿಸಬೇಕೆನ್ನುತ್ತಾರೆ. ಧನವನ್ನು ಜಂಗಮಕ್ಕೆ ಅರ್ಪಿಸದೆ ಅದನ್ನು ಬೇರೆಯದರಲ್ಲಿ ತೊಡಗಿಸಿದರೆ ಅದು ಜೀವನನ್ನು ಮಾಯಾಮೋಹಗಳಲ್ಲಿ ಮುಳುಗುವಂತ ಮಾಡುತ್ತದೆ. ಮರೆವಿನಲ್ಲಿ ಮುಳುಗಿಸುತ್ತದೆ. ಆದ್ದರಿಂದ ಧನವನ್ನು ಜಂಗಮನಲ್ಲಿ ತೊಡಗಿಸುವುದು ಬಹು ಮುಖ್ಯ ಮತ್ತು ಲೋಕಕಲ್ಯಾಣದ ಮೂಲಕ ಅರಿವಿನತ್ತ ಒಯ್ಯುವಂತಹದ್ದು. ಆಗ ತನು ಮನ ಧನಗಳು ಒಂದಾಗುತ್ತವೆ. ದೇವ ಮತ್ತು ತಾನು ಎಂಬ ದ್ವೈತ ಭಾವ ಅಳಿಯುತ್ತದೆ. ಇಂತಹವನನ್ನು ನೋಡಿ ಮುಂದೆ ಇತರ ಭಕ್ತರು ತಾವೂ ಅದೇ ದಾರಿಯನ್ನು ಅನುಸರಿಸಲು ಅನುವು ಮಾಡಿಕೊಡುತ್ತದೆ ಎನ್ನುತ್ತಾರೆ ಹಡಪದ ಅಪ್ಪಣ್ಣನವರು. ಮುಂದಿನ ವಚನದಲ್ಲಿ ಅವರು ಯಾರನ್ನು ಜಂಗಮವೆನ್ನುತ್ತಾರೆ ನೋಡೋಣ.

Vachana 96: Jangama jamgamavendu - True Jangama

ಜಂಗಮ ಜಂಗಮವೆಂದು ನುಡಿದು, ಜಗದ ಹಂಗಿಗರಾಗಿ ಇರಲಾಗದು.

ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಜಂಗುಳಿಗಳ ಬಾಗಿಲ ಕಾಯಲಾಗದು.

ಜಂಗಮದ ಸುಳುಹು ಎಂತಿರಬೇಕೆಂದರೆ, ತನ್ನ ನಂಬಿದ ಸಜ್ಜನರ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಿಸಿ,

ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ, ತಾ ನಿರ್ಗಮಿನಿಯಾಗಿ ಸುಳಿಯಬಲ್ಲರೆ, ಜಂಗಮಲಿಂಗವದು

ಇಂತಲ್ಲದೆ ಕಂಡವರ ಕಾಡಿ ಬೇಡಿ, ಕೊಟ್ಟರೆ ಕೊಂಡಾಡಿ, ಕೊಡದಿದ್ದಡೆ ಜರಿದು,

ತಾಗು ನಿರೋಧಕ್ಕೆ ಗುರಿಯಾಗಿ ನೋವುತ್ತ, ಬೇವುತ್ತ ಧಾವತಿಗೊಂಬ ಗಾವಿಲರ

ಎಂತು ಜಂಗಮವೆಂಬೆ? ಬಸವಪ್ರಿಯ ಕೂಡಲಚೆನ್ನಬಸವಣ್ಣ.

TRANSLITERATION

**Jamgama jaMgamavemDu nuDidu, jagada haMgigaraagi iralaagadu.
Jagada karatana kaiyalli hiDidukoMDu jaMguLigaLa baagila kaayalaagadu.
JMgamada suLuhu eMtirabEkeMdare , tanna naMbida sajjanara sadbhktarallige limgavAgi gamisi.
taa kaMDa liMgaaMgavanu alliyE nikShEpisi taa nirgamaniyaagi suLiyaballare, jaMgama liMgavadu.
iMtallade kaMDavara kaaDi bEDi kottare koMDaaDi , koDadiddaDe jaridu,
taagu nirOdhakke guriyaagi nOvutta bEvutta dhaavatigoMba gaavilara eMtu jaMgamaveMbe? basava priya kUDalacennabasavaNNa.**

TRANSLATION (WORDS)

**Jamgama (devotee) jaMgama (devotee) vemDu nuDidu, (saying as) jagada (of the world) haMgigaraagi (under obligation) iralaagadu.(can't live)
Jagada (of the world) karatana (creator) kaiyalli (in own hands) hiDidukoMDu (holding) jaMguLigaLa (of crowd) baagila (at the doors) kaayalaagadu.(can't wait)
JMgamada (of the devotee) suLuhu (clue) eMtirabEkeMdare (should be like), tanna (one self) naMbida (those believed) sajjanara (gentlemen's) sadbhktarallige (true devotees) limgavAgi (as the God) gamisi (arrived)
taa (own self) kaMDa (seen) liMgaaMgavanu (unity of god and the body) alliyE (there alone) nikShEpisi (keeping as treasure) taa (one self) nirgamaniyaagi (without movement) suLiyaballareI (if can move), jaMgama liMgavadu.(that is God in devotee, that**

is living God)
iMtallade (other than that) kaMDavara (everybody) kaaDi bEDi (begging, pestering to give) kotare(if given) koMDaaDi (praising) , koDadiddaDe (if not given) jaridu (condemning),
taagu (hurt) nirOdhakke (of obstruction) guriyaagi (target) nOvutta (paining) bEvutta (agonizing) dhaavatigoMba (get troubled) gaavilara (fools) eMtu(how) jaMgamaveMbe?(to consider a devotee) basava priya kUDalacennabasavaNNa.(Basavapriya Koodalacennabasavanna)

TRANSLATION

Calling oneself a Jangama (wandering ascetic, realized soul), one cannot live under the obligation of the world.
Holding the creator of the world in own hands, cannot wait at the doors of the crowd.
What should be the clue of a Jangama? Appearing at the true devotees believing in him as the God, treasuring the unity of the self and the divine realized prior to, right there and moving away without being noticed, is the true nature of jangama.
How can I call the fool who pesters and begs everybody to give, praises the one who gives and condemns the one who does not give, and subjects himself to pain and agony, a jangama? Oh! basava priya kUDalacennabasavaNNa.

COMMENTARY

In this Vachana Sharana Hadapada Appanna outlines the characteristics of a true Jangama. Jangama is a wandering ascetic, a truly realized soul who has dedicated himself to initiate others into the 'unity of the body and the divine' he has realized himself. He does this without any expectations, he does not leave a trace of his presence, he neither takes credit for what he does, nor does he expect anything in return. We have commented on the importance of Guru in providing the knowledge necessary to follow the spiritual path and kindle the keen awareness to follow the path successfully, resulting ultimately in the unification of the human and the divine (linga-Anga Saamarasya). The Guru is a teacher, while the Jangama is a practitioner who has already achieved the unification. The sole goal of the jangama is to initiate and guide the devotees to reach the divine. He does that without any expectations. No wonder Sharanas advocated dedicating one's wealth to support the activities of the jangamas.

Let us receive the knowledge from the teacher and guidance from the practitioner, for success in all we seek!

KANNADA COMMENTARY

ಅಪ್ಪಣ್ಣನವರು ಇಲ್ಲಿ ಜಂಗಮನ ಲಕ್ಷಣಗಳನ್ನು ತಿಳಿಸುತ್ತಿದ್ದಾರೆ. ಅವರು ಹೇಳುತ್ತಾರೆ: ಜಂಗಮನೆಂದು ಹೇಳಿಕೊಂಡು ಜಗದ ಹಂಗಿಗನಾಗಿ ಇರುವುದು ಸರಿಯಲ್ಲ. ಸಾಮಾನ್ಯವಾಗಿ ಜಂಗಮರು ಎಂದು ಹೇಳಿಕೊಳ್ಳುವವರು ಜನರ ಭಿಕ್ಷೆಗಾಗಿ ಕಾಯುತ್ತಾರೆ. ಯಾವ ಕಾಯಕವೂ ಮಾಡದೆ, ಸ್ವಾವಲಂಬಿಯಾಗದೆ, ಕಾಷಾಯ ವಸ್ತ್ರಧಾರಿಯಾಗಿ,

ವಿಭೂತಿ ಮತ್ತು ರುದ್ರಾಕ್ಷಿಗಳನ್ನು ಧರಿಸಿ, ಲೋಕದ ಜನರ ದಯೆಯನ್ನೇ ಅವಲಂಬಿಸಿರುತ್ತಾರೆ. ಇಂತಹವರನ್ನು ಕುರಿತು, "ಜಗತ್ತಿನ ಸೃಷ್ಟಿಕರ್ತನನ್ನು ಕೈಯಲ್ಲಿಟ್ಟುಕೊಂಡು ಸಾಮಾನ್ಯ ಜನರ ಕರುಣೆಗಾಗಿ ಕಾಯುವುದು ಸರಿಯೆ" ಎಂದು ಕೇಳುತ್ತಾರೆ. "ಜಗದ ಕರ್ತನನ್ನು ಕೈಯಲ್ಲಿಟ್ಟುಕೊಂಡು" ಎಂದರೇನು? ಜಂಗಮರು ಲಿಂಗಪೂಜೆಮಾಡುವವರು. ಕೈಯಲ್ಲಿ ಇರುವ ಲಿಂಗವು ಪರಮಾತ್ಮನ ಕುರುಹು. " ಈ ಚರಾಚರಾತ್ಮಕವಾದ **(animate and inanimate)** ಜಗತ್ತು ಯಾವ ವಸ್ತುವಿನಲ್ಲಿ ಲೀನ **(merge)**ವಾಗುತ್ತದೆಯೋ ಮತ್ತು ಎಲ್ಲಿಂದ ಉತ್ಪತ್ತಿಯನ್ನು **(originate)** ಪಡೆಯುತ್ತದೆಯೋ ಆ ವಸ್ತುವೇ ಲಿಂಗ"ವೆಂದು ಬಲ್ಲವರು ಹೇಳುವರು. ಲಿಂಗವೆಂಬ ಆ ಕುರುಹನ್ನು ಹಿಡಿದು ಅರಿವನ್ನು ಪಡೆಯುವುದು. ಅದು ಯಾವುದರ ಕುರುಹು ಎಂಬುದನ್ನು ಧ್ಯಾನಿಸಿ ನೋಡುವುದು. ಎಂದರೆ ಈ ಚರಾಚರಾತ್ಮಕವಾದ ಜಗತ್ತೆಲ್ಲವೂ ಆ ಪರಮಾತ್ಮನ ಸ್ವರೂಪವೇ ಎಂಬ ಅರಿವನ್ನು ಹೊಂದುವುದು. ಕೇವಲ ಬೌದ್ಧಿಕವಾಗಿ ತಿಳಿದುಕೊಳ್ಳುವುದಲ್ಲ. ಅದನ್ನು ಸಾಕ್ಷಾತ್ಕರಿಸಿಕೊಂಡು ತಾನು ಅದರೊಂದಿಗೆ ಒಂದಾಗುವುದು. ಅಂತಹ ಮಹತ್ತನ್ನು ಸಾಧಿಸುವುದನ್ನು ಬಿಟ್ಟು ಜಗದ ಜಂಗುಳಿಯ ದಯೆಗಾಗಿ ಕಾಯುವುದು ಹೆಡ್ಡತನವೆನ್ನುತ್ತಾರೆ. ಅದು ನಿಜವಾದ ಜಂಗಮತ್ವವಲ್ಲ. ಜಂಗಮನ ಸುಳುಹು ಯಾವುದೆಂದರೆ ತನ್ನನ್ನು ನಂಬಿದ ಸಜ್ಜನರಲ್ಲಿ ತಾನು ಆ ಲಿಂಗವೆ ಆಗಿ ಬರುವುದು, ಅಂದರೆ ಯಾರ ಮನಸ್ಸು ಆ ಪರಮಾತ್ಮನ ಅರಿವನ್ನು ಪಡೆಯಲು ಸಿದ್ಧವಾಗಿದೆಯೋ ಅದನ್ನು ಗುರುತಿಸಿ ಅಲ್ಲಿಗೆ ತಾನೇ ಬಂದು ತಾನು ಕಂಡುಕೊಂಡ ಅರಿವನ್ನು ಅಲ್ಲಿ ನಿಕ್ಷೇಪಿಸುವುದು. ಎಂದರೆ ಅಂತಹ ಘನವಾದ ಅರಿವನ್ನು ಅವರಲ್ಲಿ ಸ್ಥಾಪಿಸುವುದು. ತಾನು ಬಂದು ಹೋದುದರ ಕುರುಹುವಿಲ್ಲದಂತಿರುವುದು. ಎಂದರೆ, ತಾನು ಬಂದು ಈ ಜ್ಞಾನವನ್ನು ಕೊಟ್ಟು ಹೋದೆ ಎಂಬ ಅಹಂಕಾರದ ಲವಲೇಶವೂ ಇಲ್ಲದಂತಿರುವುದು. ಅದು ನಿಜವಾದ ಜಂಗಮದ ಗುಣವೆನ್ನುತ್ತಾರೆ ಅಪ್ಪಣ್ಣನವರು. ಅದೆಲ್ಲವ ಬಿಟ್ಟು, ಕಂಡ ಕಂಡವರನ್ನು ಕಾಡಿ ಬೇಡುವುದು. ಕೊಟ್ಟವರನ್ನು ಕೊಂಡಾಡು(**praise**)ವುದು, ಕೊಡದೆ ಇದ್ದವರನ್ನು ಜರಿದು **(condemn)** ಮಾತಾಡುವುದು. ಮತ್ತು ಆ ಮೂಲಕ ಮನವು ಘಾಸಿಗೊಂಡು ನೋವು ಮತ್ತು ತಾಪಕ್ಕೆ ಗುರಿಯಾಗಿ ಬರಿದೆ ಆಯಾಸಗೊಳ್ಳುವವರನ್ನು ಹೇಗೆ ಜಂಗಮರೆನ್ನಲಾಗುತ್ತದೆ? ಎಂದು ಕೇಳುತ್ತಾರೆ ಅಪ್ಪಣ್ಣನವರು.

Vachana 97: anyara rajava somkade – All we have is His!

ಅನ್ಯರ ರಜವ ಸೋಂಕದೆ, ತನ್ನ ರಜವ ಬಾಧಿಸದೆ

ರವಿಯ ಬೆಳಸ ಬಳಸದೆ, ಲಿಂಗದ ಬೆಳಸ ತಂದು

ಜಂಗಮಕ್ಕೆ ಸವೆಸುತ್ತಿಪ್ಪ ಲಿಂಗ ಭಕ್ತ

ಆ ಭಕ್ತನಲ್ಲಿ ಗುಹೇಶ್ವರಲಿಂಗನಿಪ್ಪನು

TRANSLITERATION

Anyara rajava sOMkade, tanna rajava baadhisade

Raviya beLasa baLasade liMgada beLasa taMdu
jaMgamakke savesuttippa linga bhakta
aa bhaktanalli guEshvaraliMganippanu

TRANSLATION (WORDS)

Anyara (other's) rajava (wealth,riches) sOMkade, (without touching) tanna (one's own) rajava(the body) baadhisade (not troubling)

Raviya(of sun, of nature) beLasa (crop,produce) baLasade (not using)liMgada (of God) beLasa(produce) taMdu (bringing)
jaMgamakke (for jangama) savesuttippa(spending, using) linga bhakta (devotee)
aa (that) bhaktanalli (in devotee) guEshvaraliMganippanu (is God Guheshvara)

TRANSLATION

Without touching other's wealth, without troubling his own body,

without using the produce of the Sun (nature), bringing the produce of the God,
the devotee is offering it to the service of Jangama (wandering ascetic).
God Guheshvara Linga is in that devotee!

COMMENTARY

In this Vachana Allama Prabhu speaks on how we should treat the natural resources as precious gifts from God and stay away from greed, mindless usage of these resources and consumerism. Although spoken hundreds of years ago, these words are equally applicable to today's society. One should not be after the wealth of others (the wealth of fellow

beings and the natural resources provided by God, in general). One should not pollute the precious body given by the Lord with excessive indulgence and lusting for more. One should treat all natural resources as precious and refrain from mindless consumerism. One should treat them as the wealth of God and earn the right to use them through honest, selfless effort (kaayaka). One should utilize the minimum needed and offer the rest (daasoha) to the service of God through wandering ascetics. Such is the nature of the true devotee. Allama Prabhu says that Lord Guhesvara resides in that devotee!

The first verse of Ishavasya Upanishad:

Ishavaasyam idam sarvam yathkincha jagatyaam jagat

tEna thekyEna bhunjithA mA grudhah kasyasviddanam

roughly translates to:

Every aspect of this changing Universe is His!

Use it with utmost caution and do not greed for other's wealth!

One of the stanzas of the popular Aarathi 'Jaya Jagadeesha Hare" is "tanu, mana, dhana sab hi tera, sab kuch hi tera; tera tujko arpan, kya laage mera" meaning, body, mind and wealth are all Yours, everything I have is Yours, I offer whatever is Yours to You, I own nothing".

Let us treat all we have as His gift and use it only in His service!

KANNADA COMMENTARY

ತನ್ನ ಆಸೆಬುರುಕುತನ, ಬೇಕಾಬಿಟ್ಟಿ ಬಳಸಿ ಬೀಸಾಡುವ ಅಭ್ಯಾಸ, **(mindless usage of disposable things)** ಕೊಳ್ಳುಬಾಕತನ **(consumerism)** ಇತ್ಯಾದಿ ಗುಣಗಳಿಂದ, ಇಡೀ ಪ್ರಪಂಚವನ್ನೇ ನಾಶದ ಅಂಚಿಗೆ ಕೊಂಡೊಯ್ಯುತ್ತಿರುವ ಮಾನವನಿಗೆ ಪ್ರತಿಯೊಂದು ವಸ್ತುವಿನ ಬಗ್ಗೆ ಅತ್ಯಗತ್ಯವಾಗಿ ಇರಬೇಕಾದ ಭಾವವನ್ನು ತಿಳಿಸುವ ಶರಣರ ಅರಿವಿನ ಮಾತುಗಳನ್ನು ಹೇಳುತ್ತದೆ ಈ ವಚನ. ಆದ್ದರಿಂದ ನೂರಾರು ವರ್ಷಗಳ ಹಿಂದೆ ಹೇಳಿದ್ದರೂ ಎಲ್ಲಕಾಲಕ್ಕೂ ಹೊಂದುವಂತಹ ಮಾತು ಇದು.

"ಅನ್ಯರ ರಜವ ಸೋಂಕದೆ" ಎಂದರೆ ಇನ್ನೊಬ್ಬರ ಧನವನ್ನು, ಪರರ ಸ್ವತ್ತನ್ನು ಮುಟ್ಟದೆ ಎಂದರ್ಥ, "ತನ್ನ ರಜವ ಬಾಧಿಸದೆ" ಎಂದರೆ "ತನ್ನ ಆಸೆಗಳಿಂದ, ವ್ಯಸನಗಳಿಂದ ತನ್ನ ದೇಹ ಹಾಳಾಗದಂತೆ" ನೋಡಿಕೊಳ್ಳುವುದು ಎಂದರ್ಥ. ತಮ್ಮದಲ್ಲದ್ದನ್ನು (ಆಸೆಗೆ ಒಳಗಾಗಿ) ತೆಗೆದುಕೊಳ್ಳುವುದು ಮನಸ್ಸನ್ನು ಕೀಳಾಗಿಸುತ್ತದೆ ಮತ್ತು ದೇಹವನ್ನು ಕೆಡಿಸುತ್ತದೆ. ಅದು ವ್ಯಕ್ತಿಯನ್ನು ಮನಸ್ಸಿನ ದಾಸನನ್ನಾಗಿ ಮಾಡುತ್ತದೆ. ಈ ವಿಷಯದ ಬಗ್ಗೆ ಯೋಚಿಸುವಾಗ ನಾವೆಲ್ಲರೂ "ಅಬ್ಬಾ! ನಾನಂತು ಯಾರ ವಸ್ತುವನ್ನೂ ಮುಟ್ಟುವುದಿಲ್ಲ, ನನ್ನದನ್ನು ಮಾತ್ರ ನಾನು ಉಪಯೋಗಿಸುತ್ತಿದ್ದೇನೆ" ಎಂದುಕೊಂಡು ಸಮಾಧಾನ ಮಾಡಿಕೊಳ್ಳುತ್ತೇವೆ, ಕೆಲವರು ಬೀಗುತ್ತೇವೆ. ಆದರೆ ನಾವೆಲ್ಲರೂ ಸ್ವಲ್ಪ ಸೂಕ್ಷ್ಮವಾಗಿ ಗಮನಿಸ ಬೇಕು.

“ಅನ್ಯರ ರಜವ” ಎಂದರೆ ಕೇವಲ ಬೇರೆ “ವ್ಯಕ್ತಿ”ಗೆ ಸೇರಿದುದು ಎಂದರ್ಥವಲ್ಲ. ಅದು ಪ್ರಕೃತಿಯದೂ ಆಗಿರಬಹುದು, ಕಾಡಿನಲ್ಲಿರುವ ಒಂದು ಮರವೋ ಅಥವಾ ಒಂದು ಚಿಕ್ಕ ಸಸಿಯೋ ಆಗಿರಬಹುದು. ಜಗತ್ತಿನಲ್ಲಿಯ ಯಾವುದೇ ವಸ್ತುವಾಗಿರಬಹುದು. ಆದರೂ ಅದನ್ನು ಉಪಯೋಗಿಸುವಾಗ ಅದು ನಮಗೆ ನಿಜವಾಗಿಯೂ ಬೇಕಾಗಿದೆಯೇ? ಎಷ್ಟು ಬೇಕು? ಎಂದೆಲ್ಲ ಯೋಚಿಸಿ ಬಳಸಬೇಕು. ಯಾವ ವಸ್ತುವೂ ಯಾರದ್ದೂ ಅಲ್ಲ. ಆದ್ದರಿಂದ ಪ್ರತಿಯೊಬ್ಬರೂ ತಮಗೆ ಅವಶ್ಯಕವಾದದ್ದನ್ನು ಮಾತ್ರ ತೆಗೆದುಕೊಳ್ಳಬೇಕು. ಅದು “ಲಿಂಗದ ಬೆಳಸು” ಎಂದರೆ ಎಲ್ಲವೂ ದೇವರದ್ದೇ. ಅದನ್ನು ಕಾಯಕದಿಂದ ಸಂಪಾದಿಸಿ ತನಗೆ ಅವಶ್ಯಕವಾದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದದ್ದನ್ನು ಜಂಗಮ ಸೇವೆಗಾಗಿ ಬಳಸಬೇಕು. ಯಾವುದೂ ನಮ್ಮ ಸ್ವತ್ತಲ್ಲ, ಯಾವುದರ ಮೇಲೆಯೂ ನಮ್ಮ ಅಧಿಕಾರವಿಲ್ಲ. ಎಲ್ಲವನ್ನೂ ಆ ದೇವರ ಕೃಪೆ ಎಂದು ಅರಿತು ಅದನ್ನು ಮಿತವಾಗಿ ಪ್ರಸಾದದ ಭಾವನೆಯಿಂದ ಬಳಸಬೇಕು. ಅಂತಹವನು ಮಾತ್ರ ನಿಜವಾದ ಲಿಂಗ ಭಕ್ತನು ಎಂದು ಹೇಳುತ್ತಾರೆ ಅಲ್ಲಮಪ್ರಭುಗಳು.

ಪ್ರಕೃತಿಯ ಸಂಪನ್ಮೂಲಗಳನ್ನು ಯಾವ ವಿವೇಚನೆಯೂ ಇಲ್ಲದೆ ಬೇಕಾಬಿಟ್ಟಿಯಾಗಿ ಬಳಸುತ್ತಿರುವ ಮಾನವನಿಗೆ ಇದು ಕಿವಿಮಾತಾಗಬೇಕಲ್ಲವೆ?

ಈಶಾವಾಸ್ಯೋಪನಿಷತ್ತಿನ ಮೊದಲನೆ ಮಂತ್ರ ಇದನ್ನೇ ಹೇಳುತ್ತದೆ:

ಈಶಾವಾಸ್ಯಂ ಇದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್|

ತೇನ ತೆಕ್ತ್ಯೇನ ಭುಂಜಿಥಾ ಮಾ ಗೃಧಃ ಕಸ್ಯಸ್ವಿದ್ಧನಂ||

ಈಶಾವಾಸ್ಯಂ (ಈಶ್ವರನಿಂದ ವ್ಯಾಪ್ತವಾಗಿದೆ) ಇದಂ ಸರ್ವಂ (ಇದೆಲ್ಲವು) ಯತ್ಕಿಂಚ (ಯಾವುದನ್ನೂ ಬಿಡದೆ)ಜಗತ್ಯಾಂ ಜಗತ್ (ಬದಲಾಗುತ್ತಿರುವ ಸಮಸ್ತ ಜಗತ್ತಿನಲ್ಲಿ)|

ತೇನ ತೆಕ್ತ್ಯೇನ (ಅದನ್ನು ತ್ಯಾಗ ಮಾಡಿ, ತ್ಯಾಗದಿಂದ) ಭುಂಜಿಥಾ (ಭೋಗಿಸು) ಮಾ ಗೃಧಃ (ಆಶಿಸದಿರು) ಕಸ್ಯಸ್ವಿದ್ಧನಂ (ಯಾರೊಬ್ಬರ ವಸ್ತುವನ್ನೂ)||

ಈಶನೆಂದರೆ ಒಡೆಯ. ಈ ಬದಲಾಗುತ್ತಿರುವ ಜಗತ್ತು ಒಳಗೂ ಹೊರಗೂ ಅವನಿಂದ ವ್ಯಾಪ್ತವಾಗಿದೆ. (ಎಲ್ಲವೂ ಲಿಂಗದ ಬೆಳಸು) ಇದನ್ನು ಅರಿತು, ಎಲ್ಲವೂ ಈಶ್ವರನ ಪ್ರಸಾದವೆಂದು ಜಗತ್ತಿನ ಸುಖವನ್ನು ಅನುಭವಿಸಬೇಕು. ತ್ಯಾಗದಲ್ಲಿ ಸುಖವಿದೆ. ಪರಿಗ್ರಹದಲ್ಲಿ ಸುಖವಿಲ್ಲವೆಂಬುದನ್ನು ಅರಿಯಬೇಕು. “ನಿನ್ನದೆಂಬುದು ಯಾವುದೂ ಇಲ್ಲ. ಇತರರ ಸ್ವತ್ತಿಗೆ ಆಸೆಪಡಬೇಡ” ವೆಂಬುದು ಈ ಮಂತ್ರದ ಅರ್ಥ.

ಇಲ್ಲಿ ಎರಡನೆ ವಾಕ್ಯದ ಅರ್ಥ ಈ ವಿವರಣೆಯಿಂದ ಸ್ಪಷ್ಟವಾಗಬಹುದು: “ತ್ಯಾಗದಲ್ಲಿ ಸುಖ” ಎಂದರೆ, ನಮಲ್ಲಿ ಇರುವ ಅಥವಾ ನಮಗೆ ಸಿಕ್ಕ ವಸ್ತುವನ್ನು ನಾವು ಇತರರೊಂದಿಗೆ ಹಂಚಿಕೊಂಡಾಗ ನಮಗೆ ಆನಂದವಾಗುತ್ತದೆ. ನಮ್ಮಿಂದ ಪಡೆದವನ ಸಂತೋಷ ನಮ್ಮ ಆನಂದವನ್ನು ಹೆಚ್ಚಿಸುತ್ತದೆ. ಮತ್ತು ನಮ್ಮಲ್ಲಿ ಏನೂ ಉಳಿಯದೆ ಇರುವುದರಿಂದ ಯಾವ ಚಿಂತೆಯೂ ಇರುವುದಿಲ್ಲ. ಇದನ್ನೇ ತ್ಯಾಗದಲ್ಲಿ ಸುಖವಿದೆ ಎನ್ನುವುದು.

ಆದರೆ ನಾವು ವಸ್ತುಗಳನ್ನು ನಮ್ಮಲ್ಲಿ ಇಟ್ಟುಕೊಂಡರೆ, ಅವುಗಳ ರಕ್ಷಣೆಯ ಚಿಂತೆ, ಅವುಗಳನ್ನು ಹೆಚ್ಚಿಸಿಕೊಳ್ಳುವ, ತೋರಿಸಿಕೊಳ್ಳುವ ಆಸೆ, ಅವುಗಳನ್ನು ಯಾವಾಗ ಅನುಭವಿಸಲಿ ಎಂಬುವ ಯೋಚನೆ, ಅವುಗಳ ಬಗ್ಗೆ ಮೋಹ ಮತ್ತು ಅದರಿಂದ ಆಹಂಕಾರ ಇತ್ಯಾದಿಗಳು ಕಾಡುತ್ತ ಅವುಗಳಿಂದ ಸಿಗಬೇಕಾದ ಆನಂದ ಮಾಯವಾಗುತ್ತದೆ.

Vachana 98: Ura Madhyada Kanna Kaadinolage - Sense Organs

ಊರಮಧ್ಯದ ಕಣ್ಣ ಕಾಡಿನೊಳಗೆ ಬಿದ್ದೈದಾವೆ ಐದು ಹೆಣನು,
ಬಂದು ಬಂದು ಅಳುವರು, ಬಳಗ ಘನವಾದ ಕಾರಣ!
ಹೆಣನೂ ಬೇಯದು ಕಾಡೂ ನಂದದು;
ಮಾಡು ಉರಿಯಿತ್ತು ಗುಹೇಶ್ವರಾ

TRANSLITERATION

Ura madhyada kaNNa kaaDnoLage biddaidaave aidu heNanu

baMdu baMdu aLuvaru baLaga ghanavaada kaaraNa!

heNanU bEyadu, kaaDU naMdadu;

maaDu uriyittu guhEshvaraa

TRANSLATION (WORDS)

Ura (of a town, of the world) madhyada (at the centre) kaNNa (of the eye) kaaDinoLage(in the forest) biddaidaave(are lying) aidu (five) heNanu (corpses)

baMdu baMdu (coming again and again) aLuvaru(weep) baLaga (relatives) ghanavaada (are in big number,innumerable) kaaraNa!(because)
heNanU(the corpse too) bEyadu,(doesn't get burnt) kaaDU (the forest too)naMdadu;(doesn't get extinguished)
maaDu(a place to keep some thing, the body) uriyittu(got burnt) guhEshvaraa.(Guheshvara)

TRANSLATION

In the forest seen at the center of the town are lying five corpses,

Innumerable relatives come over and over again and weep!
Neither the corpses get burnt, nor the forest gets extinguished (vanishes);
The body got burnt, Oh! Guhesvara!

COMMENTARY

This is another cryptic (mystifying, poking, awakening) Vachana by Allama Prabhu. The town mentioned in the first line is the Universe. In this Universe is the world seen by us

referred to as the forest. The five corpses lying in the forest are the five sense organs. Innumerable relatives come again and again and weep for these corpses, meaning that innumerable people aspire for these sense organs over and over again. But, the sense organs do not get burnt, meaning that the thirst for what these organs offer never ends. The forest does not vanish either, meaning that there is no desire in any one to move away from this material world's influence, even though the body burns (or vanishes). This aspiration continues life after life!

It is interesting that the world we are in is tagged as 'forest'. Indeed, we fall prey for our senses and weave a complex web and get tangled in it. We are always lost in this forest. The sense organs are corpses – they are guided by the past experiences, not the present or the future. We remember the taste of a sweet dish and crave for the same. We get frustrated if we did not get to taste it again. Similar is the story of other senses. We are always in the mode of acquiring more to satisfy and continue the sensual experiences of the past. But, we fail to satisfy them. We continue to be frustrated and continue to make the material world more complex. The world never dies, although the body vanishes eventually.

Let us not deprive of our sense organs, but not become their slaves!

KANNADA COMMENTARY

ಇದು ಅಲ್ಲಮಪ್ರಭುಗಳ ಇನ್ನೊಂದು ಬೆಡಗಿನ ವಚನ. ಊರು ಎಂದರೆ ವಿಶ್ವ. ಈ ವಿಶ್ವದಲ್ಲಿ ನಮ್ಮ ಕಣ್ಣಿಗೆ ಕಂಡು ಬರುವ ಪ್ರಪಂಚವಿದೆ. ಇದೇ ಕಣ್ಣ ಕಾಡು. ಕಣ್ಣಿಗೆ ಕಾಣುವ ಪ್ರಪಂಚವನ್ನು ಅಲ್ಲಮರು ಕಾಡು ಎನ್ನುತ್ತಾರೆ. ಏಕೆಂದರೆ ಜೀವರು ಅದರಲ್ಲಿ ಮುಳುಗಿ ಹೋಗಿ, ದಾರಿ ತಪ್ಪುತ್ತಾರೆ. ಈ ಕಾಡಿನಲ್ಲಿ ಐದು ಹೆಣಗಳು ಬಿದ್ದಿವೆ ಎನ್ನುತ್ತಾರೆ ಅವರು. ಐದು ಹೆಣಗಳು ಎಂದರೆ ಐದು ಜ್ಞಾನೇಂದ್ರಿಯಗಳು; ಶಬ್ದ, ಸ್ಪರ್ಶ,ರಸ, ರೂಪ, ಗಂಧ. ಇವುಗಳಿಗಾಗಿ ಅಸಂಖ್ಯ ಜೀವರು ಬಂದು ಅಳುವರು ಎನ್ನುತ್ತಾರೆ. ಇಲ್ಲಿ ಇಂದ್ರಿಯಗಳನ್ನು ಹೆಣವೆನ್ನುತ್ತಿರುವುದು ಕುತೂಹಲದ ವಿಷಯ. ಎಲ್ಲರೂ ಇಂದ್ರಿಯ ಸುಖವನ್ನು ಬಯಸುತ್ತಾರೆ. ಈ ಸುಖದ ಆಸೆಗಾಗಿ, ವಿಷಯ ಭೋಗಕ್ಕಾಗಿ ಜೀವ ಮತ್ತೆ ಮತ್ತೆ ಬರುತ್ತದೆ ಇದನ್ನೇ "ಬಂದು ಬಂದು ಅಳುವರು" ಎಂದು ಸೂಚಿಸುತ್ತಾರೆ. ಆದರೆ ಈ ಸುಖವೇನು? ಉದಾಹರಣೆಗೆ, ವ್ಯಕ್ತಿ ಸ್ಪರ್ಶ ಸುಖವನ್ನು ಬಯಸುತ್ತಾನೆ. ಹಿಂದೊಮ್ಮೆ ತನಗೆ ಸ್ಪರ್ಶದಿಂದಾದ ಸುಖದ ನೆನಪಿನಿಂದ ಮತ್ತೆ ಅದೇ ಸುಖವನ್ನು ಪಡೆಯುವುದಕ್ಕೆ ಹವಣಿಸತ್ತಾನೆ. ಆ ಸುಖ ಸಿಕ್ಕಾಗ ಅದನ್ನು ತಾನು ಹಿಂದೆ ಪಡೆದ ಸುಖದೊಂದಿಗೆ ಹೋಲಿಸಿ ಇನ್ನೂ ಹೆಚ್ಚಿನ ಸುಖಕ್ಕಾಗಿ ಆಶಿಸುತ್ತಾನೆ. ಅದಕ್ಕಾಗಿ ಮತ್ತೆ ಮತ್ತೆ ಪ್ರಯತ್ನಿಸುತ್ತಾನೆ. ಒಟ್ಟಿನಲ್ಲಿ ಅವನು ಪಡೆಯ ಬೇಕೆನ್ನುವ , ಅಥವಾ ಬೇಡವನ್ನುವ ಆ ಪ್ರತಿಯೊಂದೂ, ಹಿಂದೆ ತಾನು ಅನುಭವಿಸಿದುದನ್ನೇ ಅವಲಂಬಿಸಿರುತ್ತದೆ. ಅದರಲ್ಲಿ ಹೊಸತನವೇನೂ ಇಲ್ಲ. ಅಂದರೆ ಅದರಲ್ಲಿ ವರ್ತಮಾನ **(present)**ವೇನೂ ಇಲ್ಲ. ಇರುವುದೆಲ್ಲ ಭೂತ**(past)**ವನ್ನೇ ಅವಲಂಬಿಸಿದೆ. ಅದಕ್ಕಾಗಿ ಇಂದ್ರಿಯಗಳನ್ನು ಹೆಣವೆನ್ನುತ್ತಾರೆ ಅಲ್ಲಮರು. ಆದರೆ ಈ ಹೆಣಗಳಿಗಾಗಿ ಎಲ್ಲ ಜೀವರು ಮತ್ತೆ ಮತ್ತೆ ಬಂದು ಹೆಣಗುತ್ತಾರೆ. ಅವರ ಇಡೀ ಜೀವನವೇ ಆ ಹೆಣಗಳಿಗಾಗಿ ಮುಡಿಪಾಗಿರುತ್ತದೆ. ಅವರಿಗೆ ಎಂದಿಗೂ ತಾವು ಬಯಸಿದ ಸುಖ ಸಿಗುವುದಿಲ್ಲ. ಏಕೆಂದರೆ ಅವರು ಬಯಸಿದ ಸುಖ ಆ ವಸ್ತುವಿನಲ್ಲಿ ಇರುವದಿಲ್ಲ. ಅದು ಕೇವಲ ಅವರ ಭಾವನೆಯಲ್ಲಿ ಮಾತ್ರ ಇರುವುದು. ಹಾಗಾಗಿ ಆ ಹೆಣಗಳು ಎಂದಿಗೂ ಬೇಯುವುದಿಲ್ಲ. ಎಂದರೆ ಇಂದ್ರಿಯಗಳು ಆ ವಿಷಚಕ್ರದಿಂದ ಹೊರಬರುವುದಿಲ್ಲ. ಅಂದರೆ ವಿಷಯಗಳ ಬಗ್ಗೆ ಆತನ ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಇನ್ನೂ ಹೆಚ್ಚು ಹೆಚ್ಚು ಸಂಕೀರ್ಣ **(complex)**ವಾಗುತ್ತ ಹೋಗುತ್ತವೆ. ಆದ್ದರಿಂದ ಹೆಣವೂ ಬೇಯುವುದಿಲ್ಲ ಎನ್ನುತ್ತಾರೆ. ಕಣ್ಣಿಗೆ ಕಾಣುವ ದೃಶ್ಯ

ಪ್ರಪಂಚವೂ ಇಲ್ಲದಂತಾಗುವುದಿಲ್ಲ.ಅಂದರೆ ಆ ಮಾಯಾ ಪ್ರಪಂಚ ಅಳಿಯುವುದಿಲ್ಲ. ಅದನ್ನೇ "ಕಾಡೂ ನಂದದು" ಎನ್ನುತ್ತಾರೆ. "ಮಾಡು ಉರಿಯಿತ್ತು" ಎಂದರೆ ಜೀವವಿರುವ ದೇಹಗಳು. ದೇಹಗಳು ಮಾತ್ರ ಸುಟ್ಟು ಹೋಗುತ್ತವೆ ಅಥವಾ ನಾಶಗೊಳ್ಳುತ್ತವೆ. ಆದರೆ ಇಂದ್ರಿಯಗಳ ಹೋರಾಟ, ಹೆಣಗಾಟ ಮಾತ್ರ ನಿರಂತರವಾಗಿ ನಡೆಯುತ್ತಲೇ ಇರುತ್ತದೆ ಎನ್ನುತ್ತಾರೆ ಅಲ್ಲಮಪ್ರಭುಗಳು.

Vachana 99: Ele Ayyaa, Nimma Baravinge – Yearning for Your Arrival

ಎಲೆ ಅಯ್ಯಾ, ನಿಮ್ಮ ಬರವಿಂಗೆ ಕಣ್ಬೇಟಗೊಂಡೆನು,
ಎಲೆ ಅಯ್ಯಾ, ನಿಮ್ಮ ಬರವಿಂಗೆ ಎನ್ನ ಮನವೆಂಬ ಮಂಚವ ಪಚ್ಚಪಡಿಸಿದೆ,
ಎಲೆ ಅಯ್ಯಾ, ನಿಮ್ಮ ಬರವಿಂಗೆ ಚಿತ್ತ ಸುಯಿಧಾನಿಯಾಗಿದ್ದೇನೆ,
ಎಲೆ ಅಯ್ಯಾ, ನಿಮ್ಮ ಬರವಿಂಗೆ ಜ್ಞಾನದ ಸೆರಗ ಹಾಸಿ ಆಸೆಬಡುತ್ತಿದ್ದೇನೆ,
ಎಲೆ ಅಯ್ಯಾ, ನೀ ಬಂದು ವಿರತವಿಲ್ಲದೆ(ಕೊನೆಯಿಲ್ಲದೆ) ಕೂಡಿ ನಿನ್ನವಳೆಂದೆನಿಸಾ,
ಕಪಿಲಸಿದ್ಧಮಲ್ಲಿಕಾರ್ಜುನಾ.

TRANSLITERATION

ele ayyaa nimma baraviMge kaNbETagoMDenu,
eleayyaa, nimma baraviMge enna manaveMba maMcava paccapaDiside,
ele ayyaa nimma baraviMge   citta suyidhaaniyaagiddEne,
ele ayyaa nimma baraviMge j~jaanada seraga haasi aasebaDuttiddEne,
ele ayyaa nI baMdu viratavillade kUDi ninnavaLeMdenisaa,
kapilasiddhamallikaarjunaa.

TRANSLATION (WORDS)

ele ayyaa (sir) nimma(for your) baraviMge (arrival) kaNbETagoMDenu,(I am yearning)
ele ayyaa (sir) nimma(for your) baraviMge (arrival) enna (my) manaveMba (called mind) maMcava (cot) paccapaDiside,(I have decorated)
ele ayyaa (sir) nimma(for your) baraviMge (arrival) citta (my mind) suyidhaaniyaagiddEne,(kept wakefull)
ele ayyaa (sir) nimma(for your) baraviMge (arrival) j~jaanada (of knowledge) seraga (veil) haasi (by spreading) aasebaDuttiddEne,(I have been longing)
ele ayyaa(sir) nI (you) baMdu (come and) viratavillade (endlessly) kUDi (uniting*with me*)ninnavaLeMdenisaa,(make me yours, take me as your wife)
kapilasiddhamallikaarjunaa.(Kapilasiddhamallikaarjuna)

TRANSLATION

Dear Sir, I am yearning for your arrival
Dear Sir, I have decorated the cot of mind for your arrival
Dear Sir, I have kept my mind wakeful for your arrival
Dear Sir, having spread the veil of knowledge, I have been longing for your arrival
Dear Sir, please come, unite with me and make me yours,
Kapilasiddhamallikaarjunaa!

COMMENTARY

In this Vachana, Sharana Siddarama expresses his intense desire to be one with the divine and describes how much he is yearning for His arrival. He has prepared his mind, calling it a cot(bed) he has decorated for the arrival of the divine. He has kept his mind wakeful. He has acquired all the knowledge he can and has spread the veil of knowledge for the divine to step in. Siddarama asks the Lord to come and unite with him and make him His.

We have said that the ultimate goal of the spiritual path is to unite with God. We have called it Linga (God) – Anga (Man) saamarasya (uniting). Sharanas have equated the union with God to that of the union of husband and wife (Sharana sati – Sharana (devotee) is wife; Linga pati – God is Husband), as two bodies and one soul, forever. The mantra 'Om Namah Shivaaya' is widely interpreted as 'I salute Lord Shiva'. Its subtle interpretation is 'Oh Lord Shiva, make me yours'.

How can we achieve the union with God in this material world we live in? It is by acquiring the knowledge necessary to see the God within us and in our fellow beings and utilizing this knowledge to develop an intense desire to move the individual soul (Jeevatma) to become part of the collective soul (Paramatma) through kaayaka (selfless service) and daasoha (sharing), and bringing the heaven to Earth.

As Siddarama expresses in this Vachana, he has acquired all the necessary knowledge for the spiritual path, he has prepared his mind and has kept it wakeful with an intense desire to welcome the Lord into his life. The next Vachana from Allama Prabhu will address if such an intense desire is the path for union with God?

Let us not stray from the spiritual path!

KANNADA COMMENTARY

ಇದು ಸಿದ್ಧರಾಮರ ವಚನ. ಇಲ್ಲಿ ಅವರು ತಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಬರವಿಗಾಗಿ ತಾವುಹಾರೈಸುತ್ತಿರುವ ಪರಿಯ
ನ್ನು ತಿಳಿಸುತ್ತಾರೆ. ಅವರ ಕಣ್ಣುಗಳು ಆತನ ಬರವನ್ನು ಬಯಸುತ್ತಿವೆ. ಅವರು ಆತನಬರವಿಗಾಗಿ ತಮ್ಮ ಮನವೆಂಬ ಮಂ
ಚವನ್ನು ಅಲಂಕರಿಸಿ ಸಿದ್ಧಪಡಿಸಿ ಕಾಯುತ್ತಿದ್ದಾರೆ. ಅಂದರೆ ಆತನಬರವಿಗಾಗಿಯೇ ಮನವನ್ನು ಶುದ್ಧಗೊಳಿಸಿ ಅಣಿಗೊಳಿಸಿ
ದ್ದಾರೆ. ಆತನನ್ನು ಕೂಡುವ ಅಪೇಕ್ಷೆ ಆತುರ ಅವರಲ್ಲಿಕಾಣುತ್ತಿದೆ. ಆತನ ಬರವನ್ನು ಎಚ್ಚರಿಕೆಯಿಂದ ಕಾಯುತ್ತಿದ್ದಾರೆ. ಆತ
ನು ಬಂದಾಗ ತನ್ನ ಜ್ಞಾನವನ್ನೆಲ್ಲಅರ್ಪಿಸಲು ಸಿದ್ಧರಾಗಿದ್ದಾರೆ. ಅಂದರೆ ಅವರು ಜ್ಞಾನಾರ್ಜನೆ ಮಾಡುತ್ತಿರುವದೇ ಆತನಿಗಾ
ಗಿ. ಇಷ್ಟೆಲ್ಲ ಮಾಡಿದಮೇಲೆ "ನೀನು ಬಂದು ನನ್ನನ್ನು ಎಂದೂ ಅಗಲದಂತೆ ಕೂಡಿ ನನ್ನನ್ನು ನಿನ್ನವಳೆಂದೆನಿಸು" ಎಂದು
ಕೇಳಿಕೊಳ್ಳುತ್ತಾರೆ.

"ಲಿಂಗ ಪತಿ ಶರಣ ಸತಿ" ಎಂಬ ಭಾವ ಇಲ್ಲಿ ತೋರುತ್ತಿದೆ. ಸತಿ ಪತಿಯರುಕೊನೆಯವರೆಗು ಒಂದಾಗಿರುವಂತೆ ತಾನು
ಮತ್ತು ಕಪಿಲಸಿದ್ಧಮಲ್ಲಿಕಾರ್ಜುನನು ಒಂದಾಗಿರಬೇಕು. ಯಾವಕಾರಣಕ್ಕೂ ಆತ ತನ್ನಿಂದಗಲಬಾರದು ಎನ್ನುವ ಆಸೆ ಇಲ್ಲಿ
ವ್ಯಕ್ತವಾಗುತ್ತದೆ. ಇಲ್ಲಿ ಆತನನ್ನು ಕಾಣುವಉತ್ಕಟವಾದ ಹಂಬಲ ಕಂಡು ಬರುತ್ತದೆ. ನಾನು ನೀನು ಎಂಬ ಭಿನ್ನ ಭಾವ
ತೋರುತ್ತದೆ. ಆತನ ಬರವಿಗಾಗಿಪರಿಪರಿಯಾಗಿ ಬೇಡಿಕೊಳ್ಳುವ, ನಾನಾ ರೀತಿಯಾಗಿ ಅಣಿಯಾಗುವ ರೀತಿ ಕಂಡುಬರು

ತ್ತದೆ. ಇಲ್ಲಿ ಭಕ್ತನಪ್ರತಿಯೊಂದು ಕ್ರಿಯೆಯಲ್ಲೂ ತಾನು ಆತನನ್ನು ಕೂಡ ಬೇಕು ಎಂಬ ಆಸೆ ತೋರಿಬರುತ್ತಿದೆ. ಆತನನ್ನು ಕೂಡಲೆಂದೇ ಭಕ್ತ ಏನೇನೋ ಮಾಡುತ್ತಾನೆ.   ಆದರೆ ಇಂತಹ ಬಯಕೆ ಆತುರತೆಯಿಂದ ಆತನನ್ನುಪಡೆಯಲಾಗುತ್ತದೆಯೇ ಎಂಬುದನ್ನು ಮುಂದಿನ ವಚನದಲ್ಲಿ ನೋಡೋಣ.

Vachana 100: Tannanariyenembudu – Knowledge and Ignorance

ತನ್ನನರಿಯೆನೆಂಬುದು ಅಜ್ಞಾನ ನೋಡಾ,
ಅರಿಯದಜ್ಞಾನವ ಅಗಳೆದು ಜ್ಞಾನವ ಕಾಣೆನೆಂಬುದು ವಿಪರೀತ ಭಾವ ನೋಡಾ!
ಎಲ್ಲವ ತೋರುವ ಘನವನು ಎಲ್ಲಿಯೂ ಕಾಣಬಾರದು ನೋಡಾ,
ಕಾಣಬಾರದ ನಿಜವ ತೋರಬಾರದು, ತೋರಬಾರದ ನಿಜವ ತಿಳಿಯಬಾರದು
ಗುಹೇಶ್ವರ ಲಿಂಗದಲ್ಲಿ ಬಯಕೆಯುಳ್ಳನ್ನಕ್ಕ ತವಕ ಎಡೆಗೊಂಡಿಪ್ಪ ಕಾರಣ
ತಿಳುಹಲಿಲ್ಲವೆಂಬುದು ನಿನ್ನ ನೀ ತಿಳಿದು ನೋಡಾ ಸಿದ್ಧರಾಮಯ್ಯಾ

TRANSLITERATION

tannanariyeneMbudu aj~jaana nODaa,

ariyada j~jaanava agaLedu j~jaanava kaaNeneMbudu vipareeta bhaava nODaa!

Ellava tOruva ghanavanu elliyU kaaNabaaradu nODaa,

kaaNabaarada nijava tOrabaaradu, tOrabaarada nijava tiLiyabaaradu

guhEshvara liMgadalli bayakeyuLLannakka tavaka eDegoMDaDippa kaaraNa

tiLUhalillaveMbudu ninna tiLidu nODaa siddharaamayyaa

TRANSLATION (WORDS)

tannanu (myself) ariyenu (don't know) eMbudu (that which says) aj~jaana (is ignorance) nODaa, (you see)

ariyada (not knowing) j~jaanava (the knowledge of)agaLedu (denying)

j~jaanava (the knowledge) kaaNeneMbudu (***saying*** **cannot see) vipareeta bhaava (is contradictory) nODaa! (you see)**

Ellava (all, entire ***world*****) tOruva (*****which*** **shows) ghanavanu (that profound)elliyU (any where) kaaNabaaradu (cannot be seen)nODaa,(you see)**

kaaNabaarada (which cannot be seen) nijava (the true self) tOrabaaradu (cannot be shown)

tOrabaarada (which cannot be shown) nijava (the true self) tiLiyabaaradu (cannot be understood)

guhEshvara (Guheshvara) liMgadalli (the truth)bayakeyuLLannakka (if you yearn for)

tavaka (eagerness, anxiousness)eDegoMDaDippa (the existence of) kaaraNa (because of)

tiLUhalillaveMbudu (that nobody revealed *to me*) ninna (your self) tiLidu(by understanding) nODaa (you see) siddharaamayyaa (Siddharaamayya)

TRANSLATION

Saying that I don't know myself is ignorance, you see!

Denying the knowledge not known and saying that the knowledge cannot be seen is contradictory, you see!

That profound which shows the entire world, cannot be seen anywhere, you see!

The true self that cannot be seen, cannot be shown, you see!

The true self that cannot be shown cannot be understood.

Realize your own self and understand that having an intense desire to realize the divine with anxiety and eagerness is why you did not realize Him, Oh! Siddaramayya!

COMMENTARY

In the previous posting, Sharana Siddarama described how he is yearning with an intense desire and longing for the union with God. In this Vachana, Allama Prabhu clarifies that the prerequisite for the union with God is realization of the Self. Without such realization, no amount of desire and yearning would take one to the Lord. Allama Prabhu is providing guidance to distinguish between true knowledge and ignorance. He says, not understanding oneself is ignorance. Are we all in this state? Don't we know who we are? We identify ourselves as brother, sister, teacher, friend and foe of someone. We identify ourselves with the positions we hold and our status in society. These are all descriptions relative to others around us. We really don't know the answer for 'who am I?' This is ignorance. Indeed, we do not even think that we are ignorant! We deny being ignorant. Without erasing that ignorance, we would not know who we are!

We cannot see and feel the divine principle that is the creator of this Universe, although He is omnipresent, omnipotent and omniscient. He cannot be sensed through any of our sense organs; neither he can be visualized by any stretch of our mind and thinking capabilities. Our language and thinking put limit on what we can visualize to the objects and people we know and have seen. As such, if one is anxious to realize the divine, he tends to form an image of the divine and what he realizes is that image and not the true formless God who is beyond our sense perceptions. Allama Prabhu thus says that the God cannot be realized through intense desire and yearning. One has to cultivate the state of a subtle mind, with no desires and expectations. This will eventually lead to the understanding of the Self and hence the union with the divine.

Let us gain the true knowledge of the Self!

KANNADA COMMENTARY

ಜ್ಞಾನ ಅಜ್ಞಾನವೆಂದರೇನು ಎಂದು ಆಳವಾಗಿ ಅಲೋಚಿಸುವವರಿಗೆ ಕೈಪಿಡಿಯಂತಿದೆ ಅಲ್ಲಮಪ್ರಭುಗಳ ಈ ವಚನ.

ಅಜ್ಞಾನವೆಂದರೇನು? ತನ್ನನ್ನು ತಾನು ಅರಿಯದೆ ಇರುವುದೇ ಅಜ್ಞಾನ. ನಾವೆಲ್ಲ ಇರುವುದೇ ಈ ಸ್ಥಿತಿಯಲ್ಲಿ. "ನಾನು ಯಾರು" ಎಂದು ನಮಗೆ ತಿಳಿದಿಲ್ಲ. ನಾವು ನಮ್ಮನ್ನು, ಅಪ್ಪ, ಅಮ್ಮ, ಮಗ , ಮಗಳು, ಅಳಿಯ, ಸೊಸೆ, ಅಣ್ಣ, ತಮ್ಮ, ತಂಗಿ,ಅಕ್ಕ, ಗೆಳೆಯ, ಗೆಳತಿ ಇತ್ಯಾದಿ ಎಂದೋ , ಇಲ್ಲವೆ ನಾವು ಹೊಂದಿದ ಪದವಿಗಳಿಂದಲೋ, ನಮ್ಮ ಹೆಸರು ಇಲ್ಲವೆ ಸ್ವಭಾವದಿಂದಲೋ,ನಮ್ಮ ಜನಾಂಗದ ಹೆಸರಿನಿಂದಲೋ ಅಥವಾ ಇನ್ನಾವುದೋ ರೀತಿಯಿಂದಲೋ ಗುರುತಿಸಿಕೊಳ್ಳುತ್ತೇವೆ. ಇದನ್ನೇ "ನಾನು" ಎಂದುಕೊಳ್ಳುತ್ತೇವೆ. ಆದರೆ ಈ ಎಲ್ಲವೂ ಸಂಬಂಧವನ್ನು ಅವಲಂಬಿಸಿವೆ (relative). ನಿಜವಾದ "ನಾನು" ಈ ಆವುದೂ ಅಲ್ಲ. ಹೀಗಾಗಿ ಇದೆಲ್ಲವೂ ಅಜ್ಞಾನವೇ. ಇಷ್ಟೇ ಅಲ್ಲ "ಇದು ಅಜ್ಞಾನ"ವೆಂದು ನಾವು ಗುರುತಿಸುವುದೂ ಇಲ್ಲ. ಇಂತಹ ಅಜ್ಞಾನ ನಮ್ಮಲ್ಲಿದ್ದರೂ ನಾವು ಅದನ್ನುಅಲ್ಲಗಳೆಯುತ್ತೇವೆ. ಅಂದರೆ ಇಂತಹ ಅಜ್ಞಾನ ನನ್ನಲಿಲ್ಲ ಎಂದುಕೊಳ್ಳುತ್ತೇವೆ. ಆದರೆ ಅಜ್ಞಾನ ಅಳಿಯದೆ ಜ್ಞಾನ ಉಂಟಾಗುವುದಿಲ್ಲ.

ಈ ಜಗತ್ತಿನಲ್ಲಿ ಎಲ್ಲವನ್ನು ಉಂಟುಮಾಡುವ ಆ ಘನ ತತ್ವವು ತನ್ನ ನಿಜ ರೂಪದಲ್ಲಿ ಎಲ್ಲಿಯೂ ನೋಡಲು ಸಿಗುವುದಿಲ್ಲ. ಅಂದರೆ ಅದು ಇಂದ್ರಿಯಗಳಿಗೆ ನಿಲುಕಲಾರದ್ದು. ಆದ್ದರಿಂದ ಅದು ಕಣ್ಣಿಗೆ ಕಾಣುವುದಿಲ್ಲ. ಕಾಣದೆ ಇರುವುದನ್ನು ತೋರಿಸುವುದು ಅಸಾಧ್ಯ. ಕಾಣದೆ ಇರುವುದನ್ನು, ತೋರಿಸಲು ಬಾರದೆ ಇರುವುದನ್ನು ತಿಳಿಯುವುದು ಕಷ್ಟ. ಒಟ್ಟಿನಲ್ಲಿ ಅದು ಇಂದ್ರಿಯಕ್ಕಗೋಚರವಾದದ್ದು. ಅಷ್ಟೇ ಅಲ್ಲ, "ಗುಹೇಶ್ವರ ಲಿಂಗದಲ್ಲಿ ಬಯಕೆಯುಳ್ಳನ್ನಕ್ಕ ತವಕ ಎಡೆಗೊಂಡಿಪ್ಪ ಕಾರಣ ತಿಳುಹಲಿಲ್ಲ" ಎಂದು ಹೇಳುತ್ತಾರೆ ಅಲ್ಲಮರು. ಬಯಕೆ ಇದ್ದರೆ ಅಲ್ಲಿ ಆತುರವಿರುತ್ತದೆ. ಮತ್ತು, ಆತುರ ಮತ್ತು ಬಯಕೆಯು ಇರುವ ಕಾರಣ ನಮಗೆ ಅರಿವು ಉಂಟಾಗದು ಎಂಬುದು "ನನ್ನನ್ನು ನಾನು ಅರಿತಮೇಲೆ ತಿಳಿಯುತ್ತದೆ" ಎನ್ನುತ್ತಾರೆ ಅಲ್ಲಮರು. ಹಾಗಾದರೆ ಲಿಂಗವನ್ನು ಕಾಣಬೇಕು, ಎಂಬ ಬಯಕೆ ಮತ್ತು ತವಕ ಇರಬಾರದೆ? ಇದನ್ನು ಅರಿತುಕೊಳ್ಳಲು ಪ್ರಯತ್ನಿಸೋಣ. ಇಂದ್ರಿಯಕ್ಕಗೋಚರವಾದ ಆ ಘನ ತತ್ವವನ್ನು ಅರಿಯಲು ಮನಸ್ಸು ನಿರ್ಭಾವವಾಗಿರಬೇಕಾದದ್ದು ಬಹು ಮುಖ್ಯ. ಇಲ್ಲದಿದ್ದರೆ ನಮ್ಮ ಮನಸ್ಸು ನಮ್ಮಲ್ಲಿರುವ ಭಾವವನ್ನೇ ನಮಗೆ ಕಾಣುವಂತೆ ಮಾಡುತ್ತದೆ. ಈಗ ಬಯಕೆ ಅಥವಾ ಆಸೆ ಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ನಾವು ಹೇಳುತ್ತೇವೆ: " ನನಗೆ ದೋಸೆ ತಿನ್ನಬೇಕೆಂಬ ಆಸೆಯಾಗಿದೆ" ಎಂದು. ಅಂದರೆ ನನಗೆ ದೋಸೆ ಎಂಬುದರೆ ಪರಿಚಯವಿದೆ, ಅದರ ರುಚಿ, ಅದರ ಪರಿಮಳ, ಅದರ ಸ್ಪರ್ಶ ಇತ್ಯಾದಿಗಳು ನನಗೆ ಸುಖ ಕೊಡುತ್ತವೆ. ಅವನ್ನು ನಾನು ಬಯಸುತ್ತೇನೆ ಎಂದರ್ಥ . ಅಲ್ಲವೆ? ಆದರೆ ನಾವು ಪ್ರಾಮಾಣಿಕವಾಗಿ ಕೇಳಿಕೊಳ್ಳಲೇ ಬೇಕಾದ ಪ್ರಶ್ನೆ ಏನೆಂದರೆ, ನನಗೆ ಪರಿಚಯವೇ ಇಲ್ಲದ್ದನ್ನು ನಾನು ಆಸೆ ಪಡಲು ಸಾಧ್ಯವೆ? ಅದನ್ನು ಪಡೆಯಲು ಆತುರಗೊಳ್ಳಲು ಸಾಧ್ಯವೆ? ಎಂದು. ಏಕೆಂದರೆ ಅಲ್ಲಮಪ್ರಭುಗಳು ಹೇಳುತ್ತಾರೆ "ಲಿಂಗದಲ್ಲಿ ಬಯಕೆಯುಳ್ಳನ್ನಕ್ಕ ತವಕ ಎಡೆಗೊಂಡಿಪ್ಪ ಕಾರಣ ತಿಳುಹಲಿಲ್ಲ" (ಲಿಂಗವನ್ನು ಕಾಣಬೇಕೆಂಬ ಬಯಕೆ ಮತ್ತು ಆತುರ ಇದ್ದುದರಿಂದ ಲಿಂಗ ಕಾಣಲಿಲ್ಲ) ಎಂದು. ಲಿಂಗವನ್ನು ಕಾಣಬೇಕು ಎಂಬ ಬಯಕೆ ಮತ್ತು ಬಯಕೆ ಈಡೇರಿಸಿಕೊಳ್ಳುವ ಆತುರ ಮನದಲ್ಲಿ ಮನೆ ಮಾಡಿದೆ ಎಂದರೆ ಆ ಲಿಂಗದ ಬಗ್ಗೆ ನಮ್ಮ ಮನದಲ್ಲಿ ಆಗಲೆ ಒಂದು ಚಿತ್ರವಿದೆ ಎಂದರ್ಥವಾಯಿತು. ಅಂದರೆ ಇಂದ್ರಿಯಕ್ಕಗೋಚರವಾದುದರ ಬಗ್ಗೆ ನಮಗೆ ಆಗಲೇ ಒಂದು ಕಲ್ಪನೆಯಿದೆ ಅಲ್ಲವೆ? ಯಾರೂ ತೋರಿಸಲು ಬಾರದ್ದುದರ ಬಗ್ಗೆ, ಯಾರೂ ವರ್ಣಿಸಲಾರದ್ದರ ಬಗ್ಗೆ, ವಾಙ್ಮನಕ್ಕತೀತವಾದುದರ ಬಗ್ಗೆ ನಮಗೆ ಆಗಲೇ ಒಂದು ಕಲ್ಪನೆ ಇದೆ ಎಂದರ್ಥವಾಯಿತ್ತಲ್ಲವೆ?

ಇದು ಎಂತಹ ಅಸಂಬದ್ಧವಾದದ್ದು? ಹೀಗಿದ್ದಾಗ ನಾವು ನಮ್ಮ ಕಲ್ಪನೆಯನ್ನೇ ಕಾಣುತ್ತೇವೆಯೇ ಹೊರತು ನಿಜವಾದ ಲಿಂಗವನ್ನಲ್ಲ. ಆದ್ದರಿಂದ ನಮಗೆ ಲಿಂಗವು ಅರಿವಿಗೆ ಬರುವುದಿಲ್ಲ. ಎನ್ನುತ್ತಾರೆ ಅಲ್ಲಮಪ್ರಭುಗಳು. ಆ ಘನ ತತ್ವವನ್ನು ಕಂಡು ಕೊಳ್ಳಲು ನಾವು ನಮ್ಮ ಮನಸ್ಸನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸಬೇಕು ಎಂಬುದನ್ನು ಸಿದ್ಧರಾಮರಿಗೆ ಹೇಳುತ್ತಿರುವ ಅಲ್ಲಮರ ಈ ವಚನವು ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.